ಅಧ್ಯಾಯ - 6

# ಬ್ಯಾಂಕಿಂಗ್, ಹಣಕಾಸು ವ್ಯವಹಾರ ಮತ್ತು ವಾಣಿಜ್ಯ

ಒಂದು ಪ್ರದೇಶದ ಆರ್ಥಿಕ ವ್ಯವಸ್ಥೆಯನ್ನು ರೂಪಿಸುವಲ್ಲಿ ಕೃಷಿ ಕೈಗಾರಿಕೆಗಳು ಬಹುಮುಖ್ಯ ಉತ್ಪಾದನಾ ಮೂಲಗಳು. ಅವುಗಳಿಗೆ ಪೂರಕವಾಗಿ ಬೇಕಾಗುವ ಬಂಡವಾಳ, ಹಣಕಾಸಿನ ನೆರವು ಒದಗಿಸುವ ಸುಸಂಘಟಿತ ಸಾಂಸ್ಥಿಕ ಹಣಕಾಸು ಸಂಸ್ಥೆಗಳಾದ ಬ್ಯಾಂಕುಗಳು, ವ್ಯವಸಾಯ ಪತ್ತು ಮತ್ತು ಮಾರಾಟ ಜೋಡಣೆ, ಜನಸಾಮಾನ್ಯರ ಅನುಕೂಲಕ್ಕಾಗಿ ಮೂಡಿಬಂದ ಸಹಕಾರಿ ವ್ಯವಸ್ಥೆ ಮುಂತಾದವುಗಳು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಸಹಾಯಕವಾಗುತ್ತದೆ.

ಸುಸಂಘಟಿತ ಬ್ಯಾಂಕಿಂಗ್ ವಲಯ ಮತ್ತು ಹಣಕಾಸು ಸಂಸ್ಥೆಗಳು ಒಂದು ಪ್ರದೇಶದ ಆರ್ಥಿಕಾಭಿವೃದ್ಧಿಗೆ ಅತ್ಯವಶ್ಯಕ ಅಂಶಗಳು. ಇವುಗಳಿಗೆ ಪೂರಕವಾಗಿರುವ ವ್ಯಾಪಾರ, ವಾಣಿಜ್ಯ ಮತ್ತು ಮಾರುಕಟ್ಟೆ ಚಟುವಟಿಕೆಗಳು ವೃದ್ಧಿಗೊಂಡು ಆಯಾ ಪ್ರದೇಶಗಳ ಆರ್ಥಿಕ ಹಾಗೂ ಸಾಮಾಜಿಕ ಜೀವನದ ಮೇಲೆ ತಮ್ಮದೇ ಆದ ಪ್ರಭಾವ ಬೀರುತ್ತವೆ. ಬದಲಾಗುತ್ತಿರುವ ಆರ್ಥಿಕ, ಸಾಮಾಜಿಕ, ರಾಜಕೀಯ ಚಟುವಟಿಕೆಗಳಿಗೆ ಅನುಗುಣವಾಗಿ ಇತ್ತೀಚಿನ ದಶಕಗಳಲ್ಲಿ ಬ್ಯಾಂಕಿಂಗ್ ವ್ಯವಸ್ಥೆ ತನ್ನದೇ ಆದ ರೀತಿಯಲ್ಲಿ ಗ್ರಾಮಮಟ್ಟದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯನ್ನು ರೂಪಿಸುವಲ್ಲಿ ಹೊಸ ಆಯಾಮಗಳನ್ನು ಅವಳಡಿಸಿಕೊಂಡು ಸ್ಪಂದಿಸುತ್ತಿರುವುದನ್ನು, ರಾಜ್ಯದ ಇತರೇ ಭಾಗಗಳಲ್ಲಿ ಕಾಣುತ್ತಿರುವಂತೆ ಉತ್ತರ ವಲಯದ ಈ ಪ್ರಮುಖ ಜಿಲ್ಲೆಯಲ್ಲಿಯೂ ಕಾಣಬಹುದು.

## ಬ್ಯಾಂಕಿಂಗ್ ಮತ್ತು ಹಣಕಾಸು

ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆ ರೂಪಗೊಳ್ಳುವ ಹಲವಾರು ದಶಕಗಳ ಮೊದಲು ದೇಶದ ಇತರ ಭಾಗಗಳಲ್ಲಿ ಇದ್ದಂತೆ ಇಲ್ಲಿಯೂ ಖಾಸಗಿ ಸಾವುಕಾರರು, ವರ್ತಕರು, ಶ್ರೀಮಂತರು, ಜಮೀನುದಾರರು, ದೇಶಪಾಂಡೆ, ಕುಲಕರ್ಣಿ, ಪಾಟೀಲ ಮುಂತಾದ ವತನದಾರರು, ಅಧಿಕಾರ ವರ್ಗದವರು, ತಮ್ಮದೇ ಆದ ರೀತಿಯಲ್ಲಿ ಸ್ಥಾನಿಕವಾಗಿ ಲೇವಾದೇವಿ ವ್ಯವಹಾರದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ಸರ್ವೆಸಾಮಾನ್ಯವಾಗಿತ್ತು ಎಂಬುದನ್ನು ಹಳೆಯ ಕಾಲದ ದಾಖಲೆಗಳು ದೃಢಪಡಿಸುತ್ತವೆ. ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳ ಪೈಕಿ (ಧಾರವಾಡ, ಬೆಳಗಾವಿ, ಬಿಜಾಪುರ, ಉ.ಕನ್ನಡ) ಧಾರವಾಡ ಜಿಲ್ಲೆಯು ಹೆಚ್ಚು ಶ್ರೀಮಂತರಿಂದ ಕೂಡಿತ್ತು. ಈ ನಾಲ್ಕೂ ಜಿಲ್ಲೆಗಳಲ್ಲಿ ಸೇರಿ 1884 ರಲ್ಲಿ ಇದ್ದಂತೆ ವಾರ್ಷಿಕ ರೂ.100 ರಿಂದ 1,000 ದವರೆಗೆ ಆದಾಯ ಉಳ್ಳವರ ಸಂಖ್ಯೆ ಸುಮಾರು 42,750 ಆಗಿದ್ದರೆ ರೂ. ಹತ್ತು ಸಾವಿರಕ್ಕಿಂತ ಹೆಚ್ಚು ಆದಾಯ ಉಳ್ಳವರ ಸಂಖ್ಯೆ 38 ಆಗಿತ್ತು ಎಂದು ತಿಳಿದು ಬರುವುದು. ಅದೇ ವರ್ಷದಲ್ಲಿ ಧಾರವಾಡ ಜಿಲ್ಲೆಯಲ್ಲಿ ರೂ. ಒಂದು ನೂರರಿಂದ ಸಾವಿರದವರೆಗೆ

ಆದಾಯ ಉಳ್ಳವರ ಸಂಖ್ಯೆ 21,046 ಎಂದು ಮತ್ತು ರೂ. ಹತ್ತು ಸಾವಿರಕ್ಕಿಂತ ಹೆಚ್ಚು ಆದಾಯ ಉಳ್ಳವರ ಸಂಖ್ಯೆ 19 ಎಂದು ವರದಿಯಾಗಿದೆ. ಇದು ಜಿಲ್ಲೆಯ ಸಾಂಪತ್ತಿಕ ಸ್ಥಿತಿಯನ್ನು ಸೂಚಿಸುವುದು.

ಈ ಜಿಲ್ಲೆಯಲ್ಲಿ ಪ್ರಮುಖವಾಗಿ ಲಿಂಗಾಯತರು, ಜೈನರು, ಬ್ರಾಹ್ಮಣರು ಮತ್ತು ಕೋಮಟಿಗರು (ವೈಶ್ಯರು) ತಮ್ಮದೇ ಆದ ವೈಯಕ್ತಿಕ ವಿಧಾನದಲ್ಲಿ ಹುಂಡಿ ವ್ಯವಹಾರ ಮತ್ತು ಇತರೇ ವ್ಯಾಪಾರದಂಧೆಗಳನ್ನು ಮಾಡುತ್ತಿದ್ದರು. ಈ ಜಿಲ್ಲೆಯ ಪ್ರಮುಖ ನಗರಗಳಾಗಿದ್ದ ಧಾರವಾಡ, ಹುಬ್ಬಳ್ಳಿ, ಗದಗಗಳಲ್ಲಿ ಹುಂಡಿಯ ವ್ಯಾಪಾರ ಭರದಿಂದ ನಡೆಯುತ್ತಿತ್ತು. 1853 ರ ಒಂದು ಬ್ರಿಟಿಷ್ ವರದಿಯಂತೆ ಹುಬ್ಬಳ್ಳಿಯ ಲೇವಾದೇವಿದಾರರು ಮುಂಬೈ, ಮದ್ರಾಸ್ ಹಾಗೂ ಪ್ರಸ್ಥಭೂಮಿಯ ಎಲ್ಲ ಪಟ್ಟಣಗಳ ಜೊತೆ ಹುಂಡಿಯನ್ನು ದೊಡ್ಡ ಮೊತ್ತಗಳಿಗೂ ಕೊಡುತ್ತಿದ್ದರು. ಈ ಜಿಲ್ಲೆಯ ವ್ಯಾಪಾರಸ್ಥರು ಮುಂಬೈ, ಪುಣೆ, ಸತಾರಾ, ವೆಂಗುರ್ಲೆ, ಚಿಪಳೂಣ ಮುಂತಾದ ಪ್ರದೇಶಗಳಿಗೆ ಹುಂಡಿ ನೀಡುತ್ತಿದ್ದರು. ಅಂದಿನ ಬ್ಯಾಂಕಿಂಗ್ ವ್ಯವಹಾರವನ್ನು ಕುರಿತಂತೆ 1884 ರ ಧಾರವಾಡ ಜಿಲ್ಲೆಯ ಗ್ಯಾಸೆಟಿಯರ್‌ನಲ್ಲಿ ಈ ರೀತಿ ವಿವರಿಸಲಾಗಿದೆ: "ಲೇವಾದೇವಿ ವ್ಯಾಪಾರವು ಸುಲಭವಾಗಿ ಹಣ ಗಳಿಸುವ ಉಪಾಯವಾಗಿತ್ತು. ಉತ್ತಮ ಕುಲದ ಹಿಂದು ಜನರು ಎಲ್ಲ ವಿಧದ ವ್ಯಾಪಾರ ಮಾಡುತ್ತಾರೆ. ಎಲ್ಲಕ್ಕೂ ಮೊದಲು ಬಡ್ಡಿಯ ವ್ಯಾಪಾರಕ್ಕೆ ಹವಣಿಸುತ್ತಾರೆ, ಯಾಕೆಂದರೆ ಅದಕ್ಕೆ ಶ್ರಮ ಮಾಡುವ ಅವಶ್ಯಕತೆ ಇಲ್ಲ; ಇದ್ದಷ್ಟು ಹಣದಿಂದ ವ್ಯಾಪಾರ ಸಾಗುತ್ತದೆ, ಲೆಕ್ಕ ಪತ್ರದ ಗೊಂದಲ ಇಲ್ಲ, ಬಹಳ ಬುದ್ಧಿಯನ್ನು ಹಾಕುವ ಪ್ರಯೋಜನ ಇಲ್ಲ, ಸಾಲ ಬೇಡುವ ಗಿರಾಕಿಗಳು ಹೇರಳವಾಗಿ ದೊರೆಯುತ್ತಾರೆ," ಎಂದಿದೆ. ಕಂಪನಿಯ ರೂಪಾಯಿ ಮೂಲಕ ಲೇವಾದೇವಿ ವ್ಯವಹಾರ ನಡೆಯುತ್ತಿತ್ತು. ವಾರ್ಷಿಕ ವೈವಾಟಿನ ಆಧಾರದ ಮೇಲೆ ಲೇವಾದೇವಿಯವರನ್ನು ಮೊದಲನೇ ದರ್ಜೆ (ರೂ. ಒಂದು ಲಕ್ಷದಿಂದ ಎರಡು ಲಕ್ಷ), ಎರಡನೇ ದರ್ಜೆ (ರೂ. 5000 ದಿಂದ ರೂ. ಒಂದು ಲಕ್ಷ), ಮೂರನೇ ದರ್ಜೆ (ರೂ. 5000 ರಿಂದ ರೂ. ಒಂದು ನೂರರವರೆಗೆ) ಎಂದು ವಿಂಗಡಿಸಲಾಗಿತ್ತು. ಅಂದು ಜಿಲ್ಲೆಯ ಧಾರವಾಡ, ಹುಬ್ಬಳ್ಳಿ, ಗದಗ, ಸವಣೂರುಗಳಲ್ಲಿ ವಿಶೇಷವಾಗಿ ಲೇವಾದೇವಿದಾರರಿದ್ದರು. ಬೆಳಗಾವಿ ಮತ್ತು ಶಹಾಪುರಗಳ ಬ್ಯಾಂಕರುಗಳು 1882 ರಲ್ಲಿ ಹುಬ್ಬಳ್ಳಿಯ ಬ್ಯಾಂಕುಗಳ ಏಜಂಟರಾಗಿ ಕೆಲಸ ಮಾಡುತ್ತಿದ್ದರು. ಹುಬ್ಬಳ್ಳಿಯಲ್ಲಿ 1883 ರಲ್ಲಿ ಸುಮಾರು 700 ವ್ಯಾಪಾರಸ್ಥರಿದ್ದರು. ಇವರಲ್ಲಿ ಸುಮಾರು 300 ಜನ ವ್ಯಾಪಾರಿಗಳ ಬಂಡವಾಳ ರೂ. ಐದು ಸಾವಿರದಿಂದ ಒಂದು ಲಕ್ಷದವರೆಗೆ ಇತ್ತು. ಗದಗಿನಲ್ಲಿ ವೆಂಕಟದಾಸ ಎಂಬ ಗುಜರಾತಿ ವ್ಯಾಪಾರಿಯು ರೂ.10 ಸಾವಿರದವರೆಗೆ ಹುಂಡಿಯ ವ್ಯಾಪಾರ ಮಾಡುತ್ತಿದ್ದರು.

**ಬಡ್ಡಿಯ ದರ:** 1879-80 ರಲ್ಲಿ ಉಳಿತಾಯ ಖಾತೆಗಳ ಠೇವಣಿಗಳ ಮೇಲೆ ಸರಕಾರ ನೀಡುತ್ತಿದ್ದ ಬಡ್ಡೀದರಗಳನ್ನು ಶೇ. 3 3/4 ರಿಂದ ಶೇ. 4 1/8 ಕ್ಕೆ ಏರಿಸಲಾಯಿತು. ಅಲ್ಲದೇ ಪ್ರತಿ ಒಂದು ಖಾತೆಯಲ್ಲಿಯ ಗರಿಷ್ಠ ಠೇವಣಿ ಮೊತ್ತವನ್ನು ರೂ. ಮೂರು ಸಾವಿರದಿಂದ ರೂ. ಐದು ಸಾವಿರದವರೆಗೆ ಏರಿಸಲಾಯಿತು. ಸಾಹುಕಾರರು ವೈಯಕ್ತಿಕ ಜಾಮೀನು ಮತ್ತು ನಂಬಿಕೆಯ ಮೇಲೆ ನೀಡುವ ಸಾಲದ ಮೇಲೆ ಶೇ. 12 ರಿಂದ 23 ರವರೆಗೆ, ವಸ್ತುಗಳು ಮತ್ತು ಆಭರಣಗಳ ಮೇಲೆ ಶೇ. 9 ರಿಂದ 24 ರವರೆಗೆ, ಬೆಳೆ ಆಧಾರದ ಮೇಲೆ ಶೇ. 24 ರಿಂದ 36 ರವರೆಗೆ ಬಡ್ಡಿಯನ್ನು ಆಕರಣೆ ಮಾಡುತ್ತಿದ್ದರು. ವೃತ್ತಿನಿರತರಲ್ಲದ ಸಾಹುಕಾರರು ಸಣ್ಣ ಸಾಲದ ಮೇಲೆ ಶೇ. 18 ರಿಂದ 37 ರವರೆಗೆ ಬಡ್ಡಿಯನ್ನು ವಿಧಿಸುತ್ತಿದ್ದರು. ಈ ರೀತಿಯಾಗಿ ಬಡ್ಡಿಯ ವ್ಯಾಪಾರವು ಶ್ರೀಮಂತರು ಸುಲಭವಾಗಿ ಹಣ ಮಾಡುವ ಪ್ರತಿಷ್ಠಿತ ಉದ್ಯೋಗವಾಗಿತ್ತು.

**ಹಣದ ವಿನಿಯೋಗ:** ಸಾಲ ಕೊಡುವುದು, ವ್ಯಾಪಾರ, ಸ್ಥಿರಾಸ್ತಿಯಲ್ಲಿ ತೊಡಗಿಸುವುದು, ಆಭರಣಗಳನ್ನು ಮಾಡಿಸುವುದು ಇವೇ ಮುಂತಾದವುಗಳು ಅಂದು ಹಣವನ್ನು ವಿನಿಯೋಗಿಸುವ ವಿಧಾನಗಳಾಗಿದ್ದವು. ಬಹುಜನರು ಉಳಿತಾಯದ ಅರ್ಧಭಾಗ ಆಭರಣಗಳಲ್ಲಿ ಹಾಕುವವರಾಗಿದ್ದರು. ಸರ್ಕಾರಿ ಬ್ಯಾಂಕಿನಲ್ಲಿ ಬಹು ಸ್ವಲ್ಪ ಜನರು ಹಣ ತೊಡಗಿಸುತ್ತಿದ್ದರು. ಅವರಲ್ಲಿ ಸರ್ಕಾರಿ ನೌಕರರು ಮತ್ತು ವಕೀಲರು ಸೇರಿದ್ದರು. ಸರ್ಕಾರಕ್ಕೆ ಸಂದಾಯವಾಗುತ್ತಿದ್ದ ಲೈಸನ್ಸ್ ಶುಲ್ಕದಲ್ಲಿ ಬಹುಪಾಲು ಶೇ. 75 ಬಡ್ಡಿಯ ವ್ಯವಹಾರ ಮಾಡುವವರಿಂದ ಸಂದಾಯವಾಗುತ್ತಿತ್ತು. ಬಡ್ಡಿಯ ವ್ಯವಹಾರ ನಿರತರಲ್ಲಿ ಶೇ. 60 ರಷ್ಟು ಹಳ್ಳಿಗಳಲ್ಲಿ ವಾಸವಾಗಿದ್ದರೆ ಶೇ. 40 ರಷ್ಟು ದೊಡ್ಡ ಗ್ರಾಮಗಳಲ್ಲಿ ನೆಲೆಸಿದ್ದರು ಎಂದು ತಿಳಿದು ಬರುವುದು. ಲೇವಾದೇವಿ ವ್ಯವಹಾರದ ಮೇಲೆ ಕಾನೂನಿನ ನಿಯಂತ್ರಣ ತರುವ ಮೊದಲಿಗೆ ಬಡ್ಡಿಯ ವ್ಯವಹಾರದಲ್ಲಿ ತೊಡಗಿದ್ದವರ ಅವ್ಯವಹಾರಗಳನ್ನು, ಶೋಷಣೆಯನ್ನು ವಿವರವಾಗಿ ವರ್ಣಿಸಿದೆ. ಅಂದಿನ ವ್ಯಾಪಾರಸ್ತರು ಸಾಮಾನ್ಯವಾಗಿ ವಿಧಿಸುತ್ತಿದ್ದ ಬಡ್ಡಿಯದರ ಬಂಗಾರದ ಒಡವೆಗಳ ಅಡಮಾನದ ಮೇಲೆ ತಿಂಗಳಿಗೆ ಶೇ. 8 ರಿಂದ 12 ರಂತೆ ಇರುತ್ತಿತ್ತು. ಹಳ್ಳಿಗಳಲ್ಲಿ ಸಾಮಾನ್ಯವಾಗಿ ಬಡ್ಡಿಯು ನಗರಗಳಿಗಿಂತ ಹೆಚ್ಚಾಗಿರುತ್ತಿತ್ತು. ಸಾಲ ಪಡೆಯುವ

ವ್ಯಕ್ತಿಯು ಆಸ್ತಿಯುಳ್ಳವನೂ, ಪ್ರಾಮಾಣಿಕನೂ ಆಗಿದ್ದರೆ ಬಡ್ಡಿ ಕಡಿಮೆ ಇರುತ್ತಿತ್ತು. ಬಡವನಿದ್ದರೆ ಹೆಚ್ಚು. ಅಪ್ರಾಮಾಣಿಕನಾದ ಬಡವನಿಗೆ ಯಾರೂ ಸಾಲ ಕೊಡುತ್ತಿರಲಿಲ್ಲ ಎಂದು ತಿಳಿದು ಬರುವುದು. ಭೂಮಿಯನ್ನು ಒತ್ತೆ ಹಾಕಿ ಸಾಲ ಪಡೆಯುವವರಿಗೆ ಶೇಕಡಾ ಒಂದರಂತೆ ಬಡ್ಡಿಯನ್ನು ವಿಧಿಸಲಾಗುತ್ತಿತ್ತು. ದುಡ್ಡಿನ ಲೆಕ್ಕದ ಬಡ್ಡಿಯ ವ್ಯವಹಾರವು ಹೆಚ್ಚಾಗಿ ಹಳ್ಳಿಗಳಲ್ಲಿ ನಡೆಯುತ್ತಿತ್ತು. (ಒಂದು ರೂ.ಗೆ ಒಂದು ತಿಂಗಳಿಗೆ ಒಂದು ದುಡ್ಡು-ನಾಲ್ಕು ಪೈ). ಅಲ್ಪ ಸ್ವಲ್ಪ ಭೂಮಿಯನ್ನು ಹೊಂದಿದ್ದ ಒಕ್ಕಲಿಗರು ಸಾಲ ತೆಗೆದುಕೊಳ್ಳುವ ಪ್ರಮುಖ ಕುಳಗಳಾಗಿದ್ದರು. ರೈತರಲ್ಲಿ ಶೇ. 75 ಭಾಗ ಒಂದಿಲ್ಲ ಒಂದು ಬಗೆಯಲ್ಲಿ ಸಾಲಗಾರರಾಗಿರುತ್ತಿದ್ದರು.

**ಆರ್ಥಿಕ ಸಮೀಕ್ಷೆ :** ಕಳೆದ ಶತಮಾನದಲ್ಲಿ ಈ ಜಿಲ್ಲೆಯ ಹಣಕಾಸಿನ ಸ್ಥಿತಿಗತಿಗಳನ್ನು, ಸಮೀಕ್ಷೆಯನ್ನು ಕುರಿತಂತೆ ಅನೇಕ ವರದಿಗಳು ಪ್ರಕಟವಾಗಿವೆ. 1884 ರ ಗ್ಯಾಸೆಟಿಯರ್ ವರದಿ ಮಾಡುವಂತೆ "ವ್ಯಾಪಾರಸ್ಥರು, ಬಹಳ ಭೂಮಿಯನ್ನು ಮಾಡುವಂತ ಒಕ್ಕಲಿಗರು, ಚಿನಿವಾರರು, ವಕೀಲರು, ಮೇಲ್ತರದ ಸರ್ಕಾರೀ ನೌಕರರು, ಕುರುಬರು, ಸಮಗಾರರು ಮುಂತಾದ ಜನರಲ್ಲಿ ದ್ರವ್ಯ ಸಂಚಯವು ಹೆಚ್ಚಾಗಲಿ, ಕಡಿಮೆಯಾಗಲಿ ಆಗುತ್ತಿರುತ್ತದೆ. ದೊಡ್ಡ ದೊಡ್ಡ ಇನಾಮದಾರರಲ್ಲಿ ಸ್ವಲ್ಪ ಜನರನ್ನು ದ್ರವ್ಯವುಳ್ಳವರನ್ನು ಕಾಣಬಹುದು. ಆದರೆ ಇನಾಮದಾರರಿಗೆ ಏನೂ ಶ್ರಮ ಮಾಡದೇ ಕೂತಲ್ಲೇ ಬಹಳ ಹಣವು ಕೈಗೆ ಬರುತ್ತಿರುವ ಕಾರಣ ದುಡ್ಡಿನ ಬೆಲೆಯು ಅವರಿಗೆ ತಿಳಿಯುವುದಿಲ್ಲ, ಆದ್ದರಿಂದ ಅವರ ಮನೆತನದ ವೆಚ್ಚವು ಬಹಳ ಅಸ್ತವ್ಯಸ್ತ ಇರುತ್ತದೆ." ಹಣದ ವಿನಿಯೋಗವನ್ನು ಕುರಿತಂತೆ ವರದಿಯಲ್ಲಿ ಈ ರೀತಿ ನಮೂದಿಸಲಾಗಿದೆ. "ಸಾಲ ಕೊಡುವುದು, ವ್ಯಾಪಾರ, ಭೂಮಿ, ಮನೆಗಳನ್ನು ಕೊಳ್ಳುವುದು, ಆಭರಣಗಳನ್ನು ಮಾಡಿಸುವುದು ಇವೇ ಮುಂತಾದವುಗಳು ಹಣವನ್ನು ಉಪಯೋಗಿಸುವ ಮುಖ್ಯ ಮಾರ್ಗಗಳಾಗಿದ್ದವು, ಉಳಿತಾಯದ ಅರ್ಧ ಹಣವನ್ನು ಆಭರಣಗಳಲ್ಲಿ ತೊಡಗಿಸುವವರೇ ಬಹುಜನರಾಗಿದ್ದರು." ಪ್ರಾರಂಭದಿಂದಲೂ ಕೃಷಿ ಪ್ರಧಾನವಾದ ಈ ಜಿಲ್ಲೆಯ ರೈತಾಪಿ ವರ್ಗದ ಸ್ಥಿತಿಗತಿಗಳನ್ನು ಕುರಿತು ಈ ರೀತಿ ವಿವರಿಸಲಾಗಿದೆ: "ಭೂಮಿಯ ಹುಟ್ಟುವಳಿಯಲ್ಲಿ ಸುಮಾರು ಅರ್ಧಪಾಲು ಸಾಹುಕಾರನ ಬಡ್ಡಿಗೆ ಹೋಗುತ್ತದೆ. ಸಾವುಕಾರರ ಹಳೆಯ ಸಾಲ ಮತ್ತು ಬಡ್ಡಿಯನ್ನು ತೀರಿಸಲು ಬಹುಪಾಲು ರೈತರು ಭೂಮಿಯ ವಿಕ್ರಯ ಮಾಡುತ್ತಾರೆ. ತಾವೇ ತಮ್ಮ ಇಚ್ಛೆಯಿಂದ ಭೂಮಿಯನ್ನು ಮಾರುವುದು ಇಲ್ಲವೇ ಸರ್ಕಾರಿ ತೆರಿಗೆಗಾಗಿ ಭೂಮಿಯನ್ನು ಮಾರುವುದು ಬಹು ಕಡಿಮೆ".

ಒಕ್ಕಲಿಗರ ನಂತರ ಸಾಲ ಮಾಡುವವರು ಇನಾಮದಾರರು. ಆದರೆ ಇನಾಮದಾರರು ಇನಾಮ ಭೂಮಿಯ ಪರಭಾರೆ ಮಾಡಲು ಕಾನೂನಿನ ನಿರ್ಬಂಧ ಇದ್ದ ಕಾರಣ ಬಡ್ಡಿಯಲ್ಲಿ ಭೂಮಿಯನ್ನು ಸಾವುಕಾರರಿಗೆ ಒಪ್ಪಿಸುತ್ತಿದ್ದರು. ಆದರೆ ಕೈಕಸಬು ಮಾಡುತ್ತಿದ್ದ ಬಡಗಿ, ಕಮ್ಮಾರ, ಉಪ್ಪಾರ, ಕುಂಬಾರ ಮುಂತಾದವರಿಗೆ ಸಾಲ ಮಾಡುವ ಅವಶ್ಯಕತೆ ಇರಲಿಲ್ಲವೆಂದು ವರದಿ ತಿಳಿಸುವುದು.

ಕೂಲಿಕಾರರ ಬಳಿಯಲ್ಲಿ ಯಾವುದೇ ಆಸ್ತಿ ಇಲ್ಲದೇ ಇದ್ದುದರಿಂದ ಅವರಿಗೆ ಸಾಲವನ್ನು ಕೊಡುವವರು ಬಹಳ ಕಡಿಮೆ. ಆದರೆ ಅವರ ಸ್ಥಿತಿಗತಿಗಳು ಸುಧಾರಿಸುತ್ತ ನಡೆದಿವೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ಈ ಶೀಮೆಯಲ್ಲಿ (ಧಾರವಾಡ) ಹೊಗೆಬಂಡಿ ಬರುವ ಪೂರ್ವದಲ್ಲಿ (1889) ದಿನ ಕೂಲಿಯ ದರವು ಗಂಡಸರಿಗೆ ಮೂರೂವರೆ ಆಣೆ (20 ಪೈಸೆ) ಹೆಂಗಸರಿಗೆ ಎರಡು ಆಣೆ (13 ಪೈಸೆ) ಎಂದು ವರದಿಯಾಗಿದೆ. ಆದರೆ 1891 ರ ನಂತರ ಗಂಡಸರು ನಾಲ್ಕು ಆಣೆಗಿಂತ ಕಡಿಮೆ, ಹೆಂಗಸರು ಎರಡೂವರೆ ಆಣೆಗಿಂತ ಕಡಿಮೆ ಕೂಲಿಗೆ ದೊರೆಯುತ್ತಿರಲಿಲ್ಲ, ದೊಡ್ಡ ಗ್ರಾಮದಲ್ಲಿ ಐದು-ಆರು ಆಣೆವರೆಗೂ ಕೂಲಿ ಕೊಡಬೇಕಾಗುತ್ತಿತ್ತು. ಸಾಮಾನ್ಯವಾಗಿ ಗಂಡ, ಹೆಂಡತಿ, ಮಕ್ಕಳು ಒಟ್ಟಾಗಿ ಕೂಲಿ ಮಾಡುತ್ತಿದ್ದವರು ಕಡಿಮೆ ಭೂಮಿಯುಳ್ಳ ಒಕ್ಕಲಿಗರಿಗಿಂತಲೂ ಹೆಚ್ಚು ಸುಖದಿಂದ ಇದ್ದರು, ಎಂದು 1884 ರ ಜಿಲ್ಲಾ ಗ್ಯಾಸೆಟಿಯರ್‌ನಲ್ಲಿ ವಿವರಿಸಲಾಗಿದೆ. ಸುಮಾರು 8 ದಶಕಗಳ ನಂತರ ನಡೆದ ಇನ್ನೊಂದು ಜಿಲ್ಲಾ ಪ್ರಾತಿನಿಧಿಕ ಸಮೀಕ್ಷೆಯಲ್ಲಿ ನಾವು ಬದಲಾದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಚಿತ್ರಣವನ್ನು ಕಾಣಬಹುದು.

**ಇತ್ತೀಚಿನ ಸಮೀಕ್ಷೆ:** ಬೊಂಬಾಯಿ ಪ್ರಾಂತೀಯ ಬ್ಯಾಂಕಿಂಗ್ ವಿಚಾರಣಾ ಸಮಿತಿಯು ಧಾರವಾಡ ಜಿಲ್ಲೆಯನ್ನು ಒಳಗೊಂಡಂತೆ 1929-30 ರಲ್ಲಿ ಆರ್ಥಿಕ ಸಮೀಕ್ಷೆಯನ್ನು ನಡೆಸಿತು. ಈ ಸಮೀಕ್ಷೆಯಲ್ಲಿ ಸಾಲದ ಉದ್ದೇಶ, ಸಾಲದ ಮೊತ್ತ, ಸಾಲಕ್ಕೆ ನೀಡಿದ ಆಧಾರ ಮುಂತಾದವುಗಳನ್ನು ಕುರಿತಂತೆ ವಿವೇಚಿಸಲಾಯಿತು. ಈ ಸಮೀಕ್ಷೆಯಲ್ಲಿ ಕಂಡು ಬಂದ ಪ್ರಮುಖ ಅಂಶಗಳೆಂದರೆ ಸಾಲದ ಉದ್ದೇಶಗಳಲ್ಲಿ ಬಹುಪಾಲು ಅನುತ್ಪಾದಕ ವೆಚ್ಚಗಳನ್ನು (ಮದುವೆ, ಮನೆತನದ ವೆಚ್ಚ, ಹಳೆಯ ಸಾಲ ತೀರಿಸಲು ಮಾಡಿದ ಹೊಸ

ಸಾಲ) ಒಳಗೊಂಡಿದ್ದವು. ಬಹುಪಾಲು ಸಾಲಗಳನ್ನು ವಚನ ಪತ್ರ (ಪ್ರಾಮಿಸರಿ ನೋಟ್) ಬರೆದುಕೊಟ್ಟು ಜಮೀನು, ಮನೆ, ಬಂಗಾರದ ಒಡವೆ ಮುಂತಾದವುಗಳ ಆಧಾರದ ಮೇಲೆ ಪಡೆದ ಸಾಲಗಳಾಗಿದ್ದವು.

1961 ರ ಜನಗಣತಿಯ ಅಂಗವಾಗಿ ಧಾರವಾಡ ಜಿಲ್ಲೆಯ ವಿವಿಧ ಪ್ರಾದೇಶಿಕ ವೈವಿಧ್ಯತೆಯನ್ನು, ಆರ್ಥಿಕ ಚಟುವಟಿಕೆಗಳನ್ನು ಅವುಗಳಿಗೆ ಪೂರಕವಾಗಿರುವ ಪರಿಸರಗಳನ್ನು ಮತ್ತು ಮೂಲ ಸೌಕರ್ಯಗಳನ್ನು, ವಿವಿಧ ಜನಾಂಗಗಳನ್ನು ಪ್ರತಿನಿಧಿಸುವ ಮೂರು ಹಳ್ಳಿಗಳನ್ನು ಆಯ್ದುಕೊಂಡು ಆ ಹಳ್ಳಿಗಳ ಸಮಗ್ರ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅಭ್ಯಾಸಗಳನ್ನು ಒಳಗೊಂಡಂತೆ ಸವಿವರವಾದ ಸಮೀಕ್ಷೆಯನ್ನು ನಡೆಸಲಾಯಿತು. ಈ ಸಮೀಕ್ಷೆಯಲ್ಲಿ ಕನಿಷ್ಠ, ಗರಿಷ್ಠ ಮತ್ತು ಮಧ್ಯಂತರ ಮಾಸಿಕ ಆದಾಯದ ಕುಟುಂಬಗಳನ್ನು ಒಳಗೊಂಡಂತೆ ವಿವಿಧ ಗ್ರಾಮೀಣ ಸಮುದಾಯಗಳ ಸಾಲದ ವಿವಿಧ ಮುಖಗಳ ಬಗ್ಗೆ ಅಧ್ಯಯನ ನಡೆಸಲಾಗಿದೆ. ಇಂತಹ ಸಮೀಕ್ಷಾ ಅಧ್ಯಯನಗಳು ಅದರಲ್ಲಿಯೂ ಕೌಟುಂಬಿಕ ಸಾಲ-ಅದರ ಮೂಲ, ವಿನಿಯೋಗ, ಬಡ್ಡಿಯ ದರ ಮುಂತಾದ ವೈಯಕ್ತಿಕ ವಿಷಯಗಳು ಸಾಮೂಹಿಕ ಮತ್ತು ಭಾವನಾತ್ಮಕ ಸೂಕ್ಷ್ಮ ಸಂಬಂಧಗಳನ್ನು ಪ್ರಚುರ ಪಡಿಸುವುದರಿಂದ ಅನೇಕ ಸಂದರ್ಭಗಳಲ್ಲಿ ಇಂತಹ ಸಮೀಕ್ಷೆಗಳಲ್ಲಿ ಒಳಗಾದ ಜನರು ನಿಜವಾದ ವಿಷಯವನ್ನು ಮರೆಮಾಚುವುದು, ಉತ್ಪ್ರೇಕ್ಷೆಯಿಂದ ಕೂಡಿದ ಅಂಕಿ ಅಂಶಗಳನ್ನು ನೀಡುವುದು ಮುಂತಾದವುಗಳ ಸಾಧ್ಯತೆ ಉಂಟು. ಆದಾಗ್ಯೂ, ಇಂತಹ ಸಮೀಕ್ಷೆಗಳು ಒಂದು ಕಾಲದ, ಪ್ರಾದೇಶಿಕ, ಆರ್ಥಿಕ, ಸಾಮಾಜಿಕ ಬದಲಾವಣೆಗಳನ್ನು, ಜೀವನ ಮಟ್ಟವನ್ನು, ಹೊಸ ಆಯಾಮಗಳನ್ನು ಗುರುತಿಸುವಲ್ಲಿ ಅಧ್ಯಯನಶೀಲ ಅಂಶಗಳನ್ನು ಒಳಗೊಂಡಿರುವುದನ್ನು ಕಾಣಬಹುದು.

ಈ ಆರ್ಥಿಕ ಸಮೀಕ್ಷೆಗೆ ಗದಗ ತಾಲೂಕಿನ ಹುಲಕೋಟಿ, ಶಿರಹಟ್ಟಿ ತಾಲೂಕಿನ ಮಾಗಡಿ ಮತ್ತು ಬ್ಯಾಡಗಿ ತಾಲೂಕಿನ ಕಾಗಿನೆಲೆ ಎಂಬ ಗ್ರಾಮಗಳನ್ನು ಆಯ್ಕೆ ಮಾಡಲಾಗಿತ್ತು.

ವ್ಯವಸಾಯ ಪ್ರಧಾನವಾಗಿದ್ದ, ವಿವಿಧ ಜಾತಿಯ ಮತ ಪಂಥಗಳ ಕುಟುಂಬಗಳನ್ನು ಹೊಂದಿದ್ದ ಈ ಮೂರು ಆಯ್ದ ಗ್ರಾಮಗಳ ಆರ್ಥಿಕ ಸಮೀಕ್ಷೆಯಲ್ಲಿ ಕಂಡು ಬಂದ ಪ್ರಮುಖ ಸಾಮಾನ್ಯ ಅಂಶ ಎಂದರೆ ಒಟ್ಟು ಸಾಲಗಾರರಲ್ಲಿ ಮತ್ತು ಸಾಲದ ಮೊತ್ತದಲ್ಲಿ ಅತೀ ಹೆಚ್ಚಿನ ಸಂಖ್ಯೆಯ ಕುಟುಂಬಗಳು ಗರಿಷ್ಠ ಮಾಸಿಕ ಆದಾಯದ (ರೂ. 100 ಕ್ಕಿಂತ ಹೆಚ್ಚು) ಗುಂಪಿಗೆ ಸೇರಿದವರಾಗಿದ್ದರು. ಕನಿಷ್ಠ ಮಾಸಿಕ ಆದಾಯದ ಗುಂಪು (ರೂ. 25 ರಿಂದ 50) ಪಡೆದ ಸಾಲದ ಪ್ರಮಾಣ ಒಟ್ಟು ಸಾಲದಲ್ಲಿ ಅತ್ಯಲ್ಪ ಪ್ರಮಾಣದ್ದಾಗಿತ್ತು. ಕಾಗಿನೆಲೆಯಲ್ಲಿ ದೊಡ್ಡ ಭೂಹಿಡುವಳಿದಾರರು (10 ಎಕರೆಗಿಂತ ಹೆಚ್ಚು) ದೊಡ್ಡ ಪ್ರಮಾಣದ ಸಾಲವನ್ನು ಪಡೆಯಲು ಶಕ್ತರಾಗಿದ್ದರು. ಇದಕ್ಕೆ ಕಾರಣ ದೊಡ್ಡ ಹಿಡುವಳಿದಾರರು ಹೊಂದಿದ್ದ ಆರ್ಥಿಕ ಭದ್ರತೆ. ಕಾಗಿನೆಲೆಯ ಇನ್ನೊಂದು ವೈಶಿಷ್ಟ್ಯವೆಂದರೆ ಇಲ್ಲಿಯ ಬಹುಪಾಲು ಕುಟುಂಬಗಳು (399 ರಲ್ಲಿ 284) ಮುಸಲ್ಮಾನರಾಗಿದ್ದು ಅವರ ಮುಖ್ಯ ಕಸುಬು ಒಕ್ಕಲುತನ. ಇಲ್ಲಿರುವ ಹಿಂದೂ ಕುಟುಂಬಗಳ ಸಂಖ್ಯೆ 113, ಅವರಲ್ಲಿ ಲಿಂಗಾಯತ ಕುಟುಂಬಗಳ ಸಂಖ್ಯೆ 44. ಕಾಗಿನೆಲೆಯ ಒಟ್ಟು 399 ಕುಟುಂಬಗಳಲ್ಲಿ 178 ಕುಟುಂಬಗಳು ವಿವಿಧ ಬಗೆಯ ಸಾಲಗಾರರಾಗಿದ್ದರು. ಒಟ್ಟು ಸಾಲದಲ್ಲಿ ಶೇ. 65.4 ರಷ್ಟು ಸಾಲವನ್ನು ಹೆಚ್ಚಿನ ಆದಾಯ ಹೊಂದಿದ ಕುಟುಂಬಗಳು ಹೊಂದಿದ್ದವು.

ಉತ್ತಮ ಆರ್ಥಿಕ ಸ್ಥಿತಿಗತಿಗಳನ್ನು ಹೊಂದಿದ್ದ ಹುಲಕೋಟಿಯ 521 ಕುಟುಂಬಗಳ ಪೈಕಿ 95 (ಶೇ. 18) ಮಾತ್ರ ಸಾಲಗಾರರಾಗಿದ್ದರು. ಈ ಗ್ರಾಮದಲ್ಲಿ ಸಾಲಗಾರರ ಸಂಖ್ಯೆ ಕಡಿಮೆ ಇದ್ದರೂ, ಇತರೆಡೆಯಂತೆ ಇಲ್ಲಿಯೂ ಹೆಚ್ಚು ಆದಾಯ ಹೊಂದಿದ್ದ ಕುಟುಂಬಗಳು ಪಡೆದ ಸಾಲ ಒಟ್ಟು ಸಾಲದ ಶೇ. 27.10 ಆಗಿತ್ತು. ಹುಲಕೋಟಿಯ ಮಟ್ಟಿಗೆ ಹೇಳುವುದಾದರೆ ಸಾಮಾನ್ಯವಾಗಿ ಈ ಹಳ್ಳಿಯ ಆರ್ಥಿಕ ಪರಿಸ್ಥಿತಿಯು ಸಮಾಧಾನಕರವಾಗಿತ್ತೆಂದು ತಿಳಿದು ಬರುವುದು. ಹುಲಕೋಟಿಯು ಜಿಲ್ಲೆಯ ಪ್ರಮುಖ ವಾಣಿಜ್ಯ ಕೇಂದ್ರಗಳಲ್ಲೊಂದಾದ ಗದಗ ಶಹರಕ್ಕೆ ಅತೀ ಸಮೀಪದಲ್ಲಿದ್ದು (8 ಕಿ.ಮಿ.) ಪ್ರಾರಂಭದಿಂದಲೂ ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ಸಹಕಾರ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ರೈತರಿಗೆ ಬೇಕಾಗುವ ಸುಲಭ ಸಾಲದ ಸೌಕರ್ಯ, ಮಾರುಕಟ್ಟೆಯ ಅನುಕೂಲತೆ, ವ್ಯವಸಾಯ ಉತ್ಪನ್ನಗಳ ಸಂಸ್ಕರಣ ಮುಂತಾದ ಘಟಕಗಳನ್ನು ಸಹಕಾರಿ ವಲಯದಲ್ಲಿ ಹೊಂದಿರುವುದರಿಂದ ಆರ್ಥಿಕ ದೃಷ್ಟಿಯಿಂದ ಅನುಕೂಲಕರವಾದ ಗ್ರಾಮವೆಂದು ಹೇಳಬಹುದು. ಈ ಗ್ರಾಮದ ಒಟ್ಟು 521 ಕುಟುಂಬಗಳ ಪೈಕಿ ಬಹುಪಾಲು ಕುಟುಂಬಗಳು ಕುರುಬರು (125), ರಡ್ಡಿ (120) ಮತ್ತು ಲಿಂಗಾಯಿತರು (107) ಈ ಜಾತಿಗಳಿಗೆ ಸೇರಿದವುಗಳಾಗಿದ್ದವು.

ಸಾಂಗ್ಲೀ ಸಂಸ್ಥಾನದ ಆಡಳಿತಕ್ಕೆ 1948 ರ ವರೆಗೆ ಒಳಪಟ್ಟಿದ್ದ, ನಂತರ ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಭಾಗವಾದ ಮಾಗಡಿ ಗ್ರಾಮದ ಆರ್ಥಿಕ ಪರಿಸ್ಥಿತಿಯು ಈ ಮೇಲಿನ ಎರಡು ಗ್ರಾಮಗಳಿಗೆ ತೀರಾ ಭಿನ್ನವಾಗಿರಲಿಲ್ಲ ಎಂಬುದನ್ನು ಸಮೀಕ್ಷೆಯಿಂದ ಕಾಣಬಹುದು. ಮಾಗಡಿ ಗ್ರಾಮದ ಒಟ್ಟು ಕುಟುಂಬಗಳು 522 ರ ಪೈಕಿ ಬಹುಪಾಲು ಲಿಂಗಾಯತರು (240), ಕುರುಬರು (66), ರಡ್ಡಿ (30), ಇವರಿಂದ ಕೂಡಿದ್ದು, ಒಟ್ಟು ಕುಟುಂಬಗಳ ಪೈಕಿ 252 ಕುಟುಂಬಗಳು (ಶೇ. 48.7) ಸಾಲಗಾರರಾಗಿದ್ದರು. ಒಟ್ಟು ಸಾಲದಲ್ಲಿ ಅತೀ ಹೆಚ್ಚಿನ ಮಾಸಿಕ ವರಮಾನ ಹೊಂದಿದ್ದ (ರೂ. 100 ಮತ್ತು ಹೆಚ್ಚಿನ) ಕುಟುಂಬಗಳ ಸಾಲದ ಪ್ರಮಾಣ ಶೇ. 63.82 ಆಗಿದ್ದರೆ, ಕನಿಷ್ಠ ಮಾಸಿಕ ಆದಾಯ (ರೂ. 25 ಕ್ಕಿಂತ ಕಡಿಮೆ) ಹೊಂದಿದ್ದ ಕುಟುಂಬಗಳ ಸಾಲದ ಪ್ರಮಾಣ ಒಟ್ಟು ಸಾಲದ ಶೇ. 27.45.

ಸಾಲಗಳ ವಿವಿಧ ಮೂಲಗಳನ್ನು ಕುರಿತಂತೆ ಸಮೀಕ್ಷೆಯಿಂದ ಕಂಡು ಬರುವದೇನೆಂದರೆ ಕಾಗಿನೆಲೆಯಲ್ಲಿ ಬಹುಭಾಗ, ಶೇ. 81.7 ಸರ್ಕಾರೇತರ ಮತ್ತು ಸಹಕಾರೇತರ ಮೂಲಗಳಿಂದ ಒದಗಿಸಲ್ಪಟ್ಟಿದ್ದು (ದಲಾಲರು, ವ್ಯಾಪಾರಸ್ಥರು, ಲೇವಾದೇವಿಗಾರರುಗಳಿಂದ) ಒಟ್ಟು ಸಾಲದಲ್ಲಿ ಸಹಕಾರಿ ವಲಯ ಒದಗಿಸಿದ ಸಾಲದ ಪ್ರಮಾಣ ಕೇವಲ ಶೇ. 15.4 ಎಂದು ತಿಳಿದು ಬರುವುದು. ಮಾಗಡಿಯಲ್ಲಿ ಬಹುಪಾಲು ದೊಡ್ಡ ಹಿಡುವಳಿದಾರರು ಸ್ಥಳೀಯ ದೊಡ್ಡ ಪ್ರಮಾಣದ ಸಹಕಾರಿ ಪತ್ತಿನ ಸಂಘಗಳಿಂದ ಮತ್ತು ಸ್ಥಳೀಯ ರಡ್ಡಿ ಬ್ಯಾಂಕ್ ಮತ್ತು ಸಾಂಗಲಿ ಬ್ಯಾಂಕಿನಿಂದ ಸಾಲ ಪಡೆದಿರುವ ಅಂಶ ವ್ಯಕ್ತವಾಗುವುದು. ಆದರೆ ಇತರ ಮೂಲಗಳಿಂದ (ಅಂದರೆ ಸ್ನೇಹಿತರು ಮತ್ತು ಸಂಬಂಧಿಕರಿಂದ) ಪಡೆದ ಸಾಲದ ಪ್ರಮಾಣವೂ ಕಡಿಮೆಯದಾಗಿರಲಿಲ್ಲ ಎಂದು ಕಂಡು ಬರುವುದು. ಜಿಲ್ಲೆಯಲ್ಲಿ ಸಹಕಾರಿ ಸಂಘಗಳು ಬೆಳೆ ಸಾಲಗಳ ಮೇಲೆ ಶೇ. 8, ಸರ್ಕಾರದ ತಕಾವಿ ಸಾಲದ ಮೇಲೆ ಶೇ. 4, ಖಾಸಗಿ ಸಾಹುಕಾರರು ಶೇ. 12 ರಿಂದ 18 ರ ವರೆಗೆ ಬಡ್ಡಿಯನ್ನು ಆಕರಿಸುತ್ತಿದ್ದವು ಎಂದು ಸಮೀಕ್ಷೆಯಿಂದ ತಿಳಿದು ಬರುವುದು. ಸಾಲದ ಉಪಯೋಗವನ್ನು (ಬಳಕೆಯನ್ನು) ಕುರಿತಂತೆ ಸಮೀಕ್ಷೆಯಿಂದ ಗೊತ್ತಾಗುವ ಅಂಶವೆಂದರೆ ಹುಲಕೋಟಿ ಗ್ರಾಮದಲ್ಲಿ ಒಟ್ಟು ಸಾಲದಲ್ಲಿ ಶೇ. 37.16 ರಷ್ಟು ಕೌಟುಂಬಿಕ ಸಾಗುವಳಿಗೆ, ಶೇ. 22.25 ಭೂಮಿಯ ಖರೀದಿಗೆ, ಶೇ. 8.34 ಮನೆ ಕಟ್ಟಲು ಉಪಯೋಗಿಸಿದ್ದಾಗಿ ತಿಳಿದು ಬರುವುದು. ಅನುತ್ಪಾದಕ ವೆಚ್ಚ ಎಂದು ಪರಿಗಣಿಸಲಾಗುವ ಮದುವೆ ಖರ್ಚಿಗಾಗಿ ಪಡೆದ ಸಾಲದ ಪ್ರಮಾಣ ಶೇ. 2.43 , ಮತ್ತು ಇತರೇ ಅವಶ್ಯಕತೆಗಳಿಗೆ ಪಡೆದ ಸಾಲದ ಪ್ರಮಾಣ ಶೇ. 11.05 ಎಂದು ವರದಿಯಾಗಿದೆ. ಈ ಭಾಗದಲ್ಲಿ ಸಾಮಾನ್ಯವಾಗಿ ಉತ್ತಮ ಮಳೆ-ಬೆಳೆ ಬರುವುದರಿಂದ ರೈತರ ಸಾಲದ ಪ್ರಮಾಣ ಕಡಿಮೆ.

ಕಾಗಿನೆಲೆಯಲ್ಲಿ ಒಟ್ಟು ಸಾಲದ ಬಳಕೆಯಲ್ಲಿ ಶೇ. 45 ರಷ್ಟು ಅನುತ್ಪಾದಕ ವೆಚ್ಚಗಳಿಗೆ ವಿನಿಯೋಗಿಸಿದರೆ, ವ್ಯವಸಾಯದ ಚಾಲತಿ ಖರ್ಚನ್ನು ಸರಿದೂಗಿಸಲು ಶೇ. 28.4, ಭೂಮಿ, ಜಾನುವಾರು ಮತ್ತು ಇತರೇ ಆಸ್ತಿಗಳ ಮೇಲೆ ಶೇ. 18.6 ರಷ್ಟು ಸಾಲವನ್ನು ವಿನಿಯೋಗಿಸಲಾಗುತ್ತಿತ್ತು.

ಮಾಗಡಿಯಲ್ಲಿ ಶೇ. 68.26 ರಷ್ಟು ಸಾಲವನ್ನು ವ್ಯವಸಾಯದ ಚಾಲತಿ ಖರ್ಚನ್ನು ಸರಿದೂಗಿಸಲು, ಶೇ. 16.40 ರಷ್ಟು ಸಾಲವನ್ನು ದಿನನಿತ್ಯದ ಸಾಮಾನ್ಯ ಬೇಡಿಕೆಗಳ ಪೂರೈಕೆಗಾಗಿ, ಶೇ. 5.03 ರಷ್ಟನ್ನು ಜಮೀನು ಕೊಳ್ಳಲು ಉಪಯೋಗಿಸಿದ್ದರೆ, ಅನುತ್ಪಾದಕ ವೆಚ್ಚಗಳಾದ ಮದುವೆ ಮತ್ತು ಮನೆಗಳ ದುರಸ್ತಿ, ಔಷಧೋಪಚಾರ ಮುಂತಾದವುಗಳಿಗೆ ಬಳಸಿದ ಸಾಲದ ಪ್ರಮಾಣ ಅನುಕ್ರಮವಾಗಿ ಶೇ. 4.62 ಮತ್ತು ಶೇ. 4.10 ಎಂದು ತಿಳಿದು ಬರುವುದು. ಗ್ರಾಮೀಣ ಪ್ರದೇಶದಲ್ಲಿ ವಸ್ತು ವಿನಿಮಯ ಪದ್ಧತಿಯು ಇನ್ನೂ ರೂಢಿಯಲ್ಲಿದ್ದು ಸಾಲದ ರೂಪದಲ್ಲಿ ಆಹಾರ ಧಾನ್ಯಗಳನ್ನು ಕಡವಾಗಿ ಪಡೆದು ಅದನ್ನು ಹಿಂದಕ್ಕೆ ನೀಡುವಾಗ್ಗೆ ಸಾಲ ಪಡೆದ ಧಾನ್ಯದ ಒಂದೂವರೆ ಪ್ರಮಾಣದಷ್ಟು ಕೊಡುವ ಪದ್ಧತಿಯು ಕಾಗಿನೆಲೆಯಲ್ಲಿ ರೂಢಿಯಲ್ಲಿ ಇದ್ದುದಾಗಿ ಕಂಡು ಬರುವುದು.

ಕಳೆದ ಸುಮಾರು 34 ವರ್ಷಗಳಲ್ಲಿ ಈ ಮೇಲಿನ ಮೂರು ಪ್ರಾತಿನಿಧಿಕ ಗ್ರಾಮಗಳಲ್ಲದೇ ಜಿಲ್ಲೆಯ ಇತರ ಗ್ರಾಮಗಳಲ್ಲಿಯೂ ಸಾಕಷ್ಟು ಆರ್ಥಿಕ ಮುನ್ನಡೆಯಾಗಿರುವುದನ್ನು ಕಾಣಬಹುದು. ಈ ಮುನ್ನಡೆಗೆ ಸರ್ಕಾರವು ಪಂಚವಾರ್ಷಿಕ ಯೋಜನೆಗಳ ಮೂಲಕ ಕೈಗೊಳ್ಳಲಾದ ಹಲವಾರು ಗ್ರಾಮಾಂತರ ಅಭಿವೃದ್ಧಿ ಯೋಜನೆಗಳು ಮುಖ್ಯ ಕಾರಣ. ಅವುಗಳಲ್ಲಿ ಬಹು ಮುಖ್ಯವಾಗಿ ಹೆಚ್ಚುತ್ತಿರುವ ನೀರಾವರಿ ಸೌಲಭ್ಯ, ಸುಧಾರಿತ ಬೇಸಾಯ ಕ್ರಮ, ಉತ್ತಮ ಮಾರುಕಟ್ಟೆಯ ವ್ಯವಸ್ಥೆ, ರೈತರ ಅವಶ್ಯಕತೆಗಳನ್ನು ಪೂರೈಸಲು ದೊಡ್ಡ ಪ್ರಮಾಣದಲ್ಲಿ ಮೂಡಿ ಬರುತ್ತಿರುವ ಸಹಕಾರಿ ಪತ್ತಿನ ಸಂಸ್ಥೆಗಳು, ಗ್ರಾಮೀಣ ಪ್ರದೇಶವನ್ನು ವ್ಯಾಪಕವಾಗಿ ವ್ಯಾಪಿಸಿರುವ ಗ್ರಾಮೀಣ

ಬ್ಯಾಂಕುಗಳು ಮತ್ತು ಇತರ ಸಾಂಸ್ಥಿಕ ಹಣಕಾಸು ಸಂಸ್ಥೆಗಳು, ಸರ್ಕಾರದ ಅನೇಕ ಬಡತನ ನಿರ್ಮೂಲನಾ ಯೋಜನೆಗಳು, ವ್ಯವಸಾಯ ಆಧಾರಿತ ಗ್ರಾಮೀಣ ಕೈಗಾರಿಕೆಗಳಿಗೆ ಪ್ರೋತ್ಸಾಹ, ಕೃಷಿಗೆ ಪೂರಕವಾಗಿ ನಿಂತಿರುವ ಹೈನುಗಾರಿಕೆ, ತೋಟಗಾರಿಕೆ, ಕೋಳಿ, ಕುರಿಸಾಕಣೆ, ರೇಷ್ಮೆ ವ್ಯವಸಾಯ, ನೇಕಾರಿಕೆ ಮತ್ತು ಇತರ ಗ್ರಾಮೀಣ ಗುಡಿ ಕೈಗಾರಿಕೆಗಳಿಗೆ ಸರ್ಕಾರ ನೀಡುತ್ತಿರುವ ಸಹಾಯ ಇವೇ ಮುಂತಾದವುಗಳು ಗ್ರಾಮೀಣ ಆರ್ಥಿಕ ಜೀವನದಲ್ಲಿ ಭರವಸೆಯ ಬೆಳಕನ್ನು ಮೂಡಿಸಿದೆ.

**ಲೇವಾದೇವಿ ನಿಯಂತ್ರಣ ಕಾನೂನು**

ಬಹು ಹಿಂದಿನಿಂದಲೂ ರೂಢಿಯಲ್ಲಿ ಇರುವ, ಕಾನೂನಿನ ನಿಯಂತ್ರಣಕ್ಕೆ ಒಳಗಾಗದೇ ಸ್ವಚ್ಛಂದವಾಗಿ ತಮ್ಮ ವ್ಯವಹಾರಗಳನ್ನು ಮುಂದುವರಿಸಿಕೊಂಡು ಬರುತ್ತಿದ್ದ ಲೇವಾದೇವಿಗಾರರು ಮತ್ತು ಗಿರವಿದಾರರ ವ್ಯವಹಾರಗಳನ್ನು ನಿಯಂತ್ರಿಸುವ ಮೂಲಕ ನಿರಕ್ಷರಿ, ಅಸಹಾಯಕ, ಸಾಲಗಾರರ ಶೋಷಣೆಯನ್ನು ತಪ್ಪಿಸಲು ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ನಂತರದ ದಶಕಗಳಲ್ಲಿ ರಾಜ್ಯ ಸರ್ಕಾರಗಳು ಸೂಕ್ತ ಕಾನೂನನ್ನು ಜಾರಿಯಲ್ಲಿ ತಂದವು. 19 ನೇಯ ಶತಮಾನದಲ್ಲೇ 'ಡೆಕ್ಕನ್ ರೊಯಟ್ಸ್' (1875) ಎಂಬ ಬಡರೈತರು ಬಡ್ಡಿ ಸುಲಿಗೆಯ ವಿರುದ್ಧ ಹೂಡಿದ ಬಂಡಾಯದ ಕಾಲದಲ್ಲೇ ಸರಕಾರಕ್ಕೆ ಬಡ್ಡಿಯ ಭಾರದ ತೀವ್ರತೆಯ ಕಲ್ಪನೆ ಬಂದಿತ್ತು. ಮೂಲಭೂತವಾಗಿ ಸಾಲಗಾರರ ಹಿತರಕ್ಷಣೆ, ಬಡ್ಡಿದರಗಳನ್ನು ನಿಯಂತ್ರಣದಲ್ಲಿ ಇಡುವುದು, ಸಾಲಿಗರ ಅವ್ಯವಹಾರಗಳನ್ನು ನಿಯಂತ್ರಿಸುವುದು ಈ ಹಿಂದಿನ ಮತ್ತು ಸದ್ಯದ ಕಾನೂನುಗಳ ಮುಖ್ಯ ಉದ್ದೇಶ. ಲೇವಾದೇವಿ ವ್ಯವಹಾರಗಳನ್ನು ನಿಯಂತ್ರಿಸಲು ರಾಜ್ಯ ವ್ಯಾಪ್ತಿಯ ಒಂದೇ ಬಗೆಯ ಕಾನೂನುಗಳು 1966 ರಿಂದ ಜಾರಿಗೆ ಬರುವ ಮೊದಲೇ, ಧಾರವಾಡ ಜಿಲ್ಲೆಯಲ್ಲಿ ಬೊಂಬಾಯಿ ಲೇವಾದೇವಿಗಾರರ ಕಾನೂನು 1946 ನ್ನು 17 ನವೆಂಬರ್ 1947 ರಿಂದ ಜಾರಿಯಲ್ಲಿ ತರಲಾಯಿತು. ನಂತರ ಸದರಿ ಕಾನೂನನ್ನು ಧಾರವಾಡ ಜಿಲ್ಲೆಯಲ್ಲಿ ವಿಲೀನಗೊಂಡ ಸಂಸ್ಥಾನಗಳ ಪ್ರದೇಶಗಳಿಗೂ (ಸವಣೂರು, ಶಿರಹಟ್ಟಿ, ಕುಂದಗೋಳ ಮುಂತಾದವುಗಳು) ವಿಸ್ತರಿಸಲಾಯಿತು. ಸಾಹುಕಾರರಿಗೆ ಲೇವಾದೇವಿ ವ್ಯವಹಾರ ನಡೆಸಲು ಅನುಮತಿ ಪತ್ರ (ಲೈಸನ್ಸ್) ನೀಡುವುದು, ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ಲೆಕ್ಕಪತ್ರಗಳನ್ನಿಡುವುದು, ಸಾಲದ ವಾರ್ಷಿಕ ಲೆಕ್ಕವನ್ನು ಸಾಲಗಾರರಿಗೂ ಮತ್ತು ಸಂಬಂಧಪಟ್ಟ ಸಹಕಾರಿ ಇಲಾಖೆಯ ಅಧಿಕಾರಿಗಳಿಗೆ ಸಲ್ಲಿಸುವುದು, ಬಡ್ಡಿಯ ಗರಿಷ್ಠ ಮಿತಿಯನ್ನು ಗೊತ್ತುಪಡಿಸುವುದು, ಇವೇ ಮುಂತಾದ ಅಂಶಗಳನ್ನು 1946 ರ ನಿಯಂತ್ರಣ ಕಾನೂನು ಒಳಗೊಂಡಿತ್ತು. ಪ್ರಾರಂಭದಲ್ಲಿ ಈ ಕಾಯಿದೆಯನ್ನು ಜಾರಿಯಲ್ಲಿ ತರುವ ಹೊಣೆಗಾರಿಕೆಯನ್ನು ಕಂದಾಯ ಇಲಾಖೆಯ ಅಧಿಕಾರಿಗಳಿಗೆ ವಹಿಸಲಾಗಿತ್ತು. ಆದರೆ ಹುಬ್ಬಳ್ಳಿ-ಧಾರವಾಡ ನಗರಕ್ಕೆ ಸೀಮಿತವಾಗದಂತೆ ಇಲ್ಲಿಯ ಬೃಹತ್ ವ್ಯವಹಾರಗಳನ್ನು ನಿಯಂತ್ರಿಸಲು ಸಹಾಯಕವಾಗುವಂತೆ ಪ್ರತ್ಯೇಕವಾದ ಸಹಕಾರಿ ಇಲಾಖೆಯ ಸಹಾಯಕ ನಿಬಂಧಕರು ಈ ವ್ಯವಹಾರ ನೋಡಿಕೊಳ್ಳುತ್ತಿದ್ದರು. ಕಾನೂನಿನ ಜಾರಿಯ ನಂತರ (1946), ಜಾಮೀನಿದ್ದ ಸಾಲಗಳಿಗೆ ಶೇ. 6 ರಂತೆ, ಜಾಮೀನು ರಹಿತ ಸಾಲಗಳಿಗೆ ಶೇ. 9 ರಂತೆ, ಬಡ್ಡಿಯನ್ನು ವಿಧಿಸಲಾಗುತ್ತಿತ್ತು. ನಂತರ ಮಾರುಕಟ್ಟೆಯಲ್ಲಿ ಪ್ರಚಲಿತವಿದ್ದ ಹೆಚ್ಚಿನ ಲೇವಾದೇವಿ ದರಗಳನ್ನು ಗಮನಿಸಿ ಹಿಂದಿನ ದರಗಳನ್ನು ಅನುಕ್ರಮವಾಗಿ ಶೇ. 9 ಮತ್ತು 12 ಕ್ಕೆ ಹೆಚ್ಚಿಸಲಾಯಿತು. ಆಡಳಿತ ವರದಿ (1952) ತಿಳಿಸುವಂತೆ ಜಿಲ್ಲೆಯಾದ್ಯಂತ ಸಹಕಾರಿ ವರ್ಷಾಂತ್ಯ 1949-50, 1950-51, ಮತ್ತು 1951-52 ರಲ್ಲಿ ಲೈಸನ್ಸ್ ಹೊಂದಿದ್ದ ಲೇವಾದೇವಿಗಾರರ ಸಂಖ್ಯೆ ಅನುಕ್ರಮವಾಗಿ 228, 245 ಮತ್ತು 395 ಎಂದು ವರದಿಯಾಗಿದೆ. ಖಾಸಗಿ ಸಾಹುಕಾರರು 1951 ನೇ ವರ್ಷದಲ್ಲಿ ನೀಡಿದ್ದ ಒಟ್ಟು ಸಾಲ ರೂ. 1.6 ಕೋಟಿ ಎಂದು ತಿಳಿದು ಬರುವುದು. ಈ 1946 ರ ನಿಯಂತ್ರಣ ಕಾನೂನಿನ ಅನ್ವಯ ವ್ಯಾಪಾರಸ್ಥರಿಗೆ ನೀಡಿದ ಸಾಲಗಳು ಈ ಕಾನೂನಿನ ವ್ಯಾಪ್ತಿಯಲ್ಲಿ ಬರುತ್ತಿರಲಿಲ್ಲ, ಆದ್ದರಿಂದ ಬಹುಪಾಲು ಸಾಹುಕಾರರು ಕಾನೂನಿನ ಪರಿಮಿತಿಯ ಹೊರಗೆ ಜಾರಿಕೊಳ್ಳಲು ಪ್ರಯತ್ನ ಪಡುತ್ತಿದ್ದರು. ಲೈಸನ್ಸ್ ಪಡೆದು ಲೇವಾದೇವಿ ವ್ಯವಹಾರ ನಿರತರಾದವರ ಸಂಖ್ಯೆಗಿಂತಲೂ ಅನಧಿಕೃತವಾಗಿ ಲೇವಾದೇವಿ ವ್ಯವಹಾರ ನಡೆಸುವವರ ಸಂಖ್ಯೆಯೇ ಅಧಿಕವಾಗಿತ್ತು ಎಂದು ತಿಳಿದು ಬರುವುದು.

**ಬಹು ವಿಧ ಲೇವಾದೇವಿಗಾರರು:** ಬೊಂಬಾಯಿ ಪ್ರಾಂತೀಯ ಬ್ಯಾಂಕಿಂಗ್ ವಿಚಾರಣಾ ಸಮಿತಿ (1929-30) ಯು ಈ ಜಿಲ್ಲೆಯಲ್ಲಿ ಎಂಟು ಬಗೆಯ ವಿವಿಧ ಲೇವಾದೇವಿದಾರರನ್ನು ಗುರುತಿಸಿದೆ. ಇವರಲ್ಲಿ ಕೇವಲ ಲೇವಾದೇವಿ ಒಂದನ್ನೇ ಮಾಡುವವರ ಸಂಖ್ಯೆ ಬಹು ಕಡಿಮೆ ಆಗಿತ್ತು. ನಗರ ಪ್ರದೇಶಗಳಲ್ಲಿ ಸರಾಫರು, ಸಾಮಾನ್ಯ ವ್ಯಾಪಾರಸ್ಥರು, ದಲಾಲರು, ಕಮಿಶನ್ ಏಜೆಂಟರು, ಹೆಚ್ಚುವರಿ ಹಣ ಉಳ್ಳವರು, ಲೇವಾದೇವಿ ವ್ಯವಹಾರದಲ್ಲಿ ತೊಡಗಿದ್ದರೆ, ಗ್ರಾಮಗಳಲ್ಲಿ ಜಮೀನುದಾರರು, ದೊಡ್ಡ ಹಿಡುವಳಿದಾರರು, ವತನದಾರರು ಈ ವ್ಯವಹಾರದಲ್ಲಿ ತೊಡಗಿದ್ದರು. ಹುಬ್ಬಳ್ಳಿಯ ಕೆಲವೇ ಕೆಲವು ಸರಾಫರು ಬೊಂಬಾಯಿಯ ಸರಾಫರೊಂದಿಗೆ

ಸಂಪರ್ಕ ಇಟ್ಟುಕೊಂಡು ಹುಂಡಿ ವ್ಯವಹಾರ ಮಾಡುತ್ತಿದ್ದರು. ಈಗ ಪ್ರಚಲಿತ ಇರುವ ಬಡ್ಡಿದರಗಳು (ದಿನಾಂಕ 27.7.1992 ರಿಂದ) ಆಧಾರ ರಹಿತ ಸಾಲಗಳಿಗೆ ಶೇ. 23, ಆಧಾರ ಹೊಂದಿದ ಸಾಲಗಳಿಗೆ ಶೇ. 21 ಎಂದು ಸರ್ಕಾರ ನಿಗದಿ ಮಾಡಿದೆ.

**ಬೆಳೆಯುತ್ತಿರುವ ಖಾಸಗಿ ಸಾಹುಕಾರರು:** ಸಹಕಾರಿ ಇಲಾಖೆಯ ಜಿಲ್ಲಾ ಉಪನಿಬಂಧಕರು ವರದಿ ಮಾಡುವಂತೆ 1982-83, 1987-88 ಮತ್ತು 1992-93 ರಲ್ಲಿ ಜಿಲ್ಲೆಯಲ್ಲಿ ಇದ್ದಂತೆ ಲೇವಾದೇವಿಗಾರರ ಸಂಖ್ಯೆ ಅನುಕ್ರಮವಾಗಿ 246, 280 ಮತ್ತು 401 ಆಗಿದ್ದರೆ, ಗಿರವಿದಾರರ ಸಂಖ್ಯೆ ಅನುಕ್ರಮವಾಗಿ 130, 124 ಮತ್ತು 451 ಎಂದು ತಿಳಿದು ಬರುವುದು. ಗಿರವಿದಾರರಲ್ಲಿ ಬಹುಪಾಲು ಈ ಜಿಲ್ಲೆಗೆ ಉತ್ತರದ ರಾಜ್ಯಗಳಿಂದ ಬಂದವರು ಇರುವರು. ಗಿರವಿದಾರರು ಅವರ ಗ್ರಾಹಕರಿಂದ ಸಂಗ್ರಹಿಸಿದ ಒಟ್ಟು ಠೇವಣಿಗಳು ಮತ್ತು ನೀಡಿದ ಸಾಲ ಮುಂಗಡಗಳು ಈ ರೀತಿ ಇದ್ದವು:

ವರ್ಷ: 1992 ಠೇವಣಿಗಳು-ರೂ. 1386.75 ಲಕ್ಷ; ಸಾಲಗಳು ವ್ಯವಸಾಯಕ್ಕೆ ರೂ.2.50 ಲಕ್ಷ, ವ್ಯವಸಾಯೇತರ ಉದ್ದೇಶಗಳು ರೂ.1786.81 ಲಕ್ಷ.

ವರ್ಷ: 1990, ಠೇವಣಿಗಳು-ರೂ.551.60 ಲಕ್ಷ; ಸಾಲಗಳು-ವ್ಯವಸಾಯಕ್ಕೆ ರೂ. 0.85 ಲಕ್ಷ, ವ್ಯವಸಾಯೇತರ ರೂ. 1396.25 ಲಕ್ಷ.

ವರ್ಷ: 1988: ಠೇವಣಿಗಳು- ರೂ. 231.33 ಲಕ್ಷ; ಸಾಲಗಳು-ವ್ಯವಸಾಯ ರೂ.3.25 ಲಕ್ಷ, ವ್ಯವಸಾಯೇತರ ರೂ. 952.20 ಲಕ್ಷ.

ಲೈಸನ್ಸ್ ಪಡೆದ ಸಾಹುಕಾರರು (ಮನಿ ಲೆಂಡರ್ಸ್) ಈ ಜಿಲ್ಲೆಯಲ್ಲಿ 1990, 1991 ಮತ್ತು 1992 ರಲ್ಲಿ ನೀಡಿದ್ದ ಸಾಲಗಳು ಅನುಕ್ರಮವಾಗಿ ರೂ. 730.16 ಲಕ್ಷ, ರೂ. 774.52 ಲಕ್ಷ ಮತ್ತು ರೂ. 814.88 ಲಕ್ಷ ಎಂದು ವರದಿಯಾಗಿದೆ.

ಜಿಲ್ಲೆಯಾದ್ಯಂತ ಲೇವಾದೇವಿ ವ್ಯವಹಾರಗಳನ್ನು ನಡೆಸುವವರಿಂದ 1990-92 ರ ಅವಧಿಯಲ್ಲಿ ವಸೂಲಾದ ಲೈಸನ್ಸ್ ಶುಲ್ಕ ಮತ್ತು ಭದ್ರತಾ ಠೇವಣಿಗಳು ಈ ರೀತಿ ಇದ್ದವು: 1990- ಲೈಸನ್ಸ್ ಶುಲ್ಕ ರೂ. 52,645, ಭದ್ರತಾ ಠೇವಣಿ ರೂ. 6.12 ಲಕ್ಷ. 1991- ಲೈಸನ್ಸ್ ಶುಲ್ಕ ರೂ. 66,400, ಭದ್ರತಾ ಠೇವಣಿ ರೂ. 7.21 ಲಕ್ಷ, 1992- ಲೈಸನ್ಸ್ ಶುಲ್ಕ ರೂ. 48,225, ಭದ್ರತಾ ಠೇವಣಿ ರೂ. 9.62 ಲಕ್ಷ. ಚಿಟ್ ಫಂಡ್ ಕಾನೂನು (ಕೇಂದ್ರದ ಕಾನೂನು) 1982 ಅನ್ವಯ, ಜಿಲ್ಲೆಯಲ್ಲಿ ಅನುಮತಿ ಪಡೆದ ಸಂಸ್ಥೆಗಳು ರೂ. 10.80 ಲಕ್ಷ ರೂ. ಮೌಲ್ಯದವರೆಗೆ 1992ರಲ್ಲಿ ಚಿಟ್‌ಫಂಡ್ ವ್ಯವಹಾರ ನಡೆಸಿವೆ.

**ಹುಬ್ಬಳ್ಳಿ-ಧಾರವಾಡ ನಗರಗಳ ಲೇವಾದೇವಿ ವ್ಯವಹಾರ:** ವ್ಯಾಪಾರ-ವಾಣಿಜ್ಯ-ಕೈಗಾರಿಕಾ ಕೇಂದ್ರವಾಗಿ ಬೆಳೆದಿರುವ ಹುಬ್ಬಳ್ಳಿ-ಧಾರವಾಡಗಳಲ್ಲಿ ಜಿಲ್ಲೆಯಲ್ಲಿ ಇರುವ ಒಟ್ಟು ಸಂಖ್ಯೆಯ ಲೇವಾದೇವಿಗಾರರು, ಗಿರವಿದಾರರು ಮತ್ತು ಹಣಕಾಸು ಸಂಸ್ಥೆಗಳಲ್ಲಿ ಸುಮಾರು ಅರ್ಧದಷ್ಟು ಈ ಅವಳಿ ನಗರಗಳಲ್ಲಿ ಕೇಂದ್ರೀಕೃತವಾದಂತೆ ಕಂಡು ಬರುವುದು. ಹುಬ್ಬಳ್ಳಿ ವಲಯದ ಸಹಕಾರಿ ಇಲಾಖೆಯ ಸಹಾಯಕ ನಿಬಂಧಕರು (ಮನಿಲೆಂಡರ್ಸ್) ವರದಿ ಮಾಡುವಂತೆ 1982-83 ರಲ್ಲಿ ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ ಇದ್ದ ಒಟ್ಟು ಲೇವಾದೇವಿಗಾರರ ಸಂಖ್ಯೆ 272 ಆಗಿದ್ದರೆ ಅದರಲ್ಲಿ 138 ಜನ ಖಾಸಗಿ ಸಾವುಕಾರರು (ಮನಿಲೆಂಡರ್ಸ್), 96 ಜನ ಗಿರವಿದಾರರು, 14 ನೋಂದಾಯಿತ ಹಣಕಾಸು ಸಂಸ್ಥೆಗಳು ಮತ್ತು 24 ಷೇರು ಕಂಪನಿಗಳು ಸೇರಿದ್ದವು. 1987-88 ರಲ್ಲೂ ಇವುಗಳ ಒಟ್ಟು ಸಂಖ್ಯೆ 462 ಕ್ಕೆ ಹೆಚ್ಚಳಗೊಂಡಿತ್ತು. 1992-93 ರಲ್ಲಿ (ಆಗಸ್ಟ್‌ವರೆಗೆ) ಇವುಗಳ ಸಂಖ್ಯೆ 804 ಕ್ಕೆ ಹೆಚ್ಚಳಗೊಂಡಿತ್ತು. ಇವುಗಳ ಪೈಕಿ 219 ಲೇವಾದೇವಿಗಾರರು, 166 ಜನ ಗಿರವಿದಾರರು, 356 ಹಣಕಾಸು ಸಂಸ್ಥೆಗಳು ಮತ್ತು 63 ಶೇರು ಕಂಪನಿಗಳು ಸೇರಿದ್ದವು. ಈ ವಲಯದ ಲೇವಾದೇವಿಗಾರರು 1990 ರಿಂದ 1992 ರ ಮೂರು ವರ್ಷದಲ್ಲಿ ಪ್ರತೀ ಒಂದು ವರ್ಷ ಅವರು ನೀಡಿದ್ದ ಸಾಲಗಳು ಈ ರೀತಿ ಇದ್ದವು: 1990 (ರೂ. 409.14 ಲಕ್ಷ), 1991 (ರೂ. 490.14 ಲಕ್ಷ) ಮತ್ತು 1992 (ರೂ. 527.34 ಲಕ್ಷ).

ಹುಬ್ಬಳ್ಳಿ-ಧಾರವಾಡ ನಗರಗಳ ಗಿರವಿದಾರರು ಮತ್ತು ಹಣಕಾಸು ಸಂಸ್ಥೆಗಳು ಒಟ್ಟಾಗಿ ಸಂಗ್ರಹಿಸಿದ ಠೇವಣಿಗಳು ಮತ್ತು ವ್ಯವಸಾಯೇತರ ಉದ್ದೇಶಗಳಿಗೆ ನೀಡಿದ ಸಾಲಗಳ ವಿವರಗಳು ಈ ಮುಂದೆ ಸೂಚಿಸಿದಂತೆ ಇದ್ದವು: ಆವರಣದಲ್ಲಿರುವ ಮೊತ್ತವು

ಸಾಲ ಮುಂಗಡಗಳನ್ನು ಸೂಚಿಸುವುದು. 1988- ಠೇವಣಿ 229.30 ಲಕ್ಷ ರೂ. (932.23 ಲಕ್ಷ ರೂ.), 1990-487.67 ಲಕ್ಷ ರೂ. (1308.07 ಲಕ್ಷ ರೂ.), 1991-891.82 ಲಕ್ಷ ರೂ. (1830.70 ಲಕ್ಷ ರೂ.), 1992-1376.35 ಲಕ್ಷ ರೂ. (1667.32 ಲಕ್ಷ ರೂ.). ಲೇವಾದೇವಿ ವ್ಯವಹಾರಸ್ಥರಿಂದ 1992 ರಲ್ಲಿ ಇಲಾಖೆಗೆ ಸಂದಾಯವಾದ ಲೈಸನ್ಸ್ ಶುಲ್ಕ ರೂ. 9,850 ಆಗಿದ್ದರೆ, ಭದ್ರತಾ ಠೇವಣಿ ರೂ. 4.60 ಲಕ್ಷ ಆಗಿತ್ತು. ಅದರ ಮುಂದಿನ ವರ್ಷದ ಅಂಕಿ ಅಂಶಗಳು ಕ್ರಮವಾಗಿ ರೂ. 8,850 ಮತ್ತು ರೂ. 4.05 ಲಕ್ಷ ಎಂದು ವರದಿಯಾಗಿದೆ.

**ಹಣಕಾಸು ಸಂಸ್ಥೆಗಳು:** ಯಾವುದೇ ಅಸಂಘಟಿತ ವಲಯದ ಹಣಕಾಸು ಮಾರುಕಟ್ಟೆಯ ವ್ಯವಸ್ಥೆಯಲ್ಲಿ ಖಾಸಗಿ ಸಾವುಕಾರರು, ಗಿರವಿ ಸಾಲಿಗರಲ್ಲದೆ ಹಲವಾರು ಬ್ಯಾಂಕೇತರ ಹಣಕಾಸು ಸಂಸ್ಥೆಗಳಾದ ನಿಧಿಗಳು, ಚಿಟ್‌ಫಂಡ್‌ಗಳು (ಫೈನಾನ್ಸ್ ಕಾರ್ಪೊರೇಶನ್ಸ್) ಮುಂತಾದವುಗಳು ಪ್ರಮುಖ ವಾಣಿಜ್ಯ ಕೇಂದ್ರಗಳಲ್ಲಿ ನೆಲೆನಿಂತು ಅಥವಾ ಹೊರರಾಜ್ಯದ ಇಂತಹ ಸಂಸ್ಥೆಗಳ ತಮ್ಮ ಶಾಖಾ ಕಛೇರಿಗಳನ್ನು ಜಿಲ್ಲೆಯಲ್ಲಿ ಹೊಂದಿರುವುದು ಸರ್ವೆ ಸಾಮಾನ್ಯ. ಈ ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಸ್ಥಳೀಯವಾಗಿ ವ್ಯಾಪಾರ, ಉದ್ಯಮಗಳಿಗೆ, ಯಂತ್ರೋಪಕರಣಗಳ ಖರೀದಿ, ವಾಹನ ಖರೀದಿ, ಕಂತು ಖರೀದಿಯ ಸಾಲ, ಮುಂತಾದ ವ್ಯವಹಾರಗಳಿಗೆ ಅಡಮಾನ ಸಾಲವನ್ನು ನೀಡುತ್ತವೆ. ಅನೇಕ ಸಂದರ್ಭಗಳಲ್ಲಿ ಇವು ಪರ್ಯಾಯ ಬ್ಯಾಂಕಿಂಗ್ ಸಂಸ್ಥೆಗಳಂತೆ ತಮ್ಮ ಚಟುವಟಿಕೆಗಳನ್ನು ನಡೆಸುತ್ತವೆ. ಮಧ್ಯಮ ವರ್ಗದವರ ಮತ್ತು ಇತರರ ಉಳಿತಾಯವನ್ನು ಹಲವಾರು ಆಕರ್ಷಕ ಲಾಟರಿ ಯೋಜನೆಗಳ ಮೂಲಕ, ವಾಣಿಜ್ಯ ಬ್ಯಾಂಕುಗಳಿಗಿಂತಲೂ ತುಸು ಹೆಚ್ಚಿನ ಬಡ್ಡಿಯನ್ನು ನೀಡುವ ಮೂಲಕ ವಿಪುಲ ಹಣವನ್ನು ಠೇವಣಿಗಳ ರೂಪದಲ್ಲಿ ಸಂಗ್ರಹಿಸುವವು.

ಅನೇಕ ಸಂದರ್ಭಗಳಲ್ಲಿ ಇವುಗಳ ಅನಿರ್ಬಂಧಿತ ಅವ್ಯವಹಾರಗಳು ಜನಸಾಮಾನ್ಯರನ್ನು ವಂಚಿಸುವುದೂ ಉಂಟು. ಈ ಸಂಸ್ಥೆಗಳು ಸಾಮಾನ್ಯವಾಗಿ ಭಾರತೀಯ ಪಾಲುಗಾರಿಕೆ ಕಾನೂನು 1932, ಅಥವಾ ಕಂಪನಿ ಕಾನೂನು 1956 ರ ಅನ್ವಯ ನೋಂದಾಯಿತ ಸಂಸ್ಥೆಗಳಾಗಿರುವವು. ಅನೇಕ ಸಂದರ್ಭಗಳಲ್ಲಿ ಒಂದೇ ಕುಟುಂಬದ ಹಲವಾರು ಸದಸ್ಯರು ಪಾಲುದಾರರಾಗಿ ಈ ಸಂಸ್ಥೆಗಳನ್ನು ನಡೆಸುವರು. ಜಿಲ್ಲಾ ಮಟ್ಟದಲ್ಲಿ ಸಹಕಾರಿ ಸಂಘಗಳ ಉಪನಿಬಂಧಕರು ಕರ್ನಾಟಕ ಲೇವಾದೇವಿ ಕಾನೂನು 1961 ರ ಅನ್ವಯ ಈ ಸಂಸ್ಥೆಗಳ ವ್ಯವಹಾರದ ಮೇಲೆ ನಿಯಂತ್ರಣ ಹೊಂದಿರುವರು. ಕಳೆದ ಒಂದು ದಶಕದ ಅವಧಿಯಲ್ಲಿ (1982-83-1992-93) ಜಿಲ್ಲೆಯಲ್ಲಿ ಇಂತಹ ಸಂಸ್ಥೆಗಳ ಸಂಖ್ಯೆಯಲ್ಲಿ ಮತ್ತು ವ್ಯವಹಾರದಲ್ಲಿ ಗಮನೀಯವಾದ ಹೆಚ್ಚಳವನ್ನು ಕಾಣಬಹುದು. ಇವುಗಳ ಸಂಖ್ಯೆ 1982-83 ರಲ್ಲಿ 17 ಆಗಿದ್ದರೆ, 1987-88 ರಲ್ಲಿ 222 ಮತ್ತು 1992-93 ರಲ್ಲಿ 405 ಕ್ಕೆ ಹೆಚ್ಚಳಗೊಂಡ ಬಗ್ಗೆ ವರದಿಯಾಗಿದೆ. ಸಹಕಾರಿ ಇಲಾಖೆಯ ವರದಿ ತಿಳಿಸುವಂತೆ 1988 ರಲ್ಲಿ ಈ ಸಂಸ್ಥೆಗಳು ಸಂಗ್ರಹಿಸಿದ ಠೇವಣಿಗಳು ರೂ. 80.37 ಲಕ್ಷ ಆಗಿದ್ದರೆ, ನೀಡಿದ ಸಾಲ ಮುಂಗಡಗಳು ರೂ. 127.83 ಲಕ್ಷ ಎಂದು ತಿಳಿದು ಬರುವುದು; 1990 ರಲ್ಲಿ ಇವುಗಳ ಹೊಂದಿದ್ದ ಠೇವಣಿ ಮತ್ತು ನೀಡಿದ ಸಾಲಗಳು ಅನುಕ್ರಮವಾಗಿ ರೂ. 127.91 ಲಕ್ಷ; ಮತ್ತು ರೂ. 196.45 ಲಕ್ಷ ಆಗಿದ್ದವು; 1992 ರಲ್ಲಿ ಹಣಕಾಸು ನಿಗಮಗಳು ಸಂಗ್ರಹಿಸಿದ್ದ ಠೇವಣಿಗಳು ರೂ. 207.21 ಲಕ್ಷ ಆಗಿದ್ದರೆ ಅವುಗಳ ವಿನಿಯೋಗ ರೂ. 282.90 ಲಕ್ಷ ಎಂದು ವರದಿಯಾಗಿದೆ. ಇದರ ಹಿಂದಿನ ವರ್ಷದ (1991) ಅಂಕಿ ಅಂಶಗಳು ಅನುಕ್ರಮವಾಗಿ ರೂ. 155.99 ಮತ್ತು ರೂ. 429.38 ಲಕ್ಷ ಎಂದು ವರದಿಯಾಗಿದೆ. ಜಿಲ್ಲೆಯ ಹಣಕಾಸು ಸಂಸ್ಥೆಗಳಲ್ಲಿ ಬಹುಪಾಲು ವಾಣಿಜ್ಯ ಕೇಂದ್ರಗಳಾದ ಹುಬ್ಬಳ್ಳಿ-ಧಾರವಾಡ, ಗದಗ, ಹಾವೇರಿ, ರಾಣೆಬೆನ್ನೂರು, ನರಗುಂದ, ಶಿಗ್ಗಾಂವಿ ಮುಂತಾದವುಗಳಲ್ಲಿ ಕೇಂದ್ರೀಕೃತವಾಗಿವೆ. ಇಂಥ ಒಂದು ಸಂಸ್ಥೆಯ ಕಾರ್ಯಾಚರಣೆಯನ್ನು ಈ ಕೆಳಗೆ ಕೊಡಲಾಗಿದೆ.

### ಶ್ರೀ ಮೃತ್ಯುಂಜಯ ಫೈನಾನ್ಸ್ ಕಾರ್ಪೊರೇಶನ್, ಧಾರವಾಡ

ಈ ಹಣಕಾಸು ಸಂಸ್ಥೆಯನ್ನು ಭಾರತೀಯ ಪಾಲುಗಾರಿಕೆ ಕಾನೂನು 1932 ರ ಅನ್ವಯ 1987 ರಲ್ಲಿ ಪ್ರಾರಂಭಿಸಲಾಯಿತು. ಸಂಸ್ಥೆಯ ಪಾಲು ಬಂಡವಾಳ ರೂ. 90,000 (1994). ಈ ಸಂಸ್ಥೆಯ ಪಾಲುದಾರರಲ್ಲಿ ಬಹುಪಾಲು ಸ್ಥಳೀಯ ದಲಾಲರು ಹಾಗೂ ವ್ಯಾಪಾರವೃತ್ತಿಗೆ ಸೇರಿದವರು. ಅವರ ವೈಯಕ್ತಿಕ ಪ್ರಭಾವದಿಂದ ಮತ್ತು ಇತರೇ ಗ್ರಾಹಕ ವರ್ಗದ ಪ್ರೋತ್ಸಾಹದಿಂದ ಸಂಸ್ಥೆಯು ಆರ್ಥಿಕವಾಗಿ ಭದ್ರತೆಯನ್ನು ಹೊಂದಿರುವುದು. ಈ ಸಂಸ್ಥೆಯ ವತಿಯಿಂದ ವ್ಯಾಪಾರಸ್ಥರಿಗೆ ವ್ಯಾಪಾರ ಮತ್ತು ವಾಣಿಜ್ಯದ ಅಭಿವೃದ್ಧಿಗೆ,

ರೈತರಿಗೆ ಬೀಜ, ಗೊಬ್ಬರ ಕೊಳ್ಳಲು, ಸಣ್ಣಪುಟ್ಟ ವ್ಯಾಪಾರಸ್ಥರಿಗೆ, ಚಿಕ್ಕ ಉದ್ಯಮದಾರರಿಗೆ, ಸಂಘಟಿತ ವಲಯದ ಮತ್ತು ಸರಕಾರಿ ನೌಕರರಿಗೆ ಸೂಕ್ತ ಆಧಾರದ ಮೇಲೆ ಸಾಲ ನೀಡಲಾಗುವುದು. ಗ್ರಾಹಕರಲ್ಲಿ ಅಲ್ಪ ಉಳಿತಾಯ ಮನೋಭಾವನೆಯನ್ನು ಪ್ರೇರೇಪಿಸಲು ಸಹಾಯಕವಾಗುವಂತೆ ಇತರೇ ಠೇವಣಿಗಳೊಂದಿಗೆ 'ಪಿಗ್ಮಿ'ಯನ್ನೂ ಸಂಗ್ರಹಿಸಲಾಗುವುದು. ಗ್ರಾಹಕರಿಗೆ ಗೃಹ ಬಳಕೆಯ ವಸ್ತುಗಳನ್ನು ಕೊಳ್ಳಲು ಸಹಾಯಕವಾಗುವಂತೆ ಸುಲಭ ಕಂತುಗಳ ಸಾಲವನ್ನು ಸಹ ನೀಡಲಾಗುವುದು. ಈ ಸಂಸ್ಥೆಯು ಪ್ರಮುಖವಾಗಿ ದಲಾಲಿ ವರ್ತಕರಿಂದ ಸ್ಥಾಪಿಸಲ್ಪಟ್ಟಿರುವುದರಿಂದ ಮತ್ತು ರೈತರಿಗೂ ದಲಾಲಿ ವರ್ತಕರಿಗೂ ನೇರವಾದ ವ್ಯಾಪಾರ ಸಂಬಂಧ ಇರುವುದರಿಂದ ಸಾಲ ನೀಡಿಕೆ ಮತ್ತು ವಸೂಲಾತಿಯಲ್ಲಿ ಹೆಚ್ಚಿನ ತೊಂದರೆ ಕಾಣುವುದಿಲ್ಲ. ಸಂಸ್ಥೆಯು ತಾನು ನೀಡುವ ಸಾಲದ ಮೇಲೆ ಶೇ. 21 ರಂತೆ ಬಡ್ಡಿಯನ್ನು ಪಡೆದರೆ, ಠೇವಣಿಗಳ ಮೇಲೆ ವಿವಿಧ ಅವಧಿಗೆ ಶೇ. 12 ರಿಂದ 16 ರವರೆಗೆ ಬಡ್ಡಿಯನ್ನು ನೀಡಲಾಗುವುದು. ಸಂಸ್ಥೆಯು ಇತ್ತೀಚಿನ ಐದು ವರ್ಷಗಳಲ್ಲಿ ಸಂಗ್ರಹಿಸಿದ ಠೇವಣಿ ಮತ್ತು ಸಾಲ ಮುಂಗಡಗಳು, ಈ ರೀತಿ ಇರುವವು. ಆವರಣದಲ್ಲಿ ಸೂಚಿಸಿರುವ ಅಂಕಿ ಅಂಶಗಳು ಸಾಲದ ಮೊಬಲಗನ್ನು ಲಕ್ಷ ರೂ.ಗಳಲ್ಲಿ ಸೂಚಿಸುವುದು. ಮಾರ್ಚ್ 1990- ಠೇವಣಿ ರೂ. 11.45 (ಸಾಲ ರೂ. 13.05); 1991- 14.63 (18.13); 1992- 17.10 (21.97); 1993- 22.67 (26.45); ಮತ್ತು 1994- 34.22 (39.61).

## ದುರ್ಬಲ ವರ್ಗಗಳಿಗೆ ಆರ್ಥಿಕ ನೆರವು

ಸ್ವಾತಂತ್ರ್ಯಪೂರ್ವ ಮತ್ತು ನಂತರದ ದಶಕಗಳಲ್ಲಿ ಆರ್ಥಿಕ ದುರ್ಬಲ ವರ್ಗ, ಅದರಲ್ಲಿಯೂ ಸಾಲದ ಹೊರೆಯಿಂದ ಜರ್ಝರಿತರಾದ ರೈತರಿಗೆ ಆರ್ಥಿಕ ನೆರವನ್ನು ಒದಗಿಸಲು ಸಹಕಾರಿಯಾಗುವಂತೆ ಸರ್ಕಾರವು ಹಲವಾರು ಪರಿಹಾರ ಕಾನೂನುಗಳನ್ನು ಜಾರಿಯಲ್ಲಿ ತಂದಿತು. ಅವುಗಳ ಪೈಕಿ ಮುಂಬಯಿ ಒಕ್ಕಲುತನ ಸಾಲಗಾರರ ಪರಿಹಾರ ಕಾಯಿದೆ 1939 ಬಹಳ ಪ್ರಮುಖವಾದುದು. ರಾಜ್ಯದ ಬಡರೈತರ ಮೇಲೆ ವಿಪರೀತವಾಗಿ ಹೇರಿದ ಸಾಲದ ಹೊರೆಯನ್ನು ಕಡಿಮೆ ಮಾಡಿ ಅದನ್ನು ಸುಲಭ ಕಂತುಗಳ ಮೂಲಕ ತೀರಿಸಲು ಅನುಕೂಲ ಮಾಡಿಕೊಡುವುದು ಈ ಕಾಯ್ದೆಯ ಮುಖ್ಯ ಉದ್ದೇಶವಾಗಿತ್ತು. 1942 ರಲ್ಲಿ ಕೇವಲ ನವಲಗುಂದ ತಾಲೂಕಿಗೆ ಸೀಮಿತವಾದಂತೆ ಈ ಕಾನೂನನ್ನು ಜಾರಿಯಲ್ಲಿ ತರಲಾಯಿತು. 1945 ರಲ್ಲಿ ಗದಗ, ರೋಣ ತಾಲೂಕುಗಳಿಗೆ ಮತ್ತು ಮುಂಡರಗಿ, ನರಗುಂದ ಪೇಟಾಗಳಿಗೆ ಹಾಗೂ 1947 ರಲ್ಲಿ ವಿಲೀನಗೊಂಡ ಪ್ರದೇಶಗಳೂ ಸೇರಿದಂತೆ ಇಡೀ ಜಿಲ್ಲೆಗೆ ಅನ್ವಯಿಸಲಾಯಿತು. ಸದರಿ ಕಾನೂನಿನ ಅನ್ವಯ ಪರಿಹಾರ ಒದಗಿಸಲು "ಋಣ ಹೊಂದಾಣಿಕೆ" ಸಮಿತಿಗಳನ್ನು ರಚಿಸಲಾಯಿತು. ಈ ಕಾನೂನಿನ ವ್ಯಾಪ್ತಿಯಲ್ಲಿ ಗರಿಷ್ಠ ರೂ. 15,000 ರವರೆಗಿನ ಸಾಲದ ಹೊಂದಾಣಿಕೆಯನ್ನು ಮಾತ್ರ ಮಾಡಬಹುದಾಗಿತ್ತು. 'ಅವಾರ್ಡ್' ಆದ ಪ್ರಕರಣ ಮೇಲೆ ಶೇ. 6 ಕ್ಕಿಂತ ಹೆಚ್ಚಾಗಿ ಬಡ್ಡಿಯನ್ನು ವಿಧಿಸಲು ಅವಕಾಶ ಇರಲಿಲ್ಲ. 1947 ರಲ್ಲಿ ಇಂತಹ ವಿವಾದಗಳನ್ನು ಸಿವಿಲ್ ಕೋರ್ಟ್ (ದಿವಾಣಿ ಕೋರ್ಟ)ಗಳಿಗೆ ವರ್ಗಾಯಿಸಲಾಯಿತು. ಋಣಹೊಂದಾಣಿಕೆ ಬೋರ್ಡುಗಳು ರದ್ದಾದವು. ಈ ಕಾಯಿದೆಯ ಅನ್ವಯ 1942 ರಿಂದ 1952 ರವರೆಗೆ ಜಿಲ್ಲೆಯಾದ್ಯಂತ 52,706 ಸಾಲಗಾರರು ಮತ್ತು ಸಾಹುಕಾರರು ಸಾಲ ಹೊಂದಾಣಿಕೆ ಮಂಡಳಿಗಳಿಗೆ ('ಡೆಟ್ ಎಡ್‌ಜೆಸ್ಟಮೆಂಟ್ ಬೋರ್ಡ್') ಮತ್ತು ದಿವಾಣಿ ಕೋರ್ಟ್‌ಗಳಿಗೆ ಅರ್ಜಿ ಮಾಡಿಕೊಂಡಿದ್ದರು. ಅವುಗಳ ಪೈಕಿ 51,845 ಅರ್ಜಿಗಳು ನಿರ್ಣಯಿಸಲ್ಪಟ್ಟವು. ಈ ಎಲ್ಲ ಅರ್ಜಿಗಳ ವ್ಯವಹಾರದ ಮೊತ್ತ ರೂ. 3.95 ಕೋಟಿ ಎಂದು ವರದಿಯಾಗಿದೆ. ಈ ಪೈಕಿ ರೂ. 57.22 ಲಕ್ಷದಷ್ಟು ಸಾಲವನ್ನು ಕಡಿಮೆ ಮಾಡಲಾಯಿತು ಮತ್ತು ಸಾಲವನ್ನು ಹೊಂದಾಣಿಕೆ ಮಾಡಿಕೊಂಡ ಒಕ್ಕಲಿಗರಿಗೆ ಹಣಕಾಸಿನ ನೆರವನ್ನು ಒದಗಿಸಲು ಸಹಕಾರಿ ಸಂಘಗಳು, ಸರ್ಕಾರದ ತಗಾಯಿಸಾಲ ಮತ್ತು ಅಧೀಕೃತ ಸಾಹುಕಾರರಿಂದ ಸಾಲ ಕೊಡಿಸುವ ವ್ಯವಸ್ಥೆಯನ್ನು ಮಾಡಲಾಯಿತು.

**ತಗಾಯಿ ಸಾಲ:** ಸರ್ಕಾರವು ರೈತರಿಗೆ ಭೂ ಸುಧಾರಣಾ ಸಾಲಗಳ ಕಾನೂನಿನ ಅನ್ವಯ ಭೂಮಿಯನ್ನು ಅಭಿವೃದ್ಧಿ ಪಡಿಸಲು ಸಾಲ, ವ್ಯವಸಾಯಗಾರರ ಸಾಲ, ಕಾನೂನಿನ ಅನ್ವಯ ಎತ್ತು, ಮೇವು ಮತ್ತು ವ್ಯವಸಾಯದ ಉಪಕರಣ ಕೊಳ್ಳಲು ತಕ್ಕಾವಿ (ತಗಾಯಿ) ಸಾಲಗಳನ್ನು ನೀಡುತ್ತಿತ್ತು. "ಹೆಚ್ಚು ಆಹಾರ ಬೆಳೆಯಿರಿ" ಆಂದೋಲನದ ಅನ್ವಯ ಈ ಸಾಲಕ್ಕೆ ಬೇಡಿಕೆ ಹೆಚ್ಚಾಗಿ ಇದನ್ನು ಉದಾರೀಕರಣಗೊಳಿಸಲಾಯಿತು. 1946-47 ರಿಂದ 1949-50 ರ ಅವಧಿಯಲ್ಲಿ ಜಿಲ್ಲೆಯಲ್ಲಿ ನೀಡಲಾದ ತಗಾಯಿಸಾಲ ಮತ್ತು ಸದರಿ ವರ್ಷದಲ್ಲಿನ ವಸೂಲಾತಿ ಈ ರೀತಿ ಇರುವುದು: (ಆವರಣದಲ್ಲಿಯ ಅಂಕಿಗಳು ವಸೂಲಾತಿಯನ್ನು ಸೂಚಿಸುತ್ತವೆ). 1946-47:

ರೂ. 5.40 ಲಕ್ಷ (ರೂ. 46,600); 1947-48: ರೂ. 5.22 ಲಕ್ಷ (ರೂ. 1.30 ಲಕ್ಷ); 1948-49: ರೂ. 9.68 ಲಕ್ಷ (ರೂ. 4.16 ಲಕ್ಷ); 1949-50: ರೂ. 17.45 ಲಕ್ಷ (ರೂ. 3.78 ಲಕ್ಷ).

ಇತ್ತೀಚಿನ ದಶಕಗಳಲ್ಲಿ ಆರ್ಥಿಕವಾಗಿ ಹಿಂದುಳಿದ ಕಡು ಬಡವರಿಗೆ ಸಾಂಸ್ಥಿಕ ಹಣಕಾಸು ಸಂಸ್ಥೆಗಳ ಮೂಲಕ ಹಣಕಾಸಿನ ಮತ್ತು ಇತರ ನೆರವನ್ನು ಒದಗಿಸಲು ಸರಕಾರಗಳು ಹಲವಾರು ಯೋಜನೆಗಳನ್ನು ರೂಪಿಸಿವೆ. ಸಾರ್ವಜನಿಕ ವಲಯದ ಬ್ಯಾಂಕುಗಳು, ಗ್ರಾಮೀಣ ಬ್ಯಾಂಕುಗಳು ಮತ್ತು ಇತರೇ ಬ್ಯಾಂಕುಗಳು 1973 ರಿಂದ ವ್ಯತ್ಯಸ್ತ ಬಡ್ಡಿ ಸಾಲದ ಯೋಜನೆ (ಡಿ.ಐ.ಆರ್)ಯನ್ನು ಅಳವಡಿಸಿಕೊಂಡು, ಗುರುತಿಸಲಾದ (ಆಯ್ಕೆ ಮಾಡಿದ) ಕಡುಬಡವರಿಗೆ ಸಾಲ ಸೌಲಭ್ಯವನ್ನು ಒದಗಿಸುತ್ತಿವೆ. ಈ ಯೋಜನೆಯ ಮುಖ್ಯ ಉದ್ದೇಶ ಆರ್ಥಿಕವಾಗಿ ಹಿಂದುಳಿದ ದುರ್ಬಲ ವರ್ಗ, ಪರಿಶಿಷ್ಟ ಜಾತಿ ಮತ್ತು ವರ್ಗಗಳು, ಧಾರವಾಡ ಜಿಲ್ಲೆಗೆ ಸೀಮಿತವಾದಂತೆ 2.5 ಎಕರೆ ನೀರಾವರಿ ಭೂಮಿ ಅಥವಾ 7 ಎಕರೆ ಒಣಬೇಸಾಯದ ಭೂಮಿ ಹೊಂದಿದ ಸಣ್ಣ ಮತ್ತು ಅತೀ ಸಣ್ಣ ಬೇಸಾಯಗಾರರು, ಗ್ರಾಮೀಣ ಕುಶಲಕರ್ಮಿಗಳಿಗೆ ಹಾಗೂ ಜೀತ ವಿಮುಕ್ತರಿಗೆ ಆರ್ಥಿಕ ಪೋಷಣೆಯ ನೆಲಗಟ್ಟನ್ನು ಒದಗಿಸುವುದು. ಆರಂಭದಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಾರ್ಷಿಕ ರೂ. 2,000 ಮತ್ತು ನಗರ ಪ್ರದೇಶದಲ್ಲಿ ರೂ. 3000 ಆದಾಯಗಳ ಒಳಗೆ ಇದ್ದ ಫಲಾನುಭವಿಗಳ ಆದಾಯ ಮಿತಿಯನ್ನು ಕ್ರಮೇಣ ಹೆಚ್ಚಿಸುತ್ತ ಈಗ ನಗರ ಮತ್ತು ಅರೆ ನಗರ ಪ್ರದೇಶಗಳಲ್ಲಿ ರೂ. 6,400 ಮತ್ತು ಮಹಾನಗರಗಳಲ್ಲಿ ರೂ. 7,200 ಕ್ಕೆ ಏರಿಸಲಾಗಿದೆ. ಈ ಸಾಲಕ್ಕೆ ಬ್ಯಾಂಕುಗಳು ವಿಧಿಸುವ ಬಡ್ಡಿದರ ಕೇವಲ ಶೇ. 4. ಜಿಲ್ಲೆಯ ಮಾರ್ಗದರ್ಶಿ ಬ್ಯಾಂಕ್ ('ಲೀಡ್ ಬ್ಯಾಂಕ್') ವರದಿ ಮಾಡಿರುವಂತೆ ಈ ಜಿಲ್ಲೆಯಲ್ಲಿ 1992 ರ ಮಾರ್ಚ್ ಕೊನೆಯಲ್ಲಿ ದುರ್ಬಲ ವರ್ಗಗಳಿಗೆ ನೀಡಿದ್ದ ಒಟ್ಟು ಬ್ಯಾಂಕ್ ಸಾಲ ರೂ. 12,345.12 ಲಕ್ಷ, ಆದ್ಯತಾ ವಲಯದ ಒಟ್ಟು ಸಾಲದ ಶೇ. 38.5 ರಷ್ಟು ಇದಾಗಿತ್ತು. ಅದೇ ವರ್ಷ ವ್ಯತ್ಯಸ್ತ ಬಡ್ಡಿ ದರದ ಅನ್ವಯ ನೀಡಲಾದ ಒಟ್ಟು ಸಾಲ ರೂ. 329 ಲಕ್ಷ (ಒಟ್ಟು ಸಾಲದ ಶೇ. 0.68 ರಷ್ಟು) (ಭಾರತೀಯ ರಿಸರ್ವ್ ಬ್ಯಾಂಕ್ ನಿಯಮಾನುಸಾರ ನೀಡಬೇಕಾದ ಸಾಲ ಒಟ್ಟು ಸಾಲದ ಶೇ. ಒಂದು). ವರದಿಯ ವರ್ಷದ (1992) ಕೊನೆಯಲ್ಲಿ ಪರಿಶಿಷ್ಟ ಜಾತಿ\ಪರಿಶಿಷ್ಟ ಪಂಗಡಗಳಿಗೆ ಬ್ಯಾಂಕಿಂಗ್ ಸಂಸ್ಥೆಗಳು ನೀಡಿದ ಸಾಲದ ಮೊತ್ತ ರೂ. 1,534.04 ಲಕ್ಷ ಎಂದು ತಿಳಿದು ಬರುವುದು.

ಜಿಲ್ಲಾ ಪತ್ತಿನ ಯೋಜನೆ (1993-94) ವರದಿ ಮಾಡುವಂತೆ 1993-94 ರಲ್ಲಿ ಸುಮಾರು 27 ಜನ ಫಲಾನುಭವಿಗಳಿಗೆ ರೂ. 88,000 ಸಾಲ ನೀಡುವ ಗುರಿಯನ್ನು ಹಾಕಿಕೊಳ್ಳಲಾಗಿತ್ತು.

**ಜೀತಪದ್ಧತಿ:** ರಾಜ್ಯದ ಇತರೇ ಜಿಲ್ಲೆಗಳಲ್ಲಿ ರೂಢಿಯಲ್ಲಿ ಇದ್ದಂತೆ ವ್ಯವಸಾಯ ಪ್ರಧಾನವಾದ ಈ ಜಿಲ್ಲೆಯಲ್ಲಿಯೂ ಬಹುಹಿಂದಿನಿಂದಲೂ ವಿವಿಧ ಬಗೆಯ ಜೀತ ಪದ್ಧತಿಗಳು ರೂಢಿಯಲ್ಲಿ ಇದ್ದ ಬಗ್ಗೆ ಅಧಿಕೃತ ದಾಖಲೆಗಳು ಉಂಟು. ಬಹುಪಾಲು ಆರ್ಥಿಕ ಮುಗ್ಗಟ್ಟೇ ಜೀತಪದ್ಧತಿಯು ಬೆಳೆದು ಬರಲು ಸಹಾಯಕವಾಗಿರುವುದನ್ನು ನಾವು ಇಂದಿಗೂ ಕಾಣಬಹುದು. 1884 ರ ಗ್ಯಾಸೆಟಿಯರ್‌ನಲ್ಲಿ ಜೀತದ ವಿವಿಧ ಬಗೆಗಳು, ಜೀತದಾಳುಗಳಿಗೆ ನೀಡುತ್ತಿದ್ದ ಕೂಲಿ, ಇತರ ಸೌಲಭ್ಯಗಳನ್ನು ಕುರಿತು ವಿವರಿಸಲಾಗಿದೆ. ಸಾಮಾನ್ಯವಾಗಿ ಅಂದಿನ ದಿನಮಾನಗಳಲ್ಲಿ ಜೀತದಾಳು ಒಂದು ನೂರು ರೂಪಾಯಿ ಸಾಲ ಪಡೆದರೆ ಅವನಿಗೆ ಸಾವುಕಾರನು ವಾಡಿಕೆಯಂತೆ ಊಟ, ಬಟ್ಟೆ, ಕಂಬಳಿ, ಮೆಟ್ಟು ಮುಂತಾದವುಗಳನ್ನು ಕೊಟ್ಟು ವಾಡಿಕೆಯಂತೆ ಐದು ವರ್ಷ ದುಡಿಯಿಸಿಕೊಂಡು ಸಾಲ ತೀರಿಸಿಕೊಳ್ಳುತ್ತಿದ್ದನು. ಊಟ ಬಟ್ಟೆಯನ್ನು ನೀಡುವ ಕರಾರು ಇಲ್ಲದಿದ್ದಲ್ಲಿ (ಒಣಜೀತ) ಮೂರು ವರ್ಷಕ್ಕೆ ಜೀತದ ಅವಧಿಯು ಮುಗಿಯುತ್ತಿತ್ತು. ಜೀತದ ಅವಧಿಯಲ್ಲಿ ಸಾಲಕೊಟ್ಟವನು ತೀರಿಕೊಂಡರೆ ಅವನ ವಾರಸುದಾರರನ್ನು ಜೀತದಾಳಾಗಿ ದುಡಿಸಿಕೊಳ್ಳುತ್ತಿದ್ದರು. ಆದರೆ ಜೀತದಾಳು ಒಪ್ಪಂದದ ಕಾಲಾವಧಿ (ಮುದ್ದತು)ಯಲ್ಲಿ ತೀರಿದರೆ ಅವನ ವಾರಸುದಾರರು ದುಡಿಯಬೇಕೆಂಬ ನಿರ್ಬಂಧ ಇರಲಿಲ್ಲ. ಜೀತದವನು ಮುದ್ದತಿನ ಒಳಗೆ ದುಡಿಯುವುದನ್ನು ಬಿಟ್ಟರೆ ಸಾಹುಕಾರರು ಫಿರ್ಯಾದಿ ಮಾಡಿ ತಮ್ಮ ಹಣವನ್ನು ವಸೂಲಿ ಮಾಡಿಕೊಳ್ಳುತ್ತಿದ್ದರು. ಆದರೆ ಸಿವಿಲ್ ಕೋರ್ಟುಗಳು ಇಂತಹ ವಿಷಯಗಳನ್ನು ಮಾನ್ಯ ಮಾಡುತ್ತಿರಲಿಲ್ಲ. ಒಕ್ಕಲುತನದವರು ವಾಡಿಕೆಯಾಗಿ ತಮ್ಮ ಜಾತಿಯವರನ್ನೆ ಜೀತಕ್ಕೆ ಇಟ್ಟು ಕೊಳ್ಳುತ್ತಿದ್ದರು. ಯಜಮಾನನಿಗೆ ಗಂಡು ಮಕ್ಕಳಿಲ್ಲದಿದ್ದಲ್ಲಿ ಅನೇಕ ಸಂದರ್ಭಗಳಲ್ಲಿ ಜೀತದಾಳಿಗೆ ಮನೆ ಅಳಿಯನಾಗುವ ಯೋಗವೂ ಒದಗಿ ಬರಬಹುದಾಗಿತ್ತು. ಆದರೆ 1884 ರ ಸುಮಾರಿಗೆ ಕೂಲಿಕಾರರಿಗೆ ಒಳ್ಳೆಯ ಕೂಲಿ ದೊರೆಯುತ್ತಿದ್ದುದರಿಂದ ಜೀತ ಪದ್ಧತಿಯು ಬರ ಬರುತ್ತಾ ಕಡಿಮೆ ಆಯಿತು

ಎಂದು ವಿವರಿಸಲಾಗಿದೆ. ಶ್ರಮಜೀವಿಗಳಲ್ಲದ ಇತರರೂ ಅಂದರೆ ಕಾರಕೂನರು, ಲೆಕ್ಕ ಬರೆಯುವವರು ಮುಂತಾದವರು ನಗರ ಪ್ರದೇಶಗಳ ದಲಾಲರಲ್ಲೂ, ದೊಡ್ಡ ದೊಡ್ಡ ವರ್ತಕರಲ್ಲೂ ಜೀತ ಮಾಡುತ್ತಿದ್ದರು.

**ಜೀತ ಪದ್ಧತಿ ನಿರ್ಮೂಲನಾ ಕಾನೂನು:** ಪ್ರಪ್ರಥಮವಾಗಿ 1843 ರಲ್ಲಿ ಬ್ರಿಟಿಷ್ ಸರ್ಕಾರವು ಗುಲಾಮಗಿರಿಯನ್ನು ಕಾನೂನಿನ ಅನ್ವಯ ನಿರ್ಮೂಲನ ಮಾಡಲು ಪ್ರಯತ್ನ ಪಟ್ಟರೂ ಅದೂ ಬೇರೆ ಬೇರೆ ರೂಪಗಳಲ್ಲಿ ಮುಂದುವರಿಯಿತು. ಅದರಲ್ಲಿ ಜೀತಪದ್ಧತಿಯೂ ಒಂದು. 1860 ರ ಒಪ್ಪಂದ ಉಲ್ಲಂಘನಾ ಕಾನೂನು ಸ್ವಲ್ಪಮಟ್ಟಿಗೆ ಜೀತ ಪದ್ಧತಿಯು ಮುಂದುವರೆಯಲು ಸಹಾಯಕವಾಯಿತು.

ಸ್ವಾತಂತ್ರ್ಯಾನಂತರ ಪ್ರಪ್ರಥಮವಾಗಿ 1976 ರಲ್ಲಿ ಕೇಂದ್ರ ಸರ್ಕಾರವು ಜೀತ ನಿರ್ಮೂಲನಾ ಕಾನೂನನ್ನು ಜಾರಿಯಲ್ಲಿ ತಂದಿತು. ಈ ಕಾನೂನಿನ ಅನ್ವಯ ಜೀತ ನಿರತರನ್ನು ಮುಕ್ತಗೊಳಿಸಲಾಯಿತಲ್ಲದೇ ಅವರು ಪಡೆದಿದ್ದ ಸಾಲದ ಹಣ ಮತ್ತು ಅದರ ಮೇಲಿನ ಬಡ್ಡಿಯನ್ನು ಸಂಪೂರ್ಣವಾಗಿ ವಜಾ ಮಾಡಲಾಯಿತು. ಜೀತ ವಿಮುಕ್ತರ ಪುನರ್ ವಸತಿ ಯೋಜನೆಯ ಅಡಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕ ಆರ್ಥಿಕ ಸಹಾಯ ಯೋಜನೆಗಳನ್ನು ಹಾಕಿಕೊಂಡಿವೆ. ರಾಷ್ಟ್ರೀಕೃತ ಬ್ಯಾಂಕುಗಳು ಜೀತ ವಿಮುಕ್ತರಿಗೆ ಪುನರ್ ವಸತಿ ಯೋಜನೆಯ ಅಡಿಯಲ್ಲಿ ತಲಾ ರೂ. 6,250 ಮೊತ್ತದಲ್ಲಿ ಹೈನದ ದನಗಳ ಪೂರೈಕೆ, ಕುರಿ, ಕೋಳಿ, ಹಂದಿಸಾಕಣೆ, ಎತ್ತು, ಚಕ್ಕಡಿ (ಬಂಡಿ)ಗಳ ಖರೀದಿ, ಕೈಕಸಬುಗಳ ಪ್ರಾರಂಭ ಮುಂತಾದ ಸ್ವಯಂ ಉದ್ಯೋಗಗಳಿಗೆ ಆದಾಯ ಮೂಲದ ಸಾಮಗ್ರಿಗಳನ್ನು ಒದಗಿಸುವ ಮೂಲಕ ಅವರಿಗೆ ಪುನರ್ ವಸತಿ ಒದಗಿಸುತ್ತವೆ. ಜೀತದಾಳುಗಳ ಪುನರ್ ವಸತಿ ಯೋಜನೆಯ ಅಡಿಯಲ್ಲಿ ರಾಜ್ಯ ಸರ್ಕಾರ ಮಾಡುವ ವೆಚ್ಚದಲ್ಲಿ ಅರ್ಧದಷ್ಟನ್ನು ಕೇಂದ್ರ ಸರ್ಕಾರ 1979-80 ರಿಂದ ಭರಿಸುತ್ತಿದೆ. ಜೀತದಾಳುಗಳನ್ನು ಗುರುತಿಸಿ ಅವರಿಗೆ ಪುನರ್ ವಸತಿ ಒದಗಿಸುವ ಕೆಲಸವನ್ನು ಈಗ ಜಿಲ್ಲಾ ಪಂಚಾಯತಿಗಳ ಮಾರ್ಗದರ್ಶನದಲ್ಲಿ, ಗ್ರಾಮ ಪಂಚಾಯತಿಗಳಿಗೆ, ತಾಲೂಕು ಪಂಚಾಯತಿಗಳಿಗೆ ವಹಿಸಲಾಗಿದೆ. ಜೀತ ಪದ್ಧತಿಯನ್ನು ಆಚರಿಸುವುದು, ಜೀತಕ್ಕೆ ಮುಂಗಡ ಹಣ ನೀಡುವುದು, ಈ ಪದ್ಧತಿಯನ್ನು ಪ್ರೋತ್ಸಾಹಿಸುವುದು ಮುಂತಾದವುಗಳು ಕಾನೂನಿನ ಅನ್ವಯ ಶಿಕ್ಷಾರ್ಹ ಅಪರಾಧಗಳೆಂದು ಸಾರಲಾಗಿದೆ. ಇಂತಹ ಅಪರಾಧಗಳಿಗೆ ಎರಡು ಸಾವಿರ ರೂಪಾಯಿ ವರೆಗೆ ದಂಡ ಮತ್ತು ಮೂರು ವರ್ಷಗಳವರೆಗೆ ಶಿಕ್ಷೆಯನ್ನು ವಿಧಿಸಬಹುದಾಗಿದೆ. ಜಿಲ್ಲಾಧಿಕಾರಿಗಳು ವರದಿ ಮಾಡಿರುವಂತೆ ಈ ಜಿಲ್ಲೆಯಿಂದ ಇತ್ತೀಚಿನ ವರ್ಷಗಳಲ್ಲಿ ಯಾವುದೇ ಜೀತದ ವರದಿಯಾಗಿರುವುದಿಲ್ಲ ಎಂದು ತಿಳಿದು ಬರುವುದು.

**ಕರ್ನಾಟಕ ಋಣ ಪರಿಹಾರ ಕಾನೂನು 1976:** ಹೊರಲಾರದ ಸಾಲದ ಹೊರೆಯಿಂದ ನರಳುತ್ತಿದ್ದ ಸಣ್ಣ ಭೂ ಹಿಡುವಳಿದಾರರು, ಭೂರಹಿತ ಬೇಸಾಯ ಕಾರ್ಮಿಕರು, ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ಸಾಲ ಮುಕ್ತರನ್ನಾಗಿ ಮಾಡುವ ಮೂಲಕ ಪರಿಹಾರವನ್ನು ಒದಗಿಸುವ ಸದುದ್ದೇಶದಿಂದ ರಾಜ್ಯ ಸರ್ಕಾರವು 1976 ರಲ್ಲಿ ಕರ್ನಾಟಕ ಋಣ ಪರಿಹಾರ ಕಾನೂನನ್ನು ಜಾರಿಯಲ್ಲಿ ತಂದಿತು. ಭಾರತದಲ್ಲಿ ಈ ರೀತಿ ದುರ್ಬಲರಿಗೆ ಪರಿಹಾರ ಒದಗಿಸುವಲ್ಲಿ ಕರ್ನಾಟಕವು ಮೊದಲನೆಯದಾಗಿತ್ತು. ಈ ಕಾನೂನಿನ ಅನ್ವಯ ಪರಿಹಾರ ಪಡೆಯಲು ವ್ಯಕ್ತಿಯ ವಾರ್ಷಿಕ ಆದಾಯ ಮಿತಿಯನ್ನು (15 ನವೆಂಬರ್ 1979 ರಿಂದ) ರೂ. 4,800 ರ ವರೆಗೆ ಹೆಚ್ಚಿಸಲಾಯಿತು. ಆರಂಭದಲ್ಲಿ ಆದಾಯ ಮಿತಿ ರೂ. 2,400 ಇತ್ತು. ಈ ಕಾಯಿದೆಯ ಜಾರಿಯ ಅನ್ವಯ ಮೇಲೆ ತಿಳಿಸಿದ ವರ್ಗದ ಸಾಲಗಾರರಿಂದ ಸಾಲದ ಮೊತ್ತ ಹಾಗೂ ಬಡ್ಡಿಯನ್ನು ಮರಳಿ ಪಡೆಯುವ ಅವಕಾಶಕ್ಕೆ ಸಾಲಿಗರು ಎರವಾದರಲ್ಲದೇ ಸಾಲಕ್ಕೆ ಆಧಾರವಾಗಿ (ಒತ್ತೆ) ಇಟ್ಟುಕೊಂಡಿದ್ದ ಚರಾಚರ ಸ್ವತ್ತುಗಳನ್ನು ಸಾಲಗಾರರಿಗೆ ಮರಳಿ ಕೊಡಬೇಕಾಯಿತು. ಇದೂ ಅಲ್ಲದೇ, ಸಾಲಿಗರು ಸಿವಿಲ್ ವ್ಯಾಜ್ಯದ ಮೂಲಕ ಸಾಲ ಮರುಪಾವತಿಗಾಗಿ ನ್ಯಾಯಾಲಯಗಳಿಂದ ಪಡೆದ ಎಲ್ಲಾ ಕೋರ್ಟ್ ಆಜ್ಞೆ (ಡಿಕ್ರಿ)ಗಳನ್ನು ಕಾಯಿದೆ ಜಾರಿ ಆದಂದಿನಿಂದ ಅಸಿಂಧು ಎಂದು ಸಾರಲಾಯಿತು. ಆದರೆ ಈ ಕಾನೂನಿನ ಪರಿವ್ಯಾಪ್ತಿಯಿಂದ ಕೇಂದ್ರಸರ್ಕಾರ, ರಾಜ್ಯ ಸರ್ಕಾರ, ಸಾರ್ವಜನಿಕ ಕಂಪನಿಗಳು, ಸಹಕಾರಿ ಸಂಸ್ಥೆಗಳಿಂದ ಪಡೆದ ಯಾವುದೇ ಸಾಲಗಳನ್ನು ಹೊರಗಿಡಲಾಯಿತು ಎಂಬುದು ಗಮನಾರ್ಹ. ಈ ಕಾನೂನಿನ ಅಧಿನಿಯಮ 5 ರ ಅನ್ವಯ ಸಾಲಿಗನು ಸಾಲಗಾರನ ಅಡಮಾನದ ಸೊತ್ತನ್ನು ಮರಳಿ ಕೊಡುವಲ್ಲಿ ತಪ್ಪಿದರೆ ರೂ. ಒಂದು ಸಾವಿರದಿಂದ ಐದು ಸಾವಿರದವರೆಗೆ ಜುಲ್ಮಾನೆ ಮತ್ತು ಮೂರು ತಿಂಗಳಿಂದ ಒಂದು ವರ್ಷದವರೆಗಿನ ಜೈಲುವಾಸಕ್ಕೆ ಬಾಧ್ಯನಾಗುತ್ತಿದ್ದನು. ಸದರಿ ಕಾನೂನನ್ನು 1981 ಡಿಸೆಂಬರ್‌ವರೆಗೆ ಮಾತ್ರ ಮುಂದುವರೆಸಲಾಯಿತು.

ಜಿಲ್ಲಾಧಿಕಾರಿಗಳು ವರದಿ ಮಾಡುವಂತೆ ಪ್ರಾರಂಭದಿಂದ ಈ ಕಾನೂನನ್ನು ಹಿಂದಕ್ಕೆ ಪಡೆಯುವವರೆಗೆ ಜಿಲ್ಲೆಯಲ್ಲಿ ಪರಿಹಾರ ಕೋರಿ ಬಂದ ಒಟ್ಟು ಅರ್ಜಿಗಳ ಸಂಖ್ಯೆ 952, ಪರಿಹಾರದ ಮೊತ್ತ ರೂ. 9 ಲಕ್ಷ; ಅವುಗಳ ಪೈಕಿ 509 ಅರ್ಜಿಗಳನ್ನು ರೂ. 5.27 ಲಕ್ಷ ಪರಿಹಾರದೊಂದಿಗೆ ವಿಲೇವಾರಿ ಮಾಡಲಾಯಿತು. ತಿರಸ್ಕೃತವಾದ ಅರ್ಜಿಗಳ ಸಂಖ್ಯೆ 433 ಮತ್ತು ಅವುಗಳ ಮೊತ್ತ ರೂ. 3.73 ಲಕ್ಷ ಎಂದು ವರದಿಯಾಗಿದೆ. ಅರ್ಜಿದಾರರಲ್ಲಿ ಪರಿಶಿಷ್ಟ ಜಾತಿ\ಪರಿಶಿಷ್ಟ ಪಂಗಡಗಳವರ ಸಂಖ್ಯೆ 50 ಮತ್ತು ನೀಡಿದ ಪರಿಹಾರ ಮೊತ್ತ ರೂ. 34,389 ಮತ್ತು ಈ ವರ್ಗದ ಎಲ್ಲಾ ಅರ್ಜಿಗಳನ್ನು ವಿಲೇವಾರಿ ಮಾಡಲಾಯಿತು ಎಂದು ವರದಿಯಾಗಿದೆ.

## ವಾಣಿಜ್ಯ ಬ್ಯಾಂಕುಗಳು

ಸುಸಂಘಟಿತ, ಸಾಂಸ್ಥಿಕ ಹಣಕಾಸು ಸಂಸ್ಥೆಗಳು ಪ್ರಾರಂಭವಾಗುವ ಪೂರ್ವದಲ್ಲಿ 17-18 ನೇ ಶತಮಾನದ ಅವಧಿಯಲ್ಲಿ ಪೇಶ್ವೆಯವರ ಆಡಳಿತ ಕಾಲದಲ್ಲಿ ಸಾಲದ ಮೇಲಿನ ಬಡ್ಡಿಯ ದರ ತಿಂಗಳಿಗೆ ಶೇ. 1 ರಿಂದ 5 ರಂತೆ ವಿಧಿಸಲಾಗುತ್ತಿತ್ತು. ಅಲ್ಲದೇ ಖಾಸಗೀ ಸಾಲಿಗರು (ಸಾಹುಕಾರರು) ಸರ್ಕಾರಕ್ಕೂ ಕಷ್ಟದ ಸಮಯದಲ್ಲಿ ಸಾಲ ನೀಡುತ್ತಿದ್ದರು. ಇದಕ್ಕೆ ಪ್ರತಿಯಾಗಿ ಸರ್ಕಾರವು ಸದರಿ ವರ್ತಕರಿಗೆ ಭೂಕಂದಾಯ ವಸೂಲಿ ಮಾಡಲು ಕೆಲವು ಹಳ್ಳಿಗಳನ್ನು ಬಿಟ್ಟುಕೊಡುತ್ತಿತ್ತು. ಹಣದ ವ್ಯವಹಾರ ಹುಂಡಿಯ ಮೂಲಕ ನಡೆಯುತ್ತಿತ್ತು. ಸರ್ಕಾರದ ಹುಂಡಿಯನ್ನು 'ವರಾತ' ಎಂದು ಕರೆಯುತ್ತಿದ್ದರು. ಹುಬ್ಬಳ್ಳಿಯಲ್ಲಿ ಇದ್ದ ಇಂಥ ಸಾಹುಕಾರರು ಬೆಂಗಳೂರು, ಪುಣೆ ಮುಂತಾದ ದೂರದ ಊರುಗಳಿಗೆ ಹುಂಡಿಗಳನ್ನು ಕೊಡುವಷ್ಟು ಸಮರ್ಥರಾಗಿದ್ದರು. ಬ್ರಾಹ್ಮಣರಲ್ಲಿ 'ನಾಯಕ್' ಎಂಬ ಹೆಸರು ಅನೇಕ ಸಲ ಇಂಥ ಸಾಹುಕಾರ ವೃತ್ತಿಯನ್ನು ಸೂಚಿಸುತ್ತಿತ್ತು. ಬಹುಶಃ ಸರಕಾರಕ್ಕೆ ಸಾಲ ಕೊಟ್ಟು ಕೆಲವೊಂದು ಗ್ರಾಮಗಳ ಮೇಲೆ ಹೊಂದಿದ್ದ ಆರ್ಥಿಕ ಅಧಿಕಾರದಿಂದ ಈ ಉಪಾಧಿ ಬಂದಿರಬಹುದು. ಅನ್ಯ ಜಾತಿಯ ಸಾಹುಕಾರರೂ ಇದ್ದರು. ಹುಬ್ಬಳ್ಳಿಯ ಮೂರು ಸಾವಿರ ಮಠದ ದಾಖಲೆಗಳನ್ನು ಪರಿಶೀಲಿಸಿದಾಗ ಮಠವು ದೂರದ ಮುಂಬೈ ಮುಂತಾದ ಊರುಗಳ ವರ್ತಕರಿಗೆ ಸಾಲ ಕೊಟ್ಟಿದ್ದು ಕಂಡು ಬರುತ್ತದೆ. ಬೇರೆ ಮಠಗಳೂ ದೇವಾಲಯಗಳೂ ವ್ಯಾಪಾರೀ ಶ್ರೇಣಿಗಳೂ ಕಸಬುದಾರರ ಶ್ರೇಣಿ (ಕೊಟ್ಟಳಿ, ನಿಗಮ, ಇತ್ಯಾದಿ) ಈ ಲೇವಾದೇವಿ ವ್ಯವಹಾರವನ್ನು ಮಾಡುತ್ತಿದ್ದುದು ಶಾಸನಗಳಿಂದ ತಿಳಿಯುತ್ತದೆ. ದೇವಾಲಯಗಳಲ್ಲಿ ಧರ್ಮ ಕಾರ್ಯಗಳಿಗಾಗಿ ಇಟ್ಟ ನಗದು ಹಣದ ಬಡ್ಡಿಯಿಂದ ಈ ಸೇವೆಗಳಾಗುತ್ತಿದ್ದು ದೇವಾಲಯಗಳೂ ಮಠಗಳೂ ಶ್ರೇಣಿಗಳೂ ಈ ನಗದನ್ನು ಪಡೆದು ಬಡ್ಡಿಗೆ ಸಾಲ ಕೊಡುತ್ತಿದ್ದವು.

ಕರ್ನಾಟಕದಲ್ಲಿ ಆಧುನಿಕ ಬ್ಯಾಂಕಿಂಗ್ ಉದ್ಯಮ ನಡೆದು ಬಂದ ಸುಮಾರು 13 ದಶಕಗಳ ವಿವಿಧ ಹಂತಗಳ ಇತಿಹಾಸವನ್ನು ಗುರುತಿಸುವಲ್ಲಿ ದಕ್ಷಿಣ ಕನ್ನಡದಂತೆ, ಧಾರವಾಡ ಜಿಲ್ಲೆಯ ಕೊಡುಗೆಯೂ ವಿಶೇಷವಾದುದು. ಕರ್ನಾಟಕದಲ್ಲಿ ಖಾಸಗಿ ವಲಯದ ಪ್ರಪ್ರಥಮ ಎರಡು ಬ್ಯಾಂಕುಗಳು 1868 ರಲ್ಲಿ ಬೆಂಗಳೂರಿನಲ್ಲಿ ಪ್ರಾರಂಭವಾದರೆ, ಅಂದು ಉತ್ತರ ಕರ್ನಾಟಕದಲ್ಲಿ ಸರ್ಕಾರಿ ವಲಯದ ಅಂದರೆ "ಮುಂಬೈ ಪ್ರೆಸಿಡೆನ್ಸಿ ಬ್ಯಾಂಕಿನ" (1840)ಧಾರವಾಡ ಶಾಖೆಯನ್ನು ಜಿಲ್ಲಾ ಕೇಂದ್ರದಲ್ಲಿ 1863ರಲ್ಲಿ ಪ್ರಾರಂಭಿಸುವ ಮೂಲಕ ಜಿಲ್ಲೆಯಲ್ಲಿ ಸುಸಂಘಟಿತ, ಆಧುನಿಕ, ಬ್ಯಾಂಕಿಂಗ್ ಉದ್ಯಮದ ನಾಂದಿಯಾಯಿತು ಎಂದು ಹೇಳಬಹುದು. ಇದಾದ ನಂತರ ಅದೇ ಬ್ಯಾಂಕಿನ ಎರಡನೇಯ ಶಾಖೆಯನ್ನು 1870 ರಲ್ಲಿ ವಾಣಿಜ್ಯ ಚಟುವಟಿಕೆಗಳ ಕೇಂದ್ರವಾಗಿದ್ದ ಹುಬ್ಬಳ್ಳಿಯಲ್ಲಿ ತೆರೆಯಲಾಯಿತು.

ಅಂದಿನ ಮುಂಬೈ ಕರ್ನಾಟಕದಲ್ಲಿ ಹುಬ್ಬಳ್ಳಿಯನ್ನು ಬಿಟ್ಟರೆ ಬೇರೆ ಕಡೆಗೆ ಬ್ಯಾಂಕಿಂಗ್ ವ್ಯವಹಾರ ಅಷ್ಟೊಂದು ಬಿರುಸಿನಿಂದ ನಡೆಯುತ್ತಿರಲಿಲ್ಲ, ಮುಂಬೈ ಕರ್ನಾಟಕದಲ್ಲಿ ಹುಬ್ಬಳ್ಳಿ "ಛೋಟಾ ಮುಂಬೈ" ಎಂದೇ ಪ್ರಸಿದ್ಧಿಯಾಗಿತ್ತು. ಹತ್ತಿಯ ವ್ಯಾಪಾರದ ಪಡಮೂಲೆಯ ಸ್ಥಳವಾಗಿತ್ತು. ಹುಬ್ಬಳ್ಳಿ-ಧಾರವಾಡಗಳಲ್ಲಿ ಮುಂಬೈ ಬ್ಯಾಂಕಿನ ಶಾಖೆಗಳನ್ನು ತೆರೆದ ಮುಖ್ಯ ಉದ್ದೇಶ ಹುಬ್ಬಳ್ಳಿಯ ಹತ್ತಿ ವರ್ತಕರಿಗೆ ಧಾರವಾಡ ಹತ್ತಿಯನ್ನು ಖರೀದಿಸುತ್ತಿದ್ದ ಮುಂಬೈ ವರ್ತಕರು ನೀಡುತ್ತಿದ್ದ ಹುಂಡಿಗಳನ್ನು ಸೋಡಿಯ ಮೇಲೆ ಖರೀದಿಸುವುದೇ ಆಗಿತ್ತು. ಇದೂ ಅಲ್ಲದೇ ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಿದ್ದ ಈ ಭಾಗದ ಹೆಚ್ಚುವರಿ ಸಂಚಿತ ಹಣವನ್ನು ಮುಂಬೈಗೆ ಕಡಿಮೆ ಖರ್ಚಿನಲ್ಲಿ ವರ್ಗಾಯಿಸಲು ಮತ್ತು ಸೋವಿ ಬಡ್ಡಿಯ ಬ್ಯಾಂಕ್ ಸಾಲ ಒದಗಿಸುವ ಮೂಲಕ ಈ ಭಾಗದ ಆರ್ಥಿಕ ಚಟುವಟಿಕೆಗಳನ್ನು ಉತ್ತೇಜಿಸುವುದಾಗಿತ್ತು.

ಪ್ರಾರಂಭದಲ್ಲಿ ಇಲ್ಲಿಯ ಹತ್ತಿಯು ಮುಂಬೈಗೆ ಕಾರವಾರ, ಕುಮಟಾ, ಬಂದರುಗಳ ಮೂಲಕ ಸಾಗಾಟವಾಗುತ್ತಿತ್ತು. ವಿದೇಶಗಳಲ್ಲಿ ಈ ಹತ್ತಿಗೆ (ಅಮೆರಿಕನ್ ಕಾಟನ್) ಅಪಾರ ಬೇಡಿಕೆ ಇತ್ತು. ಇಲ್ಲಿಂದ ರಫ್ತಾಗುತ್ತಿದ್ದ ಹತ್ತಿಯನ್ನು 'ಕುಮಟೀಕಾಟನ್' ಎಂದೇ

ಕರೆಯುತ್ತಿದ್ದರು. ಧಾರವಾಡ ಜಿಲ್ಲೆಯಿಂದ 1873-83ರ ದಶಕದಲ್ಲಿ ವಾರ್ಷಿಕ ಸರಾಸರಿ 9,500ಟನ್ನು (45ಲಕ್ಷ ರೂ. ಮೌಲ್ಯದ) ಹತ್ತಿ ರಫ್ತಾಗುತ್ತಿತ್ತು. ಮುಂಬೈ ಮಾರುಕಟ್ಟೆಗೆ ಧಾರವಾಡ ಜಿಲ್ಲೆಯಿಂದ ಶೇ. 68 ಪ್ರಮಾಣದಷ್ಟು "ಅಮೇರಿಕನ್ ಹತ್ತಿ" ರಫ್ತಾಗುತ್ತಿತ್ತು ಎಂದು ಹಳೆಯ ದಾಖಲಾತಿಗಳಿಂದ ತಿಳಿದು ಬರುವುದು.

ಈಗಿನಂತೆ ಅಂದಿನ ಬ್ಯಾಂಕುಗಳ ವ್ಯವಹಾರದಲ್ಲಿ ವೈವಿಧ್ಯತೆ ಇರುತ್ತಿರಲಿಲ್ಲ. ಬ್ಯಾಂಕಿಂಗ್ ವ್ಯವಹಾರ ಕೇವಲ ಸೀಮಿತ ವರ್ಗಕ್ಕೆ ಒಳಪಟ್ಟಿತ್ತು. ಬ್ಯಾಂಕಿನ ಠೇವಣಿದಾರರಲ್ಲಿ ಹತ್ತಿಯ ವ್ಯಾಪಾರದಲ್ಲಿ ತೊಡಗಿದ್ದ ಯುರೋಪಿನ ಕಂಪನಿಗಳು ಮುಖ್ಯವಾಗಿದ್ದವು. ಅಂದಿನ ಅವುಗಳ ವಾರ್ಷಿಕ ವಹಿವಾಟು ರೂ. 30 ರಿಂದ 40 ಲಕ್ಷವಾಗಿದ್ದರೆ, ಸ್ಥಳೀಯ ವ್ಯಾಪಾರಿಗಳಾಗಿದ್ದ ಲಿಂಗಾಯಿತರು, ಜೈನರು, ಬ್ರಾಹ್ಮಣರು, ಕೋಮಟಿಗಳು, ಮುಂತಾದವರು ವಾರ್ಷಿಕ ಸುಮಾರು 15ರಿಂದ 20ಲಕ್ಷ ರೂಪಾಯಿಗಳ ವಹಿವಾಟು ನಡೆಸುತ್ತಿದ್ದರು. ಮುಂಬೈಯ ಸುಮಾರು 8-10ಕಂಪನಿಗಳು ಹುಬ್ಬಳ್ಳಿಯಲ್ಲಿದ್ದವು. ಅಂದಿನ ದಿನಗಳಲ್ಲಿ ಹತ್ತಿಯ ವ್ಯಾಪಾರದಲ್ಲಿ ಉಂಟಾಗುತ್ತಿದ್ದ ತೀವ್ರ ಏರಿಳಿತಗಳು ಜಿಲ್ಲೆಯ ಆರ್ಥಿಕ, ಸಾಮಾಜಿಕ ಜನಜೀವನದ ಮೇಲೆ ದಟ್ಟವಾದ ಪ್ರಭಾವ ಬೀರುವಷ್ಟು ಪರಿಣಾಮಕಾರಿಯಾಗಿದ್ದವು ಎಂಬುದನ್ನು ಹಳೆಯ ದಾಖಲಾತಿಗಳು ಸಮರ್ಥಿಸುತ್ತವೆ. ದೇಶದ ಇತರೆಡೆಯಂತೆ 1863-65ರ ಅಮೇರಿಕನ್ ಯಾದವೀ ಯುದ್ಧವು ಈ ಜಿಲ್ಲೆಯ ಬ್ಯಾಂಕಿಂಗ್ ಉದ್ಯಮವೂ ಸೇರಿದಂತೆ ಆರ್ಥಿಕ, ಸಾಮಾಜಿಕ ಜೀವನದ ಮೇಲೆ ಬಹು ಆಳವಾದ ಪರಿಣಾಮ ಬೀರಿತ್ತು (ಅಧ್ಯಾಯ 2 ನೋಡಿ). ಈ ಅವಧಿಯಲ್ಲಿ ಜಿಲ್ಲೆಯಲ್ಲಿ ಹಣದ ಹೊಳೆ ಹರಿಯಿತು. ಶ್ರೀಮಂತ ರೈತರು (ಒಕ್ಕಲಿಗರು) ಎತ್ತಿನ ಕೊಂಬುಗಳಿಗೆ ಬಂಗಾರದ ಬಳೆಗಳನ್ನು (ಕೋಡಣಸು) ತೊಡಿಸುವಷ್ಟು ಶ್ರೀಮಂತರಾದರು ಎಂದು ಹೇಳುವಲ್ಲಿ ಉತ್ಪ್ರೇಕ್ಷೆ ಇದ್ದರೂ ಹತ್ತಿಗೆ ಇದ್ದ ವಿಪುಲವಾದ ಬೇಡಿಕೆ, ಏರುತ್ತಿರುವ ಬೆಲೆಗಳು ತೀವ್ರಮಟ್ಟದ ಹಣದುಬ್ಬರವನ್ನುಂಟು ಮಾಡಿತ್ತು. ಹಣದುಬ್ಬರದ ಪರಿಣಾಮವಾಗಿ ಜಮೀನು, ಮನೆ ಮುಂತಾದ ಸ್ಥಿರಾಸ್ತಿಗಳ ಬೆಲೆಗಳು ಹೆಚ್ಚಾಗಿ ವಹಿವಾಟು ಹೆಚ್ಚಾಗಿ, ತಂಟೆ-ತಕರಾರುಗಳು ಹೆಚ್ಚಾದವು. ಬಹುಶಃ ಹಣದುಬ್ಬರದ ಈ ಅನಾಹುತದಿಂದಲೇ 'ಹತ್ತಿ ಬಿತ್ತಿ ಹಾಳಾದರು' ಎಂಬ ನಾಣ್ಣುಡಿ ಈ ಭಾಗದಲ್ಲಿ ಪ್ರಚಾರಕ್ಕೆ ಬಂದಿರಬೇಕು.

ಮುಂದಿನ ವರ್ಷಗಳಲ್ಲಿ ಹತ್ತಿಯ ವ್ಯಾಪಾರದಲ್ಲಿ ಆದ ಹಿಂಜರಿತದಿಂದ ಮುಂಬೈ ಬ್ಯಾಂಕಿನ ಧಾರವಾಡ ಶಾಖೆಯನ್ನು 15 ವರ್ಷಗಳ ನಂತರ 1878ರಲ್ಲಿ ಮುಚ್ಚಿ ಅದರ ವಹಿವಾಟನ್ನು ಹುಬ್ಬಳ್ಳಿಯ ಶಾಖೆಗೆ ವರ್ಗಾಯಿಸಲಾಯಿತು. 1876-78ರ ಭೀಕರ ಬರಗಾಲದಲ್ಲಿ ಹುಬ್ಬಳ್ಳಿಯ ಶಾಖೆಯೂ ತುಂಬಾ ತೊಂದರೆಗೊಳಗಾಯಿತು.

**ಪ್ರಾರಂಭದ ಕೂಡು ಬಂಡವಾಳ ಸಂಸ್ಥೆಗಳು:** 1860 ರ ನಂತರದ ದಶಕಗಳಲ್ಲಿ 'ಪರಿಮಿತ' ಹೊಣೆಗಾರಿಕೆಯ ಅನುಕೂಲದೊಂದಿಗೆ ಪ್ರಾರಂಭವಾದ ಸಾರ್ವಜನಿಕ ಮತ್ತು ಖಾಸಗಿ ವಲಯದ ಕೂಡು ಬಂಡವಾಳ ಸಂಸ್ಥೆಗಳು ('ಜಾಯಿಂಟ್ ಸ್ಟಾಕ್ ಕಂಪನಿ'ಗಳು) ಬ್ಯಾಂಕಿಂಗ್ ವ್ಯವಹಾರದೊಂದಿಗೆ ಇತರೇ ಉತ್ಪಾದಕ, ವಿತರಕ, ವಿಮೆ ಮುಂತಾದ ಪೂರಕ ವ್ಯವಹಾರಗಳನ್ನು ನಡೆಸುತ್ತಿದ್ದುದು ಸರ್ವಸಾಮಾನ್ಯವಾಗಿತ್ತು. ಕೇವಲ ಕೆಲವೊಂದು ಆಯ್ದ ಕಂಪನಿಗಳು ಮಾತ್ರ ಬ್ಯಾಂಕಿಂಗ್ ವ್ಯವಹಾರವನ್ನು ನಡೆಸುತ್ತಿದ್ದವು. ಅಂದಿನ ದಿನಗಳಲ್ಲಿ ಸರ್ಕಾರದ ಸೆಕ್ಯೂರಿಟಿಗಳಲ್ಲಿ ಯಾರೂ ಹಣವನ್ನು ತೊಡಗಿಸುತ್ತಿರಲಿಲ್ಲ. ಉಳಿತಾಯದ ಬ್ಯಾಂಕು ಖಾತೆಗಳಲ್ಲಿ ಸರ್ಕಾರಿ ನೌಕರರು ಮಾತ್ರ ಹಣ ವಿನಿಯೋಗಿಸುತ್ತಿದ್ದರು. 1876ರ ಏಪ್ರಿಲ್‌ನಲ್ಲಿ "ಧಾರವಾಡ ವ್ಯಾಪಾರೋತ್ತೇಜಕ ಕಂ." ಎಂಬ ಹೆಸರಿನ ಸುಪ್ರಸಿದ್ಧ ಬಟ್ಟೆಯ ಆಮದು-ರಫ್ತು ಕಂಪನಿಯು ಧಾರವಾಡದಲ್ಲಿ ರೂ. 40,000ಬಂಡವಾಳದೊಂದಿಗೆ ಪ್ರಾರಂಭವಾಯಿತು. 1883 ರಲ್ಲಿ ಅದು 143 ಜನ ಷೇರುದಾರರನ್ನು ಹೊಂದಿತ್ತು. ಅವರಲ್ಲಿ ಬಹುಪಾಲು (85) ಬ್ರಾಹ್ಮಣರು (ಸರ್ಕಾರಿ ನೌಕರರು) ಆಗಿದ್ದರು. ಮುಂದೆ 1877ರಲ್ಲಿ ಧಾರವಾಡ ಕಂಪನಿಯ ಶಾಖೆಯನ್ನು ಹುಬ್ಬಳ್ಳಿಯಲ್ಲಿ ತೆರೆಯಲಾಯಿತು. 1878ರಲ್ಲಿ ಹುಬ್ಬಳ್ಳಿಯಲ್ಲಿ "ಹುಬ್ಬಳ್ಳಿ ಕ್ಲಾಥ್ ಕಂಪನಿ" ಎಂಬ ಸ್ವತಂತ್ರ ಕಂಪನಿಯನ್ನು ರೂ. 22,000 ಬಂಡವಾಳದೊಂದಿಗೆ ಪ್ರಾರಂಭಿಸಲಾಯಿತು. 1881 ರಲ್ಲಿ ಹುಬ್ಬಳ್ಳಿಯಲ್ಲಿ "ಸದರ್ನ್ ಮರಾಠಾ ಸ್ಪಿನ್ನಿಂಗ್ ಅಂಡ್ ವೀವಿಂಗ್" ಎಂಬ ಸಂಸ್ಥೆಯು ಆರು ಲಕ್ಷ ರೂಪಾಯಿ ಬಂಡವಾಳದೊಂದಿಗೆ ಪ್ರಾರಂಭಿಸಲ್ಪಟ್ಟಿತು (ಬಹಳ ದಿನಗಳ ವರೆಗೆ ಭಾರತ್ ಮಿಲ್ ಎಂದು ಈ ನೂಲಿನ ಗಿರಣಿ ಪ್ರಸಿದ್ಧವಾಗಿತ್ತು). 1882-83ರಲ್ಲಿ ಹುಬ್ಬಳ್ಳಿ ಮತ್ತು ಗದಗನಲ್ಲಿ ಅನುಕ್ರಮವಾಗಿ "ರಾಬರ್ಟ್‌ಸನ್ ಬ್ರದರ್ಸ್" ಮತ್ತು "ಕ್ರಿಸ್ಟಲ್ ಅಂಡ್ ಕಂ" ಎಂಬವು ಬಹು ದೊಡ್ಡ ವ್ಯಾಪಾರಿ ಕಂಪನಿಗಳಾಗಿದ್ದವು. ಈ ಕಂಪನಿಗಳು ಅಂದಿನ ದಿನಗಳಲ್ಲಿ ಷೇರುದಾರರಿಗೆ ಶೇ. 12ರಿಂದ 15ರ ವರೆಗೆ ಡಿವಿಡೆಂಡ್ ನೀಡುತ್ತಿದ್ದುದರಿಂದ ವಾಣಿಜ್ಯ ಬ್ಯಾಂಕುಗಳಿಗಿಂತಲೂ ಇಂತಹ ಕಂಪನಿಗಳಲ್ಲಿ ಹಣದ ವಿನಿಯೋಗ ಹೆಚ್ಚಾಗಿತ್ತು. ಮುಂಬೈ ಪ್ರೆಸಿಡೆನ್ಸಿ ಬ್ಯಾಂಕಿನ ಹುಬ್ಬಳ್ಳಿ ಶಾಖೆಯನ್ನು 1881 ರಲ್ಲಿ ಮುಚ್ಚಿ ಪುನಃ 1882ರಲ್ಲಿ ಪ್ರಾರಂಭ ಮಾಡಿ ಎರಡು ವರ್ಷದ ನಂತರ

1884 ರಲ್ಲಿ ಅಂತಿಮವಾಗಿ ಮುಚ್ಚಲಾಯಿತು. ಹೀಗೆ ಮುಂಬೈ ಪ್ರೆಸಿಡೆನ್ಸಿ ಬ್ಯಾಂಕಿನ ಈ ಜಿಲ್ಲೆಯ ಎರಡೂ ಶಾಖೆಗಳನ್ನು ಮುಚ್ಚಲಾಯಿತು. ಇದರಿಂದ ಬೆಳೆಯುತ್ತಿರುವ ವಾಣಿಜ್ಯ ವ್ಯವಹಾರಗಳ ಬೇಡಿಕೆಗಳನ್ನು ಪೂರೈಸಲು ಸಹಾಯಕವಾಗುವಂತೆ ಸ್ಥಳೀಯವಾಗಿ ಬ್ಯಾಂಕುಗಳು ಮೂಡಿಬರಲು ಮತ್ತು ಜಿಲ್ಲೆಯ ಹೊರಗಿನ ಬ್ಯಾಂಕುಗಳು ಇಲ್ಲಿ ತಮ್ಮ ಶಾಖೆಗಳನ್ನು ತೆರೆಯಲು ಅವಕಾಶವಾಯಿತು.

ಬ್ಯಾಂಕಿಂಗ್ ಮತ್ತು ವಿಮೆ ಕಂಪನಿಗಳನ್ನು ಹೊರತುಪಡಿಸಿ ಈ ಜಿಲ್ಲೆಯಲ್ಲಿ 1951 ರಲ್ಲಿ 37 ಸಾರ್ವಜನಿಕ ಕಂಪನಿಗಳು ಇದ್ದವು. 1900 ರವರೆಗೆ ಆರು ಹೊಸ ಕಂಪನಿಗಳು ನೋಂದಾಯಿಸಲ್ಪಟ್ಟವು, 1900 ರಿಂದ 1940 ರವರೆಗೆ ಮೂರು ಕಂಪನಿಗಳು, 1940 ರಿಂದ 1950 ರವರೆಗೆ 24 ಹೊಸ ಕಂಪನಿಗಳು ನೋಂದಾಯಿಸಲ್ಪಟ್ಟವು.

**ಸ್ಥಳೀಯ ವಾಣಿಜ್ಯ ಬ್ಯಾಂಕುಗಳು:** ಈ ಜಿಲ್ಲೆಯಲ್ಲಿ ಸಹಕಾರಿ ಚಳುವಳಿಯು ಪ್ರಾರಂಭದಿಂದಲೇ ಬಹು ವ್ಯಾಪಕವಾಗಿ ಮತ್ತು ಸ್ಪರ್ಧಾತ್ಮಕ ಮನೋಭಾವನೆಯಿಂದ ಬೆಳೆದು ಬಂದಿರುವುದು. ಇದರಿಂದ ಸ್ಥಳೀಯ ಅಥವಾ ಹೊರಗಿನ ವಾಣಿಜ್ಯ ಬ್ಯಾಂಕುಗಳು ನಗರ ಪ್ರದೇಶದಲ್ಲಿ ತಮ್ಮ ವ್ಯವಹಾರಗಳನ್ನು ಪ್ರಾರಂಭಿಸುವ ಹತ್ತಾರು ವರ್ಷ ಮೊದಲೇ ವ್ಯವಸಾಯೇತರ ಸಹಕಾರಿ ಬ್ಯಾಂಕುಗಳು ಈ ಜಿಲ್ಲೆಯ ಹಲವಾರು ಪಟ್ಟಣ ಪ್ರದೇಶಗಳಲ್ಲಿ ಮೂಡಿ ಬಂದಿರುವುದನ್ನು ಕಾಣಬಹುದು. ಆದಾಗ್ಯೂ ಸ್ಥಳೀಯ ವರ್ತಕರು, ಗಣ್ಯರು, ಸ್ವದೇಶೀ ಆಂದೋಲನದಿಂದ ಪ್ರಭಾವಿತರಾಗಿ ಈ ಶತಮಾನದ ಪ್ರಾರಂಭದಲ್ಲಿ ಕಂಪನಿಗಳನ್ನು ಪ್ರವರ್ತಿಸುವ ಮೂಲಕ ವಾಣಿಜ್ಯ ಬ್ಯಾಂಕುಗಳನ್ನು ಪ್ರಾರಂಭಿಸುವಲ್ಲಿ ಮುಂದಾದರು. ಭಾರತೀಯ ಕಂಪನಿಗಳ ಆಡಳಿತ ವರದಿ (1924-25) ತಿಳಿಸುವಂತೆ ಈ ಜಿಲ್ಲೆಯಲ್ಲಿ ನೋಂದಾಯಿಸಲ್ಪಟ್ಟ ಅತ್ಯಂತ ಹಳೆಯ ಬ್ಯಾಂಕಿಂಗ್ ಕಂಪನಿಯು ಮಾರ್ಚ್ 1922ರಲ್ಲಿ ಹುಬ್ಬಳ್ಳಿಯಲ್ಲಿನ "ವಾಯಿಕರ್ ಮತ್ತು ಕಂ" ಮತ್ತು ಧಾರವಾಡದಲ್ಲಿ ಜೂನ್ 1923 ರಲ್ಲಿ ಪ್ರಾರಂಭವಾದ 'ಅಂಕಲಗಿ ಬ್ಯಾಂಕ್' ಪ್ರಮುಖವಾಗಿದ್ದವು. ಈ ಬ್ಯಾಂಕುಗಳು ಅಂದು ಹೊಂದಿದ್ದ ಷೇರು ಬಂಡವಾಳ ಅನುಕ್ರಮವಾಗಿ 30,000 ರೂ. ಮತ್ತು 7,200 ರೂ. ಎಂದು ತಿಳಿದು ಬರುವುದು. (ಅಂದಿನ ದಿನಗಳಲ್ಲಿ ಹಣದ ಲೇವಾದೇವಿ ಮಾಡುವ ವ್ಯಕ್ತಿಗಳು, ಸಂಸ್ಥೆಗಳು ತಮ್ಮ ಹೆಸರಿನೊಂದಿಗೆ, ಬ್ಯಾಂಕ್, ಬ್ಯಾಂಕರ್, ಬ್ಯಾಂಕಿಂಗ್ ಎಂಬ ಪದಗಳನ್ನು ಸೇರಿಸುವಲ್ಲಿ ಯಾವ ಕಾನೂನಿನ ತಡೆ ಇರಲಿಲ್ಲ). ಈ ಬ್ಯಾಂಕುಗಳ ಬಗ್ಗೆ ಮುಂದೆ ಹೆಚ್ಚಿನ ಮಾಹಿತಿಯು ತಿಳಿದು ಬರುವುದಿಲ್ಲ. ಬಹುಶಃ ಇವು 1929-30ರ ಆರ್ಥಿಕ ಹಿಂಜರಿತದ ಅವಧಿಯಲ್ಲಿ ವಿಸರ್ಜನೆಗೊಂಡಿರಬಹುದು. ಹಳೆಯ ದಾಖಲೆಗಳಿಂದ ತಿಳಿದುಬಂದಿರುವಂತೆ ಪುಣೆ ಮೂಲದ "ಪೂನಾ ಬ್ಯಾಂಕ್(ಲಿ)" (1898) ತನ್ನ ಒಂದು ಶಾಖೆಯನ್ನು 26.8.1924 ರ ಮೊದಲು ಧಾರವಾಡದಲ್ಲಿ ತೆರೆದಿತ್ತು ಎಂದು ತಿಳಿದು ಬರುವುದು. ಸದರಿ ಬ್ಯಾಂಕ್ 1924 ರಲ್ಲಿ ವಿಸರ್ಜನೆಗೊಂಡಿತು. ಅದೇ ವರ್ಷ (1924 ರಲ್ಲಿ) ಧಾರವಾಡದಲ್ಲಿ ಮಧ್ಯಬ್ಯಾಂಕ್ ಎಂಬ ಸಂಸ್ಥೆಯು ರೂ. ಒಂದು ಲಕ್ಷ ಅಧಿಕೃತ ಬಂಡವಾಳದೊಂದಿಗೆ ನೋಂದಾಯಿಸಲ್ಪಟ್ಟರೂ ಅದು ಕಾರ್ಯರೂಪಕ್ಕೆ ಬರದೇ ಸ್ಥಗಿತಗೊಂಡಂತೆ ತೋರುವುದು. ಧಾರವಾಡದ ಅಂಕಲಗಿ ಬ್ಯಾಂಕ್ ಕನಿಷ್ಠ ಒಂದು ಆಣೆಯ ಠೇವಣಿಯನ್ನು ಸ್ವೀಕರಿಸಿದ ಮೂಲಕ ಈ ಭಾಗದಲ್ಲಿ (ಅಲ್ಪ ಉಳಿತಾಯ ಯೋಜನೆ) ಪಿಗ್ಮಿ ಡಿಪಾಜಿಟ್ ಯೋಜನೆಯನ್ನು ಪ್ರಾರಂಭಿಸಿತ್ತು.

1924 ರ ನಂತರ ಪ್ರಾರಂಭವಾದ ಈ ಜಿಲ್ಲೆಯ ವಾಣಿಜ್ಯ ಬ್ಯಾಂಕುಗಳಲ್ಲಿ ಐತಿಹಾಸಿಕ ನಗರ ಹಾನಗಲ್‌ನಲ್ಲಿ 1929 ರಲ್ಲಿ ಪ್ರಾರಂಭವಾದ ಶ್ರೀ ಲಕ್ಷ್ಮೀಬ್ಯಾಂಕ್ ಪ್ರಮುಖವಾದುದು. ಸದರಿ ಶ್ರೀ ಲಕ್ಷ್ಮೀಬ್ಯಾಂಕು, ಭಾರತೀಯ ರಿಜರ್ವ ಬ್ಯಾಂಕ್ ಲೈಸನ್ಸನ್ನು ಮುಂದುವರಿಸದೇ ಇದ್ದುದರಿಂದ, 1956 ಸುಮಾರಿಗೆ ವಿಸರ್ಜನೆಗೊಂಡು ಫೈನಾನ್ಸ್ ಕಾರ್ಪೊರೇಷನ್ ಆಗಿ ಮುಂದುವರೆಯಿತು. ಮುಂದಿನ ವರ್ಷ (1930) ರಲ್ಲಿ ಹುಬ್ಬಳ್ಳಿಯಲ್ಲಿ 'ಹುಬ್ಳ ಸಿಟಿ ಬ್ಯಾಂಕ್' ಪ್ರಾರಂಭಗೊಂಡು 36 ವರ್ಷಗಳ ಸೇವೆಯ ನಂತರ 1966 ರಲ್ಲಿ ವಿಜಯ ಬ್ಯಾಂಕ್‌ನೊಂದಿಗೆ ವಿಲೀನವಾಯಿತು. ವಿಲೀನ ಸಮಯದಲ್ಲಿ ಈ ಬ್ಯಾಂಕು ಕೊಣ್ಣೂರಿನಲ್ಲಿ ಒಂದು ಪೇ ಆಫೀಸನ್ನು ಹೊಂದಿತ್ತು. ಎರಡನೇ ಮಹಾಯುದ್ಧದ ನಂತರ 1946 ರಲ್ಲಿ ಹುಬ್ಬಳ್ಳಿಯಲ್ಲಿ 'ಬ್ಯಾಂಕ್ ಆಫ್ ಕರ್ನಾಟಕ' ಪ್ರಾರಂಭವಾಗಿ ಎರಡು ದಶಕಗಳ ಸೇವೆಯ ನಂತರ 1966 ರಲ್ಲಿ ಇಂದಿನ ಕರ್ನಾಟಕ ಬ್ಯಾಂಕ್ (ಲಿ) ನೊಂದಿಗೆ ವಿಲೀನವಾಯಿತು. ವಿಲೀನ ಪೂರ್ವದಲ್ಲಿ ಸದರಿಬ್ಯಾಂಕು ಈ ಜಿಲ್ಲೆಯ ಆರು ಶಾಖೆಗಳನ್ನು ಒಳಗೊಂಡಂತೆ ಒಟ್ಟು 14 ಶಾಖೆಗಳನ್ನು ಹೊಂದಿತ್ತು ಎಂದು ವರದಿಯಾಗಿದೆ.

**ಹೊರನಾಡಿನ ಬ್ಯಾಂಕುಗಳು:** ಬೆಳೆಯುತ್ತಿದ್ದ ಜಿಲ್ಲೆಯ ವಾಣಿಜ್ಯ ವ್ಯವಹಾರಗಳು ಅದರಲ್ಲಿಯೂ ವಿಶೇಷವಾಗಿ ಪ್ರಮುಖ ವಾಣಿಜ್ಯ ಕೇಂದ್ರಗಳಾದ ಹುಬ್ಬಳ್ಳಿ, ಧಾರವಾಡ, ಗದಗ, ಹಾವೇರಿ, ಬ್ಯಾಡಗಿ, ನರಗುಂದ, ರಾಣೆಬೆನ್ನೂರು ಮುಂತಾದ ಸ್ಥಳಗಳ ವರ್ತಕರ ಬೇಡಿಕೆಗಳನ್ನು ಪೂರೈಸಲು ಸಹಾಯಕವಾಗುವಂತೆ ಹಲವಾರು ಹೊರ ಜಿಲ್ಲೆಗಳ ವಿಶೇಷವಾಗಿ ದಕ್ಷಿಣ ಕನ್ನಡ ಮತ್ತು ಈ ಜಿಲ್ಲೆಯೊಂದಿಗೆ ನೇರ ವ್ಯಾಪಾರ ಸಂಬಂಧ ಹೊಂದಿದ್ದ ಮುಂಬಯಿ ಬೆಳಗಾವಿ, ಕಾರವಾರ, ಸಾಂಗಲಿ, ಮಿರಜ, ಸಾತಾರಾ, ಪೂನಾ, ರಾಮದುರ್ಗ, ಮುಂತಾದ ಮೂಲದ ಬ್ಯಾಂಕುಗಳು ಈ ಜಿಲ್ಲೆಯ ಬ್ಯಾಂಕಿನ ವ್ಯವಹಾರದಲ್ಲಿ ಭಾಗಿಗಳಾದವು.

ಸ್ವಾತಂತ್ರ್ಯ ಪೂರ್ವದ ಹಲವಾರು ದಶಕಗಳ ಮೊದಲೇ ದಕ್ಷಿಣ ಕನ್ನಡದ ಪ್ರಮುಖ ಬ್ಯಾಂಕುಗಳಾದ ಸಿಂಡಿಕೇಟ 1932 ರಲ್ಲಿ ಹುಬ್ಬಳ್ಳಿಯಲ್ಲಿ, 1936 ರಲ್ಲಿ ಗದಗ ಮತ್ತು ಬ್ಯಾಡಗಿಗಳಲ್ಲಿ ಶಾಖೆಗಳನ್ನು ಪ್ರಾರಂಭಿಸುವ ಮೂಲಕ ಜಿಲ್ಲೆಯ ಬ್ಯಾಂಕಿಂಗ್ ನಕ್ಷೆಯಲ್ಲಿ ತನ್ನ ಸ್ಥಾನವನ್ನು ಪಡೆಯಿತು. ಅದರಂತೆ ಕೆನರಾ ಬ್ಯಾಂಕ್ 1935 ರಲ್ಲಿ ಹುಬ್ಬಳ್ಳಿಯಲ್ಲಿ 1936 ರಲ್ಲಿ ಧಾರವಾಡದಲ್ಲಿ ಶಾಖೆಗಳನ್ನು ಪ್ರಾರಂಭಿಸಿತು. ಕಾರ್ಪೊರೇಷನ್ ಬ್ಯಾಂಕ್ 1944 ರಲ್ಲಿ ಧಾರವಾಡದಲ್ಲಿ 1946 ರಲ್ಲಿ ಹಾವೇರಿಯಲ್ಲಿ ಶಾಖೆಗಳನ್ನು ತೆರೆದರೆ ಬೊಂಬಾಯಿ ಮೂಲದ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ 1940 ರಲ್ಲಿ ಗದಗಿನಲ್ಲಿ, 1942 ರಲ್ಲಿ ಹುಬ್ಬಳ್ಳಿಯಲ್ಲಿ ಶಾಖೆಗಳನ್ನು ಪ್ರಾರಂಭಿಸಿತು. ವಿಜಯ ಮತ್ತು ಸ್ಟೇಟ ಬ್ಯಾಂಕ್ ಆಫ್ ಮೈಸೂರು 1960 ರ ದಶಕದಲ್ಲಿ ಈ ಜಿಲ್ಲೆಯಲ್ಲಿ ಬ್ಯಾಂಕ್ ಶಾಖೆಗಳನ್ನು ಪ್ರಾರಂಭಿಸಿದವು. ಈ ಮೊದಲೇ ಭಾರತ ಬ್ಯಾಂಕ್ ತನ್ನ ಶಾಖೆಯನ್ನು ಹುಬ್ಬಳ್ಳಿಯಲ್ಲಿ ತೆರೆದಿತ್ತು. ಸದರಿ ಬ್ಯಾಂಕು ಪಂಜಾಬ ನಾಷನಲ್ ಬ್ಯಾಂಕ್‌ನೊಂದಿಗೆ ವಿಲೀನಗೊಂಡಿತು. 1951 ರಲ್ಲಿ ಜಿಲ್ಲೆಯ 15 ವಿವಿಧ ಸ್ಥಳಗಳಲ್ಲಿ 16 ಬ್ಯಾಂಕಿಂಗ್ ಕಂಪನಿಗಳು ಸುಮಾರು 40 ಶಾಖೆಗಳನ್ನು ನಿರ್ವಹಿಸುತ್ತಿದ್ದವು. ಇವುಗಳಲ್ಲಿ 14 ಬ್ಯಾಂಕುಗಳು ಹೊರಗಿನವುಗಳಾಗಿದ್ದವು. ಈ ಮುಂದಿನ 15 ಸ್ಥಳಗಳಲ್ಲಿ ಶಾಖೆಗಳನ್ನು ಹೊಂದಿದ್ದವು. (ಇದರಲ್ಲಿ ಪೇಆಫೀಸ್, ಸಬ್ ಪೇ ಆಫೀಸ್, ಟ್ರೆಜರಿ ಪೇ ಆಫೀಸ್, ಸೇರಿವೆ). ಆವರಣದಲ್ಲಿರುವ ಸಂಖ್ಯೆಯು ಆ ಸ್ಥಳದಲ್ಲಿದ್ದ ಒಟ್ಟು ಬ್ಯಾಂಕುಗಳ ಶಾಖೆಗಳನ್ನು ಸೂಚಿಸುವುದು. 1951 ರಲ್ಲಿ ಜಿಲ್ಲೆಯಲ್ಲಿದ್ದ ವಾಣಿಜ್ಯ ಬ್ಯಾಂಕುಗಳ ಕೇಂದ್ರಗಳು: ಅಳ್ನಾವರ (1) , ಅಣ್ಣಿಗೇರಿ (1), ಬ್ಯಾಡಗಿ (2) , ಧಾರವಾಡ (6) , ಗದಗ-ಬೆಟಗೇರಿ (6), ಹಾವೇರಿ (3), ಹುಬ್ಬಳ್ಳಿ (12), ಕೊಣ್ಣೂರು (1), ಕುಂದಗೋಳ (1), ಲಕ್ಷ್ಮೇಶ್ವರ (1), ಮಾಸೂರು (1), ನರಗುಂದ (1), ರಾಣೆಬೆನ್ನೂರು (1), ಸವಣೂರು (2), ಶಿರಹಟ್ಟಿ (1).

ಈ ಜಿಲ್ಲೆಯಲ್ಲಿ 1951 ರಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಬ್ಯಾಂಕಿಂಗ್ ಕಂಪನಿಗಳ ವಿವರ: ಬ್ಯಾಂಕ್ ಆಫ್ ಸಿಟಿಜನ್ಸ್ (ಬೆಳಗಾಂವಿ 1937), ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯ (ಬೊಂಬಾಯಿ, 1911), ಉಡುಪಿಯ ಕಾರ್ಪೊರೇಷನ್ ಬ್ಯಾಂಕ್ (1906), ಸಿಂಡಿಕೇಟ್ ಬ್ಯಾಂಕ್ (1925 ಉಡುಪಿ), ಅಗ್ರಿಕಲ್ಚರಲ್ ಮತ್ತು ಇಂಡಸ್ಟ್ರಿಯಲ್ ಬ್ಯಾಂಕ್ (ಕುಂದಾಪುರ 1934; ಇದರ ಶಾಖೆಗಳು ಧಾರವಾಡ, ಹಾವೇರಿ, ಹುಬ್ಬಳ್ಳಿ ಮತ್ತು ಗದಗಿನಲ್ಲಿ ಇದ್ದವು), ಬ್ಯಾಂಕ್ ಆಫ್ ರೂರಲ್ ಇಂಡಿಯಾ (ಕಾರವಾರ 1940), ಕೆನರಾ ಬ್ಯಾಂಕ್ (ಮಂಗಳೂರು 1906), ಇಂಪಿರಿಯಲ್ ಬ್ಯಾಂಕ್ ಆಫ್ ಇಂಡಿಯಾ (ಮುಂಬಯಿ 1921), ಪಂಜಾಬ್ ನ್ಯಾಷನಲ್ ಬ್ಯಾಂಕ್ (ದೆಹಲಿ 1894), ಬ್ಯಾಂಕ್ ಆಫ್ ಕರ್ನಾಟಕ (ಹುಬ್ಬಳ್ಳಿ 1946), ಬ್ಯಾಂಕ್ ಆಫ್ ಮಹಾರಾಷ್ಟ್ರ (ಪುಣೆ 1935), ಹುಬ್ಬ ಸಿಟಿ ಬ್ಯಾಂಕ್ (ಹುಬ್ಬಳ್ಳಿ 1930), ಮೀರಜ್ ಸ್ಟೇಟ್ ಬ್ಯಾಂಕ್ (ಮಿರ್ಜ 1929), ಸಾತಾರಾ ಸ್ವದೇಶಿ ಕಮರ್ಶಿಯಲ್ ಬ್ಯಾಂಕ್ (ಸಾತಾರಾ 1907), ಬೆಳಗಾವ ಬ್ಯಾಂಕ್ (ಬೆಳಗಾವಿ 1930), ಸಾಂಗಲಿ ಬ್ಯಾಂಕ್ (ಸಾಂಗಲಿ 1916).

ಸ್ವಾತಂತ್ರ್ಯೋತ್ತರದ ದಶಕಗಳಲ್ಲಿ ಎರಡನೇಯ ಮಹಾಯುದ್ಧದ ಹಣದುಬ್ಬರ, 1951 ನಂತರ ಪ್ರಾರಂಭಿಸಲಾದ ಆರ್ಥಿಕ ಅಭಿವೃದ್ಧಿ ಯೋಜನೆಗಳು, ರಾಷ್ಟ್ರೀಯ ಅಭಿವೃದ್ಧಿ ಮತ್ತು ವಿಸ್ತರಣಾ ಯೋಜನೆಗಳು, ಬದಲಾದ ರಾಷ್ಟ್ರೀಯ ಕೈಗಾರಿಕಾ ನೀತಿ, ವ್ಯಾಪಕ ವಾಣಿಜ್ಯಗಳಿಗೆ ಪ್ರೋತ್ಸಾಹ, ವ್ಯಾಪಕ ನಗರೀಕರಣ, ಮಾರುಕಟ್ಟೆಗಳ ಅಭಿವೃದ್ಧಿ ಮುಂತಾದವುಗಳು ನಗರ ಮತ್ತು ಅರೆನಗರ ಪ್ರದೇಶಗಳಲ್ಲಿ ಬ್ಯಾಂಕಿಂಗ್ ಸೇವೆಗಳ ಬೇಡಿಕೆಯನ್ನು ಹೆಚ್ಚಿಸಿದವು. ಇದರಿಂದ ಕ್ರಮೇಣವಾಗಿ ಬ್ಯಾಂಕುಗಳ ಶಾಖೆಗಳಲ್ಲಿ ಹೆಚ್ಚಳ ಉಂಟಾಯಿತು.

1951 ರಲ್ಲಿ ಸುಮಾರು 40 ರಷ್ಟು ಇದ್ದ ವಾಣಿಜ್ಯ ಬ್ಯಾಂಕುಗಳ ಶಾಖೆಗಳು 1966 ರಲ್ಲಿ 54 ಕ್ಕೆ ಏರಿ ಜೂನ್ 1969 ರಲ್ಲಿ 59 ಕ್ಕೆ ತಲುಪಿದವು. ರಾಷ್ಟ್ರೀಕರಣ ಪೂರ್ವದಲ್ಲಿ ಬ್ಯಾಂಕು ಶಾಖೆಗಳ ಹೆಚ್ಚಳ ಗಮನಾರ್ಹವಾಗಿರಲಿಲ್ಲ. ಬ್ಯಾಂಕಿಂಗ್ ಉದ್ಯಮ ಕೇವಲ

ಆಯ್ದ ಹಲವಾರು ವಾಣಿಜ್ಯ ಕೈಗಾರಿಕಾ ಕೇಂದ್ರಗಳಿಗೆ ಸೀಮಿತವಾಗಿತ್ತು. ರಾಷ್ಟ್ರೀಕರಣದ ಸಮಯದಲ್ಲಿ ಜಿಲ್ಲೆಯಲ್ಲಿದ್ದ ಒಟ್ಟು 59 ವಾಣಿಜ್ಯ ಬ್ಯಾಂಕ್ ಶಾಖೆಗಳ ಪೈಕಿ, ಕೇವಲ ಆರು ಶಾಖೆಗಳು ಗ್ರಾಮೀಣ ಪ್ರದೇಶಗಳಲ್ಲಿ, 24 ಅರೆನಗರ ಮತ್ತು 29 ನಗರ ಪ್ರದೇಶಗಳಲ್ಲಿ ಸೇವೆ ಸಲ್ಲಿಸುತ್ತಿದ್ದವು. 1966 ರ ಕೊನೆಯಲ್ಲಿ ಇದ್ದಂತೆ ಈ ಜಿಲ್ಲೆಯಲ್ಲಿ ವಾಣಿಜ್ಯ ಬ್ಯಾಂಕುಗಳ ಒಟ್ಟು ಠೇವಣಿ 12.64 ಕೋಟಿ ರೂ. ಆಗಿದ್ದರೆ, ಅವುಗಳು ನೀಡಿದ್ದ ಸಾಲ ಮುಂಗಡಗಳು 3.97 ಕೋಟಿ ರೂ. ಆಗಿತ್ತು. 1967 ಮತ್ತು 1968 ರಲ್ಲಿದ್ದ ಒಟ್ಟು ಠೇವಣಿಗಳ ಮೊತ್ತ 13.23 ಕೋಟಿ ಮತ್ತು 14.56 ಕೋಟಿ ರೂ. ಆಗಿದ್ದರೆ, ನೀಡಿದ್ದ ಸಾಲ ಮುಂಗಡಗಳ ಮೊತ್ತ 4.14 ಕೋಟಿ ಮತ್ತು 4.49 ಕೋಟಿ ರೂ. ಆಗಿತ್ತು.

**ರಾಷ್ಟ್ರೀಕರಣದ ನಂತರ:** ಜುಲೈ 19, 1969 ರಂದು ಪ್ರಥಮ ಬಾರಿಗೆ ದೇಶದ 14 ಪ್ರಮುಖ ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸುವ ಮೂಲಕ ದೇಶದ ಬ್ಯಾಂಕಿಂಗ್ ಇತಿಹಾಸದ ಹೊಸ ಅಧ್ಯಾಯವೇ ಪ್ರಾರಂಭವಾಯಿತು. ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳಿಗೆ ಪೂರಕವಾಗುವಂತೆ ಮತ್ತು ಸಮಾಜದ ದುರ್ಬಲ ವರ್ಗಗಳಿಗೆ ಆರ್ಥಿಕ, ಸಾಮಾಜಿಕ ನ್ಯಾಯವನ್ನು ಒದಗಿಸುವಲ್ಲಿ ಸಹಕಾರಿಯಾಗುವಂತೆ ಈ ಹಣಕಾಸು ಸಂಸ್ಥೆಗಳನ್ನು ಸದುಪಯೋಗಿಸಿಕೊಳ್ಳುವಲ್ಲಿ ಸರ್ಕಾರವು ಸಮರ್ಥವಾಯಿತು. ಸಾರ್ವಜನಿಕ ಬ್ಯಾಂಕಿಂಗ್ ಕಂಪನಿಗಳು ಸರ್ಕಾರಿ ಒಡೆತನದ ಸಂಸ್ಥೆಗಳಾದವು. ರಾಷ್ಟ್ರೀಕರಣದಿಂದ, ಇದುವರೆಗೆ ಬ್ಯಾಂಕಿಂಗ್ ಸೇವೆಗಳಿಗೆ ವಂಚಿತರಾಗಿದ್ದ ಜನ ಸಮೂದಾಯದ ಆರ್ಥಿಕ ಚಟುವಟಿಕೆಗಳನ್ನು ಗುರ್ತಿಸಿ ಆದ್ಯತೆಯ ಮೇರೆಗೆ ಸುಲಭ ಸಾಲ ಸೌಲಭ್ಯಗಳನ್ನು ಪಡೆಯುವಂತಾಗಿ ಅಭಿವೃದ್ಧಿಯ ಮುಖ್ಯ ವಾಹಿನಿಯೊಂದಿಗೆ ಪ್ರವಹಿಸುವಂತೆ ಆಯಿತು. ಈ ಹೊಸ ಧೋರಣೆಯಿಂದ ಇದುವರೆಗೆ ಬ್ಯಾಂಕಿಂಗ್ ಸೇವೆಗಳಿಂದ ಸಂಪೂರ್ಣ ಅಥವಾ ಭಾಗಶಃ ವಂಚಿತರಾಗಿದ್ದ ಗ್ರಾಮೀಣ ಪ್ರದೇಶಗಳು, ಗ್ರಾಮೀಣ ಕಡುಬಡವರು, ಆರ್ಥಿಕ ದುರ್ಬಲ ವರ್ಗದವರು, ಪರಿಶಿಷ್ಟ ಜಾತಿ, ಪಂಗಡ, ಮುಂತಾದವರು ಬ್ಯಾಂಕುಗಳ ಸೇವೆಯ ಲಾಭ ಪಡೆಯುವಲ್ಲಿ ಸಮರ್ಥರಾದರು. ಇದುವರೆಗೆ ಕೇವಲ ನಿರ್ದಿಷ್ಟ ವರ್ಗಕ್ಕೆ ('ಕ್ಲಾಸ್') ಸೀಮಿತವಾಗಿದ್ದ ಬ್ಯಾಂಕಿಂಗ್ ಸೇವೆಗಳು ವ್ಯಾಪಕ ವರ್ಗಕ್ಕೆ ("ಮಾಸ್") ಲಭ್ಯವಾಗುವಂತೆ ಸರ್ಕಾರವು ತನ್ನ ಧೋರಣೆಗಳನ್ನು ರೂಪಿಸಿಕೊಂಡಿತು. ಗ್ರಾಮೀಣ ಪ್ರದೇಶಗಳಲ್ಲಿ ಕೆಳಹಂತದಲ್ಲಿ ಆರ್ಥಿಕ-ಸಾಮಾಜಿಕ ಬದಲಾವಣೆಗಳನ್ನು ತರಲು ಸಹಾಯಕವಾಗುವಂತೆ ಸುಲಭ ಸಾಲದ ಹಲವಾರು ಯೋಜನೆಗಳನ್ನು ಸರ್ಕಾರವು ಅನುಷ್ಠಾನಗೊಳಿಸಿತಲ್ಲದೇ ರಾಷ್ಟ್ರೀಕೃತ ಬ್ಯಾಂಕುಗಳು ಈ ಗುರಿಗಳನ್ನು ಸಾಧಿಸಲು ಕಡ್ಡಾಯ ಮಾಡಲಾಯಿತು. ಅನೇಕ ಸಂದರ್ಭಗಳಲ್ಲಿ ಇಂತಹ ಅತೀ ಉದಾರ ಸಾಲ ನೀತಿಯ ದುರುಪಯೋಗ ಆದ ಉದಾಹರಣೆಗಳೂ ಉಂಟು.

ರಾಷ್ಟ್ರೀಕರಣದ ನಂತರದ ದಶಕಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅಳವಡಿಸಲಾದ ತೀವ್ರತರ ಬದಲಾವಣೆಗಳು; ಹೊಸ ಆಯಾಮಗಳು, ಬದ್ಧತೆಗಳು, ಸಾಲ ಮುಂಗಡಗಳಲ್ಲಿನ ಸಾಮಾಜಿಕ ಕಳಕಳಿ ಅಂದರೆ ಮಾರ್ಗದರ್ಶಿ ಬ್ಯಾಂಕ್ ಯೋಜನೆ (1969), ಆದ್ಯತಾ ವಲಯದ ಸಾಲ, ವ್ಯತ್ಯಸ್ತ ಬಡ್ಡಿ ಸಾಲ, ಗ್ರಾಮೀಣ ಬ್ಯಾಂಕುಗಳ ಸ್ಥಾಪನೆ (1976),ಸಾಮಾಜಿಕ ಬ್ಯಾಂಕಿಂಗ್, ಅಂತ್ಯೋದಯ, ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ, ಮುಂತಾದವುಗಳು ಮತ್ತು 1980 ರಲ್ಲಿ ಉಂಟಾದ ಎರಡನೇಯ ರಾಷ್ಟ್ರೀಕರಣ, ಇವುಗಳು ಬ್ಯಾಂಕಿಂಗ್ ಸೇವೆಯು ಮತ್ತಷ್ಟು ವಿಸ್ತೃತಗೊಳ್ಳಲು ಸಹಾಯಕವಾದವು.

ರಾಷ್ಟ್ರೀಕರಣದ ಮೊದಲನೆಯ ದಶಕದಲ್ಲಿ ನಿರೀಕ್ಷಿಸಿದಂತೆ ಜಿಲ್ಲೆಯಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸಲಾಯಿತು. 1969 ರಲ್ಲಿ ಇದ್ದ 63 ವಿವಿಧ ಬ್ಯಾಂಕು ಶಾಖೆಗಳ ಸಂಖ್ಯೆ 1975 ರಲ್ಲಿ 124 ಕ್ಕೆ ಹೆಚ್ಚಳಗೊಂಡವು. ಅದರಂತೆ ಠೇವಣಿಗಳು 15.85 ಕೋಟಿ ರೂ. ಇಂದ 39.78 ಕೋಟಿ ರೂ.ಗೆ ಹೆಚ್ಚಳಗೊಂಡವು (ಶೇ. 185 ಹೆಚ್ಚಳ). ಅದಕ್ಕನುಗುಣವಾಗಿ ಸಾಲ ಮುಂಗಡಗಳೂ ಸಹ 6.41 ಕೋಟಿ ರೂಪಾಯಿ ಇಂದ 22.76 ಕೋಟಿಗೆ ವೃದ್ಧಿಗೊಂಡವು (ಶೇ. 218 ರ ಹೆಚ್ಚಳ). ಸಾಲ-ಠೇವಣಿಗಳ ನಿಷ್ಪತ್ತಿ (ಸಿ.ಡಿ.ಆರ್.) ಪ್ರಮಾಣ ಶೇ. 57 ರಷ್ಟು ಹೆಚ್ಚಳ ಕಂಡಿತು. ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಈ ಪ್ರಮಾಣ ಅನುಕ್ರಮವಾಗಿ ಶೇ. 91 ಮತ್ತು 60 ಎಂದು ತಿಳಿದು ಬರುವುದು. ಒಟ್ಟು ಸಾಲದಲ್ಲಿ ಆದ್ಯತಾ ವಲಯದ ಸಾಲದ ಪ್ರಮಾಣ ಶೇ. 50 ರಷ್ಟಿತ್ತು. ರಾಷ್ಟ್ರೀಕರಣದ ಪೂರ್ವದಲ್ಲಿ ಈ ಜಿಲ್ಲೆಯಲ್ಲಿ ಸರಾಸರಿ 40,000 ಜನಸಂಖ್ಯೆಗೆ ಒಂದರಂತೆ ವಾಣಿಜ್ಯ ಬ್ಯಾಂಕ್ ಶಾಖೆಗಳು ಕಾರ್ಯನಿರ್ವಹಿಸುತ್ತಿದ್ದವು. ರಾಷ್ಟ್ರಮಟ್ಟದಲ್ಲಿ ಈ ಪ್ರಮಾಣ 69,000 ಆಗಿತ್ತು. ರಾಷ್ಟ್ರೀಕರಣದ ಮೊದಲನೇಯ ದಶಕದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಬ್ಯಾಂಕ್ ಶಾಖೆಗಳನ್ನು ತೆರೆಯಲು ಹೆಚ್ಚು ಒತ್ತು ಕೊಟ್ಟರೂ ಗ್ರಾಮೀಣ ಮತ್ತು ನಗರ ಪ್ರದೇಶಗಳ ಬ್ಯಾಂಕಿಂಗ್ ಸೇವೆಗಳ ಅಸಮಾನತೆ ಕಡಿಮೆ ಆಗಲಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ 1975 ರಲ್ಲಿ ಸರಾಸರಿ 40,000 ಜನ ಸಂಖ್ಯೆಗೆ ಒಂದರಂತೆ ಬ್ಯಾಂಕ್ ಶಾಖೆ ಕಾರ್ಯನಿರ್ವಹಿಸಿದರೆ,

ನಗರ ಪ್ರದೇಶಗಳಲ್ಲಿ ಈ ಪ್ರಮಾಣ 8,000 ಇತ್ತು. ಮುಂದಿನ ವರ್ಷಗಳಲ್ಲಿ ಈ ಅಸಮಾನತೆಯನ್ನು ಮಲಪ್ರಭಾ ಗ್ರಾಮೀಣ ಬ್ಯಾಂಕನ್ನು 1976 ರಲ್ಲಿ ಪ್ರಾರಂಭಿಸುವ ಮೂಲಕ ಕಡಿಮೆ ಮಾಡಲಾಯಿತು. ಬ್ಯಾಂಕ್ ಶಾಖೆಗಳ ಹೆಚ್ಚಳದಿಂದ ಈ ಜಿಲ್ಲೆಯಲ್ಲಿ 1975-76 ಸುಮಾರಿಗೆ ಸರಾಸರಿ 17,000 ಜನಸಂಖ್ಯೆಗೆ ಒಂದರಂತೆ ಬ್ಯಾಂಕಿಂಗ್ ಸೇವೆಯ ವಿಸ್ತರಣೆಯಾಯಿತು. ರಾಜ್ಯಮಟ್ಟದಲ್ಲಿ ಈ ಜನಸಂಖ್ಯೆಯ ಪ್ರಮಾಣ 20,000 ಇದ್ದರೆ ರಾಷ್ಟ್ರಮಟ್ಟದಲ್ಲಿ ಪ್ರತೀ 29,000 ಜನಸಂಖ್ಯೆಗೆ ಒಂದರಂತೆ ಬ್ಯಾಂಕ್ ಶಾಖೆಗಳು ಕೆಲಸ ಮಾಡುತ್ತಿದ್ದವು. ಆದರೆ ರಾಷ್ಟ್ರ ಮತ್ತು ರಾಜ್ಯಮಟ್ಟದ ಬ್ಯಾಂಕಿಂಗ್ ಸೇವೆಗಳ ಲಭ್ಯತೆಯನ್ನು ಗಮನಿಸಿದಲ್ಲಿ ಈ ಜಿಲ್ಲೆಯು ಉತ್ತಮವಾದ ಬ್ಯಾಂಕಿಂಗ್ ಸೇವೆಗಳನ್ನು ಹೊಂದಿದ್ದ ಜಿಲ್ಲೆಯಾಗಿತ್ತು. 1975 ರಲ್ಲಿ ಈ ಜಿಲ್ಲೆಯಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್ ಅತೀ ಹೆಚ್ಚು (19) ಶಾಖೆಗಳನ್ನು ಹೊಂದಿದ್ದರೆ, ಜಿಲ್ಲೆಯ ಆಗಿನ ಮಾರ್ಗದರ್ಶಿ ಬ್ಯಾಂಕ್ ಆಗಿದ್ದ ಸಿಂಡಿಕೇಟ್ ಬ್ಯಾಂಕ್ 18 ಶಾಖೆಗಳನ್ನು ಹೊಂದಿತ್ತು.

**ಕೋಷ್ಟಕ 6.1: ಈ ಕೆಳಗಿನ ಕೋಷ್ಟಕದಲ್ಲಿ 1975 ಜೂನ್‌ನಲ್ಲಿ ಇದ್ದಂತೆ ವಿವಿಧ ಅಂಶಗಳನ್ನೊಳಗೊಂಡ ಜಿಲ್ಲೆಯ ವಾಣಿಜ್ಯ ಬ್ಯಾಂಕುಗಳ ಪ್ರಗತಿಯ ಚಿತ್ರಣವನ್ನು ರಾಜ್ಯ ಮತ್ತು ರಾಷ್ಟ್ರದ ಅಂಕಿ ಅಂಶಗಳ ತುಲನಾತ್ಮಕ ಹೋಲಿಕೆಯೊಂದಿಗೆ ನೀಡಲಾಗಿದೆ.**

| | ಧಾರವಾಡ | ಕರ್ನಾಟಕ * | ಭಾರತ** |
|---|---|---|---|
| ಠೇವಣಿಗಳು (ಲಕ್ಷ ರೂ.) | 3,977 | 52,887 | 11,44,000 |
| ಸಾಲ ಮುಂಗಡಗಳು (ಲಕ್ಷ ರೂ.) | 2,276 | 47,952 | 7,91,400 |
| ಸಾಲ-ಠೇವಣಿ ನಿಷ್ಪತ್ತಿ (ಶೇ.) | 57 | 91 | 69 |
| ಬ್ಯಾಂಕ್ ಶಾಖೆಗಳು (ಸಂಖ್ಯೆ) | 123 | 1,620 | 18,180 |
| ಪ್ರತೀ ಶಾಖೆಯ ಸರಾಸರಿ ಜನಸಂಖ್ಯೆ (ಸಾವಿರದಲ್ಲಿ) | 19 | 18 | 30 |
| ಪ್ರತೀ ಶಾಖೆಯ ಸರಾಸರಿ ಠೇವಣಿ (ಲಕ್ಷ ರೂ.) | 32 | 33 | 63 |
| ಪ್ರತೀ ಶಾಖೆಯ ಸರಾಸರಿ ಸಾಲ ಮುಂಗಡಗಳು (ಲಕ್ಷ ರೂ.) | 19 | 30 | 44 |
| ತಲಾವಾರು ಠೇವಣಿ (ರೂ.) | 166 | 181 | 209 |
| ತಲಾವಾರು ಸಾಲ-ಮುಂಗಡ (ರೂ) | 95 | 164 | 144 |
| ಬ್ಯಾಂಕಿಂಗ್ ಕಂಪನಿಗಳ ಸಂಖ್ಯೆ | 20 | 32 | 83 |

* ಜೂನ್ 1974 ರಲ್ಲಿದ್ದಂತೆ    ** ಡಿಸೆಂಬರ್ 1974 ರಲ್ಲಿದ್ದಂತೆ

ಡಿಸೆಂಬರ್ 1975 ರ ಕೊನೆಯಲ್ಲಿ, ಜಿಲ್ಲೆಯಲ್ಲಿನ ಬ್ಯಾಂಕ್ ಶಾಖೆಗಳ ಸಂಖ್ಯೆ 135 ಕ್ಕೆ ವೃದ್ಧಿಗೊಂಡಿತು. ಆ ಪೈಕಿ 40 ಗ್ರಾಮೀಣ ಶಾಖೆಗಳು, 48 ಅರೆ-ನಗರ ಶಾಖೆಗಳು ಹಾಗೂ 47 ನಗರ ಶಾಖೆಗಳಾಗಿದ್ದವು. ಜಿಲ್ಲೆಯಲ್ಲಿನ ಬ್ಯಾಂಕಿಂಗ್ ಸೇವೆಗಳು ಕೇವಲ ಹುಬ್ಬಳ್ಳಿ-ಧಾರವಾಡ ಮತ್ತು ಗದಗ ತಾಲೂಕುಗಳಿಗೆ ಕೇಂದ್ರೀಕೃತವಾಗಿದ್ದವು (ಒಟ್ಟು ಬ್ಯಾಂಕಿಂಗ್ ವ್ಯವಹಾರದಲ್ಲಿ ಶೇ. 60 ರಷ್ಟು). ಮುಂದಿನ ವರ್ಷಗಳಲ್ಲಿ ಮಾರ್ಗದರ್ಶಿ ಬ್ಯಾಂಕಿನ ಸಮೀಕ್ಷೆಯಂತೆ ಹೊಸ 'ಅಭಿವೃದ್ಧಿ' ಕೇಂದ್ರಗಳನ್ನು ಗುರುತಿಸಿ ಅಲ್ಲಿ ಹೊಸದಾಗಿ ಶಾಖೆಗಳನ್ನು ತೆರೆಯಲಾಯಿತು. ಜಿಲ್ಲೆಯಲ್ಲಿ 1975 ರಲ್ಲಿ 13 ಸಾರ್ವಜನಿಕ ವಲಯದ ಮತ್ತು ಏಳು ಖಾಸಗಿ ವಲಯದ ಬ್ಯಾಂಕಿಂಗ್ ಕಂಪನಿಗಳು ಕಾರ್ಯ ನಿರ್ವಹಿಸುತ್ತಿದ್ದವು. ಮುಂದಿನ ಏಳು ವರ್ಷಗಳ ನಂತರ 1982 ರ ಕೊನೆಯಲ್ಲಿ ಇದ್ದಂತೆ ಜಿಲ್ಲೆಯಲ್ಲಿನ ಶಾಖೆಗಳ ಸಂಖ್ಯೆ ಗ್ರಾಮೀಣ ಬ್ಯಾಂಕಿನ ಶಾಖೆಗಳೂ ಸೇರಿದಂತೆ 322 ಕ್ಕೆ ಹೆಚ್ಚಳಗೊಂಡಿತ್ತು. ಅಲ್ಲದೇ ಈ ಮೇಲಿನ ಏಳು ವರ್ಷಗಳ ಅವಧಿಯಲ್ಲಿ ಹೊರರಾಜ್ಯದ ಹಲವಾರು ಹೊಸ ಬ್ಯಾಂಕಿಂಗ್ ಕಂಪನಿಗಳು ಜಿಲ್ಲೆಯ ಬ್ಯಾಂಕಿಂಗ್ ವ್ಯವಹಾರದಲ್ಲಿ

ಪಾದಾರ್ಪಣ ಮಾಡಿದವು. 1970-1980 ರ ದಶಕದಲ್ಲಿ ಬ್ಯಾಂಕ್ ಆಫ್ ಇಂಡಿಯಾ (ಮದ್ರಾಸು), ಯುನಿಯನ್ ಬ್ಯಾಂಕ್ ಆಫ್ ಇಂಡಿಯ (ಮುಂಬೈ), ಬ್ಯಾಂಕ್ ಆಫ್ ಬರೋಡ (ಗುಜರಾತ್), ಇಂಡಿಯನ್ ಬ್ಯಾಂಕ್ (ಮದ್ರಾಸ್), ಆಂಧ್ರ ಬ್ಯಾಂಕ್ (ಸಿಕಂದರಾಬಾದ್) ಮುಂತಾದವುಗಳು ಜಿಲ್ಲೆಯ ಬ್ಯಾಂಕಿಂಗ್ ವ್ಯವಹಾರದಲ್ಲಿ ಸೇರ್ಪಡೆಯಾದವು. ಅನೇಕ ಬ್ಯಾಂಕುಗಳು ತಮ್ಮ ವಿಭಾಗೀಯ\ಪ್ರಾದೇಶಿಕ ಕಛೇರಿಯನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸುವ ಮೂಲಕ ಅವುಗಳ ಆಡಳಿತದಲ್ಲಿ ವಿಕೇಂದ್ರೀಕರಣ ಸಾಧಿಸಲಾಯಿತು.

ಉತ್ತರ ಕರ್ನಾಟಕದ ಹತ್ತು ಜಿಲ್ಲೆಗಳನ್ನು ಮತ್ತು ಮಹಾರಾಷ್ಟ್ರ, ಗೋವಾ ಹಾಗೂ ಆಂಧ್ರದ ಕರ್ನೂಲ್ ಜಿಲ್ಲೆಯನ್ನೊಳಗೊಂಡಂತೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ವಲಯ (ಝೋನಲ್) ಕಛೇರಿಯು ಹುಬ್ಬಳ್ಳಿಯಲ್ಲಿರುವುದು. 1982 ರ ಕೊನೆಯಲ್ಲಿ ಜಿಲ್ಲೆಯಲ್ಲಿ ಕರ್ನಾಟಕ ಮೂಲದ ಏಳು ಕಂಪನಿಗಳು ಸೇರಿದಂತೆ ಒಟ್ಟು 25 ಕಂಪನಿಗಳು ಬ್ಯಾಂಕಿಂಗ್ ವ್ಯವಹಾರದಲ್ಲಿ ತೊಡಗಿದ್ದವು. 1982 ರಲ್ಲಿ ಮಲಪ್ರಭಾ ಗ್ರಾಮೀಣ ಬ್ಯಾಂಕ್ ಅತಿ ಹೆಚ್ಚಿನ ಸಂಖ್ಯೆಯಲ್ಲಿ 66 ಶಾಖೆಗಳನ್ನು ಹೊಂದಿದ್ದರೆ, ವಿಜಯಾ ಬ್ಯಾಂಕ್ (23), ಸಿಂಡಿಕೇಟ್ ಬ್ಯಾಂಕ್ (21), ಭಾರತೀಯ ಸ್ಟೇಟ್ ಬ್ಯಾಂಕ್ (20), ಕೆನರಾ ಬ್ಯಾಂಕ್ (20) ಶಾಖೆಗಳನ್ನು ಹೊಂದಿದ್ದವು. ರಾಷ್ಟ್ರೀಕರಣದ ನಂತರದ ಮೊದಲನೇಯ ದಶಕದಲ್ಲಿ ಮತ್ತು ತದನಂತರದ ವರ್ಷಗಳಲ್ಲಿ ಜಿಲ್ಲೆಯಲ್ಲಿ ಬ್ಯಾಂಕುಗಳ ಶಾಖೆಗಳು ತೀವ್ರ ಪ್ರಮಾಣದಲ್ಲಿ ಹೆಚ್ಚುತ್ತ ಹೋದವು, ಅದರಲ್ಲಿಯೂ ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಪಕವಾಗಿ ವಿಸ್ತರಣೆಯಾದದ್ದನ್ನು ಕಾಣಬಹುದು. ಜುಲೈ 1969 ರಲ್ಲಿ ಇದ್ದ 60 ಶಾಖೆಗಳ ಸಂಖ್ಯೆ 1979 ರಲ್ಲಿ 188 (ಶೇ. 300 ರಷ್ಟು) ಹೆಚ್ಚಳಗೊಂಡಿತ್ತು; 1981 ರಲ್ಲಿ 203 ಕ್ಕೆ ಏರಿತು. ಇದರಿಂದ ಬ್ಯಾಂಕಿಂಗ್ ಸೇವೆಗಳಲ್ಲಿ ಸುಧಾರಣೆ ಉಂಟಾಗಿ 1981 ರಲ್ಲಿ ಸರಾಸರಿ 14,000 (13,000) ಜನಸಂಖ್ಯೆಗೆ ಒಂದರಂತೆ ಬ್ಯಾಂಕುಗಳ ಸೇವೆ ಲಭ್ಯವಾಯಿತು. 1972 ರಲ್ಲಿ ಈ ಪ್ರಮಾಣ 26,000 (23,000) ಆಗಿತ್ತು. ಆವರಣದಲ್ಲಿನ ಅಂಕಿ ಅಂಶಗಳು ರಾಜ್ಯದ ಸರಾಸರಿಯನ್ನು ಸೂಚಿಸುತ್ತವೆ.

**ಕೋಷ್ಟಕ 6.2: ಈ ಕೆಳಗಿನ ತಖ್ತೆಯಲ್ಲಿ 1981-82 ರಲ್ಲಿದ್ದಂತೆ ಜಿಲ್ಲೆಯ ಬ್ಯಾಂಕಿಂಗ್ ಉದ್ಯಮದ ತುಲನಾತ್ಮಕ ಪ್ರಗತಿಯ ಚಿತ್ರವನ್ನು ಹಲವು ಪ್ರಮುಖ ಅಂಶಗಳೊಂದಿಗೆ ನೀಡಲಾಗಿದೆ.**

(ಕೋಟಿ ರೂಗಳಲ್ಲಿ)

| ಮುಖ್ಯ ಅಂಶಗಳು | ಡಿಸೆಂಬರ್ | | ಬೆಳವಣಿಗೆ |
|---|---|---|---|
| | 1982 | 1981 | (ಶೇ.ವಾರು) |
| ಎಲ್ಲಾ ಬ್ಯಾಂಕುಗಳು ಹೊಂದಿದ್ದ ಒಟ್ಟು ಠೇವಣಿ | 153.71 | 131.82 | +17.32 |
| ಎಲ್ಲಾ ಬ್ಯಾಂಕುಗಳು ನೀಡಿದ್ದ ಒಟ್ಟು ಸಾಲಗಳು | 91.88 | 82.63 | +11.19 |
| ಸಾಲ-ಠೇವಣಿ ನಿಷ್ಪತ್ತಿ (ಶೇ.) | 59.78 | 63.06 | -5.20 |
| ಆದ್ಯತಾ ವಲಯಕ್ಕೆ ನೀಡಿದ ಒಟ್ಟು ಸಾಲ | 55.45 | 50.74 | +9.28 |
| ಒಟ್ಟು ಸಾಲದಲ್ಲಿ ಆದ್ಯತಾ ವಲಯಕ್ಕೆ ಸಂದಾಯವಾದ ಸಾಲದ ಶೇ. ಪ್ರಮಾಣ | 60.35 | 61.40 | -1.71 |
| ಒಟ್ಟು ಸಾಲದ ಮೊತ್ತದಲ್ಲಿ ವ್ಯತ್ಯಸ್ತ ಬಡ್ಡೀ ದರದಲ್ಲಿ ನೀಡಿದ ಸಾಲದ ಶೇ. ಪ್ರಮಾಣ | 2.27 | 2.21 | +2.71 |
| ಪರಿಶಿಷ್ಟ ಜಾತಿ\ಪಂಗಡಕ್ಕೆ ಒದಗಿಸಿದ ಒಟ್ಟು ಸಾಲ | 0.68 | 0.67 | +1.49 |
| ಕಾರ್ಯ ನಿರ್ವಹಿಸುತ್ತಿರುವ ಬ್ಯಾಂಕ್ ಶಾಖೆಗಳು | 222 | 208 | +6.73 |

1992 ರ ಮಾರ್ಚ್ ಕೊನೆಯಲ್ಲಿ ಜಿಲ್ಲೆಯಲ್ಲಿ ಒಟ್ಟು 431 ವಿವಿಧ ಬ್ಯಾಂಕ್ ಶಾಖೆಗಳು ಕಾರ್ಯನಿರ್ವಹಿಸುತ್ತಿದ್ದವು. ಅವುಗಳ ಪ್ರದೇಶವಾರು ವಿಂಗಡನೆ ಈ ರೀತಿ ಇತ್ತು: ಗ್ರಾಮೀಣ- 218, ಅರೆ ನಗರ ಪ್ರದೇಶ- 93 ಮತ್ತು ನಗರ ಶಾಖೆಗಳು- 120. ಈ ಶಾಖೆಗಳಲ್ಲಿ 202 ವಾಣಿಜ್ಯ ಬ್ಯಾಂಕುಗಳ ಶಾಖೆಗಳು, 122 ಗ್ರಾಮೀಣ ಬ್ಯಾಂಕಿನ ಶಾಖೆಗಳು ಮತ್ತು 107 ಸಹಕಾರಿ ಬ್ಯಾಂಕುಗಳ ಶಾಖೆಗಳು ಸೇರಿದ್ದವು. 1993 ರ ಕೊನೆಯಲ್ಲಿ ಜಿಲ್ಲೆಯಲ್ಲಿ ವಾಣಿಜ್ಯ ಬ್ಯಾಂಕ್ ಶಾಖೆಗಳ ಸಂಖ್ಯೆ 328 ಕ್ಕೆ ಹೆಚ್ಚಳಗೊಂಡು, ಅವುಗಳಲ್ಲಿ

206 ವಾಣಿಜ್ಯ ಬ್ಯಾಂಕ್‌ಗಳ ಶಾಖೆ ಮತ್ತು 122 ಗ್ರಾಮೀಣ ಬ್ಯಾಂಕಿನ ಶಾಖೆ ಸೇರಿರುವವು. ಕಾರ್ಯ ನಿರ್ವಹಿಸುತ್ತಿದ್ದ ಬ್ಯಾಂಕುಗಳ ಸಂಖ್ಯೆ ಕರ್ನಾಟಕ ಮೂಲದ ಏಳು ಸೇರಿ 27 ಆಗಿತ್ತು. ಅವುಗಳಲ್ಲಿ 20 ಸರ್ಕಾರಿ ಸ್ವಾಮ್ಯದವುಗಳಾಗಿದ್ದರೆ ಉಳಿದ ಏಳು ಖಾಸಗಿ ವಲಯದ ಬ್ಯಾಂಕುಗಳಾಗಿದ್ದವು. ಭಾರತೀಯ ಸ್ಟೇಟ್ ಬ್ಯಾಂಕ್ ತನ್ನ 27 ಶಾಖೆಗಳ ಪೈಕಿ ಐದು ಪ್ರತ್ಯೇಕ ವ್ಯವಸಾಯ ಅಭಿವೃದ್ಧಿ ಶಾಖೆಗಳನ್ನು (ಎ.ಡಿ.ಬಿ.) (ಹಾವೇರಿ, ರಾಣೆಬೆನ್ನೂರು, ನರಗುಂದ, ನವಲಗುಂದ ಮತ್ತು ಶಿರಹಟ್ಟಿಗಳಲ್ಲಿ) ಹೊಂದಿರುವುದು. ಇದಲ್ಲದೇ ಹಾನಗಲ್, ಧಾರವಾಡ, ಹಿರೇಕೆರೂರು ಬ್ಯಾಂಕ್ ಶಾಖೆಗಳು ಪ್ರತ್ಯೇಕವಾದ ವ್ಯವಸಾಯ ವಿಭಾಗಗಳನ್ನು ಹೊಂದಿರುವುವು. ಕೈಗಾರಿಕೆಗಳಿಗೆ ಮೀಸಲಾದಂತೆ ಹುಬ್ಬಳ್ಳಿಯಲ್ಲಿ (ಗೋಕುಲ ಕೈಗಾರಿಕಾ ವಲಯ) ಮತ್ತು ಹುಬ್ಬಳ್ಳಿ, ಧಾರವಾಡ, ಗದಗಗಳಲ್ಲಿ ಪ್ರತ್ಯೇಕವಾದ ಸಣ್ಣ ಕೈಗಾರಿಕೆಗಳಿಗೆ ನೆರವು ನೀಡುವ ಬ್ಯಾಂಕ್ ಶಾಖೆಗಳನ್ನು ಹೊಂದಿರುವುದು. ಭಾರತೀಯ ಸ್ಟೇಟ್ ಬ್ಯಾಂಕಿನ ಹುಬ್ಬಳ್ಳಿ ಶಾಖೆಯು ವ್ಯವಹಾರದ ಪ್ರಮಾಣದಲ್ಲಿ (ಠೇವಣಿ ಮತ್ತು ಸಾಲ) ಜಿಲ್ಲೆಯಲ್ಲಿನ ಅತಿ ದೊಡ್ಡದೆಂದು ಹೇಳಲಾಗುವುದು. ಕರ್ನಾಟಕದ ಬ್ಯಾಂಕ್ ನೌಕರರ ತರಬೇತಿಯ ಅನುಕೂಲತೆಗಾಗಿ ಭಾರತೀಯ ಸ್ಟೇಟ್ ಬ್ಯಾಂಕ್ ಧಾರವಾಡದಲ್ಲಿ ತರಬೇತಿ ಕಾಲೇಜನ್ನು ಈ ಬ್ಯಾಂಕಿನ ವತಿಯಿಂದ ಕಟ್ಟಿಸಲಾಗುತ್ತಿದೆ. ಹುಬ್ಬಳ್ಳಿಯಲ್ಲಿ ಕೆನರಾ ಬ್ಯಾಂಕಿನ ಪ್ರತ್ಯೇಕವಾದ 'ಸರ್ವೀಸ್ ಬ್ರಾಂಚ್' ಇರುವುದು. ಗ್ರಾಮೀಣ ಅಭಿವೃದ್ಧಿ ಮತ್ತು ಸ್ವಯಂ ಉದ್ಯೋಗ ತರಬೇತಿ ಕೇಂದ್ರವನ್ನು ಕೆನರಾಬ್ಯಾಂಕ್ ಧಾರವಾಡದ ವಿದ್ಯಾಗಿರಿಯಲ್ಲಿ (ಜೆ.ಎಸ್.ಎಸ್. ಕಾಲೇಜ್) ಪ್ರಾರಂಭಿಸಿದೆ.

### ಮಾರ್ಗದರ್ಶಿ ಬ್ಯಾಂಕ್ ಮತ್ತು ಪತ್ತಿನ ಕ್ರಿಯಾಯೋಜನೆ (ಕ್ರೆಡಿಟ್‌ಪ್ಲಾನ್)

ಭಾರತೀಯ ರಿಸರ್ವ್‌ಬ್ಯಾಂಕ್ ವರದಿಯ ಅನ್ವಯ 1969 ರ ಕೊನೆಯಲ್ಲಿ ಜಾರಿಯಲ್ಲಿ ತರಲಾದ ಮಾರ್ಗದರ್ಶಿ ಬ್ಯಾಂಕ್ (ಲೀಡ್ ಬ್ಯಾಂಕ್) ಯೋಜನೆಯ ಮುಖ್ಯ ಉದ್ದೇಶವು ಆಯಾ ಪ್ರದೇಶಗಳ ಅಭಿವೃದ್ಧಿಗೆ ಪೂರಕವಾಗುವಂತೆ ಬ್ಯಾಂಕಿಂಗ್ ಸೇವೆಗಳ ಸಂಯೋಜನೆ ಮತ್ತು ಸ್ಥಳೀಕರಣ ಮಾಡುವುದಾಗಿತ್ತು. ಮಾರ್ಗದರ್ಶಿ ಬ್ಯಾಂಕ್ ಯೋಜನೆ ಅಳವಡಿಕೆಯ ನಂತರ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಇದುವರೆಗೆ ಕಂಡುಬಂದ ಬ್ಯಾಂಕಿಂಗ್ ಸೇವೆಗಳ ಅಸಮಾನತೆಯನ್ನು, ಅಸಮರ್ಪಕತೆಯನ್ನು ನಿವಾರಿಸುವಲ್ಲಿ ಇದು ಬಹುಮಟ್ಟಿಗೆ ಸಹಾಯಕವಾಗಿದೆ. ಈ ಯೋಜನೆಯನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಶಾಖಾ ಬ್ಯಾಂಕುಗಳಿಗೆ ಆಯ್ಕೆ ಮಾಡಿದ ಹಲವಾರು ಗ್ರಾಮಗಳ ಸಂಪೂರ್ಣ ಅಭಿವೃದ್ಧಿಗೆ 'ಸೇವಾ ಕ್ಷೇತ್ರ' ಎಂಬ ಯೋಜನೆಯನ್ನು ರೂಪಿಸಲಾಗಿದೆ. ಶಾಖಾವಾರು ಸಾಲ ಯೋಜನೆ ಮತ್ತು ಕ್ರಿಯಾ ಯೋಜನೆಯನ್ನು ತಯಾರಿಸಿ ಅದನ್ನು ಕಾರ್ಯರೂಪದಲ್ಲಿ ತರಲು ಪ್ರಯತ್ನಿಸಲಾಗುತ್ತಿದೆ.

ಪ್ರಾರಂಭದಿಂದ 1986 ರ ವರೆಗೆ ಸಿಂಡಿಕೇಟ್ ಬ್ಯಾಂಕ್ ಈ ಜಿಲ್ಲೆಯ ಮಾರ್ಗದರ್ಶಿ ಬ್ಯಾಂಕಾಗಿತ್ತು. 1986 ರಿಂದ ವಿಜಯ ಬ್ಯಾಂಕ್‌ಗೆ ಈ ಹೊಣೆಗಾರಿಕೆಯನ್ನು ವಹಿಸಿಕೊಡಲಾಗಿದೆ.

ಮಾರ್ಗದರ್ಶಿ ಬ್ಯಾಂಕಿನ ವರದಿಯಂತೆ ಜಿಲ್ಲೆಯ 1,332 ಗ್ರಾಮಗಳನ್ನು ಅವುಗಳ ಅಭಿವೃದ್ಧಿಗೆ ಸಹಾಯಕವಾಗುವಂತೆ 16 ವಿವಿಧ ಬ್ಯಾಂಕುಗಳಿಗೆ ವಹಿಸಿಕೊಡಲಾಗಿದೆ. ಆ ಪೈಕಿ, 1992 ರಲ್ಲಿ ಮಲಪ್ರಭಾ ಗ್ರಾಮೀಣ ಬ್ಯಾಂಕ್ ತನ್ನ 122 ಶಾಖೆಗಳ ಜಾಲದ ಮೂಲಕ 684 ಹಳ್ಳಿಗಳನ್ನು ವಹಿಸಿಕೊಂಡಿದೆ. ವಾಣಿಜ್ಯ ಬ್ಯಾಂಕುಗಳಲ್ಲಿ, ವಿಜಯ ಬ್ಯಾಂಕ್ 285, ಭಾರತೀಯ ಸ್ಟೇಟ್ ಬ್ಯಾಂಕ್ 236, ಕೆನರಾಬ್ಯಾಂಕ್ 222, ಸಿಂಡಿಕೇಟ್ ಬ್ಯಾಂಕ್ 187 ಗ್ರಾಮಗಳನ್ನು ವಹಿಸಿಕೊಂಡಿರುವವು. ಉಳಿದ ಹಳ್ಳಿಗಳನ್ನು ಇತರೇ 12 ಬ್ಯಾಂಕುಗಳಿಗೆ ವಹಿಸಿ ಕೊಡಲಾಗಿದೆ. ಮಾರ್ಗದರ್ಶಿ ಬ್ಯಾಂಕ್ ವರದಿ ತಿಳಿಸುವಂತೆ 1992 ಮಾರ್ಚ್ ಕೊನೆಯಲ್ಲಿ ಜಿಲ್ಲೆಯಲ್ಲಿ ಸಂಗ್ರಹವಾಗಿದ್ದ ಒಟ್ಟು ಬ್ಯಾಂಕ್ ಠೇವಣಿಗಳ ಮೊತ್ತ ರೂ. 642.02 ಕೋಟಿಗಳಾಗಿದ್ದರೆ, ನೀಡಿದ ಸಾಲ ಮುಂಗಡಗಳು ರೂ. 480.85 ಕೋಟಿ. ಠೇವಣಿ ಮತ್ತು ಸಾಲಗಳ ನಿಷ್ಪತ್ತಿ ಪ್ರಮಾಣ ಶೇ. 78.90. ಇದರಲ್ಲಿ ವಾಣಿಜ್ಯ ಬ್ಯಾಂಕುಗಳ ಪಾಲು ಶೇ. 58.43 ಆಗಿತ್ತು. ಒಟ್ಟು ಸಾಲದಲ್ಲಿ ಆದ್ಯತಾ ವಲಯಕ್ಕೆ ನೀಡಿದ ಸಾಲ ರೂ. 320.32 ಕೋಟಿ (ಶೇ. 66.6) ಅಂದರೆ ನಿಗದಿತ ಗುರಿ ಶೇ. 40ನ್ನು ಮೀರಿ ಸಾಧನೆಯನ್ನು ಮಾಡಲಾಗಿತ್ತು. ಆದ್ಯತಾ ವಲಯದ ಸಾಲದಲ್ಲಿ ರೂ. 123.45 ಕೋಟಿಯಷ್ಟು ಹಣವನ್ನು ದುರ್ಬಲ ವರ್ಗಗಳಿಗೆ (ಶೇ. 38.54) ನೀಡಲಾಗಿತ್ತು. ಅದರಂತೆ ವ್ಯವಸಾಯದ ವಲಯದಲ್ಲಿ ನೀಡಿದ ಒಟ್ಟು ಸಾಲ ರೂ. 202.67 ಕೋಟಿ (ಶೇ. 42.14 ). ಈ ವಲಯದಲ್ಲಿಯೂ ನಿಗದಿತ ಗುರಿ ಶೇ. 18 ನ್ನು ಮೀರಿ ಸಾಧನೆಯನ್ನು ಮಾಡಲಾಗಿತ್ತು. ವ್ಯತ್ಯಸ್ತ ಬಡ್ಡಿ ದರದ ಅನ್ವಯ ಆಯ್ದ ಫಲಾನುಭವಿಗಳಿಗೆ ನೀಡಿದ ಸಾಲ ಮತ್ತು ಪ.ಜಾತಿ\ಪ.ಪಂಗಡದವರಿಗೆ ನೀಡಿದ ಸಾಲದ ಮೊತ್ತಗಳು

**ಕೋಷ್ಟಕ 6.3: ಈ ಕೆಳಗಿನ ತಖ್ತೆಯಲ್ಲಿ 1993 ರ ಕೊನೆಯಲ್ಲಿದ್ದಂತೆ ಜಿಲ್ಲೆಯ ಬ್ಯಾಂಕಿಂಗ್ ಉದ್ಯಮದ (ಸಹಕಾರಿ ಬ್ಯಾಂಕುಗಳು ಸೇರಿದಂತೆ) ಪ್ರಮುಖ ವಿವಿಧ ಅಂಶಗಳನ್ನೊಳಗೊಂಡ ಪ್ರಗತಿ ಚಿತ್ರಣವನ್ನು ನೀಡಲಾಗಿದೆ.**

(ಲಕ್ಷ ರೂ.ಗಳಲ್ಲಿ)

| ಜಿಲ್ಲೆಯ ಬ್ಯಾಂಕುಗಳು | ಶಾಖೆಗಳ ಸಂಖ್ಯೆ | ಠೇವಣಿಗಳು | ಸಾಲ ಮುಂಗಡಗಳು | ಸಾಲ ಠೇವಣಿ ನಿಷ್ಪತ್ತಿ | ಆದ್ಯತಾರಂಗಕ್ಕೆ ಸಾಲ | ವ್ಯವಸಾಯ ಕ್ಷೇತ್ರಕ್ಕೆ ಸಾಲ | ಸಣ್ಣ ಕೈಗಾರಿಕಾ ವಲಯಕ್ಕೆ ಸಾಲ | ದುರ್ಬಲ ವರ್ಗಕ್ಕೆ ಸಾಲ | ಐ.ಆರ್.ಡಿ.ಪಿ. ಸಾಲ | ವ್ಯತ್ಯಸ್ತ ಬಡ್ಡಿಸಾಲ (ಡಿ.ಆರ್.ಐ.) | 20 ಅಂಶಗಳ ಅಡಿಯಲ್ಲಿ ಸಾಲ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1. ಆಂಧ್ರ ಬ್ಯಾಂಕ್ | 1 | 176.48 | 66.08 | 37.44 | 36.47 | 3.63 | 17.47 | 9.84 | - | 0.81 | 5.99 |
| 2. ಬ್ಯಾಂಕ್ ಆಫ್ ಇಂಡಿಯಾ | 2 | 857.23 | 498.11 | 58.10 | 155.48 | 52.48 | 56.76 | 50.97 | 4.95 | 2.20 | 34.76 |
| 3. ಬ್ಯಾಂಕ್ ಆಫ್ ಬರೋಡ | 2 | 713.53 | 749.30 | 105.01 | 195.21 | 72.30 | 61.04 | 138.45 | 4.30 | 0.17 | 141.70 |
| 4. ಬ್ಯಾಂಕ್ ಆಫ್ ಮಹಾರಾಷ್ಟ್ರ | 3 | 891.01 | 414.01 | 46.46 | 129.61 | 20.72 | 51.00 | 31.76 | 0.21 | 2.36 | 29.62 |
| 5. ಕೆನರಾ ಬ್ಯಾಂಕ್ | 23 | 9,602.01 | 4,227.88 | 44.01 | 2,655.45 | 1,548.53 | 534.92 | 675.34 | 116.49 | 53.27 | 773.83 |
| 6. ಕ್ಯಾಥಲಿಕ್ ಸಿರಿಯನ್ ಬ್ಯಾಂಕ್ | 1 | 90.46 | 59.00 | 65.22 | 17.30 | 0.32 | 11.82 | 0.05 | - | 0.05 | - |
| 7. ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ | 6 | 1,236.57 | 649.36 | 52.51 | 389.52 | 144.33 | 144.76 | 93.55 | 27.55 | 1.00 | 111.64 |
| 8. ಕಾರ್ಪೊರೇಶನ್ ಬ್ಯಾಂಕ್ | 11 | 5,692.70 | 2,184.47 | 38.37 | 861.91 | 385.99 | 103.06 | 49.97 | 37.15 | 10.73 | 224.95 |
| 9. ದೇನಾ ಬ್ಯಾಂಕ್ | 2 | 560.69 | 160.60 | 28.64 | 93.35 | 8.99 | 22.78 | 11.32 | 0.29 | 1.13 | 13.58 |
| 10. ಫೆಡರಲ್ ಬ್ಯಾಂಕ್ | 1 | 80.76 | 28.70 | 35.53 | 10.77 | - | 0.92 | - | - | 0.05 | - |
| 11. ಇಂಡಿಯನ್ ಬ್ಯಾಂಕ್ | 3 | 1,189.64 | 706.13 | 59.35 | 294.84 | 83.37 | 90.98 | 38.21 | 4.36 | 8.17 | 51.59 |
| 12. ಇಂಡಿಯನ್ ಓವರ್‌ಸೀಸ್ ಬ್ಯಾಂಕ್ | 4 | 966.25 | 390.58 | 40.42 | 176.38 | 110.75 | 27.40 | 29.22 | 5.89 | 0.47 | 55.23 |
| 13. ಕರ್ನಾಟಕ ಬ್ಯಾಂಕ್ | 16 | 4,213.70 | 1,283.96 | 30.47 | 386.59 | 127.74 | 137.84 | 35.23 | 21.03 | 4.65 | 75.64 |
| 14. ಲಕ್ಷ್ಮಿ ವಿಲಾಸ ಬ್ಯಾಂಕ್ | 2 | 323.78 | 115.76 | 35.75 | 49.61 | 0.07 | 43.97 | - | - | - | - |
| 15. ಪಂಜಾಬ ನ್ಯಾಶನಲ್ ಬ್ಯಾಂಕ್ | 2 | | | | | | | | | | |
| 16. ರತ್ನಾಕರ ಬ್ಯಾಂಕ್ | 2 | 360.18 | 102.16 | 28.36 | 22.39 | 0.11 | 13.37 | 0.02 | - | 0.02 | 1.31 |
| 17. ಸಾಂಗ್ಲೀ ಬ್ಯಾಂಕ್ | 3 | 864.48 | 316.83 | 36.64 | 57.29 | 16.01 | 20.78 | 1.96 | 0.80 | 0.64 | 3.80 |

| 1 | 2 | 3 | 4 | 5 | 6 | 7 | 8 | 9 | 10 | 11 | 12 |
|---|---|---|---|---|---|---|---|---|---|---|---|
| 18. ಭಾರತೀಯ ಸ್ಟೇಟ್ ಬ್ಯಾಂಕ್ | 27 | 14,481.46 | 9,316.77 | 64.33 | 5,666.64 | 2,734.54 | 2,153.54 | 1,932.99 | 62.12 | 19.91 | 10.12 |
| 19. ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ | 1 | 157.24 | 56.88 | 36.17 | 25.15 | 0.82 | 18.50 | 0.30 | - | - | - |
| 20. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು | 14 | 3,370.17 | 2,315.89 | 68.71 | 1,449.90 | 252.22 | 250.38 | 196.07 | 36.37 | 8.90 | 96.30 |
| 21. ಸಿಂಡಿಕೇಟ್ ಬ್ಯಾಂಕ್ | 26 | 9,495.24 | 4,044.19 | 42.59 | 2,041.64 | 1,200.87 | 432.10 | 389.31 | 130.35 | 22.45 | 891.06 |
| 22. ಯು.ಕೊ.ಬ್ಯಾಂಕ್ | 3 | 662.73 | 509.11 | 76.82 | 362.77 | 239.74 | 97.56 | 151.65 | 15.83 | 1.23 | 216.20 |
| 23. ಯುನಿಯನ್ ಬ್ಯಾಂಕ್ ಆಫ್‌ಇಂಡಿಯಾ | 11 | 2,516.35 | 1,348.61 | 53.59 | 981.27 | 490.28 | 352.75 | 173.73 | 39.46 | 4.36 | 261.71 |
| 24. ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ | 1 | 64.03 | 6.81 | 10.63 | 2.28 | 0.13 | 0.40 | 0.37 | - | - | - |
| 25. ಯುನೈಟೆಡ್ ವೆಸ್ಟರ್ನ್ ಬ್ಯಾಂಕ್ | 1 | 219.27 | 198.80 | 90.66 | 36.39 | 1.99 | 23.65 | - | - | - | - |
| 26. ವಿಜಯಾ ಬ್ಯಾಂಕ್ | 31 | 5,941.24 | 3,284.63 | 55.28 | 2,201.47 | 1,415.96 | 337.74 | 969.60 | 198.53 | 39.20 | 1,008.36 |
| 27. ವೈಶ್ಯ ಬ್ಯಾಂಕ್ | 7 | 3,484.00 | 772.00 | 22.15 | 304.26 | 103.89 | 88.27 | 31.82 | 9.81 | 1.26 | 48.06 |
| ಎಲ್ಲಾ ವಾಣಿಜ್ಯ ಬ್ಯಾಂಕುಗಳಿಗೆ ಸೇರಿದಂತೆ | 206 | 68,211.40 | 33,806.62 | 49.56 | 18,603.94 | 9,015.78 | 5,033.86 | 5,011.68 | 715.49 | 183.03 | 4,055.51 |
| 28. ಮಲಪ್ರಭಾ ಗ್ರಾಮೀಣ ಬ್ಯಾಂಕ್ | 122 | 6,055.93 | 8,707.09 | 143.77 | 7,654.72 | 5,938.72 | 284.69 | 6,229.29 | 906.64 | 5.88 | 3,890.51 |
| 29. ಕೆ.ಎಸ್.ಎಫ್.ಸಿ. | 3 | 88.57 | 6,043.88 | - | 6,043.88 | - | 5,263.49 | - | - | - | - |
| 30. ಕೆ.ಸಿ.ಸಿ. ಬ್ಯಾಂಕ್ | 84 | 7,926.44 | 7,963.65 | 100.47 | 7,963.65 | 7,231.64 | 196.69 | 159.27 | - | - | 175.20 |
| 31. ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ | 17 | - | 4,185.30 | - | 4,185.30 | 4,061.75 | 102.78 | 1,304.10 | 258.82 | - | 944.29 |
| 32. ಕರ್ನಾಟಕ ಕೈಗಾರಿಕಾ ಸಹಕಾರಿ ಬ್ಯಾಂಕ್ | 1 | - | - | - | - | - | - | - | - | - | - |
| ಎಲ್ಲಾ ಸಹಕಾರಿ ಬ್ಯಾಂಕುಗಳು ಸೇರಿದಂತೆ | 105 | 8,015.01 | 18,192.83 | - | 18,192.83 | 11,293.39 | 5,562.96 | 1,463.37 | 258.82 | - | 1,119.49 |
| ಒಟ್ಟು ಮೊತ್ತ | 433 | 82,282.34 | 60,706.54 | 73.78 | 44,451.49 | 26,247.89 | 10,881.51 | 12,704.34 | 1,880.95 | 188.91 | 9.065.51 |

ಆಧಾರ: ಮಾರ್ಗದರ್ಶಿ ಬ್ಯಾಂಕ್ ವರದಿ.

ಅನುಕ್ರಮವಾಗಿ ರೂ. 329.61 ಲಕ್ಷ ಮತ್ತು ರೂ. 1534.04 ಲಕ್ಷ ಎಂದು ತಿಳಿದು ಬರುವುದು. ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಯೋಜನೆ ಮತ್ತು 20 ಅಂಶಗಳ ಕಾರ್ಯಕ್ರಮದ ಅನ್ವಯ ವಿವಿಧ ಬ್ಯಾಂಕುಗಳು ಜಿಲ್ಲೆಯಲ್ಲಿ ನೀಡಿದ್ದ ಒಟ್ಟು ಸಾಲದ ಮೊತ್ತ ಅನುಕ್ರಮವಾಗಿ ರೂ. 6911.33 ಲಕ್ಷ ಮತ್ತು ರೂ. 9,422.97 ಎಂದು ತಿಳಿದು ಬರುವುದು.

**ಜಿಲ್ಲಾ ಪತ್ತಿನ ಯೋಜನೆ:** ಮಾರ್ಗದರ್ಶಿ ಬ್ಯಾಂಕಿನ ಕ್ರಿಯಾ ವರದಿ ತಿಳಿಸುವಂತೆ 1993-94ನೇ ಸಾಲಿಗೆ ಜಿಲ್ಲೆಯಾದ್ಯಂತ ವಿವಿಧ ಯೋಜನೆಗಳಿಗೆ (15) ಸುಮಾರು 145.91 ಕೋಟಿ ರೂ.ಗಳ ಬ್ಯಾಂಕ್ ಸಾಲ ನೀಡುವ ಯೋಜನೆಗಳನ್ನು ರೂಪಿಸಲಾಗಿತ್ತು. ಅದರ ಅನ್ವಯ ನೀಡಿದ ಒಟ್ಟು ಸಾಲ ರೂ. 164.88 ಕೋಟಿ ಅಂದರೆ ಶೇ. 112 ರಷ್ಟು ಗುರಿಯನ್ನು ಸಾಧಿಸಲಾಗಿತ್ತು. ಸಾಲದಲ್ಲಿ ಬಹುಪಾಲು ಆದ್ಯತಾವಲಯದ ಸಾಲವಾಗಿದ್ದು ಅದರಲ್ಲಿಯ ಸಾಧನೆ ಶೇ. 113 ಎಂದು ವರದಿಯಾಗಿದೆ. ಮುಂದಿನ ವರ್ಷ 1994-95ರಲ್ಲಿ ಜಿಲ್ಲಾ ಪತ್ತಿನ ಯೋಜನೆಯ ಅನ್ವಯ ರೂ. 179.99 ಕೋಟಿ ರೂ.ಗಳ ಸಾಲ ನೀಡುವ ಗುರಿಯನ್ನು ಹಾಕಿಕೊಳ್ಳಲಾಗಿತ್ತು.

**ಕೋಷ್ಟಕ 6.4: ಈ ಕೆಳಗಿನ ಕೋಷ್ಟಕದಲ್ಲಿ ಜಿಲ್ಲಾ ಪತ್ತಿನ ಯೋಜನೆ (ಡಿ.ಸಿ.ಪಿ.) 1993-94 ಮತ್ತು 1994-95ಇವುಗಳ ತುಲನಾತ್ಮಕ ವಿವರಣೆಯನ್ನು ನೀಡಲಾಗಿದೆ.**

(ಲಕ್ಷ ರೂ.ನಲ್ಲಿ)

| ವಲಯ | ಡಿ.ಸಿ.ಪಿ. 93-94 | ಡಿ.ಸಿ.ಪಿ. 94-95 | ಶೇಖಡಾವಾರು ವ್ಯತ್ಯಾಸ |
|---|---|---|---|
| ಸಣ್ಣ ನೀರಾವರಿ | 794 | 859 | +8.00 |
| ಭೂ ಅಭಿವೃದ್ಧಿ | 127 | 44 | -65.36 |
| ಕೃಷಿ ತಾಂತ್ರಿಕತೆ | 983 | 1,357 | +38.00 |
| ಪ್ಲಾಂಟೇಶನ್ ಮತ್ತು ತೋಟಗಾರಿಕೆ | 105 | 147 | +40.00 |
| ಹೈನುಗಾರಿಕೆ ಅಭಿವೃದ್ಧಿ | 513 | 446 | -13.07 |
| ಕೋಳಿ ಸಾಕಣೆ | 73 | 176 | +141.00 |
| ಇತರ ಪಶುಸಂಗೋಪನೆ | 64 | 75 | +17.18 |
| ಅರಣ್ಯಾಭಿವೃದ್ಧಿ/ಬಂಜರು ಭೂಮಿ ಅಭಿವೃದ್ಧಿ | 7 | 2 | -71.43 |
| ಸಂಬಂಧಿತ ಚಟುವಟಿಕೆಗಳು | 160 | 162 | +1.25 |
| ವ್ಯವಸಾಯೇತರ ಸಾಲ | 2,096 | 3,257 | +55.39 |
| ಇತರ ಆದ್ಯತಾ ವಲಯ ಸಾಲಗಳು | 2,296 | 2,907 | +26.61 |
| ಬೆಳೆ ಸಾಲ | 4,431 | 4,777 | +7.80 |
| (ಅ) ಒಟ್ಟು ಆದ್ಯತಾ ವಲಯ ಸಾಲಗಳು | 11,653 | 14,209 | +21.93 |
| (ಬ) ಆದ್ಯತಾ ವಲಯ ಹೊರತು ಪಡಿಸಿ ಇತರ ಒಟ್ಟು ಸಾಲಗಳು | 2,938 | 3,790 | +29.00 |
| ಒಟ್ಟು ಮೊತ್ತ (ಅ+ಬ) | 14,591 | 17.999 | +23.35 |

**ಗ್ರಾಮೀಣ ಬ್ಯಾಂಕುಗಳು:** ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಕಾನೂನು 1976ರ ಅನ್ವಯ, ಭಾರತ ಸರ್ಕಾರ, ಪ್ರವರ್ತಕ ಬ್ಯಾಂಕ್ ಮತ್ತು ರಾಜ್ಯ ಸರ್ಕಾರ ಇವುಗಳ ಸಹ ಭಾಗಿತ್ವ ಬಂಡವಾಳದೊಂದಿಗೆ ಈ ಹೊಸ ತಳಿಯ ಬ್ಯಾಂಕುಗಳನ್ನು ದೇಶಾದ್ಯಂತ 1975-76ರಲ್ಲಿ ಪ್ರಾಯೋಗಿಕವಾಗಿ ಪ್ರಾರಂಭಿಸಲಾಯಿತು. ಗ್ರಾಮೀಣ ಜನತೆಯ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಗೊಳಿಸಲು ಸಹಾಯಕವಾಗುವಂತಹ ಅಭಿವೃದ್ಧಿ ಪರ ಯೋಜನೆಗಳಿಗೆ ಆದ್ಯತೆಯ ಮೇಲೆ ಸಾಲ ಸೌಲಭ್ಯಗಳನ್ನು ಒದಗಿಸುವುದು. ಈ ಬ್ಯಾಂಕುಗಳ ಮುಖ್ಯ ಉದ್ದೇಶ. ಈ ಜಿಲ್ಲೆಯ ಜೀವ ನದಿಗಳಲ್ಲಿ ಒಂದಾದ ಮಲಪ್ರಭಾ (ಮಲಪಹಾರಿ) ಹೆಸರಿಂದ ಆಗಸ್ಟ್ 31, 1976ರಂದು ಈ ಬ್ಯಾಂಕನ್ನು ಪ್ರಾರಂಭಿಸಲಾಯಿತು. ನಮ್ಮ ರಾಜ್ಯದಲ್ಲಿ ಪ್ರಾರಂಭಿಸಿದ ಎರಡನೆಯ ಗ್ರಾಮೀಣ ಬ್ಯಾಂಕು ಇದಾಗಿದೆ. ಈ ಸಂಸ್ಥೆಯನ್ನು ಅಂದಿನ ಮಾರ್ಗದರ್ಶಿ ಬ್ಯಾಂಕ್ ಸಿಂಡಿಕೇಟ್ ಬ್ಯಾಂಕು ಪ್ರವರ್ತಿಸಿತು. ಬ್ಯಾಂಕಿನ ಕಾರ್ಯವ್ಯಾಪ್ತಿಯು ಪ್ರಾರಂಭದಿಂದಲೂ ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳನ್ನು ಒಳಗೊಂಡಿಸುವುದು. ಬ್ಯಾಂಕಿನ ಹಲವಾರು ಸಾಲ ಯೋಜನೆಗಳಲ್ಲಿ ನೀರಾವರಿಗೆ ಉತ್ತೇಜನ, ಕೃಷಿ ಉತ್ಪಾದನೆ, ತೋಟಗಾರಿಕೆ ಅಭಿವೃದ್ಧಿ, ಕ್ಷೀರಾಭಿವೃದ್ಧಿ, ಕೃಷಿಯಾಂತ್ರೀಕರಣ, ಪರಿಸರ ಸಂರಕ್ಷಣೆ ಹಾಗೂ ಇಂಧನ ಸಮಸ್ಯೆಗೆ ಪರಿಹಾರ, ಗ್ರಾಮೀಣ ಕೈಗಾರಿಕೆ, ನಿರುದ್ಯೋಗ ನಿವಾರಣೆ, ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ (ಐ.ಆರ್.ಡಿ.ಪಿ.), ಕೃಷಿ ವಿಸ್ತರಣಾ ಕಾರ್ಯಕ್ರಮಗಳು ಮುಂತಾದವುಗಳಿಗೆ ಆದ್ಯತೆಯ ಮೇಲೆ ಸಾಲ ಸೌಲಭ್ಯ ಒದಗಿಸಲಾಗುವುದು.

ಸಾಲದ ಮೊತ್ತಕ್ಕೆ ಅನುಗುಣವಾಗಿ ಬಡ್ಡಿಯ ದರ ಕನಿಷ್ಠ ಶೇ.11.5 ರಿಂದ ಗರಿಷ್ಠ 16.5 ರವರೆಗೆ ವಿಧಿಸಲಾಗುವುದು. ಈ ಜಿಲ್ಲೆಯಲ್ಲಿ ಗ್ರಾಮೀಣ ಬ್ಯಾಂಕಿನ ಎರಡು ಪ್ರಥಮ ಶಾಖೆಗಳನ್ನು 31.8.76 ರಂದು, ದುಂಡಸಿ (ಶಿಗ್ಗಾಂವಿ ತಾ.) ಮತ್ತು ಹಳ್ಳಿಹಾಳ (ಹುಬ್ಬಳ್ಳಿ ತಾ.) ಗಳಲ್ಲಿ ಪ್ರಾರಂಭಿಸಲಾಯಿತು. ಇಂದು (1994) ಜಿಲ್ಲೆಯಾದ್ಯಂತ ಒಟ್ಟು 122 ಶಾಖೆಗಳನ್ನು ಹೊಂದಿರುವದು. ಕರ್ನಾಟಕದ 13 ಗ್ರಾಮೀಣ ಬ್ಯಾಂಕುಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯ ಶಾಖೆಗಳನ್ನು ಹೊಂದಿದ ಹಿರಿಮೆ ಈ ಬ್ಯಾಂಕಿನದಾಗಿದೆ (ಬೆಳಗಾವಿ ಜಿಲ್ಲೆ ಸೇರಿದಂತೆ ಒಟ್ಟು ಶಾಖೆಗಳ ಸಂಖ್ಯೆ 208). ಬ್ಯಾಂಕಿನ ಹಲವಾರು ಸಾಧನೆಗಳಲ್ಲಿ ರಾಜ್ಯ ಸರ್ಕಾರದ ಒಂದನೂರು ಬಾವಿಗಳ ಯೋಜನೆಯ ಅನ್ವಯ ಇದುವರೆಗೆ 1893 ಫಲಾನುಭವಿಗಳಿಗೆ ರೂ. 343.35 ಲಕ್ಷದಷ್ಟು ಆರ್ಥಿಕ ನೆರವು ನೀಡುವ ಮೂಲಕ ಸುಮಾರು 8,000 ಎಕರೆ ಭೂಮಿಗೆ ನೀರಾವರಿ ಸೌಲಭ್ಯ ದೊರಕಿಸಿಕೊಡಲಾಗಿದೆ. ರಾಷ್ಟ್ರೀಯ ಯೋಜನೆಯಾದ "ಜೈವಿಕ ಅನಿಲ" ಯೋಜನೆಯ ಅನ್ವಯ 951 ಫಲಾನುಭವಿಗಳಿಗೆ ಗೊಬ್ಬರ ಅನಿಲ ಸ್ಥಾವರ ಸ್ಥಾಪನೆಗೆ ರೂ. 81.88 ಲಕ್ಷ ಸಾಲ ನೀಡಿ ಬದಲಿ ಇಂಧನದ ವ್ಯವಸ್ಥೆಯನ್ನು ಒದಗಿಸಲಾಗಿದೆ. ಹೊಗೆರಹಿತ ಹಳ್ಳಿಗಳನ್ನಾಗಿ ಮಾರ್ಪಡಿಸುವ ಕಾರ್ಯಕ್ರಮದ ಅನ್ವಯ ಬ್ಯಾಂಕು ಪ್ರಯೋಗಾತ್ಮಕವಾಗಿ ಕಲಘಟಗಿ ತಾಲೂಕಿನ ಬೊಮ್ಮಿಗಟ್ಟಿ ಮತ್ತು ತಾವರಗೇರಿ ಗ್ರಾಮಗಳಲ್ಲಿ 403 'ಅಸ್ತ್ರ' ಒಲೆಗಳನ್ನು ಪೂರೈಸಿದೆ. ಸುಮಾರು 150 ನಿರುದ್ಯೋಗಿ ಯುವಕರಿಗೆ "ಗ್ರಾಮೀಣ ಸಾರಿಗೆ" ಸುಧಾರಣಾ ಯೋಜನೆಯ ಅಡಿಯಲ್ಲಿ ಆರ್ಥಿಕ ನೆರವನ್ನು ನೀಡಿದೆ. ಬ್ಯಾಂಕಿನ ಸಾಲ ವಸೂಲಾತಿ ಪ್ರಮಾಣ 1990 ರಲ್ಲಿ ಶೇ. 22, 1991 ರಲ್ಲಿ ಶೇ. 54, ಮತ್ತು 1992 ರಲ್ಲಿ ಶೇ. 38 ಎಂದು ವರದಿಯಾಗಿದೆ. ಈ ಬ್ಯಾಂಕಿನ ಕೇಂದ್ರ ಕಛೇರಿ ಧಾರವಾಡದಲ್ಲಿ ಇರುವುದು.

**ಕೋಷ್ಟಕ 6.5 : ಈ ಕೆಳಗಿನ ತಖ್ತೆಯಲ್ಲಿ ಬ್ಯಾಂಕಿನ ಇತ್ತೀಚಿನ ಮೂರು ವರ್ಷಗಳ ವಿವಿಧ ಮುಖಗಳ ಪ್ರಗತಿಯ ಚಿತ್ರಣವನ್ನು ಕಾಣಬಹುದು.**

| ವಿವರಗಳು | ಮಾರ್ಚ್ | | |
|---|---|---|---|
| | 1990 | 1991 | 1992 |
| (1) ಗ್ರಾಮೀಣ ಬ್ಯಾಂಕಿನ ಶಾಖೆಗಳ ಸಂಖ್ಯೆ | 122 | 122 | 122 |
| (2) ಸೇವಾ ಕ್ಷೇತ್ರ ಯೋಜನೆ ಅಡಿಯಲ್ಲಿ ಅಳವಡಿಸಿಕೊಂಡ ಗ್ರಾಮಗಳ ಸಂಖ್ಯೆ | 771 | 684 | 684 |
| (3) ಸಿಬ್ಬಂದಿ ಸಂಖ್ಯೆ | 929 | 920 | 914 |
| (4) ಠೇವಣಿಗಳು (ಕೋಟಿ ರೂಗಳಲ್ಲಿ) | 32.10 | 35.83 | 48.43 |
| (5) ಸಾಲ ಮುಂಗಡಗಳು (ಕೋಟಿ ರೂಗಳಲ್ಲಿ) | | | |

| ವಿವರಗಳು | ಮಾರ್ಚ್ | | |
|---|---|---|---|
| | 1990 | 1991 | 1992 |
| (ಅ) ಒದಗಿಸಿದ ಸಾಲ | 17.98 | 12.04 | 18.07 |
| ಇದರಲ್ಲಿ ಆದ್ಯತಾವಲಯ ಸಾಲ | 12.36 | 5.85 | 11,93 |
| (ಬ) ಬಾಕಿ ಸಾಲ | 62.93 | 50.68 | 58.39 |
| ಇದರಲ್ಲಿ ಆದ್ಯತಾ ವಲಯ ಸಾಲ | 56.99 | 43.45 | 51.23 |
| (6) ಸಾಲ-ಠೇವಣಿ ನಿಷ್ಪತ್ತಿ (ಶೇ. ಪ್ರಮಾಣ) | 196.04 | 141.45 | 120.57 |
| (7) ಸರ್ಕಾರದ ವಿವಿಧ ಯೋಜನೆಯಡಿಯಲ್ಲಿ ಒದಗಿಸಿದ ಸಾಲಗಳು | | | |
| (ಅ) ಸಮಗ್ರ ಗ್ರಾಮೀಣ ಅಭಿವೃದ್ಧಿ | | | |
| (1) ಫಲಾನುಭವಿಗಳು | 3813 | 3211 | 2943 |
| (2) ವಿತರಿಸಲಾದ ಸಾಲ (ಲಕ್ಷ ರೂಗಳಲ್ಲಿ) | 166.38 | 131.43 | 128.54 |
| (ಆ) ನೂರು ಬಾವಿ ಯೋಜನೆ | | | |
| (1) ಫಲಾನುಭವಿಗಳು | 44 | 27 | 39 |
| (2) ವಿತರಿಸಲಾದ ಸಾಲ (ಲಕ್ಷ ರೂಗಳಲ್ಲಿ) | 9.15 | 8.26 | 7.77 |
| (ಇ) ಅಂತ್ಯೋದಯ | | | |
| (1) ಫಲಾನುಭವಿಗಳು | 36 | 12 | 21 |
| (2) ವಿತರಿಸಲಾದ ಸಾಲ (ಲಕ್ಷ ರೂ. ಗಳಲ್ಲಿ) | 1.58 | 0.52 | 0.60 |
| (ಈ) ಪ. ಜಾತಿ/ಪ.ಪಂಗಡ 'ಮಾರ್ಜಿನ್ ಮನಿ ಸ್ಕೀಮ್' | | | |
| (1) ಫಲಾನುಭವಿಗಳು | 363 | 229 | 159 |
| (2) ವಿತರಿಸಲಾದ ಸಾಲ (ಲಕ್ಷ ರೂಗಳಲ್ಲಿ) | 13.50 | 12.19 | 6.44 |
| (ಉ) ವ್ಯತ್ಯಸ್ತ ಬಡ್ಡಿ ದರ ಯೋಜನೆ | | | |
| (1) ಫಲಾನುಭವಿಗಳು | 32 | 38 | 131 |
| (2) ವಿತರಿಸಲಾದ ಸಾಲ (ಲಕ್ಷ ರೂಗಳಲ್ಲಿ) | 1.03 | 1.21 | 3.93 |

**ಆಶಾ ಕಿರಣ** : ಅಸಂಘಟಿತ ಶ್ರಮಿಕರು ಅನಿರೀಕ್ಷಿತ ಅಪಘಾತದಿಂದ ಸಂಕಷ್ಟಕ್ಕೆ ಒಳಗಾದಾಗ ಅವರಿಗೆ ಅಥವಾ ಅವರನ್ನು ಅವಲಂಬಿಸಿದ ಕುಟುಂಬದವರಿಗೆ ಆರ್ಥಿಕ ನೆರವು ಒದಗಿಸುವ 'ಆಶಾಕಿರಣ' ಎಂಬ ಹೆಸರಿನಿಂದ 1982 ರಲ್ಲಿ ಪ್ರಾರಂಭಿಸಲಾದ ಕರ್ನಾಟಕ ಸರ್ಕಾರದ ಈ ಯೋಜನೆಯು ದೇಶದಲ್ಲಿಯೇ ಮೊದಲನೆಯದು. ಬಡ ಕೃಷಿ ಕಾರ್ಮಿಕರು ಮತ್ತು ಯಾವುದೇ ಕಾರ್ಮಿಕ ಸಂಘಟನೆಗಳಲ್ಲಿ ಇರದ ಕೆಲಸಗಾರರಿಗೆ ಗುಂಪು ವಿಮೆಯ ಮೂಲಕ ಸಾಮಾಜಿಕ ಭದ್ರತೆಯನ್ನು ಸರ್ಕಾರವೇ ಒದಗಿಸುವ ಒಂದು ವಿಶಿಷ್ಟ ಯೋಜನೆ ಇದಾಗಿದ್ದು ಇದರ ಅನ್ವಯ, ಅಪಘಾತದ ಸ್ವರೂಪ ಮತ್ತು ತೀವ್ರತೆಯನ್ನು ಅನುಸರಿಸಿ ನೊಂದವರಿಗೆ ಆರ್ಥಿಕ ಪರಿಹಾರ ನೀಡಲಾಗುವುದು. ಈ ಯೋಜನೆಯ ಅನ್ವಯ 18 ರಿಂದ 60 ವರ್ಷದ ಒಳಗಿನ ವಾರ್ಷಿಕ ಆದಾಯ ರೂ. 7,200 ಮೀರದ, ನಿರ್ದಿಷ್ಟ ಉದ್ಯೋಗದಲ್ಲಿ ತೊಡಗಿರುವ, ಶ್ರಮ ಜೀವಿಗಳು ಮತ್ತು ಅವರ ಅವಲಂಬಿತರು ಆರ್ಥಿಕ ನೆರವು ಪಡೆಯಲು ಅರ್ಹರು. ಇತರ ಯಾವುದೇ ಮೂಲದಿಂದ ಪರಿಹಾರ ಪಡೆಯಲು ಅರ್ಹರಾದವರು ಆಶಾಕಿರಣ ಯೋಜನೆಯ ಅನ್ವಯ ಪರಿಹಾರ

ಪಡೆಯಲು ಅನರ್ಹರು. ಈ ಯೋಜನೆಯು ಅನ್ವಯವಾಗುವ ಶ್ರಮಜೀವಿಗಳು, ಕೃಷಿ ಕಾರ್ಮಿಕರು, ಬೆಸ್ತರು, ಬೀಡಿ ಕಾರ್ಮಿಕರು, ಹೆಂಡ ಇಳಿಸುವವರು, ಧೋಬಿಗಳು, ಮೋಚಿಗಳು, ಬಡಗಿಗಳು, ಗ್ರಾಮಾಂತರ ಕಮ್ಮಾರರು, ಅಕ್ಕಸಾಲಿಗರು, ಲೋಹ ಕೆತ್ತನೆಗಾರರು, ಪ್ರಾಣಿಗಳಿಂದ ಎಳೆಯಲ್ಪಡುವ ವಾಹನಗಳ ಚಾಲಕರು, ಸೈಕಲ್ ರಿಕ್ಷಾ ಎಳೆಯುವವರು, ಕ್ಷೌರಿಕರು, ರಸ್ತೆಯಲ್ಲಿ ಕೂಗಿಕೊಂಡು ಮಾರುವವರು, ಗಾರೆ ಕೆಲಸಗಾರರು, ಜೆಲ್ಲಿ ಒಡೆಯುವವರು, ಗುಡಿಸಲು ಕಟ್ಟುವವರು, ಬಾವಿ ತೋಡುವವರು, ಮುಂತಾದವರು.

ಯೋಜನೆಯ ವ್ಯಾಪ್ತಿಯಲ್ಲಿ ಬರುವ ಅಪಘಾತಗಳು ಯಾವುವೆಂದರೆ ರೈಲು ಮತ್ತು ರಸ್ತೆ ಅಪಘಾತ, ವಿದ್ಯುಚ್ಛಕ್ತಿ ತಗಲಿ ಹಾನಿಯಾಗುವುದು, ಹಾವು ಕಚ್ಚುವುದು, ಮುಳುಗಿ ಸಾಯುವುದು, ಬೆಂಕಿ ಆಕಸ್ಮಿಕ, ಮರದ ಮೇಲಿನಿಂದ ಬೀಳುವುದು, ಸಿಡಿಲು ಬಡಿದು ಸಾಯುವುದು, ಕ್ರೂರ ಮೃಗಗಳಿಂದ ಉಂಟಾಗುವ ಸಾವು ನೋವು, ಅಣು ವಿಕಿರಣ, ಮುಂತಾದವುಗಳು. ಆದರೆ ಕಾನೂನುಬಾಹಿರ ಕೃತ್ಯಗಳನ್ನು ಎಸಗುವಾಗ ಉಂಟಾಗಬಹುದಾದ ಅಪಘಾತಗಳಿಗೆ, ನೈಸರ್ಗಿಕ ಮರಣ, ರೋಗದಿಂದ ಮರಣ, ಆತ್ಮಹತ್ಯೆ, ಮುಂತಾದ ಸಾವುಗಳಿಗೆ ಈ ಪರಿಹಾರ ದೊರೆಯುವುದಿಲ್ಲ. ಈ ಯೋಜನೆಯಂತೆ ಅಪಘಾತದಲ್ಲಿ ಶ್ರಮಿಕನ ಒಂದು ಅಂಗ ಊನವಾದರೆ ರೂ. 2,500 ಪರಿಹಾರ, ಎರಡು ಅಂಗಗಳು ನಷ್ಟವಾದರೆ ರೂ. 4,000 ಪರಿಹಾರ, ಕಾರ್ಮಿಕನ ಮರಣ ಸಂಭವಿಸಿದರೆ ವಾರಸುದಾರರಿಗೆ ರೂ. 5,000 ಗರಿಷ್ಠ ಪರಿಹಾರ ದೊರೆಯುವುದು. 1985ರಿಂದ ಕೇಂದ್ರ ಸರ್ಕಾರ ಜಾರಿಯಲ್ಲಿ ತಂದ "ವ್ಯಕ್ತಿಗತ ಅಪಘಾತ ಸಮಾಜ ಭದ್ರತಾ ವಿಮಾ ಯೋಜನೆ" ಈ ಜಿಲ್ಲೆಯಲ್ಲಿಯೂ ಜಾರಿಯಲ್ಲಿ ಬಂದಿದ್ದು ಅದರ ಅನ್ವಯ ಬಡಕುಟುಂಬದಲ್ಲಿಯ ದುಡಿಯುವ ವ್ಯಕ್ತಿ ಆಕಸ್ಮಿಕ ಮರಣ ಹೊಂದಿದರೆ ಮೃತ ವ್ಯಕ್ತಿಯ ವಾರಸುದಾರರಿಗೆ ರೂ. 3,000 ರವರೆಗೆ ಪರಿಹಾರ ನೀಡಲಾಗುವುದು. ಕೇಂದ್ರ ಸರ್ಕಾರದ ಈ ಯೋಜನೆಯು ರಾಜ್ಯ ಸರ್ಕಾರದ ಯೋಜನೆಗೆ ಪೂರಕವಾಗಿರುವುದರಿಂದ ರಾಜ್ಯ ಸರ್ಕಾರ ನೀಡುವ ಒಟ್ಟು ಮೊತ್ತ ರೂ. 5,000 ಗಳಲ್ಲಿ ಕೇಂದ್ರ ಸರ್ಕಾರದ ಯೋಜನೆಯ ರೂ. 3,000 ನ್ನು ಒಳಗೊಂಡಿರುವುದು, ಈ ಯೋಜನೆಯ ಅನ್ವಯ ಯಾವುದೇ ವ್ಯಕ್ತಿ ಫಲಾನುಭವಿ, ಯಾವ ರೀತಿಯ ವಿಮೆ ಕಂತನ್ನು (ಪ್ರೀಮಿಯಮ್) ಕಟ್ಟುವ ಅವಶ್ಯಕತೆ ಇರುವುದಿಲ್ಲ. ಯೋಜನೆಯ ಆರಂಭದಿಂದ 1993 ಮಾರ್ಚ್ ಕೊನೆಯವರೆಗೆ ಈ ಜಿಲ್ಲೆಯಲ್ಲಿ 662 ಸಂದರ್ಭಗಳಲ್ಲಿ ಒಟ್ಟು ರೂ. 19.86 ಲಕ್ಷ ಪರಿಹಾರ ಸಂದಾಯ ಮಾಡಲಾಗಿದೆ. ಇದರಲ್ಲಿ 1992-93ಸಾಲಿಗೆ ಮೀಸಲಾದಂತೆ 86 ಸಂದರ್ಭಗಳಲ್ಲಿ ರೂ. 2.58 ಲಕ್ಷ ಪರಿಹಾರವನ್ನು ನೀಡಲಾಗಿದೆ.

**ಬೀಡಿಕಾರ್ಮಿಕರ ಗುಂಪು ವಿಮೆ:** ಕೇಂದ್ರ ಸರ್ಕಾರದ ಈ ವಿಮೆ ಯೋಜನೆಯು 1992 ಏಪ್ರಿಲ್‌ನಿಂದ ಜಾರಿಯಲ್ಲಿ ಬಂದಿದೆ. ಇದು 18 ರಿಂದ 60 ವರ್ಷದ ಬೀಡಿ ಕಾರ್ಮಿಕರಿಗೆ ಅನ್ವಯವಾಗಲಿದ್ದು ವಿಮಾ ಕಂತಿನ ಹಣವನ್ನು ಕಾರ್ಮಿಕ ಕಲ್ಯಾಣ ಇಲಾಖೆ ಹಾಗೂ ಜೀವ ವಿಮಾ ನಿಗಮದವರು ಭರಿಸುವರು. ವಿಮೆಗೆ ಒಳಗಾದವರಿಗೆ ಸಹಜ ಸಾವಾದರೆ ರೂ. 3,000ಮತ್ತು ಅಪಘಾತದಿಂದ ಮರಣಪಟ್ಟಲ್ಲಿ ವಾರಸುದಾರರಿಗೆ ರೂ. 6,000 ವರೆಗೆ ಪರಿಹಾರ ನೀಡಲಾಗುವುದು.

**ಗುಡಿಸಲು ವಿಮೆ:** ರಾಜ್ಯ ಸರ್ಕಾರವು ಈ ಗುಡಿಸಲು ವಿಮಾ ಯೋಜನೆಯನ್ನು 1988 ಮೇ 1 ರಿಂದ ಜಾರಿಯಲ್ಲಿ ತಂದಿದೆ. ವಾರ್ಷಿಕ ವರಮಾನ ರೂ. 4,800 ಮೀರದ ಭೂ ರಹಿತ ಕಾರ್ಮಿಕರು, ಕುಶಲಕರ್ಮಿಗಳು ಈ ಯೋಜನೆಯ ಅನ್ವಯ ಪರಿಹಾರ ಪಡೆಯಲು ಅರ್ಹರು. ಅಗ್ನಿ ಅನಾಹುತದಿಂದ ತೊಂದರೆಗೀಡಾದವರಿಗೆ ಈ ಯೋಜನೆಯ ಅನ್ವಯ ಗುಡಿಸಲಿಗಾಗಿ ರೂ. 1,000 ಮತ್ತು ಇತರ ವಸ್ತುಗಳಿಗಾಗಿ ರೂ. 500 ರವರೆಗೆ ಪರಿಹಾರವನ್ನು ವಿಮಾ ಕಂಪನಿಯು ನೀಡುವುದು. ಈ ಯೋಜನೆಯು ಕೇವಲ ಗ್ರಾಮೀಣ ಪ್ರದೇಶಗಳಲ್ಲಿ ಅಗ್ನಿ ಅನಾಹುತದಿಂದ ಗುಡಿಸಲು ಮನೆ ಮುಂತಾದವುಗಳನ್ನು ಕಳೆದುಕೊಂಡ ಬಡಕುಟುಂಬಗಳಿಗೆ ಮಾತ್ರ ಅನ್ವಯವಾಗುವುದು. ಈ ಯೋಜನೆಯ ಅನ್ವಯ 1993 ಮಾರ್ಚ್ ಕೊನೆಯವರೆಗೆ ಜಿಲ್ಲೆಯಲ್ಲಿ 392 ಸಂದರ್ಭಗಳಲ್ಲಿ ರೂ. 5.07 ಲಕ್ಷ ಪರಿಹಾರ ನೀಡಲಾಗಿದೆ: 1992-93 ನೇ ಸಾಲಿನಲ್ಲಿ 110 ಜನರಿಗೆ ರೂ. 1.52 ಲಕ್ಷದ ಪರಿಹಾರ ಒದಗಿಸಲಾಗಿದೆ.

**ಅಪಘಾತ ವಿಮಾ ಯೋಜನೆ:** ಕರ್ನಾಟಕ ಸರ್ಕಾರವು ಇತ್ತೀಚೆಗೆ (1994) ನಿಯಂತ್ರಿತ ಮಾರುಕಟ್ಟೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಲೈಸೆನ್ಸ್ ಪಡೆದ ಹಮಾಲರು ಮತ್ತು ತೂಕ ಮಾಡುವವರನ್ನು (ಸುಮಾರು 16 ಸಾವಿರ ಜನರು) ಅಪಘಾತ ವಿಮೆಯ ಸೌಲಭ್ಯಕ್ಕೆ ಒಳಪಡಿಸಿದೆ. ಈ ಯೋಜನೆಯ ಅನ್ವಯ ಪ್ರತೀ ಫಲಾನುಭವಿಯ ವಾರ್ಷಿಕ ವಿಮಾಕಂತು ರೂ. 16 ರಂತೆ ವಾರ್ಷಿಕ ವೆಚ್ಚ ರೂ. 2.40 ಲಕ್ಷವನ್ನು ಕರ್ನಾಟಕ ರಾಜ್ಯ ವ್ಯವಸಾಯ ಮಾರುಕಟ್ಟೆ ಮಂಡಳಿಯು ಭರಿಸುವುದು. ಈ ವಿಮೆ

ಯೋಜನೆಗೆ ಒಳಗಾದ ಹಮಾಲ/ತೂಕದವರು ಮರಣ ಹೊಂದಿದಲ್ಲಿ, ಅವನ ವಾರಸುದಾರರಿಗೆ ರೂ. 25,000 ಮತ್ತು ಭಾಗಶಃ ಅಂಗವಿಕಲನಾದಲ್ಲಿ ರೂ. 12,500 ಪರಿಹಾರ ನೀಡಲಾಗುವುದು.

**"ಸೊಲೇಶಿಯಮ್ ಫಂಡ" ಯೋಜನೆ:** ಈ ಯೋಜನೆಯನ್ನು ಕೇಂದ್ರ ಸರ್ಕಾರವು 1.7.1989 ರಿಂದ ಜಾರಿಯಲ್ಲಿ ತಂದಿದೆ. ಈ ಯೋಜನೆಯ ಮುಖ್ಯ ಉದ್ದೇಶ ರಸ್ತೆ ಅಪಘಾತ ನಡೆದ ಅನೇಕ ಸಂದರ್ಭಗಳಲ್ಲಿ ವಾಹನಗಳು ವ್ಯಕ್ತಿಗಳಿಗೆ ಡಿಕ್ಕಿ ಹೊಡೆದು ಅಪಘಾತ ಉಂಟು ಮಾಡಿ ಸ್ಥಳದಲ್ಲಿ ನಿಲ್ಲದೇ ಓಡಿಹೋಗುವ ಸಾಧ್ಯತೆಗಳು ಉಂಟು. ಇಂತಹ ಸಂದರ್ಭಗಳಲ್ಲಿ ಜೀವಹಾನಿ ಅಥವಾ ಗಾಯವಾದಲ್ಲಿ ಅನುಕ್ರಮವಾಗಿ ರೂ. 8,500 ಮತ್ತು ರೂ. 2,000 ಗಳನ್ನು ಪರಿಹಾರವಾಗಿ ಆಶ್ರೀತ ಕುಟುಂಬದವರಿಗೆ ಅಥವಾ ಗಾಯಗೊಂಡ ವ್ಯಕ್ತಿಗೆ ನೀಡಲಾಗುವುದು. ಈ ಯೋಜನೆಯ ಅನ್ವಯ ಅಪಘಾತವನ್ನು ಎಸಗಿದ ವಾಹನದ ವಿವರಗಳು ತಿಳಿಯದಿದ್ದಾಗ ಮಾತ್ರ ಪರಿಹಾರವನ್ನು ನೀಡಲಾಗುವುದು. ಯೋಜನೆಯ ಪ್ರಾರಂಭದಿಂದ 1993 ಮಾರ್ಚ್ ಕೊನೆಯವರೆಗೆ ಜಿಲ್ಲೆಯಲ್ಲಿ 33 ಸಂದರ್ಭಗಳಲ್ಲಿ ರೂ. 2.42 ಲಕ್ಷದ ಪರಿಹಾರ ನೀಡಲಾಗಿದೆ; 1992-93 ನೇ ಸಾಲಿನಲ್ಲಿ 10 ಸಂದರ್ಭಗಳಲ್ಲಿ ರೂ. 72,000 ಪರಿಹಾರವನ್ನು ನೀಡಲಾಗಿದೆ.

## ವಿಮೆ ವ್ಯವಹಾರ

**ಕರ್ನಾಟಕ ಸರ್ಕಾರಿ ವಿಮಾ ಇಲಾಖೆ:** ಒಂದು ಶತಮಾನಕ್ಕಿಂತಲೂ ಮೊದಲಿಗೆ ಅಂದರೆ 1891 ರಲ್ಲಿ ಅಂದಿನ ಮೈಸೂರು ಸರ್ಕಾರದಿಂದ ಪ್ರಾರಂಭಗೊಂಡ ಈ ಇಲಾಖೆಯು (ಕೆ.ಜಿ.ಐ.ಡಿ.) ಹಲವಾರು ಬದಲಾವಣೆಗಳನ್ನು ರೂಪಿಸಿಕೊಂಡು ಇಂದಿಗೂ ಮುಂದುವರೆದಿದೆ. ರಾಜ್ಯ ವಿಮಾ ಇಲಾಖೆಯು (ಕೆ.ಜಿ.ಆಯ್.ಡಿ.) ಕೇವಲ ಸರ್ಕಾರಿ ನೌಕರರಿಗೆ ಸಂಬಂಧಪಟ್ಟಂತೆ ಜೀವವಿಮಾ ವ್ಯವಹಾರವನ್ನು, ಸರ್ಕಾರ, ಸರ್ಕಾರಿ ನೌಕರರು ಮತ್ತು ಸರ್ಕಾರದ ನಿಗಮಗಳಿಗೆ ಸಂಬಂಧಪಟ್ಟಂತೆ ಮೋಟಾರ ವಾಹನ ವಿಮೆ ವ್ಯವಹಾರವನ್ನು ನಡೆಸುತ್ತಿರುವುದು. ಆಡಳಿತವನ್ನು ಚುರುಕುಗೊಳಿಸಲು 1976 ರಲ್ಲಿ ವಿಮಾ ಇಲಾಖೆಯ ವ್ಯವಹಾರವನ್ನು ವಿಕೇಂದ್ರೀಕರಣಗೊಳಿಸಲಾಯಿತು. ಅದರ ಅನ್ವಯ 3ನೇ ಜುಲೈ 1976ರಂದು ಜಿಲ್ಲಾ ವಿಮಾಧಿಕಾರಿಗಳ ಕಛೇರಿಯನ್ನು ಧಾರವಾಡದಲ್ಲಿ ತೆರೆಯಲಾಯಿತು. 1981 ರಲ್ಲಿ ವಿಭಾಗಮಟ್ಟದ ವಿಮಾ ಕಛೇರಿಯನ್ನು ತೆರೆದಿದೆ. 1989 ರಲ್ಲಿ ಹೆಚ್ಚುವರಿ ಜಿಲ್ಲಾ ವಿಮಾ ಕಛೇರಿಯನ್ನು ಹುಬ್ಬಳ್ಳಿಯಲ್ಲಿ ತೆರೆಯಲಾಯಿತು. ಆಡಳಿತಾತ್ಮಕ ದೃಷ್ಟಿಯಿಂದ ಜಿಲ್ಲೆಯನ್ನು ಎರಡು ವಲಯಗಳಾಗಿ ವಿಂಗಡಿಸಿದ್ದು ಧಾರವಾಡ (ಉತ್ತರ) ವಲಯದಲ್ಲಿ 8 ತಾಲೂಕುಗಳು ಮತ್ತು ಹುಬ್ಬಳ್ಳಿ (ದಕ್ಷಿಣ) ವಲಯದಲ್ಲಿ 9 ತಾಲೂಕುಗಳನ್ನು ಸೇರಿಸಲಾಗಿದೆ.

ಧಾರವಾಡ ಜಿಲ್ಲೆಯಲ್ಲಿ ಸರ್ಕಾರಿ ಜೀವ ವಿಮೆಗೆ ಒಳಪಟ್ಟ ಸರ್ಕಾರಿ ನೌಕರರ ಸಂಖ್ಯೆ ಧಾರವಾಡ ವಲಯದಲ್ಲಿ 16,259 ಆಗಿದ್ದರೆ ಹುಬ್ಬಳ್ಳಿ ವಲಯದಲ್ಲಿ 12,846. ಜಿಲ್ಲೆಯಲ್ಲಿ ಚಾಲ್ತಿಯಲ್ಲಿ (1992-93) ಇರುವ ವಿಮಾ ಪತ್ರಗಳ (ಪಾಲಿಸಿ) ಒಟ್ಟು ಸಂಖ್ಯೆ 74,433 ಎಂದು ವರದಿಯಾಗಿದೆ. ಜಿಲ್ಲಾ ವಿಮಾ ಅಧಿಕಾರಿಯು ರೂ. 40,000 ವರೆಗೆ ವ್ಯವಹರಿಸಲು (ವಿಮಾ ಪತ್ರ ನೀಡಿಕೆ, ಹಕ್ಕುಗಳ ಮಂಜೂರಾತಿ ಮುಂತಾದವುಗಳು) ಅಧಿಕಾರ ಹೊಂದಿರುವರು. ಜಿಲ್ಲೆಯ ನಗರ ಸಭೆಗಳು, ಸ್ಥಳೀಯ ಸಂಸ್ಥೆಗಳು, ಅನುದಾನಿತ ಶಿಕ್ಷಣ ಸಂಸ್ಥೆಗಳು ಒಳಗೊಂಡಂತೆ ಸದರಿ ನೌಕರರ ಕುಟುಂಬ ಕಲ್ಯಾಣ ಯೋಜನಾ ನಿಧಿಯನ್ನು ವಿಮಾ ಇಲಾಖೆಯು 1977 ರಿಂದ ನಿರ್ವಹಿಸುತ್ತಿರುವುದು. ಇತ್ತೀಚಿನ ವರ್ಷಗಳಲ್ಲಿ ನೀಡಲಾದ ವಿಮಾ ಪತ್ರಗಳ ಸಂಖ್ಯೆ, ವಿಮೆಯ ಮೊತ್ತ ಮತ್ತು ವಿಮಾ ಕಂತಿನ ರೂಪದಲ್ಲಿ ವಾರ್ಷಿಕ ಆದಾಯ ಇವುಗಳ ವಿವರ ಈ ಕೆಳಗಿನಂತೆ ಇರುವುದು.

**ಕೋಷ್ಟಕ 6.6**

(ಮೊತ್ತ ಲಕ್ಷ ರೂ.ಗಳಲ್ಲಿ)

| ವರ್ಷ | ವಿಮಾ ಪತ್ರಗಳ ಸಂಖ್ಯೆ | ವಿಮೆಯ ಮೊತ್ತ | ವಿಮಾ ಕಂತಿನ ಆದಾಯ |
|---|---|---|---|
| 1974-75 | 5,474 | 149.50 | 6.33 |
| 1975-76 | 4,898 | 141.01 | 5.90 |
| 1976-77 | 10,146 | 318.74 | 12.65 |
| 1987-88 | 17,393 | 1905.52 | 157.57 |

| ವರ್ಷ | ವಿಮಾ ಪತ್ರಗಳ ಸಂಖ್ಯೆ | ವಿಮೆಯ ಮೊತ್ತ | ವಿಮಾ ಕಂತಿನ ಆದಾಯ |
|---|---|---|---|
| 88-89 | 2,089 | 530.81 | 275.40 |
| 89-90 | 3,571 | 582.34 | 302.57 |
| 90-91 | 1,372 | 352.60 | 289.03 |
| 91-92 | 2,020 | 476.69 | 300.66 |

1992-93 ರಲ್ಲಿ ಹೊಸದಾಗಿ ವಿಮೆಗೆ ಒಳಪಡಿಸಿದ ಮತ್ತು ಸದರಿ ವರ್ಷದಲ್ಲಿ ನವೀಕರಿಸಿದ ವಾಹನಗಳ ಸಂಖ್ಯೆ 319 ಎಂದು ಮತ್ತು ಈ ವ್ಯವಹಾರದಲ್ಲಿ ವಾರ್ಷಿಕ ವಿಮಾ ಕಂತಿನ ಮೊತ್ತ ರೂ. 3.52 ಲಕ್ಷ ಎಂದು ವರದಿ ತಿಳಿಸುವುದು.

**ಅಂಚೆ ವಿಮಾ ಯೋಜನೆ:** ಸುಮಾರು ಒಂದುನೂರು ವರ್ಷ ಹಳೆಯದಾದ (1884) ಈ ವಿಮೆ ಯೋಜನೆಯ ಪ್ರಾರಂಭದಲ್ಲಿ ಕೇವಲ ಅಂಚೆ ತಂತಿ ಇಲಾಖೆಯ ನೌಕರರಿಗೆ ಮೀಸಲಾಗಿತ್ತು. ಈಗ ವ್ಯಾಪಕಗೊಂಡು ರಾಜ್ಯ ಮತ್ತು ಕೇಂದ್ರ ಸರ್ಕಾರದ ನೌಕರರು, ಸಾರ್ವಜನಿಕ ಸಂಸ್ಥೆಗಳ ನೌಕರರು, ಗ್ರಾಮೀಣ ಬ್ಯಾಂಕ್ ನೌಕರರು ಒಳಗೊಂಡಿರಬಹುದಾಗಿದೆ. ಈ ವಿಮೆಯ ಬಗ್ಗೆ ಪ್ರತ್ಯೇಕವಾದ ಜಿಲ್ಲಾವಾರು ಅಂಕಿ ಅಂಶಗಳು ಲಭ್ಯ ಇರುವುದಿಲ್ಲ.

## ಜೀವ ವಿಮಾ ನಿಗಮ

ಭಾರತೀಯ ಜೀವ ವಿಮಾ ನಿಗಮ (ಎಲ್.ಐ.ಸಿ.) 1956 ಸೆಪ್ಟೆಂಬರ್‌ನಲ್ಲಿ ರಚನೆಗೊಳ್ಳುವ ಹಲವಾರು ದಶಕಗಳ ಪೂರ್ವದಲ್ಲಿ ಜಿಲ್ಲೆಯ ಜೀವವಿಮಾ ಮತ್ತು ಸಾಮಾನ್ಯ (ಜನರಲ್) ವಿಮಾ ವ್ಯವಹಾರವನ್ನು ನಿರ್ವಹಿಸಲು ಈ ಜಿಲ್ಲೆಯಿಂದಲೇ ಪ್ರವರ್ತಿಸಲ್ಪಟ್ಟ ಯುನೈಟೆಡ್ ಕರ್ನಾಟಕ ಇನ್ಸೂರೆನ್ಸ್ ಕಂ (1929) ಮತ್ತು ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಸೂರೆನ್ಸ್ ಕಂ (1933) ಎಂಬ ಎರಡು ಕಂಪನಿಗಳು ಧಾರವಾಡದಲ್ಲಿ ನೋಂದಾಯಿಸಲ್ಪಟ್ಟವು. (ಈ ಎರಡು ಕಂಪನಿಗಳಲ್ಲದೇ ಸೋಸಿಯಲ್ ಸರ್ವಿಸ್ ಕಂ. ಎಂಬುದಾಗಿ ಇನ್ನೊಂದು ಕಂಪನಿಯು ಇದ್ದುದಾಗಿ ವರದಿಯಾಗಿದೆ). ಸ್ವರಾಜ್ಯ ಬ್ಯಾಂಕಿಂಗ್ ಮತ್ತು ವಿಮಾಕಂಪನಿಯು ಹಾವೇರಿಯ ಪ್ರಸಿದ್ಧ ವಕೀಲರಾಗಿದ್ದ ಸಿದ್ದಪ್ಪ ಹೊಸಮನಿ, ಧಾರವಾಡದ ಕಾಯಿದೆ ಪಂಡಿತ ಎಂ.ಎಸ್. ಕೇಸರಿ ಮತ್ತು ಕೊರಡೂರು ಗ್ರಾಮದ (ಹಾವೇರಿ ತಾಲೂಕು) ವಿ.ಡಿ. ಕಲಕೋಟಿ ಇವರಿಂದ ಪ್ರಾರಂಭಿಸಲ್ಪಟ್ಟಿತು. ಮೊದಲಿಗೆ ಖಾಸಗಿ ಕಂಪನಿಯಾಗಿದ್ದ ಇದನ್ನು 1937 ರಲ್ಲಿ ಪಬ್ಲಿಕ್ ಕಂ.ಯನ್ನಾಗಿ ಪರಿವರ್ತಿಸಲಾಯಿತು 1940 ರ ಸುಮಾರಿಗೆ ಮುಚ್ಚುವ ಸ್ಥಿತಿಗೆ ಬಂದಿದ್ದ ಈ ಕಂಪನಿಯನ್ನು ಧಾರವಾಡದ ಪ್ರಸಿದ್ಧ ವಕೀಲರಾಗಿದ್ದ ವೀರಭದ್ರಪ್ಪ ಹಾಲಭಾವಿ (1877-1959) ಯವರು ತಮ್ಮ ಮಾರ್ಗದರ್ಶನದಲ್ಲಿ ಪುನರುಜ್ಜೀವನಗೊಳಿಸಿದರು. 1951 ರಲ್ಲಿ ಯುನೈಟೆಡ್ ಕರ್ನಾಟಕ ಕಂಪನಿಯು ರೂ. 1.39 ಲಕ್ಷ ಷೇರು ಬಂಡವಾಳವನ್ನು ಹೊಂದಿದ್ದರೆ ಸ್ವರಾಜ್ಯ ಕಂಪನಿಯು ರೂ. 1.16 ಲಕ್ಷ ಬಂಡವಾಳವನ್ನು ಹೊಂದಿತ್ತು. ವರದಿ ವರ್ಷಗಳಲ್ಲಿ ಈ ಕಂಪನಿಗಳ ಹೊಣೆಗಾರಿಕೆಗಳು ಅನುಕ್ರಮವಾಗಿ ರೂ. 7.41 ಲಕ್ಷ ಮತ್ತು 8.74 ಲಕ್ಷ ಆಗಿತ್ತು ಎಂದು ತಿಳಿದು ಬರುವುದು. 1956 ರಲ್ಲಿ ಈ ಎರಡೂ ಕಂಪನಿಗಳು ಜೀವ ವಿಮಾ ನಿಗಮದಲ್ಲಿ ವಿಲೀನಗೊಂಡವು.

ಧಾರವಾಡ ವಲಯ ಪ್ರಾರಂಭವಾಗುವ ಪೂರ್ವದಲ್ಲಿ ಉಡುಪಿ ವಲಯ ಕಛೇರಿಯು ಈ ಜಿಲ್ಲೆಯ ವ್ಯವಹಾರವನ್ನು ನಿರ್ವಹಿಸುತ್ತಿತ್ತು. ಜೀವ ವಿಮಾ ವ್ಯವಹಾರಗಳನ್ನು ಸಮರ್ಪಕವಾಗಿ ನಿರ್ವಹಿಸಲು ಮತ್ತು ವ್ಯವಹಾರಗಳನ್ನು ಇನ್ನಷ್ಟು ಅಭಿವೃದ್ಧಿ ಪಡಿಸಲು 1970 ರಲ್ಲಿ ಧಾರವಾಡ, ಬೆಳಗಾವಿ, ಉತ್ತರ ಕನ್ನಡ, ಬಿಜಾಪುರ ಗುಲ್ಬರ್ಗಾ ಜಿಲ್ಲೆ ಸೇರಿದಂತೆ ಧಾರವಾಡ ವಲಯವನ್ನು ಸ್ಥಾಪಿಸಲಾಯಿತು. 1985 ರಲ್ಲಿ ರಾಯಚೂರ ವಿಭಾಗ ರಚನೆಗೊಂಡ ನಂತರ ಬಿಜಾಪುರ ಮತ್ತು ಗುಲ್ಬರ್ಗಾ ಜಿಲ್ಲೆಗಳನ್ನು ಈ ವಲಯದಿಂದ ಬೇರ್ಪಡಿಸಲಾಯಿತು. 1993 ರಲ್ಲಿ ಬೆಳಗಾವಿ ವಿಭಾಗ ರಚನೆಯಾದ್ದರಿಂದ ಬೆಳಗಾವಿ ಜಿಲ್ಲೆಯ 8 ಶಾಖೆಗಳನ್ನು ಹೊಸ ವಿಭಾಗಕ್ಕೆ ವರ್ಗಾಯಿಸಲಾಯಿತು. ಈಗ ಧಾರವಾಡ ವಿಭಾಗದಲ್ಲಿ ಧಾರವಾಡ ಮತ್ತು ಉತ್ತರಕನ್ನಡ ಜಿಲ್ಲೆಗಳು ಮಾತ್ರ ಸೇರಿರುವವು. ಧಾರವಾಡ ಜಿಲ್ಲೆಯಲ್ಲಿ ಈಗ 9 ಶಾಖೆಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳೆಂದರೆ ಧಾರವಾಡ ಮುಖ್ಯ ಕಛೇರಿ (1956), ಹುಬ್ಬಳ್ಳಿ I (1960), ಹಾವೇರಿ (1962), ಧಾರವಾಡ (ಸಿ.ಎ.ಬಿ.) (1979), ಹುಬ್ಬಳ್ಳಿ II (1979), ಗದಗ (1980), ರಾಣೆಬೆನ್ನೂರು (1984), ಹುಬ್ಬಳ್ಳಿ III (1990) ಮತ್ತು ನವಲಗುಂದ (1991). ಧಾರವಾಡ ಜಿಲ್ಲೆಯಲ್ಲಿ ಜೀವ ವಿಮಾ ನಿಗಮದ

ಸಿಬ್ಬಂದಿಯ ಒಟ್ಟು ಸಂಖ್ಯೆ 1,020. ಅವರಲ್ಲಿ ನಿಗಮದ ಮಂಡಲ ಕಾರ್ಯಾಲಯದಲ್ಲಿ ಇರುವ ಸಿಬ್ಬಂದಿಯ ಸಂಖ್ಯೆ 234. ಜೀವವಿಮಾ ನಿಗಮದ ಧಾರವಾಡ ಮಂಡಲ ಕಾರ್ಯಾಲಯವನ್ನು 1975ರಲ್ಲಿ ಅಂದಾಜು ರೂ. 56ಲಕ್ಷ ವೆಚ್ಚದಲ್ಲಿ ಕಟ್ಟಲಾಯಿತು.

**ಕೋಷ್ಟಕ 6.7 : ಇತ್ತೀಚಿನ ಐದು ವರ್ಷಗಳಲ್ಲಿ ಜಿಲ್ಲೆಯ ವಿಮೆ ವ್ಯವಹಾರದ ಪ್ರಗತಿಯನ್ನು ಸೂಚಿಸುವ ತಖ್ತೆಯು ಈ ಕೆಳಗಿನಂತೆ ಇರುವುದು.**

| ವಿವರ | ವರ್ಷ | | | | |
|---|---|---|---|---|---|
| | 1989-90 | 1990-91 | 1991-92 | 1992-93 | 1993-94 |
| ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು (ಸಂಖ್ಯೆ) | 2,42,188 | 2,66,162 | 3,05,618 | 3,46,864 | 3,87,701 |
| ವಿಮೆ ಮೊತ್ತ (ಕೋಟಿ ರೂ) | 561.29 | 543.60 | 678.60 | 858.49 | 1.075.57 |
| ವಿಮಾ ಕಂತಿನ ಆದಾಯ (ಲಕ್ಷ ರೂ.) | 2,369.72 | 2,800.25 | 3,303.10 | 4,238.24 | 4,662.98 |
| ವಿಮಾ ಏಜಂಟರು (ಸಂಖ್ಯೆ) | 1,992 | 2,338 | 2,601 | 2,882 | 3,070 |
| ಅಭಿವೃದ್ಧಿ ಅಧಿಕಾರಿಗಳು (ಸಂಖ್ಯೆ) | 70 | 79 | 82 | 86 | 83 |

## ರಾಷ್ಟ್ರೀಯ ಉಳಿತಾಯ ಯೋಜನೆ

ಸ್ವಾತಂತ್ರ್ಯಾನಂತರ ವರ್ಷಗಳಲ್ಲಿ ವಿವಿಧ ಯೋಜನೆಗಳ ಮೂಲಕ ಸಾರ್ವಜನಿಕರಲ್ಲಿ ಮತ್ತು ಸಂಘ ಸಂಸ್ಥೆಗಳಲ್ಲಿ ಸಣ್ಣ ಉಳಿತಾಯ ಪ್ರವೃತ್ತಿಯನ್ನು ಬೆಳೆಸುವ ಮತ್ತು ಹೆಚ್ಚಿಸುವ ಮೂಲಕ ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳಿಗೆ ಬಂಡವಾಳ ಶೇಖರಣೆಗೆ ಸಹಾಯವಾಗುವಂತೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ತಮ್ಮದೇ ಆದ ಅನೇಕ ಹಣ ಸಂಗ್ರಹಿಸುವ ಯೋಜನೆಗಳನ್ನು ರೂಪಿಸಿಕೊಂಡಿವೆ. ರಾಷ್ಟ್ರೀಯ ಉಳಿತಾಯ ಸಂಸ್ಥೆಯನ್ನು ಕೇಂದ್ರ ಸರ್ಕಾರವು 1948 ರಲ್ಲಿ ಪ್ರಾರಂಭಿಸಿತು. ನಂತರ ಈ ಸಂಸ್ಥೆಯ ವಿಭಾಗೀಯ ಮತ್ತು ಜಿಲ್ಲಾ ಮಟ್ಟದ ಸಂಸ್ಥೆಗಳು ತೆರೆಯಲ್ಪಟ್ಟವು. ವಿಶೇಷವಾಗಿ ಯುದ್ಧದ ಅವಧಿಯಲ್ಲಿ ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿಯೂ ಅಂದಿನ ಸರ್ಕಾರಗಳು ಈ ಯೋಜನೆಯ ಮೂಲಕ ಹಣ ಸಂಗ್ರಹಿಸಲು ಹಲವಾರು ಯೋಜನೆಗಳನ್ನು ಪ್ರಾರಂಭಿಸಿದ್ದವು.

ಅಲ್ಪ ಉಳಿತಾಯ ಯೋಜನೆಯನ್ನು ಪ್ರೋತ್ಸಾಹಿಸಲು ಮೊದಲನೆಯ ಮಹಾಯುದ್ಧದ ಅವಧಿಯಲ್ಲಿ 1914-18ರಲ್ಲಿ ಸರ್ಕಾರವು ಐದು ವರ್ಷಗಳ ಅವಧಿಯ "ಪೋಸ್ಟ್ ಆಫೀಸ ಕ್ಯಾಶ್ ಸರ್ಟಿಫಿಕೇಟ್" ಯೋಜನೆಯನ್ನು ಪ್ರಾರಂಭಿಸಿತ್ತು. ಇವುಗಳನ್ನು ಸೋಡಿಯ ಮೇಲೆ (ಡಿಸ್‌ಕೌಂಟ್) ರೂ. 10 ರಿಂದ ರೂ. 1000 ಶ್ರೇಣಿಗಳಲ್ಲಿ ಮಾರಾಟ ಮಾಡಲಾಗುತ್ತಿತ್ತು.

ಎರಡನೆಯ ಮಹಾಯುದ್ಧದ ಕಾಲದಲ್ಲಿ (1939-45) 10 ವರ್ಷಗಳ ಅವಧಿಯ ರಕ್ಷಣಾ ಉಳಿತಾಯ ಸರ್ಟಿಫಿಕೇಟುಗಳು (ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್)ಗಳನ್ನು ಜಾರಿಯಲ್ಲಿ ತರಲಾಯಿತು. 1944 ರಲ್ಲಿ 12 ವರ್ಷ ಅವಧಿಯ ರೂ. 5 ರಿಂದ ರೂ. 5000 ದವರೆಗಿನ ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ಜಾರಿಯಲ್ಲಿ ತರಲಾಯಿತು. 1951 ರಲ್ಲಿ ರಾಷ್ಟ್ರೀಯ ಉಳಿತಾಯ ಪತ್ರಗಳ ಮೇಲಿನ ಸರಳಬಡ್ಡಿಯು ಪೂರ್ಣ ಅವಧಿಗೆ (12 ವರ್ಷ) ಶೇ. 4 1/6 ರಂತೆ ಪರಿಗಣಿಸಲಾಗುತ್ತಿತ್ತು. ವ್ಯಕ್ತಿಗಳು ಉಳಿತಾಯ ಪತ್ರಗಳಲ್ಲಿ ತೊಡಗಿಸುವ ಗರಿಷ್ಠ ಹಣಕ್ಕೆ ಸರಕಾರ ಮಿತಿಯನ್ನು ವಿಧಿಸಿತ್ತು, ಮತ್ತು ಬಡ್ಡಿಯನ್ನು ಆದಾಯ ಕರದಿಂದ ಮುಕ್ತ ಮಾಡಲಾಗಿತ್ತು. 1951ರಲ್ಲಿ ಸರ್ಕಾರವು 10ವರ್ಷಗಳ ಅವಧಿಯ "ಟ್ರೆಜರಿ ಉಳಿತಾಯ ಠೇವಣಿ ಸರ್ಟಿಫಿಕೇಟ್ ಯೋಜನೆಯನ್ನು" ಪ್ರಾರಂಭಿಸಿತ್ತು. ಇವುಗಳ ಉದ್ದೇಶ ಸರ್ಕಾರಕ್ಕೆ ಅಲ್ಪಾವಧಿಗೆ ಬೇಕಾಗುವ ಚಾಲತಿ ವೆಚ್ಚವನ್ನು ಭರಿಸುವುದು ಮತ್ತು ಭಾಗಶಃ ಭಾರತ ಸರ್ಕಾರದ ಪರವಾಗಿ ಸಾಲವನ್ನು ಸಂಗ್ರಹಿಸುವುದಾಗಿತ್ತು. ಇವುಗಳಿಗೆ ಶೇ. 3 1/2 ಬಡ್ಡಿಯನ್ನು ಪ್ರತೀವರ್ಷ ಸಂದಾಯ

ಮಾಡಲಾಗುತ್ತಿತ್ತು. 1950ರ ಮಾರ್ಚ್ ಕೊನೆಯಲ್ಲಿ ಇದ್ದಂತೆ ಧಾರವಾಡ ಜಿಲ್ಲೆಯಲ್ಲಿ ಅಂಚೆ ಉಳಿತಾಯ ಖಾತೆಯಲ್ಲಿ ಸಂಚಿತವಾಗಿದ್ದ ಹಣದ ಮೊತ್ತ ರೂ. 48.71 ಲಕ್ಷ ಮತ್ತು ರಾಷ್ಟ್ರೀಯ ಉಳಿತಾಯ ಪತ್ರಗಳಲ್ಲಿ ವಿನಿಯೋಗಿಸಿದ್ದ ಹಣದ ಮೊತ್ತ ರೂ. 6.66 ಲಕ್ಷ ಎಂದು ವರದಿಯಾಗಿದೆ. 1948 ರಲ್ಲಿ ಈ ಮೊತ್ತಗಳು ಅನುಕ್ರಮವಾಗಿ ರೂ. 39.96 ಲಕ್ಷ ಮತ್ತು ರೂ. 6.62 ಲಕ್ಷ ಎಂದು ತಿಳಿದು ಬರುವುದು.

ರಾಜ್ಯ ಸರ್ಕಾರವು ಸಣ್ಣ ಉಳಿತಾಯವನ್ನು ಸಾರ್ವಜನಿಕರಲ್ಲಿ ಪ್ರೇರೇಪಿಸಲು ತನ್ನದೇ ಆದ ರಾಜ್ಯಮಟ್ಟದ ಸಣ್ಣ ಉಳಿತಾಯ ನಿರ್ದೇಶನಾಲಯ (ರಾಜ್ಯ ಪುನರ್ಘಟನೆಯ ನಂತರ) ಹಾಗೂ ಜಿಲ್ಲಾ ಮಟ್ಟದಲ್ಲಿ ಸಹಾಯಕ ನಿರ್ದೇಶಕರ ಕಛೇರಿಗಳನ್ನು ಹೊಂದಿರುವುದು. ಈ ಯೋಜನೆಯನ್ನು ಜನಪ್ರಿಯಗೊಳಿಸಲು, ವ್ಯಾಪಕಗೊಳಿಸಲು ರಾಜ್ಯ ಲಾಟರಿ ಮತ್ತು ಇತರ ಬಹುಮಾನ ಯೋಜನೆಗಳನ್ನು ಜಾರಿಯಲ್ಲಿ ತರಲಾಗಿದೆ. ಧಾರವಾಡ ಜಿಲ್ಲೆಗೆ ಸೀಮಿತವಾದಂತೆ ಸಹಾಯಕ ನಿರ್ದೇಶಕರ ಕಛೇರಿಯನ್ನು 1981 ರಲ್ಲಿ ಪ್ರಾರಂಭಿಸಲಾಯಿತು. ರಾಷ್ಟ್ರೀಯ ಉಳಿತಾಯ ಯೋಜನೆಯಲ್ಲಿ ಇಂದು ಪ್ರಚಲಿತ ಇರುವ ಉಳಿತಾಯ ಯೋಜನೆಗಳು: ಅಂಚೆಯ ಉಳಿತಾಯ ಖಾತೆ, ಆವೃತ್ತ ಠೇವಣಿ ಯೋಜನೆ ('ರಿಕರಿಂಗ್'), ಕಿಸಾನ ವಿಕಾಸ ಪತ್ರ, ಆರು ವರ್ಷಗಳ ರಾಷ್ಟ್ರೀಯ ಉಳಿತಾಯ ಪತ್ರ (ಎನ್.ಎಸ್.ಸಿ.), ಇಂದಿರಾ ವಿಕಾಸ ಪತ್ರ, ಅಂಚೆ ಕಛೇರಿಯ ಮಾಸಿಕ ವರಮಾನ ಯೋಜನೆ, 15 ವರ್ಷದ ಭವಿಷ್ಯ ನಿಧಿ, ರಾಷ್ಟ್ರೀಯ ಉಳಿತಾಯ ಯೋಜನೆ 1992, ಅಂಚೆ ಕಛೇರಿ ನಿಶ್ಚಿತ ಠೇವಣಿ ಖಾತೆ ಮುಂತಾದವುಗಳು.

ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ಉಳಿತಾಯ ಯೋಜನೆಯನ್ನು ಪ್ರಚುರಗೊಳಿಸುವ ಕಾರ್ಯಕ್ರಮದ ಅನ್ವಯ 1992-93 ರಲ್ಲಿ ಕುಂದಗೋಳ ಮತ್ತು ಬ್ಯಾಡಗಿ ತಾಲೂಕುಗಳನ್ನು ಆಯ್ಕೆ ಮಾಡಲಾಗಿತ್ತು. ಈ ಎರಡು ತಾಲೂಕುಗಳಲ್ಲಿ ಒಟ್ಟು 35,264 ಕುಟುಂಬಗಳನ್ನು ಸ್ವಪ್ರೇರಣೆಯಿಂದ ಉಳಿತಾಯ ಯೋಜನೆಯಲ್ಲಿ ತೊಡಗಿಸುವ ಮೂಲಕ ರೂ. 101.77 ಲಕ್ಷ ಸಂಗ್ರಹಿಸಿ ಈ ಎರಡು ತಾಲೂಕುಗಳನ್ನು ಉಳಿತಾಯ "ಬಚತ್" ತಾಲೂಕುಗಳೆಂದು ಸಾರಲಾಗಿತ್ತು. ಇದೂ ಅಲ್ಲದೇ ಜಿಲ್ಲೆಯ 236 ಹಳ್ಳಿಗಳನ್ನು 'ಬಚತ್' ಗ್ರಾಮಗಳೆಂದು ಸಾರಲಾಗಿದೆ.

**ಕೋಷ್ಟಕ 6.8: ಸಣ್ಣ ಉಳಿತಾಯ ಯೋಜನೆಯ ಅಡಿಯಲ್ಲಿ ಜಿಲ್ಲೆಯಲ್ಲಿ ಇತ್ತೀಚಿನ ಐದು ವರ್ಷಗಳಲ್ಲಿ ನಿಗದಿಪಡಿಸಿದ ಗುರಿ ಮತ್ತು ಸಾಧನೆಯ ವಿವರ ಈ ರೀತಿ ಇರುವುದು.**

(ಮೊತ್ತ ಕೋಟಿ ರೂ.ಗಳಲ್ಲಿ)

| ವರ್ಷ | ಗುರಿ | | ಸಾಧನೆ | |
|---|---|---|---|---|
| | ಒಟ್ಟು | ನಿವ್ವಳ | ಒಟ್ಟು | ನಿವ್ವಳ |
| 1988-89 | 40.00 | 20.00 | 48.85 | 26.93 |
| 1989-90 | 40.00 | 20.00 | 54.56 | 24.49 |
| 1990-91 | 40.00 | 20.00 | 55.27 | 23.23 |
| 1991-92 | 44.00 | 22.00 | 51.53 | 23.34 |
| 1992-93 | 44.00 | 22.00 | 61.20 | 24.81 |

**ರಾಜ್ಯ ಲಾಟರಿ ಯೋಜನೆ:** ರಾಜ್ಯ ಸರ್ಕಾರವು 1970 ರಿಂದ ರಾಜ್ಯ ಲಾಟರಿ ಯೋಜನೆಯನ್ನು ಪ್ರಾರಂಭಿಸಿ ಮುಂದುವರೆಸಿಕೊಂಡು ಬರುತ್ತಿದೆ. ಈ ಯೋಜನೆಯ ಮುಖ್ಯ ಉದ್ದೇಶ ಲಾಟರಿ ಬಹುಮಾನದ ಹಣದ ಮೂಲಕ ಹಲವಾರು ಉಳಿತಾಯ ಯೋಜನೆಯಲ್ಲಿ ಸಾರ್ವಜನಿಕರಿಂದ ಹಣವನ್ನು ಸಂಗ್ರಹಿಸುವಂತೆ ಪ್ರೋತ್ಸಾಹಿಸುವುದು ಮತ್ತು ಸದರಿ ಹಣವನ್ನು ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ವಿನಿಯೋಗಿಸುವುದು. ರಾಜ್ಯದ ಇತರೆಡೆಯಂತೆ ಈ ಜಿಲ್ಲೆಯಲ್ಲಿಯೂ ನಗರ ಪ್ರದೇಶಗಳಲ್ಲಿ ಲಾಟರಿ

ಯೋಜನೆಗೆ ಉತ್ತಮ ಪ್ರತಿಕ್ರಿಯೆ ಇರುವುದು. ಇತ್ತೀಚಿನ ಐದು ವರ್ಷಗಳಲ್ಲಿ ಧಾರವಾಡ ಜಿಲ್ಲೆಯಲ್ಲಿ ಮಾರಾಟವಾದ ರಾಜ್ಯ ಲಾಟರಿ ಟಿಕೇಟುಗಳ ಒಟ್ಟು ಮೌಲ್ಯ (ಅಂದಾಜು) ಈ ರೀತಿ ಇರುವುದು. (ಮೊತ್ತ ಲಕ್ಷ ರೂ. ಗಳಲ್ಲಿ) 1989-90 : 82.04 ; 1990-91 : 86.01 ; 1991-92 : 95.08 ; 1992-93 : 441.60 ; ಮತ್ತು 1993-94 : 104.87. (1992-93 ರಲ್ಲಿ ಅತೀ ಹೆಚ್ಚಿನ ಮಾರಾಟಕ್ಕೆ ಕಾರಣ ಒಂದಂಕಿಯ ಲಾಟರಿ ಯೋಜನೆಯನ್ನು ಪ್ರಾರಂಭಿಸಿದ್ದು). ಈ ಜಿಲ್ಲೆಯಲ್ಲಿ ಆರು ಜನ ಲಾಟರಿ ಟಿಕೇಟುಗಳ ಸಗಟು ಮಾರಾಟಗಾರರಿದ್ದು 1993-94 ರಲ್ಲಿ 278 ಜನ ಸಬ್ ಏಜೆಂಟರು ಇರುವರು. ಹಲವು ವರ್ಷದ ಮೊದಲು (1992 ಏಪ್ರಿಲ್) ಪ್ರಾರಂಭಿಸಲಾದ ಒಂದಂಕಿಯ ಪ್ರತಿದಿನದ ಲಾಟರಿ "ಮೈಸೂರು ಲಕ್ಷ್ಮಿ" ಬಹುಬೇಗನೇ ಹೆಚ್ಚು ಜನಾಕರ್ಷಣೀಯವಾಯಿತಲ್ಲದೇ ಬರಬರುತ್ತ ಒಂದು ರೀತಿಯ ಮಟಕಾ ಅಥವಾ ನ್ಯೂಯಾರ್ಕ್ ಹತ್ತಿಧಾರಣೆ ಮೇಲೆ ಹಿಂದೆ ನಡೆಯುತ್ತಿದ್ದ ಓ.ಸಿ. ಜೂಜಾಗಿ ಪರಿವರ್ತನೆಯಾಗಿದ್ದರಿಂದ ನವೆಂಬರ್ 1992 ರಿಂದ ಒಂದಂಕಿಯ ಲಾಟರಿಯನ್ನು ನಿಲ್ಲಿಸಲಾಯಿತು. ಆದಾಗ್ಯೂ ಇತರೇ ರಾಜ್ಯಗಳ ಒಂದಂಕಿ ಲಾಟರಿ ಟಿಕೇಟುಗಳು ಮತ್ತು ಇತರೇ ರಾಜ್ಯದ ಟಿಕೇಟುಗಳು ಈ ಜಿಲ್ಲೆಯಲ್ಲಿ ಮಾರಾಟವಾಗುತ್ತಿವೆ. ಲಾಟರಿ ನಿಯಮಾವಳಿ ಪ್ರಕಾರ ರೂ. ಒಂದು ಲಕ್ಷ ಮತ್ತು ಅದಕ್ಕೂ ಹೆಚ್ಚಿಗೆ ಬಂದ ಬಹುಮಾನದ ಹಣದಲ್ಲಿ ಶೇ. 25 ಹಣವನ್ನು ಮತ್ತು ರೂ. ಐದು ಸಾವಿರದಿಂದ ಒಂದು ಲಕ್ಷದ ವರೆಗಿನ ಬಹುಮಾನದ ಹಣದಲ್ಲಿ ಶೇ. 10 ರಷ್ಟನ್ನು ಕಡ್ಡಾಯವಾಗಿ ರಾಷ್ಟ್ರೀಯ ಉಳಿತಾಯ ಯೋಜನೆಯಲ್ಲಿ ತೊಡಗಿಸಬೇಕಾಗುವುದು. ಇದೂ ಅಲ್ಲದೇ ಲಾಟರಿಯ ಬಹುಮಾನದ ಹಣಕ್ಕೆ ಶೇ. 40 ರಷ್ಟು ಆದಾಯ ತೆರಿಗೆಯನ್ನು ಸಹ ಕೊಡಬೇಕಾಗುವುದು. ಧಾರವಾಡ ಜಿಲ್ಲೆಯಲ್ಲಿ ಹುಬ್ಬಳ್ಳಿ-ಧಾರವಾಡ, ಗದಗ, ರಾಣೆಬೆನ್ನೂರುಗಳು ಪ್ರಮುಖ ಲಾಟರಿ ಮಾರಾಟ ಕೇಂದ್ರಗಳು. ಈ ಜಿಲ್ಲೆಯಲ್ಲಿ ನಡೆಯುತ್ತಿರುವ ಮಟಕಾ ಮತ್ತು ಇತರ ರಾಜ್ಯಗಳ ಒಂದಂಕಿ ಟಿಕೇಟುಗಳ ಮಾರಾಟದಿಂದ ರಾಜ್ಯ ಲಾಟರಿ ಟಿಕೇಟುಗಳ ಮಾರಾಟ ಕುಂಠಿತಗೊಂಡಿದೆ ಎಂದು ವರದಿಯಾಗಿದೆ.

## ನಾಣ್ಯಗಳು ಮತ್ತು ಹಣದ ಚಲಾವಣೆ

ಒಂದು ಪ್ರದೇಶದ ಮುಕ್ತವಾದ ವ್ಯಾಪಾರ ಅಭಿವೃದ್ಧಿಗೆ ಉತ್ತಮ ಗುಣ ಮಟ್ಟದ (ಸ್ಟ್ಯಾಂಡರ್ಡ್) ನಾಣ್ಯಗಳು (ಹಣ) ಮತ್ತು ಅದರ ಅನಿರ್ಬಂಧಿತ ಚಲಾವಣೆ ಬಹುಮುಖ್ಯವಾದ ಪಾತ್ರವನ್ನು ವಹಿಸುವುವು. ವಾಣಿಜ್ಯದ ಬೆಳವಣಿಗೆಯ ಹಲವಾರು ಹಂತಗಳಲ್ಲಿ ವಸ್ತು ವಿನಿಮಯ ಪದ್ಧತಿ (ಬಾರ್ಟರ್), ಲೋಹದ ನಾಣ್ಯಗಳು, ನೋಟುಗಳು (ಪೇಪರ ಕರನ್ಸಿ) ಮುಂತಾದ ಹಲವಾರು ಹಂತಗಳನ್ನು ಗುರುತಿಸಬಹುದು. ಒಂದು ಪ್ರದೇಶದ ಆಡಳಿತದ ಸ್ವಾಮಿತ್ವ ಬೇರೆ ಬೇರೆ ರಾಜಮನೆತನಗಳಿಗೆ ಒಳಪಡುತ್ತ ಹೋದಂತೆ ಆ ಪ್ರದೇಶದಲ್ಲಿ ಬಳಕೆಯಲ್ಲಿ ಇದ್ದ ಹಣ, ಅದರ ತೂಕ, ವಿನ್ಯಾಸ, ಹೊಳಪು, ಅದು ಒಳಗೊಂಡಿರುವ ಲೋಹ ಮತ್ತು ಅದರ ಪ್ರಮಾಣ ಮುಂತಾದವುಗಳಲ್ಲಿ ಉಂಟಾಗಿರುವ ಬದಲಾವಣೆಗಳನ್ನು ನಾವು ಇತಿಹಾಸದ ಉದ್ದಕ್ಕೂ ಕಾಣಬಹುದು.

ಕರ್ನಾಟಕದಲ್ಲಿ ರೋಮನ್ ನಾಣ್ಯಗಳು ದೊರೆತಿರುವ ಕೆಲವೇ ಕೆಲವು ಸ್ಥಳಗಳಲ್ಲಿ ಈ ಜಿಲ್ಲೆಯ ಹಾನಗಲ್ ತಾಲೂಕಿನ ಅಕ್ಕಿ ಆಲೂರು ಒಂದು. ಇಲ್ಲಿ 46 ಚಿನ್ನದ ನಾಣ್ಯಗಳು ಒಂದು ಹೊಲದಲ್ಲಿ ದೊರೆತಿದ್ದು ಅವುಗಳು ಆಗಸ್ಟಸ್, ಟೈಬೀರಿಯಸ್ ಮತ್ತು ಅವರ ನಂತರದ ಆಂಟೋನಿಯಸ್ ಪಯಸ್ (138-61), ಥಿಯೋಡೊಸಿಯಸ್ (408-450) ಮುಂತಾದವರ ಕಾಲದ ನಾಣ್ಯಗಳು. ಅಕ್ಕಿ ಆಲೂರಿನಲ್ಲಿ ದೊರೆತ ನಾಣ್ಯಗಳಲ್ಲಿ ಬಹುಪಾಲು (40) ಪೂರ್ವದ (ಬೈಜೆಂಟಿಯಂ) ರೋಮನ್ ಅರಸರಿಗೆ ಸೇರಿದ್ದು ಅವುಗಳ ಒಂದು ಬದಿಗೆ ಅರಸರ ಮೇಲ್ಭಾಗದ ಚಿತ್ರ ಮತ್ತು ಹೆಸರು, ಇನ್ನೊಂದು ಬದಿಗೆ ಟಂಕಶಾಲೆಯ ಹೆಸರು ದಾಖಲಿಸಲಾಗಿದೆ. ಬೆಳಗಾವಿ ಸಮೀಪದ ವಡಗಾಂವ್ ಮಾಧವಪುರದಲ್ಲಿ ದೊರೆತಿರುವ ಪ್ರಾಚ್ಯ ಅವಶೇಷಗಳಲ್ಲಿ ಕ್ರಿ.ಪೂ. 5 ರಿಂದ 7 ನೇ ಶತಮಾನದ ಅವಧಿಯ 'ಪಂಚ್ ಮಾರ್ಕ್' ನಾಣ್ಯಗಳೂ ಸೇರಿವೆ. ಬನವಾಸಿಯ ಕದಂಬರು 'ಪದ್ಮಟಂಕ' ಎಂಬ ನಾಣ್ಯವನ್ನು ಚಲಾವಣೆಯಲ್ಲಿ ತಂದವರಲ್ಲಿ ಮೊದಲಿಗರು ಎಂದು ಹೇಳಲಾಗುವುದು. ಅನೇಕ ಶತಮಾನಗಳವರೆಗೆ ರೂಢಿಯಲ್ಲಿದ್ದ 'ವರಾಹ' ಅಥವಾ 'ಗದ್ಯಾಣ' ಎಂಬ ಬಂಗಾರದ ನಾಣ್ಯವನ್ನು ಮೊದಲಿಗೆ ಬಳಕೆಯಲ್ಲಿ ತಂದವರು ಬಾದಾಮಿಯ ಚಾಳುಕ್ಯರು ಎಂಬುದನ್ನು ಐಹೊಳೆ ಪಟ್ಟದಕಲ್ಲಿನ ವಿಕ್ರಮಾದಿತ್ಯನ ಶಾಸನಗಳಿಂದ ತಿಳಿದು ಬರುವುದು. ಚಾಲುಕ್ಯರ ರಾಜಲಾಂಛನ ವರಾಹ ಆಗಿತ್ತು. 'ವರಾಹ' ಎಂಬ ಹೆಸರಿನ ಬಂಗಾರದ ನಾಣ್ಯವು ಬಹುಶಃ ರೂಢನಾಮವಾಗಿ ಚಾಲುಕ್ಯರ ಕಾಲದಿಂದ ಪ್ರಾರಂಭವಾಗಿ 17 ನೇ ಶತಮಾನದ ಕೆಳದಿಯ ಅರಸರ ಕಾಲದವರೆಗೂ 'ಇಕ್ಕೇರಿ ವರಹ' ಎಂಬ ಹೆಸರಿನಿಂದ ಬಳಕೆಯಲ್ಲಿದ್ದು, ಉತ್ತಮ ನಾಣ್ಯದ (ಸ್ಟ್ಯಾಂಡರ್ಡ್) ಎಲ್ಲಾ ಅಂಶಗಳನ್ನು ಅದು ಒಳಗೊಂಡಿದ್ದ ಸಾಧ್ಯತೆ ಉಂಟು. ಈ ಮೇಲಿನ ಎಲ್ಲಾ ನಾಣ್ಯಗಳು ಧಾರವಾಡ ಜಿಲ್ಲೆಯ ಪ್ರದೇಶದಲ್ಲಿ ಚಲಾವಣೆಯಲ್ಲಿ ಇದ್ದ ಬಗ್ಗೆ ದಾಖಲೆಗಳಿಂದ ತಿಳಿದುಬರುವುದು.

ಪ್ರಾಚೀನ ಕಾಲದಲ್ಲಿ ನಾಣ್ಯಗಳನ್ನು ಮುದ್ರಿಸುವುದು ಸರ್ಕಾರದ ಸಂಪೂರ್ಣ ಒಡೆತನಕ್ಕೆ ಸೇರಿರಲಿಲ್ಲ. ಸರ್ಕಾರದ ಅನುಮತಿಯನ್ನು ಪಡೆದ ಖಾಸಗಿ ವ್ಯಕ್ತಿಗಳು ವಿಶೇಷವಾಗಿ ಸರಾಫರು, ವೃತ್ತಿನಿರತ ಅಕ್ಕಸಾಲಿಗರು ಈ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಆದರೆ ಸರ್ಕಾರವು ಇವುಗಳ ಮೇಲೆ ನಿಯಂತ್ರಣ ಹೊಂದಿತ್ತು. ನಾಣ್ಯಗಳನ್ನು ಟಂಕಿಸುತ್ತಿದ್ದ ಸ್ಥಳಗಳನ್ನು 'ಕಮ್ಮಟ'ಗಳೆಂದು, 'ಅಚ್ಚಿನ ಟಂಕಸಾಲೆ'ಗಳೆಂದು ಕರೆಯುತ್ತಿದ್ದರು. ಶಾಸನಗಳಲ್ಲಿ ನಾಣ್ಯವನ್ನು 'ಅಚ್ಚು' ಎಂದು ಸಹ ಬಳಸಲಾಗಿದೆ. ಕೇಂದ್ರ ಮತ್ತು ಸ್ಥಳೀಯ ಅಧಿಕಾರಿಗಳಿಬ್ಬರೂ ನಾಣ್ಯಗಳನ್ನು ಬಿಡುಗಡೆ ಮಾಡುವ ಅಧಿಕಾರ ಹೊಂದಿರುತ್ತಿದ್ದರು. ಚಿನ್ನ, ಬೆಳ್ಳಿ, ತಾಮದ್ರ ನಾಣ್ಯಗಳನ್ನು ಕಮ್ಮಟದಲ್ಲಿ ಟಂಕಿಸುತ್ತಿದ್ದರು. ಟಂಕಿಸುವವನು ಸರಕಾರಕ್ಕೆ ಸೂಕ್ತ ತೆರಿಗೆ ಕೊಡಬೇಕಾಗಿತ್ತು.

ರಾಜ್ಯದ ಉತ್ಪನ್ನದ ಮೂಲಗಳನ್ನು ಗದ್ಯಾಣದ ರೂಪದಲ್ಲಿ ಸಂದಾಯ ಮಾಡುವ ಪರಿಪಾಠವಿತ್ತು. ದೇವಸ್ಥಾನಕ್ಕೆ ಬರುವ ಸುವರ್ಣಾದಾಯವನ್ನು ಗದ್ಯಾಣ ಅಥವಾ ವರಾಹಗಳ ರೂಪದಲ್ಲಿ ಹಾಗೂ ಚಿಲ್ಲರೆ ಹಣ ವೀಸೆಗಳ ರೂಪದಲ್ಲಿ ಶಾಸನಾಂಕಿತ ಮಾಡಿದ್ದು ಕಂಡು ಬರುತ್ತದೆ. ಈ ಜಿಲ್ಲೆಯ ಲಕ್ಕುಂಡಿ, ಸೂಡಿ, ಲಕ್ಷ್ಮೇಶ್ವರ, ಸವಣೂರು, ನರಗುಂದ, ಹಾನಗಲ್, ಧಾರವಾಡಗಳಲ್ಲಿ ಬೇರೆ ಬೇರೆ ಅರಸರ ಕಾಲದಲ್ಲಿ ನಾಣ್ಯ ಟಂಕನಗಳು ಇದ್ದುದಾಗಿ ತಿಳಿದು ಬರುವುದು. ನರಗುಂದದ ಶಂಕರಲಿಂಗ ದೇವಾಲಯದ ಒಂದು ಶಾಸನ (ಮುಮ್ಮಡಿ ತೈಲನ ಕಾಲಕ್ಕೆ ಸೇರಿದ್ದು) ನರಗುಂದದ ಭಾಗವಾಗಿದ್ದ ಹೇಮಂಗೇರಿಯಲ್ಲಿ ವಾಸವಾಗಿದ್ದ ವೈಶ್ಯ ಜನಾಂಗದ ಟಂಕಾಧಿಕಾರಿ ಕುಪ್ಪಟೆ ಏಟಿಸೆಟ್ಟಿಯ ವಿಚಾರ ತಿಳಿಸುವುದು. ಈ ಜಿಲ್ಲೆಯ ಶಾಸನಗಳಲ್ಲಿ ಮುಖ್ಯವಾಗಿ 'ವೀಸ', 'ಅರೆವೀಸ', 'ಪಣ' ಹಾಗೂ 'ಸುವರ್ಣ', 'ಗದ್ಯಾಣ', 'ಲೊಕ್ಕಿಯ ಗದ್ಯಾಣ', 'ದ್ರಮ್ಮ' 'ಬೇಳೆ' ಎಂಬ ಹೆಸರಿನ ಉಲ್ಲೇಖಗಳನ್ನು ಕಾಣಬಹುದು.

ಹೊಯ್ಸಳರ ಕಾಲದಲ್ಲಿ ಚಿನ್ನದ ನಾಣ್ಯಗಳನ್ನು 'ಗದ್ಯಾಣ'ಗಳೆಂದು ಕರೆಯಲಾಗುತ್ತಿತ್ತು. ಅವುಗಳ ತೂಕ 62 ಗ್ರೇನ್ಸ್ ಆಗಿತ್ತು. ವಿಜಯನಗರದ ಅರಸರ ಕಾಲದಲ್ಲಿ ಚಿನ್ನ ಮತ್ತು ತಾಮ್ರದ ಉತ್ತಮ ಗುಣಮಟ್ಟದ (ಸ್ಟ್ಯಾಂಡರ್ಡ್) ವಿವಿಧ ಮೌಲ್ಯಾಂಕಿತ ನಾಣ್ಯಗಳು ಬಳಕೆಯಲ್ಲಿದ್ದವು. ವರಾಹ, ಅಥವಾ ಗದ್ಯಾಣ (52 ಗ್ರೇನ್ ತೂಕ) ಇವುಗಳನ್ನು 'ಪಗೋಡ' ಅಥವಾ ಪೊನ್ನು ಎಂತಲೂ ಕರೆಯುತ್ತಿದ್ದರು. ವಿಜಯನಗರದ ಕಾಲದಲ್ಲಿ ಹಣ (ಪಣ) ಎಂಬ ನಾಣ್ಯವಿದ್ದು ಅದು ಗದ್ಯಾಣದ 1/10 ಆಗಿದ್ದು ಹಾಗ, ಬೇಳೆ, ವೀಸ, ಕಾಸು ಇವುಗಳು ಅನುಕ್ರಮವಾಗಿ ಹಣದ 1/4, 1/8, 1/16 ಮತ್ತು 1/64 ರ ಭಾಗಗಳಾಗಿದ್ದವು; ಇತರ ನಾಣ್ಯಗಳೆಂದರೆ ಪ್ರತಾಪ (ಕಾಟಿ), ಪಣ (1/10 ಗದ್ಯಾಣ), ಹಾಗ, ತಾರಾ, ಜೈತಲ್ ಮತ್ತು ಕಾಸು ಮುಂತಾದವುಗಳು. ಇತ್ತೀಚೆಗೆ 1977 ರಲ್ಲಿ ಹಿರೇಕೆರೂರು ತಾಲೂಕಿನ ಗಂಗಾಪುರದಲ್ಲಿ 11 ಚಿನ್ನದ ನಾಣ್ಯಗಳು ದೊರೆತಿದ್ದು, ಅವುಗಳಲ್ಲಿ 8 ಕೃಷ್ಣದೇವ ರಾಯನ ಕಾಲದ್ದು (1509-1529), ಉಳಿದವುಗಳು ಟಿಪ್ಪುವಿನ ಕಾಲದವಾಗಿದ್ದು ಹಿಜರಿ ಶಕೆ 1216-1218 (ಕ್ರಿ.ಶ. 1772-1778) ಎಂದು ಸೂಚಿಸಲಾಗಿದೆ. ಬಹಮನಿ ಸುಲ್ತಾನರ ಕಾಲದಲ್ಲಿ ದೆಹಲಿ ಸುಲ್ತಾನರ ಟಂಕಾ (170 ಗ್ರೇನ್ಸ್) ಮತ್ತು ದಿನಾರ (197 ಗ್ರೇನ್ಸ್) ಎಂಬ ಚಿನ್ನದ ನಾಣ್ಯಗಳು ರೂಢಿಯಲ್ಲಿದ್ದವು. ಅವರ ಕಾಲದಲ್ಲಿ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ಸಹ ರೂಢಿಯಲ್ಲಿದ್ದವು. ಆದಿಲ್ ಶಾಹಿ ಅರಸರ ಚಿನ್ನದ ನಾಣ್ಯಗಳು 'ಹೊನ್' (52 ಗ್ರೇನ್) ಆಗಿತ್ತು. ಅದರ ಅರ್ಧ 'ಧರಣಾ' ಅಥವಾ 'ಪ್ರತಾಪ' ಎಂಬುದಾಗಿತ್ತು. 'ಧಾರವಾಡಿಹೊನ್' ಎಂಬ ನಾಣ್ಯವನ್ನು ಬಿಜಾಪುರದ ಆದಿಲಶಾಹಿಗಳು ಟಂಕಿಸುತ್ತಿದ್ದರು. ಬಹಮನಿ ಹಾಗೂ ಮೊಗಲರ ನಾಣ್ಯಗಳ ಮೇಲೆ 'ಜುಲೂಸ' ಎಂಬ ಪದ ಬಹಳಷ್ಟು ಸಲ ಕಂಡು ಬರುತ್ತದೆ. ಇದು ರಾಜನ ಪಟ್ಟಾಭಿಷೇಕದ ಇಸವಿಯನ್ನು ಸೂಚಿಸುವುದು. ಶಿವಾಜಿಯ ಕಾಲದಲ್ಲಿ ಅವನ ಪಟ್ಟಾಭಿಷೇಕ ಸಮಯದಲ್ಲಿ 'ಹೊನ್' ಎಂಬ ಬಂಗಾರದ, 'ಶಿವರಾಯಿ' ಎಂಬ ತಾಮ್ರದ ನಾಣ್ಯಗಳು ಬಳಕೆಯಲ್ಲಿ ಬಂದವು. ಹೈದರ ಮತ್ತು ಟಿಪ್ಪೂ ಕಾಲದಲ್ಲಿ ಮೈಸೂರಿನ ಅರಸರ ನಾಣ್ಯಗಳು ರೂಢಿಯಲ್ಲಿ ಮುಂದುವರೆದವು. ಅಲ್ಲದೇ ಅವರದೇ ಆದ ಕೆಲವೊಂದು ನಾಣ್ಯಗಳನ್ನು ಜಾರಿಯಲ್ಲಿ ತರಲಾಯಿತು.

ಈ ಭಾಗದಲ್ಲಿ ಇಂಗ್ಲೀಷರ ಆಳ್ವಿಕೆ ಪ್ರಾರಂಭವಾಗಿ ಸುಮಾರು 20 ವರ್ಷಗಳವರೆಗೆ ಅಂದರೆ 1836 ರಲ್ಲಿ ಕಂಪನಿ ರೂಪಾಯಿ ಚಲಾವಣೆಯಲ್ಲಿ ಬರುವವರೆಗೆ ಮಲಪ್ರಭಾ ನದಿಯ ದಕ್ಷಿಣ ಭಾಗದ ಪ್ರದೇಶಗಳಲ್ಲಿ ಸುಮಾರು 18 ಬಗೆಯ 'ವರಹ'ಗಳು (ಹೊನ್) ರೂಢಿಯಲ್ಲಿದ್ದವು ಎಂದು ತಿಳಿದು ಬರುವುದು. ಅಂದು ರೂಢಿಯಲ್ಲಿದ್ದ 18 ಬಗೆಯ (ಚಿನ್ನದ) ವರಹಗಳು ಯಾವುವೆಂದರೆ: ಗಜಪತಿ (ರೂ. 4 1/2), ಬಹಾದ್ದೂರಿ, ಹೊಸ ಇಕ್ಕೇರಿ (ರೂ. 4 1/2), ಹಳೇ ಇಕ್ಕೇರಿ, ಸುಲ್ತಾನಿ (ರೂ. 4 ), ದುರ್ಗಿಗುತ್ತಿ, ಜಯಕೇಶಿ, ಮಾಗಡಿ (ರೂ. 3 3/4), ಧಾರವಾಡಿ, ನವಲಗುಂದಿ, ಬನವಾಸಿ, ಶಮಶೇರಿ, ಅಶ್ವಪತಿ, ವೆಂಕಟಪತಿ (ರೂ. 2 1/2), ಅಚ್ಯುತರಾಯ, ದೇವರಾಯ, ರಾಮಚಂದ್ರರಾಯ, ಸತಾರಿ, ಅಲಮಗಿರಿ, ಕಂಠೀರಾಯಿ, ಪುಣೆ, ಚಾಂದವಾಡಿ (ಅರ್ಕಾಟ), ನೀಲಕಂಠೀ, ಪುಲಚೇರಿ

(ಪಾಂಡಿಚೇರಿ) ಮತ್ತು ಸವಣೂರಿ ಮುಂತಾದವುಗಳು. ಪೇಶ್ವೆಯವರ ಕಾಲದಲ್ಲಿ ಸರ್ಕಾರದ ಕಂದಾಯವನ್ನು ಅರ್ಕಾಟ-ಪುಲುಚೇರಿ, ಪುಣೆ-ಧಾರವಾಡಿ, ಇಕ್ಕೇರಿ-ಧಾರವಾಡಿ ಈ ಮೂರರಲ್ಲಿ ಯಾವುದಾದರೂ ಒಂದು ನಾಣ್ಯದ ಮೂಲಕ ಕೊಡಬಹುದಾಗಿತ್ತು. (ಕೆಲವು ನಾಣ್ಯಗಳನ್ನು ಅವುಗಳನ್ನು ಟಂಕಿಸಲ್ಪಟ್ಟ ಎರಡೂ ಸ್ಥಳಗಳಿಂದ ಕರೆಯುತ್ತಿದ್ದರು). ಪೇಶ್ವೆಯವರ ನಾಣ್ಯಗಳು ಮೂರು ವಿಧದ ಲೋಹಗಳಿಂದ ಕೂಡಿರುತ್ತಿದ್ದವು, ಅವುಗಳೆಂದರೆ: ಬಂಗಾರ, ಬೆಳ್ಳಿ ಮತ್ತು ತಾಮ್ರ. ಜನಸಾಮಾನ್ಯರು ಮತ್ತು ಗ್ರಾಮೀಣರು ತಾಮ್ರದ ನಾಣ್ಯಗಳನ್ನು ಉಪಯೋಗಿಸುತ್ತಿದ್ದರು. 'ಟಕ್ಕಾ' ಎಂಬುದು ಒಳ್ಳೇ ಗುಣಮಟ್ಟದ (ಸ್ಟಾಂಡರ್ಡ್) ತಾಮ್ರದ ನಾಣ್ಯವಾಗಿತ್ತು. ಅದನ್ನು 1/8, 1/16, 1/48 ಭಾಗಗಳಲ್ಲಿ ಟಂಕಿಸುತ್ತಿದ್ದರು. ಒಂದು 'ಹೊನ್' 10 ಟಕ್ಕಗಳಿಗೆ ಸಮನಾಗಿತ್ತು. ಒಂದು 'ಟಕ್ಕಾ' ಸುಮಾರು ಆರು ಆಣೆಗಳಿಗೆ ಸಮನಾಗಿತ್ತು. ಯುದ್ಧಕಾಲದಲ್ಲಿ ಹಣದ ಬೇಡಿಕೆ ಹೆಚ್ಚಾಗಿ ಪೇಶ್ವೆಯವರು ಕರ್ನಾಟಕದಲ್ಲಿ ಅನೇಕ ಟಂಕಸಾಲೆಗಳನ್ನು ಪ್ರಾರಂಭಿಸಿದರು. ಪೇಶ್ವೆಯವರ ಕೆಲವು ಅಪ್ರಾಮಾಣಿಕ ಮಾಂಡಲಿಕರು, ಜಹಗೀರದಾರರು, ತಮ್ಮ ತಮ್ಮ ಆಡಳಿತ ಪ್ರದೇಶಗಳಲ್ಲಿ ಖೋಟಾ ನಾಣ್ಯಗಳನ್ನು ಟಂಕಿಸಲು ಪ್ರಾರಂಭಿಸಿದ್ದರಿಂದ ಮರಾಠಾ ಸರ್ಕಾರವು ತುಂಬಾ ನಷ್ಟಕ್ಕೆ ಒಳಗಾಗಬೇಕಾಯಿತು. ಆದ್ದರಿಂದ ನಾನಾಸಾಹೇಬ ಪೇಶ್ವೆ (ಬಾಳಾಜಿ ಭಾಜೀರಾವ) ಧಾರವಾಡ (ಸುಭಾ) ವಿಭಾಗದಲ್ಲಿಯ (ಮುನವಳ್ಳಿ, ಲಕ್ಷ್ಮೇಶ್ವರ, ತೊರಗಲ್ಲ, ಅಥಣಿ, ಗೋಕಾಕ, ಮುರಗೋಡ, ನವಲಗುಂದ, ರಾಮದುರ್ಗ, ಜಮಖಂಡಿ, ಬಾಗಿಲುಕೋಟೆ)ಗಳಲ್ಲಿಯ ಎಲ್ಲಾ ಟಂಕ ಸಾಲೆಗಳನ್ನು ಮುಚ್ಚುವಂತೆ ಮತ್ತು ಖೋಟಾ ನಾಣ್ಯಗಳನ್ನು ಕರಗಿಸುವಂತೆ ಆಜ್ಞೆ ಮಾಡಿದನು. ಕೇವಲ ಧಾರವಾಡ ನಗರದಲ್ಲಿಯ ಒಂದೇ ಟಂಕಸಾಲೆಯನ್ನು ಮುಂದುವರಿಸಾಯಿತು. ಅಲ್ಲಿ ಹೊನ್, ಮೊಹರ ಮತ್ತು ರೂಪಾಯಿ ಟಂಕಿಸಲ್ಪಡುತ್ತಿದ್ದವು. ಧಾರವಾಡ ಕೇಂದ್ರೀಯ ಟಂಕಸಾಲೆಯಲ್ಲಿ ತಯಾರಿಸಲ್ಪಟ್ಟ ನಾಣ್ಯಗಳು ಕೃಷ್ಣಾ-ತುಂಗಭದ್ರಾಗಳ ನಡುವಿನ ಪ್ರದೇಶಗಳಲ್ಲಿ ಜಾರಿಯಲ್ಲಿ ಇದ್ದವು.

ಧಾರವಾಡ ಹೊಸ ಟಂಕ ಸಾಲೆಯಲ್ಲಿ ಟಂಕಿಸಲಾದ 'ಹೊನ್ನಿ'ನ ತೂಕ 3 1/2 ಮಾಸಿ ಚಿನ್ನದ್ದಾಗಿತ್ತು. 'ಮೊಹರ'ಗಳ ತೂಕ ಒಂದು ತೊಲೆ (11.6 ಗ್ರಾಮ್) ತೂಕದ ಚಿನ್ನದ್ದಾಗಿತ್ತು. 1768 ರ ಸುಮಾರಿಗೆ ಧಾರವಾಡದ ಇಬ್ಬರು ಸರಾಫರಿಗೆ ಟಂಕಸಾಲೆ ನಡೆಸಲು ಒಪ್ಪಿಗೆ ನೀಡಲಾಯಿತು ಎಂದು ಪೇಶ್ವೆ ದಫ್ತರಗಳಿಂದ ತಿಳಿದು ಬರುವುದು. ಪೇಶ್ವೆ ಕಾಲದಲ್ಲಿ ಧಾರವಾಡದ ಹೊನ್ನಿನ ತೂಕ 50.52 ಗ್ರೇನ್ಸ್ ಆಗಿತ್ತು. ನಾಣ್ಯಕ್ಕೆ ಉಪಯೋಗಿಸುವ ಲೋಹದ ಗುಣಮಟ್ಟ ಪರೀಕ್ಷಿಸಲು 'ಸರಾಫ' 'ಚೌಕಶಿ' ಎಂಬ ಅಧಿಕಾರಿಗಳನ್ನು ನೇಮಿಸುತ್ತಿದ್ದರು ಎಂದು ತಿಳಿದು ಬರುವುದು. 1830 ರಲ್ಲಿ ಒಂದು ಹೊನ್ನಿನ ಬೆಲೆಯನ್ನು ಕಂಪನಿಯ 3 1/2 ರೂ.ಗೆ ಸಮವೆಂದು ಅಧಿಕೃತವಾಗಿ ನಿರ್ಧರಿಸಲಾಗಿತ್ತು. ಆದರೆ ಮಾರುಕಟ್ಟೆಯಲ್ಲಿ ಅದರ ಬೆಲೆ ಅನಧಿಕೃತವಾಗಿ ನಾಲ್ಕು ರೂ. ಆಗಿತ್ತು. ಕಂಪನಿಯ ರೂಪಾಯಿಯಲ್ಲಿ 1830 ರಲ್ಲಿ ಧಾರವಾಡ ಕಲೆಕ್ಟರ ಅವರ ಸಂಬಳ 350 ರೂ. (ನೂರು ಹೊನ್ನು) ಆಗಿತ್ತೆಂದು ತಿಳಿದು ಬರುವುದು. ಬ್ರಿಟೀಷರ ಆಡಳಿತ ಪ್ರಾರಂಭದ ಪೂರ್ವದಲ್ಲಿ ಈ ಜಿಲ್ಲೆಯಲ್ಲಿ ಚಲಾವಣೆಯಲ್ಲಿದ್ದ ಬಂಗಾರದ ನಾಣ್ಯಗಳಲ್ಲಿ ಮುಖ್ಯವಾಗಿ ರಾಮಟಂಕಿ ಮೊಹರ (ಬೆಲೆ ರೂ. 80 ), ಹನುಮ ಟಂಕಿ (18 ರೂ), ಪದ್ಮ ಟಂಕಿ (18 ರೂ), ಅಕ್ಬರಿ ಮೊಹರು (16 ರೂ), ಮುಂತಾದವುಗಳು. ರಾಮಟಂಕಿ ನಾಣ್ಯದ ತೂಕ ಸರಿಯಾಗಿ ನಾಲ್ಕು ತೊಲ ತೂಕ ಇರುತ್ತಿತ್ತು, ಅದರ ಅರ್ಧ ನಾಣ್ಯಕ್ಕೆ 'ಪ್ರತಾಪ' ಎನ್ನುತ್ತಿದ್ದರು, ಕಾಲುಭಾಗದ ನಾಣ್ಯಕ್ಕೆ 'ಧರಣ' ಎನ್ನುತ್ತಿದ್ದರು. ಆದರೆ ಈ ಬೆಲೆಯುಳ್ಳ ನಾಣ್ಯಗಳು ಕ್ವಚಿತ್ತಾಗಿ ನಡೆಯುತ್ತಿದ್ದವು. ವಾಡಿಕೆಯಲ್ಲಿ ವರಹ, ಹೊನ್ನು ಎಂಬ ನಾಣ್ಯಗಳೇ ಬಹಳ ರೂಢಿಯಲ್ಲಿದ್ದವು.

ಪೇಶ್ವೆಯವರ ಕಾಲದಲ್ಲಿ ಮಾರುಕಟ್ಟೆಯ ಬೆಳವಣಿಗೆ ಹೆಚ್ಚಿನ ಪ್ರೋತ್ಸಾಹವಿತ್ತು. ಅವರು ಮಾರುಕಟ್ಟೆಯ ಅಭಿವೃದ್ಧಿಗೆ ಉಂಬಳಿ ಹಾಕಿ ಕೊಡುತ್ತಿದ್ದರು. ವರ್ತಕರಿಗೆ ಅನುಕೂಲವಾಗುವಂತೆ ಟಂಕಸಾಲೆಗಳನ್ನು ಮಾರುಕಟ್ಟೆಯ ಸ್ಥಳಗಳಲ್ಲಿ ಪ್ರಾರಂಭಿಸುತ್ತಿದ್ದರು. ಕ್ರಿ.ಶ. 1753 ರಲ್ಲಿ ಬಾಳಾಜಿ ಬಾಜಿರಾವ ಪೇಶ್ವೆ ಪ್ರಾರಂಭ ಮಾಡಿದ್ದ ಟಂಕಸಾಲೆ 1817 ರವರೆಗೂ ಧಾರವಾಡದಲ್ಲಿ ಮುಂದುವರೆದಿತ್ತು. ಇತರ ರಾಜ್ಯಗಳ ನಾಣ್ಯಗಳ ಸಂಗಡ ವಿನಿಮಯ ಮಾಡಬೇಕಾದರೆ ಸರ್ಕಾರಕ್ಕೆ ಶುಲ್ಕ ಅಥವಾ ಕಮಿಶನ್ ಕೊಡಬೇಕಾಗುತ್ತಿತ್ತು.

**ಬ್ರಿಟೀಷರ ನಾಣ್ಯ ಪದ್ಧತಿ:** ಭಾರತದಲ್ಲಿ ನೆಲೆಸಿದ್ದ ಬ್ರಿಟೀಷರು, ಡಚ್ಚರು, ಫ್ರೆಂಚರು, ಪೋರ್ತುಗೀಸರು ಇಲ್ಲಿ ಬೇರೂರಿ ನಿಂತ ಮೇಲೆ ಸ್ಥಳೀಯ ನವಾಬರ\ಅರಸರ ಒಪ್ಪಿಗೆಯ ಮೇರೆಗೆ ತಮ್ಮ ಕಂಪನಿ ಹೆಸರಿನಿಂದ ಪಾರ್ಸಿ ಭಾಷೆಯಲ್ಲಿ ನಾಣ್ಯಗಳನ್ನು ಹೊರತಂದರು. ಈಸ್ಟ್ ಇಂಡಿಯಾ ಕಂಪನಿಯವರು ಮೊದಲಿಗೆ 1818 ರಲ್ಲಿ ಮುಂಬೈನಲ್ಲಿ, 1825 ರಲ್ಲಿ ಮದ್ರಾಸಿನಲ್ಲಿ ಮತ್ತು 1830 ರಲ್ಲಿ ಕಲ್ಕತ್ತೆಯಲ್ಲಿ ಟಂಕಸಾಲೆಗಳನ್ನು ಸ್ಥಾಪಿಸಿದರು.

**ರೂಪಾಯಿ ಉಗಮ:** ಇಂದಿಗೂ ವಿಶ್ವದ ಬಹುರಾಷ್ಟ್ರಗಳಲ್ಲಿ ಸರ್ಕಾರದ ಅಧೀಕೃತ ನಾಣ್ಯವಾಗಿರುವ 'ರೂಪಾಯಿ' ಎಂಬ ನಾಣ್ಯವನ್ನು ಭಾರತದಲ್ಲಿ ಮೊಟ್ಟ ಮೊದಲು ಕ್ರಿ.ಶ. 1325ರಲ್ಲಿ ಮಹಮ್ಮದ್ ತುಘಲಕನು ಪ್ರಾರಂಭಿಸಿದನು ಎಂದು ಹೇಳಲಾಗುವುದು. ಅಂದಿನ ಆ ರೂಪಾಯಿ ಬೆಳ್ಳಿಯದಾಗಿತ್ತು, ತೂಕ ಒಂದು ತೊಲೆಗಿಂತ ಕಡಿಮೆ ಇತ್ತು. ನಂತರ ಕ್ರಿ.ಶ. 1542 ರಲ್ಲಿ ಶೇರ್‌ಷಾ ಸೂರಿಯ ಕಾಲದಲ್ಲಿ ಪ್ರಮಾಣಬದ್ಧ ಮತ್ತು ಸುಂದರವಾಗಿ ಕಾಣುವ ಒಂದು ತೊಲೆ ತೂಕದ (178 ಗ್ರೇನ್ಸ್) ಬೆಳ್ಳಿಯ ರೂಪಾಯಿ ರೂಢಿಯಲ್ಲಿ ಬಂದಿತು ಎಂದು ಹೇಳಲಾಗುತ್ತದೆ. 1835 ರಿಂದ 1854 ರ ವರೆಗೆ ವಿಕ್ಟೋರಿಯಾ ರಾಣಿಯ ಬೆಳ್ಳಿಯ ನಾಣ್ಯಗಳು ಹೊರಬಂದವು. ಕಂಪನಿಯ ಸರ್ಕಾರದ ನಾಣ್ಯಗಳು ಸಾರ್ವತ್ರಿಕವಾಗಿ ಚಲಾವಣೆಯಲ್ಲಿ ಬರುವ ಹಲವಾರು ವರ್ಷಗಳ ಪೂರ್ವದಲ್ಲಿ ಈ ಜಿಲ್ಲೆಯಲ್ಲಿ ಕಂಪನಿಯ ರೂಪಾಯಿ ಅಲ್ಲದೇ 13 ಬಗೆಯ ವಿವಿಧ ಬೆಳ್ಳಿಯ ರೂಪಾಯಿಗಳು ಚಲಾವಣೆಯಲ್ಲಿ ಇದ್ದವು. ಕಂಪನಿಯ ರೂಪಾಯಿಗಳ ವಿನಿಮಯ ದರ ಬೇರೆ ಬೇರೆ ಟಂಕಶಾಲೆಗಳ ರೂಪಾಯಿಗಳಿಗೆ ಬೇರೆ ಬೇರೆಯಾಗಿತ್ತು. ಕಂಪನಿಯ 102 ರೂ.ಗೆ ಮುಂಬಯಿ ಮತ್ತು ಸೂರತ್‌ನ ರೂ. 104, ಪುಣೆಯ ರೂ. 96, ಬಾಗಿಲುಕೋಟೆಯ ರೂ. 99, ಶಹಾಪೂರದ ರೂ. 92, ಕಿತ್ತೂರಿನ ರೂ. 91, ಧಾರವಾಡದ ರೂ. 90, ಹೈದರಾಬಾದಿನ ರೂ. 88, ಪನ್ನಾಳಿ ಮತ್ತು ಕೊಲ್ಹಾಪುರಿಯ ರೂ. 65 ವಿನಿಮಯವಾಗುತ್ತಿದ್ದವು. ಸಾಮಾನ್ಯವಾಗಿ ಸ್ಥಳೀಯ ರೂಪಾಯಿಗಳ ಮೌಲ್ಯ ಕಂಪನಿ ರೂಪಾಯಿಗಿಂತ ಹೆಚ್ಚಾಗಿತ್ತು.

1818 ರ ಸುಮಾರಿಗೆ ದಕ್ಷಿಣ ಮಹಾರಾಷ್ಟ್ರ ಪ್ರದೇಶಕ್ಕೆ ಬೆಳಗಾವಿಯನ್ನು ಸೈನಿಕ ಕೇಂದ್ರವಾಗಿ ಮಾಡಲಾಯಿತು. ಆ ಸಮಯದಲ್ಲಿ ಈ ಭಾಗದಲ್ಲಿ ಸಾಮಾನ್ಯ ವ್ಯವಹಾರಗಳು ಸಾವಂತವಾಡಿಯಲ್ಲಿ ಟಂಕಿಸುತ್ತಿದ್ದ ಶಹಾಪುರ ರೂಪಾಯಿಗಳ ಮೂಲಕ ನಡೆಯುತ್ತಿತ್ತು. ಇದು ಬೆಳ್ಳಿ ಮತ್ತು ಇತರ ಮಿಶ್ರಲೋಹ ಕೂಡಿತ್ತು. 1822 ರಲ್ಲಿ ಬೆಳಗಾವಿಯು ಈ ಭಾಗದ, ಸರ್ಕಾರದ ಬಟವಾಡೆಯ (ಪೇ ಆಫೀಸ್) ಕೇಂದ್ರವಾದ ನಂತರ ಮದ್ರಾಸ, ಬಾಗಲಕೋಟೆ, ನಾಸಿಕ ಮುಂತಾದ ರೂಪಾಯಿಗಳ ವಿನಿಮಯ ಕೇಂದ್ರವಾಯಿತು. 1822 ರ ಸುಮಾರಿಗೆ ಈ ಭಾಗದಲ್ಲಿದ್ದ ತಾಮ್ರದ ನಾಣ್ಯಗಳ ಪೈಕಿ ಸತಾರೆಯಲ್ಲಿ ಟಂಕಿಸಲ್ಪಟ್ಟ 'ಶಾಹುಪೈಸಾ' ಹೆಚ್ಚು ಚಲಾವಣೆಯಲ್ಲಿ ಇತ್ತು. ಅದನ್ನು 'ದುಡ್ಡು' ಎಂತಲೂ ಕರೆಯುತ್ತಿದ್ದರೂ ಈ ದುಡ್ಡು ಅಲ್ಲದೇ ಬೇರೆ ಒಂದು ದುಡ್ಡ 'ಶಾಹೀದುಡ್ಡು' ಅಥವಾ ಕಪ್ಪು (ಕರಿ) ದುಡ್ಡು 'ಗಟ್ಟಿ ದುಡ್ಡು' ಎಂತಲೂ ಇದನ್ನು ಕರೆಯುತ್ತಿದ್ದರು. ಬ್ರಿಟಿಷ್ ಸರ್ಕಾರವು ಚಲಾವಣೆಯಲ್ಲಿ ತಂದಿದ್ದ, ಕಡಿಮೆ ಮೌಲ್ಯದ ತಾಮ್ರ, ನಿಕ್ಕಲ್ ಮತ್ತು ಬೆಳ್ಳಿಯ ನಾಣ್ಯಗಳೆಂದರೆ, ಒಂದು ಆಣೆ, ಚವಲಿ (ಎರಡು ಆಣೆ), ಪಾವಲಿ (ನಾಲ್ಕು ಆಣೆ), ಅರ್ಧ ರೂಪಾಯಿ (ಎಂಟು ಆಣೆ) ಮುಂತಾದವುಗಳು. ರೂಪಾಯಿಯನ್ನು 16 ಆಣೆಗಳನ್ನಾಗಿ ವಿಭಜಿಸಲಾಗಿತ್ತು. ಒಂದು ಆಣೆಯನ್ನು ನಾಲ್ಕು ದುಡ್ಡುಗಳಾಗಿ (ಪಾವಾಣೆ)ಗಳಾಗಿ ಒಂದು ದುಡ್ಡಿಗೆ ಮೂರು ಪೈಗಳಾಗಿದ್ದವು. ದುಡ್ಡನ್ನು 'ಬಿಲ್ಲಿ' ಎಂತಲೂ ಕರೆಯುತ್ತಿದ್ದರು. ಕೆಲವು ಸಮಯ ಮಧ್ಯದಲ್ಲಿ ರಂದ್ರ (ತೂತು) ಇದ್ದು 'ತೂತಿನಬಿಲ್ಲಿ' ಚಲಾವಣೆಯಲ್ಲಿ ಇತ್ತು. ಪೈಯನ್ನು ಧಮಡಿ ಎಂತಲೂ ಕರೆಯುತ್ತಿದ್ದರು. ಬ್ರಿಟಿಷ್ ಸರ್ಕಾರದವರು ಕಾಗದ ನೋಟುಗಳನ್ನು 1862 ರಲ್ಲಿ ಜಾರಿಯಲ್ಲಿ ತಂದ ನಂತರ ಅವು ಈ ಭಾಗದಲ್ಲಿಯೂ ಜಾರಿಯಲ್ಲಿ ಬಂದವು. ಸ್ವಾತಂತ್ರ್ಯಾನಂತರ ಭಾರತ ಸರ್ಕಾರದ ಲಾಂಛನವು ಎಲ್ಲಾ ನಾಣ್ಯ ಮತ್ತು ನೋಟುಗಳ ಮೇಲೆ ಆರನೇ ಜಾರ್ಜ ಚಕ್ರವರ್ತಿಯ ಚಿತ್ರದ ಬದಲಾಗಿ ಮುದ್ರಿಸಲ್ಪಟ್ಟವು. 1957 ರಿಂದ ದಶಮಾಂಶ ನಾಣ್ಯ ಪದ್ಧತಿಯನ್ನು ರೂಢಿಯಲ್ಲಿ ತರಲಾಯಿತು.

## ಸಹಕಾರಿ ಚಳವಳಿ

ಭಾರತದ ಸಹಕಾರಿ ಚಳವಳಿಯ ನಕ್ಷೆಯಲ್ಲಿ ಧಾರವಾಡ ಜಿಲ್ಲೆಯು ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಹೊಂದಿದೆ. ಭಾರತದಲ್ಲಿ ಸಹಕಾರಿ ಸಂಸ್ಕೃತಿಯ ಪ್ರಥಮ ತೊಟ್ಟಿಲು ತೂಗಿದ್ದು ಧಾರವಾಡ ಜಿಲ್ಲೆಯಲ್ಲಿ ಎಂಬುದು ಕರ್ನಾಟಕದ ಹೆಮ್ಮೆಯ ವಿಷಯ.

ಪ್ರಾರಂಭದ ವರ್ಷಗಳಲ್ಲಿ ಕಾನೂನಿನ ಕಕ್ಷೆಯಲ್ಲಿ ಸರ್ಕಾರದಿಂದ ಪ್ರವರ್ತಿಸಲ್ಪಟ್ಟ ಆರ್ಥಿಕ ಆಂದೋಲನವಾಗಿ ಮೂಡಿಬಂದ ಸಹಕಾರಿ ಚಳವಳಿಯು ಕಾಲಕ್ರಮೇಣ ಬೆಳೆದು, ಬಹುರೂಪ ತಾಳಿ, ಇಂದು ಬಹು ವ್ಯಾಪಕವಾಗಿ ಮತ್ತು ಆಳವಾಗಿ ಬೆಳೆದಿದೆ. ಭಾರತದಲ್ಲಿಯೇ ಪ್ರಪ್ರಥಮ ಪ್ರಾಥಮಿಕ ವ್ಯವಸಾಯ ಪತ್ತಿನ ಸಹಕಾರಿ ಸಂಘದ ಬೀಜಾಂಕುರವಾದದ್ದು ಈ ಜಿಲ್ಲೆಯಲ್ಲಿಯೇ ಎಂದು ಲಭ್ಯವಿರುವ ದಾಖಲಾತಿಗಳಿಂದ ತಿಳಿದು ಬರುವುದು. ಈ ಜಿಲ್ಲೆಯ ಗದಗ ತಾಲೂಕು ವಿಶೇಷವಾಗಿ ಸಹಕಾರಿ ಆಂದೋಲನದಲ್ಲಿ ಪ್ರಾರಂಭದಿಂದಲೂ ಅಗ್ರಮಾನ್ಯ ಸ್ಥಾನದಲ್ಲಿದೆ. ಕಾನೂನಿನ ಚೌಕಟ್ಟಿನಲ್ಲಿ 1904 ರ ಸಹಕಾರಿ ಕಾನೂನಿನ ನಂತರ ಪ್ರಥಮ ಬಾರಿಗೆ ವ್ಯವಸಾಯ ಪತ್ತಿನ ಸಹಕಾರಿ ಸಂಘಗಳು ದೇಶಾದ್ಯಂತ ರಚನೆಗೊಂಡವು.

ಅಂದಿನ ಮುಂಬೈ ರಾಜ್ಯದಲ್ಲಿ 1904 ರ ಭಾರತದ ಸಹಕಾರಿ ಕಾನೂನಿನನ್ವಯ ಪ್ರಪ್ರಥಮವಾಗಿ ದಿ. 8.5.1905ರಂದು ನೋಂದಾಯಿಸಲ್ಪಟ್ಟ ವ್ಯವಸಾಯ ಪತ್ತಿನ ಸಹಕಾರಿ ಸಂಘವು ಗದಗ ತಾಲೂಕಿನ ಕಣಗಿನಹಾಳ ಗ್ರಾಮದಲ್ಲಿ (ಗದಗಿನಿಂದ 18 ಕಿ.ಮಿ. ದೂರದಲ್ಲಿ) ಎಂದು ತಿಳಿದು ಬರುವುದು. ಇದನ್ನು ದೇಶದ ಮೊದಲ ವ್ಯವಸಾಯ ಪತ್ತಿನ ಸಹಕಾರ ಸಂಘವೆಂದು ಹೇಳಲಾಗುತ್ತದೆ. ಅದೇ ತಿಂಗಳು 24.5.1905 ರಂದು ಎರಡನೇಯ ಸಹಕಾರಿ ಸಂಘವು ಗದಗ ತಾಲೂಕಿನ ಹುಲಕೋಟಿ ಗ್ರಾಮದಲ್ಲಿ "ಹುಲಕೋಟಿ ಗ್ರಾಮ ವಿವಿಧೋದ್ದೇಶ ಸಹಕಾರಿ ಸಂಘ"ವೆಂಬ ಹೆಸರಿನಲ್ಲಿ ನೋಂದಾಯಿಸಲ್ಪಟ್ಟಿತು. ಅದೇ ತಿಂಗಳಲ್ಲಿ ಮೂರನೆಯ ಸಂಘವು ಗದಗ ತಾಲೂಕಿನ ಚಿಕ್ಕಹಂದಿಗೋಳ ಗ್ರಾಮದಲ್ಲಿ ಸ್ಥಾಪಿಸಲ್ಪಟ್ಟಿತು. ನಾಲ್ಕನೆಯ ಸಂಘವು ಇದೇ ತಾಲೂಕಿನ ಮಲಸಮುದ್ರದಲ್ಲಿ 8.6.1905 ರಲ್ಲಿ ಹಾಗೂ 12.2.1906 ರಲ್ಲಿ ಗದಗ ತಾಲೂಕಿನ ತಿಮ್ಮಾಪುರದಲ್ಲಿ ಐದನೇಯ ವ್ಯವಸಾಯ ಪತ್ತಿನ ಸಂಘವು ನೋಂದಾಯಿಸಲ್ಪಟ್ಟವು. ಇದೇ ತಾಲೂಕಿನ ಮುಳಗುಂದದಲ್ಲಿ 1907 ರಲ್ಲಿ ಇಂತಹ ಸಂಘ ರಚನೆಯಾಯಿತು. ಅಂದು ಪ್ರಾರಂಭವಾದ ಈ ಸಂಸ್ಥೆಗಳು ಹಲವಾರು ಬಾರಿ ಪುನರ್ ರಚನೆಗೊಂಡು ಇಂದಿಗೂ ಮುಂದುವರಿದುಕೊಂಡು ಬದಲಾದ ಹೆಸರುಗಳಲ್ಲಿ ಸೇವೆಯನ್ನು ಸಲ್ಲಿಸುತ್ತಿರುವವು. ಬಹುಶಃ ಇವೇ ಸಂಘಗಳು ಈ ಜಿಲ್ಲೆಯಲ್ಲಿನ ಪ್ರಾರಂಭದ ಪ್ರಾಥಮಿಕ ವ್ಯವಸಾಯ ಸಾಲ ನೀಡಿಕೆ ಸಂಘಗಳಾಗಿದ್ದವು ಎಂದು ತಿಳಿಯಬಹುದು. ಕಣಗಿನ ಹಾಳ ಸಂಘದ ಪ್ರವರ್ತಕರ ಸಂಖ್ಯೆ 12 ಮತ್ತು ಪ್ರಾರಂಭದ ಷೇರು ಬಂಡವಾಳ ರೂ. ಎರಡು ಸಾವಿರ ಆಗಿದ್ದವು. ಭದ್ರತೆಯ ದೃಷ್ಟಿಯಿಂದ ಪ್ರಾರಂಭದಲ್ಲಿ ಗ್ರಾಮೀಣ ಸಹಕಾರಿ ಸಂಘಗಳನ್ನು ಅಪರಿಮಿತ ಹೊಣೆಗಾರಿಕೆಯ ತತ್ವದ ಮೇಲೆ ರಚಿಸಲಾಗುತ್ತಿತ್ತು.

ನಗರ ಪಟ್ಟಣ ಪ್ರದೇಶಗಳಲ್ಲಿ ವ್ಯವಸಾಯೇತರ ಉದ್ದೇಶಗಳಿಗೆ ಸಾಲ ನೀಡುವ ಸಹಕಾರಿ ಸಂಘಗಳಲ್ಲಿ, 18.10.1905 ರಲ್ಲಿ ನೋಂದಾಯಿಸಲ್ಪಟ್ಟ 'ಬೆಟಗೇರಿ ಕ್ರೆಡಿಟ್ ಸೊಸೈಟಿ'ಯು (ನಂತರ ಅರ್ಬನ್ ಬ್ಯಾಂಕ್) ನಮ್ಮ ರಾಜ್ಯದಲ್ಲಿಯೇ ಪ್ರಥಮ ಅರ್ಬನ್ ಕ್ರೆಡಿಟ್ ಸೊಸೈಟಿ ಎಂದು ಹೇಳಲಾಗುವುದು. ಈ ಸಂಸ್ಥೆಯನ್ನು ಸ್ಥಳೀಯ ಬಡ ನೇಕಾರರಿಗೆ ಆರ್ಥಿಕ ನೆರವು ಒದಗಿಸುವ ಉದ್ದೇಶದಿಂದ ರೆವರೆಂಡ್ ಕ್ಯಾನನ್ ಸಿ.ಎನ್. ರಿವಿಂಗ್ಟನ್ ಎಂಬ ಕ್ರೈಸ್ತ ಪಾದ್ರಿ ಪ್ರಾರಂಭಿಸಿದರು, ಎಂದು ತಿಳಿದು ಬರುವುದು. (ಸದ್ಯ ಈ ಸಂಸ್ಥೆಯು ವಿಸರ್ಜನೆಗೊಂಡಿದೆ). ಮುಂದಿನ ವರ್ಷ ಅಂದರೆ 1906 ರಲ್ಲಿ ಹುಬ್ಬಳ್ಳಿ, ಧಾರವಾಡ, ಗದಗ ಮುಂತಾದ ಪ್ರದೇಶಗಳಲ್ಲಿ ವ್ಯವಸಾಯೇತರ ಚಟುವಟಿಕೆಗಳಿಗೆ ಸಾಲನೀಡುವ ಕ್ರೆಡಿಟ್ ಸೊಸೈಟಿಗಳು ಬೆಳೆದು ಬಂದವು. ಇವುಗಳಲ್ಲಿ ಬಹುಪಾಲು ಮುಂದೆ ಪಟ್ಟಣ ಸಹಕಾರಿ ಬ್ಯಾಂಕುಗಳಾಗಿ ಪರಿವರ್ತನಗೊಂಡವು.

ಧಾರವಾಡ ಜಿಲ್ಲೆಯಲ್ಲಿ 1915 ಮತ್ತು ಅದಕ್ಕೂ ಮೊದಲು ಸ್ಥಾಪನೆಗೊಂಡ ಪ್ರಾಥಮಿಕ ವ್ಯವಸಾಯ ಪತ್ತಿನ\ವಿವಿದೋದ್ದೇಶ\ ದೊಡ್ಡ ಪ್ರಮಾಣದ\ಸೇವಾ ಸಹಕಾರಿ ಸಂಘಗಳ ತಾಲೂಕುವಾರು ಪಟ್ಟಿಯನ್ನು ಈ ಮುಂದೆ ನೀಡಲಾಗಿದೆ.

ಕಲಘಟಗಿ ತಾ||-ಕಲಘಟಗಿ (1911); ಕುಂದಗೋಳ ತಾ||-ಯರಗುಪ್ಪಿ (1913); ಗದಗ ತಾ||-ಕಣಗಿನಹಾಳ (1905), ಹುಲಕೋಟಿ (1905), ಮಲಸಮುದ್ರ (1905), ತಿಮ್ಮಾಪೂರ (1906), ಮುಳಗುಂದ (1907), ಕುರ್ತಕೋಟಿ (1909), ಸಂಭಾಪೂರ (1911), ನಾರಾಯಣಪುರ (1912), ಕೋಟುಮಚಗಿ (1912), ಸೊರಟೂರ (1913), ಅಂತೂರ (1914), ಬಳಗಾನೂರ (1914)ಮತ್ತು ಹರ್ತಿ (1914); ಧಾರವಾಡ ತಾ||-ಅಳ್ನಾವರ (1913)ಮತ್ತು ಮರೇವಾಡ (1914); ನವಲಗುಂದ ತಾ||-ನವಲಗುಂದ (1909), ಯಮನೂರ (1911), ಶಲವಡಿ (1913), ಸೈದಾಪುರ (1913) ಮತ್ತು ಅರೇಕುರಹಟ್ಟಿ (1913); ಮುಂಡರಗಿ ತಾ||-ಮುಂಡರಗಿ (1908), ಹಳ್ಳಿಕೇರಿ (1912) ಮತ್ತು ಕಲಕೇರಿ (1913); ರೋಣ ತಾ||-ಹುಲ್ಲೂರ (1913), ಹಿರೇಮಣ್ಣೂರ (1913), ಹಡಗಲಿ (1913), ಹಾಳಕೇರಿ (1913), ನರೇಗಲ್ (1913), ಯಾವಗಲ್ (1913) ಮತ್ತು ಮೂಡಲಗೇರಿ (1915); ರಾಣೇಬೆನ್ನೂರ ತಾ||-ಅಸುಂಡಿ (1915); ಶಿರಹಟ್ಟಿ ತಾ-ಶಿರಹಟ್ಟಿ (1914) ಮತ್ತು ಕೊಂಚಿಗೇರಿ (1915); ಹುಬ್ಬಳ್ಳಿ ತಾ||-ಕೋಳಿವಾಡ (1913), ಅರಳೀಕಟ್ಟಿ (1914), ಬ್ಯಾಹಟ್ಟಿ (1915) ಮತ್ತು ಹುಬ್ಬಳ್ಳಿ (1915); ಹಾವೇರಿ ತಾ||-ಹಂದಿಗನೂರ (1911), ಅಗಡಿ (1914), ಕನವಳ್ಳಿ (1914), ಕಿತ್ತೂರ (1914), ಯಲಗಚ್ಚ (1915), ಹೊಸರಿತ್ತಿ (1915) ಮತ್ತು ಶರಮಾಪುರ (1915); ಸವಣೂರ ತಾ||-ಯಲವಿಗಿ (1913); ಶಿಗ್ಗಾಂವಿ ತಾ||-ಶಿಶುವಿನಾಳ (1913); ನರಗುಂದ ತಾ||-ನರಗುಂದ ಕಸಬಾ (1910), ಕುರ್ಲಗೇರಿ (1911), ದಂಡಾಪುರ (1912) ಮತ್ತು ಮುಗನೂರು (1913); ಹಾಗೂ ಬ್ಯಾಡಗಿ ತಾ||-ಗುಂಡೇನಹಳ್ಳಿ (1915).

ಈ ಜಿಲ್ಲೆಯಲ್ಲಿ ಸಹಕಾರಿ ಚಳವಳಿಯು ಇತಿಹಾಸವನ್ನು ಈ ಮುಂದಿನ ಹಂತಗಳಲ್ಲಿ ವಿಶ್ಲೇಷಿಸಬಹುದು. ಪ್ರಾರಂಭದ 1904-05 ರಿಂದ 1911-12ರ ವರೆಗಿನ ಮೊದಲಿನ ಹಂತದಲ್ಲಿ ದೇಶದ ಇತರಡೆಯಂತೆ ಗ್ರಾಮೀಣ ಪ್ರದೇಶಗಳಲ್ಲಿ ಅಪರಿಮಿತ ಹೊಣೆಗಾರಿಕೆ ನಿಯಮಾನುಸಾರ ಸಹಕಾರಿ ಪತ್ತಿನ ಸಂಘಗಳನ್ನು ಪ್ರಾರಂಭಿಸುವಲ್ಲಿ ಸರ್ಕಾರವು ಹೆಚ್ಚಿನ ಆಸಕ್ತಿಯನ್ನು ವಹಿಸಿತು. ಅದರೊಂದಿಗೆ ನಗರ ಪ್ರದೇಶಗಳಲ್ಲಿ ವ್ಯವಸಾಯೇತರ ಸಾಲದ ಸಂಘಗಳೂ ಸಹ ಅಲ್ಲಲ್ಲಿ ಮೂಡಿಬಂದವು. ನಗರ ಪ್ರದೇಶಗಳಲ್ಲಿ ಪ್ರಾರಂಭಗೊಂಡ ವ್ಯವಸಾಯೇತರ ಸಹಕಾರಿ ಸಂಘಗಳಲ್ಲಿ ಹುಬ್ಬಳ್ಳಿಯ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ (1906), ಧಾರವಾಡ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್, ಧಾರವಾಡ (1906) ಮತ್ತು ಸದರ್ನ್ ಮರಾಠಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್, ಧಾರವಾಡ (1912) (ನಂತರ ಈ ಬ್ಯಾಂಕಿನ ಹೆಸರನ್ನು ಮಹಾಲಕ್ಷ್ಮೀ ಬ್ಯಾಂಕೆಂದು ಬದಲಾಯಿಸಲಾಯಿತು) ಇವು ಪ್ರಮುಖವಾದವುಗಳು. ಆದರೆ ಗ್ರಾಮೀಣ ವ್ಯವಸಾಯ ಸಾಲ ಸಂಘದ ಸಂಖ್ಯೆಯೇ ಅಧಿಕವಾಗಿತ್ತು.

ಎರಡನೇಯ ಹಂತದಲ್ಲಿ ಅಂದರೆ 1912-13 ರಿಂದ 1918-19 ರ ಅವಧಿಯಲ್ಲಿ ಕೇವಲ ಗ್ರಾಮೀಣ ವ್ಯವಸಾಯ ಪತ್ತಿಗೆ ಸೀಮಿತವಾಗಿದ್ದ ಸಹಕಾರಿ ಆಂದೋಲನವು ಇತರ ಬಗೆಯ ಸಹಕಾರಿ ಸಂಘಗಳು ಅಂದರೆ ವ್ಯವಸಾಯೇತರ ಉದ್ದೇಶಗಳಿಗೆ ಸಾಲ, ಖರೀದಿ ಮತ್ತು ಮಾರಾಟ ಸಂಘಗಳು, ಗ್ರಾಹಕರ ಸಂಘಗಳು, ಉತ್ಪಾದಕರ ಮತ್ತು ಕುಶಲ ಕರ್ಮಿಗಳ ಸಂಘಗಳು, ನೇಕಾರರ ಸಂಘಗಳು, ಸುಸಂಘಟಿತ ವಲಯದ ನೌಕರರ ಸಾಲ ನೀಡುವ ಸಂಘಗಳು, ಮುಂತಾದವುಗಳು ವ್ಯಾಪಕವಾಗಿ ಮೂಡಿಬಂದವು.

ಈ ಬದಲಾವಣೆಗೆ ಮೂಲಕಾರಣ 1904 ರ ಪ್ರಾರಂಭದ ಸಹಕಾರಿ ಕಾನೂನಿಗೆ 1912 ರಲ್ಲಿ ವ್ಯಾಪಕವಾದ ತಿದ್ದುಪಡಿಗಳನ್ನು ತರಲಾಯಿತು. ಇದೇ ಅವಧಿಯಲ್ಲಿ ಜಿಲ್ಲೆಗೆ ಒಂದರಂತೆ ಕೇಂದ್ರ ಸಹಕಾರಿ ಬ್ಯಾಂಕುಗಳನ್ನು ಮತ್ತು ರಾಜ್ಯಮಟ್ಟದಲ್ಲಿ ಪ್ರಾಂತೀಯ ಸಹಕಾರಿ ಶೃಂಗ (ಎಪೆಕ್ಸ್) ಬ್ಯಾಂಕುಗಳನ್ನು ಪ್ರಾರಂಭಿಸಲಾಯಿತು. ಮುಂಬೈ ಪ್ರಾಂತೀಯ ಸಹಕಾರಿ ಬ್ಯಾಂಕ್ ಧಾರವಾಡಕ್ಕೆ ಬಹುದೂರವಾದುದರಿಂದ ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್ (ಸದ್ಯದ ಕೆ.ಸಿ.ಸಿ. ಬ್ಯಾಂಕ್) 1916 ರಲ್ಲಿ ಪ್ರಾರಂಭಿಸಲಾಯಿತು. ಇದಕ್ಕೂ ಪೂರ್ವದಲ್ಲಿ 1913-14 ರಲ್ಲಿ ಪ್ರಾರಂಭಿಸಲ್ಪಟ್ಟ ಧಾರವಾಡ ಸೆಂಟ್ರಲ್ ಬ್ಯಾಂಕಿಂಗ್ ಯುನಿಯನ್ ಕಾರ್ಯ ನಿರ್ವಹಿಸದೇ ಮುಚ್ಚಿದ್ದರಿಂದ ಅದರ ಕಾರ್ಯಗಳನ್ನು ಈ ಬ್ಯಾಂಕು ವಹಿಸಿಕೊಂಡಿತು.

ಈ ಹಂತದಲ್ಲಿನ ಅತೀ ಮಹತ್ವ ಬದಲಾವಣೆ ಎಂದರೆ 1919 ರಲ್ಲಿ ಸಹಕಾರಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಹೊಣೆಗಾರಿಕೆಯಿಂದ ಪ್ರಾಂತೀಯ ಸರ್ಕಾರಗಳಿಗೆ ವರ್ಗಾಯಿಸಲಾಯಿತು. ಸಹಕಾರ ಇಲಾಖೆಗೆ ಆಯಾ ಪ್ರಾಂತ್ಯಗಳಲ್ಲಿ ಪ್ರತ್ಯೇಕವಾದ ಮಂತ್ರಿಗಳನ್ನು ನೇಮಿಸಲಾಯಿತು. ಇದರಿಂದ ಸ್ಥಳೀಯ ಅವಶ್ಯಕತೆಗಳನ್ನು ಗಮನಿಸಿ ಹೊಸ ಹೊಸ ಮಾದರಿಯ ಸಹಕಾರ ಸಂಸ್ಥೆಗಳು ಮೂಡಿಬಂದವು. ಸಹಕಾರ ಇಲಾಖೆಯ ಆಡಳಿತ ವರದಿ ತಿಳಿಸುವಂತೆ, 1913 ರ ಮಾರ್ಚ್ ಕೊನೆಯಲ್ಲಿ ಧಾರವಾಡ ಜಿಲ್ಲೆಯಲ್ಲಿದ್ದ ಒಟ್ಟು ಸಹಕಾರಿ ಸಂಸ್ಥೆಗಳ ಸಂಖ್ಯೆ 59. ಅವುಗಳಲ್ಲಿ 49 ಸಂಘಗಳು ಅಪರಿಮಿತ ಹೊಣೆಗಾರಿಕೆಯ ವ್ಯವಸಾಯ ಪತ್ತಿನ ಸಂಘಗಳಾಗಿದ್ದರೆ ಉಳಿದ 10 ವ್ಯವಸಾಯೇತರ ಸಂಘಗಳಾಗಿದ್ದವು. ವ್ಯವಸಾಯ ಪತ್ತಿನ ಸಂಘಗಳು ಹೊಂದಿದ್ದ ಸದಸ್ಯರ ಸಂಖ್ಯೆ 4,683 ಆಗಿದ್ದರೆ ವ್ಯವಸಾಯೇತರ ಸಂಘಗಳು 3,661 ಜನ ಸದಸ್ಯರನ್ನು ಹೊಂದಿದ್ದವು. ವ್ಯವಸಾಯೇತರ ಸಂಘಗಳು ಹೊಂದಿದ್ದ ದುಡಿಯುವ ಬಂಡವಾಳ ರೂ. 5.09 ಲಕ್ಷ ಆಗಿದ್ದರೆ, ವ್ಯವಸಾಯ ಪತ್ತಿನ ಸಂಘಗಳು ಹೊಂದಿದ್ದ ದುಡಿಯುವ ಬಂಡವಾಳ ರೂ. 2.70 ಲಕ್ಷ ಎಂದು ತಿಳಿದು ಬರುವುದು. ಮುಂಬೈ ಮೂಲದ ಶಾಮರಾವ್ ವಿಠ್ಠಲ ಸಹಕಾರಿ ಬ್ಯಾಂಕ್ (1905) ಧಾರವಾಡ ಹುಬ್ಬಳ್ಳಿಗಳಲ್ಲಿ ಶಾಖೆಗಳನ್ನು 1913 ರ ಸುಮಾರಿಗೆ ಹೊಂದಿರುವುದಾಗಿ ಮತ್ತು ಸಾರಸ್ವತ ಸಮಾಜದವರಿಗೆ ಉತ್ತಮ ಬ್ಯಾಂಕಿಂಗ್ ಸೇವೆ ನೀಡುತ್ತಿದ್ದುದಾಗಿ ವರದಿ ತಿಳಿಸುವುದು.

ಈ ಅವಧಿಯಲ್ಲಿ (1905-1912-13) ಜಿಲ್ಲೆಯಲ್ಲಿ ಮೂಡಿಬಂದ ವ್ಯವಸಾಯೇತರ ವಿವಿಧ ಸಹಕಾರಿ ಸಂಘಗಳಲ್ಲಿ ಪ್ರಮುಖವಾದವುಗಳು ಎಂದರೆ ಧಾರವಾಡ ತಾಲೂಕಿನ ಗರಗದಲ್ಲಿ ಉತ್ತಮ ಬೇಸಾಯ ಸ.ಸಂ (1914), ದೇವೀ ಹೊಸೂರಿನಲ್ಲಿ (ಹಾವೇರಿ ತಾಲ್ಲೂಕು) ಒಕ್ಕಲುತನ ಅವಶ್ಯಕತೆಯ ಸ.ಸಂ (1917), ಹಾನಗಲ್ ತಾಲೂಕಿನ ಅಕ್ಕಿಆಲೂರಿನಲ್ಲಿ ಮಿಶ್ರತಳಿ ಜಾನುವಾರುಗಳ ಅಭಿವೃದ್ಧಿ ಸಂಘ (1919), ಸಿಡೇನೂರು (ರಾಣೆಬೆನ್ನೂರು ತಾಲೂಕು) ದನಗಳ ಸ.ಸಂ. (1920), ಮುಂಡೇವಾಡ ಹಾಲು ಉತ್ಪಾದಕರ ಸಸಂ (ಮುಂಡರಗಿ ತಾಲೂಕು 1912 ), ಆದರಂತೆ ವ್ಯವಸಾಯ ಉತ್ಪನ್ನಗಳನ್ನು ಸಹಕಾರಿ ವಲಯದಲ್ಲಿ

ಮಾರಾಟ ಮಾಡಲು ಅನುಕೂಲವಾಗುವಂತೆ ಹುಬ್ಬಳ್ಳಿ ಮತ್ತು ನವಲಗುಂದಗಳಲ್ಲಿ 1915 ರಲ್ಲಿ ತಾಲೂಕಾ ವ್ಯವಸಾಯ ಉತ್ಪನ್ನಗಳ ಸಹಕಾರಿ ಮಾರಾಟ ಸಂಘಗಳು, ಗದಗಿನಲ್ಲಿ ಹತ್ತಿ ಮಾರಾಟ ಸ.ಸಂ. (1917), ಇವು ಪ್ರಮುಖವಾದ ಸಂಘಗಳಾಗಿದ್ದವು. ಇದೇ ಅವಧಿಯಲ್ಲಿ ಅರ್ಬನ್ ಬ್ಯಾಂಕುಗಳು (ಸೊಸೈಟಿಗಳು) ಜಿಲ್ಲೆಯಲ್ಲಿ ವ್ಯಾಪಕವಾಗಿ ಹುಟ್ಟಿದವು. ಪ್ರಾರಂಭದಲ್ಲಿ ಇಂತಹ ಬ್ಯಾಂಕುಗಳು ಪ್ರತ್ಯೇಕವಾದ ಮತಬಾಂಧವರ (ಜಾತಿಯ ಆಧಾರಿತ) ಅಥವಾ ಸುಸಂಘಟಿತ ಕಾರ್ಮಿಕ ವಲಯ, ಸರಕಾರಿ ನೌಕರರು ಮುಂತಾದವರಿಂದ ಪ್ರಾರಂಭಿಸಲ್ಪಟ್ಟ ಸಹಕಾರಿ ಸಂಸ್ಥೆಗಳಾಗಿ ರೂಪುಗೊಂಡು, ಈ ಸಂಸ್ಥೆಗಳ ಮೂಲಕ ಆಯಾ ಸಮಾಜದ ವರ್ಗದ ಸಂಘಟನೆ, ಆರ್ಥಿಕ ಅಭಿವೃದ್ಧಿ, ಸಾಮಾಜಿಕ ಸಾಂಸ್ಕೃತಿಕ ಮುನ್ನಡೆಗೆ ಪ್ರಯತ್ನಿಸಲಾಯಿತು. ಈ ಮೊದಲೇ ಹೇಳಿದಂತೆ ಧಾರವಾಡದಲ್ಲಿ 1912 ರಲ್ಲಿ ಪ್ರಾರಂಭಿಸಲಾದ ಸದರ್ನ್ ಮರಾಠಾ ಬ್ಯಾಂಕ್ ಭಾಷಾ ಆಧಾರಿತ ಬ್ಯಾಂಕ್ ಆಗಿದ್ದರೆ 1917 ರಲ್ಲಿ ವೀರಶೈವರ ಮತ್ತು ಕನ್ನಡಿಗರ ಸಂಘಟನೆಯಿಂದ ಪ್ರಾರಂಭವಾದದ್ದು ಕೆ.ಸಿ.ಸಿ ಬ್ಯಾಂಕಾಗಿತ್ತು. ಅಂದಿನ ದಿನಗಳಲ್ಲಿ ರೂ. 50 ಸಾವಿರ ಮೀರಿ ಚಾಲತಿ ಬಂಡವಾಳ ಇರುವ ಸಂಘಗಳನ್ನು ಅರ್ಬನ್ ಬ್ಯಾಂಕ್ ಎಂದು ವರ್ಗೀಕರಿಸಲಾಗುತ್ತಿತ್ತು. ಇದರಂತೆ ಹುಬ್ಬಳ್ಳಿ ಮಿಲ್ ನೌಕರರ ಸಹಕಾರಿ ಸಂಘ (1914), ಇಂಡಿಯನ್ ಕ್ರಿಶ್ಚಿಯನ್ಸ್ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ; ಹುಬ್ಬಳ್ಳಿ (1912), ರೆಡ್ಡಿ ಸಹಕಾರಿ ಬ್ಯಾಂಕ್, ಧಾರವಾಡ (1914), ಭಾವಸಾರ ಕ್ಷತ್ರಿಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ, ಧಾರವಾಡ (1918), ಬೆಟಗೇರಿ ಬಾಸೆಲ್ ಮಿಶನ್ ಕ್ರಿಶ್ಚಿಯನ್ ಸಹಕಾರಿ ಸಂಘ (1918), ಆರ್ಯ ವೈಶ್ಯ ಕೋ-ಆಪರೇಟಿವ್ ಬ್ಯಾಂಕ್, ಹುಬ್ಬಳ್ಳಿ (1919), ಹುಬ್ಬಳ್ಳಿ ನಗರ ಸಭೆಯ ಪ್ರಾಥಮಿಕ ಶಿಕ್ಷಕರ ಸಹಕಾರಿ ಸಂಘ (1919), ಹೆಬಸೂರಿನಲ್ಲಿ ರೈತರಿಗೆ ಉಪಯೋಗವಾಗುವ ಗುಡಾರಗಳನ್ನು ನೇಯುವ ಸಹಕಾರಿ ಸಂಘ (1921), ಹೊಸರಿತ್ತಿಯಲ್ಲಿ ಸರ್ವೋದಯ ಖಾದಿ ಗ್ರಾಮೋದ್ಯೋಗ ಸಂಘ (1921), ಹುಲಕೋಟಿಯಲ್ಲಿ ಸಹಕಾರಿ ವಲಯದಲ್ಲಿ ಶಿಕ್ಷಣ ಸಂಸ್ಥೆ (1921) ಮುಂತಾದವುಗಳ ಪ್ರಮುಖವಾದವುಗಳು. ಗ್ರಾಮೀಣ ಪ್ರದೇಶಗಳಾದ ಗಜೇಂದ್ರಗಡ (1913), ಬ್ಯಾಡಗಿ (1918), ಗುತ್ತಲ (1919) ಗಳಲ್ಲಿ ಅರ್ಬನ್ ಬ್ಯಾಂಕುಗಳು ಹುಟ್ಟಿದವು. ಈ ಜಿಲ್ಲೆಯಾದ್ಯಂತ ಅರ್ಬನ್ ಬ್ಯಾಂಕುಗಳ ವ್ಯಾಪಕವಾದ ಜಾಲ ನಗರ ಮತ್ತು ಅರೆನಗರ ಪ್ರದೇಶಗಳಿಗೆ ವ್ಯಾಪಿಸಿದ್ದರಿಂದ ಈ ಜಿಲ್ಲೆಯಲ್ಲಿ ಖಾಸಗಿ ವಲಯದಲ್ಲಿ ಬ್ಯಾಂಕುಗಳು 1930 ರವರೆಗೆ ಮೂಡಿಬರಲಿಲ್ಲ ಎಂದು ತೋರುವುದು. ಮೂರನೇಯ ಹಂತದಲ್ಲಿ ಅಂದರೆ 1925-26 ರಿಂದ 1935-36 ರ ದಶಕದ ಅವಧಿಯಲ್ಲಿ ಜಿಲ್ಲೆಯ ಸಹಕಾರಿ ವಲಯದಲ್ಲಿ ತೀವ್ರತರವಾದ ಬದಲಾವಣೆಗಳನ್ನು ಗಮನಿಸಬಹುದು. ಅವುಗಳಲ್ಲಿ ಬಹು ಮುಖ್ಯವಾದದು ಬೊಂಬಾಯಿ ರಾಜ್ಯಕ್ಕೆ ಸೀಮಿತವಾದಂತ ಪ್ರತ್ಯೇಕವಾದ ಬೊಂಬಾಯಿ ಸಹಕಾರಿ ಕಾನೂನು 1925 ರ ಅಳವಡಿಕೆ. ಈ ಕಾನೂನಿನ ಅನ್ವಯ ಸಹಕಾರಿ ಸಂಸ್ಥೆಗಳನ್ನು ಅವುಗಳ ಉದ್ದೇಶಾನುಸಾರ ಪ್ರಮುಖವಾಗಿ ಮೂರು ವಿಧಗಳಾಗಿ ವರ್ಗೀಕರಿಸಲಾಗಿತ್ತು. ಅವುಗಳೆಂದರೆ (1) ಸಂಪನ್ಮೂಲ ಒದಗಿಸುವ (ರಿಸೋರ್ಸ) ಸಂಘಗಳು, (2) ಗ್ರಾಹಕರ ಸಂಘಗಳು ಮತ್ತು (3) ಉತ್ಪಾದಕರ ಸಂಘಗಳು. ಇದೂ ಅಲ್ಲದೇ ಸಂಘಗಳನ್ನು ಸಮಾಪನಗೊಳಿಸುವ ವಿಧಿ ವಿಧಾನಗಳನ್ನು ಸರಳೀಕರಣಗೊಳಿಸಲಾಯಿತು. ಸಹಕಾರಿ ಸಾಲವನ್ನು ವಸೂಲು ಮಾಡಲು ಸಹಾಯಕವಾಗುವಂತೆ ಸಹಕಾರಿ ನ್ಯಾಯಮಂಡಳಿ (ಟ್ರಿಬ್ಯೂನಲ್)ಗಳ ರಚನೆ, ಅವುಗಳ ಕಾರ್ಯ ನಿರ್ವಹಣಾ ವಿಧಾನವನ್ನು 1925 ರ ಕಾನೂನಿನಲ್ಲಿ ಅಳವಡಿಸಲಾಯಿತಲ್ಲದೇ ಸಹಕಾರೀ ಸಾಲವನ್ನು ಭೂಕಂದಾಯ ವಸೂಲಿಯಂತೆ ವಸೂಲು ಮಾಡಲು ಅವಕಾಶ ಮಾಡಿಕೊಡಲಾಯಿತು. ಒಬ್ಬ ವ್ಯಕ್ತಿಗೆ ಒಂದೇ ಮತದ ಹಕ್ಕು ಎಂಬುದನ್ನು ಕಾನೂನಿನಲ್ಲಿ ಅಳವಡಿಸಲಾಯಿತು; ಅಲ್ಲದೇ ಗೊತ್ತುಪಡಿಸಿದ ಅಪರಾಧಗಳಿಗೆ ದಂಡವಿಧಿಸಲು ಕಾನೂನಿನಲ್ಲಿ ಅವಕಾಶ ಮಾಡಿಕೊಡಲಾಯಿತು.

1922 ರ ವರದಿಯಂತೆ ಅಂದಿನ ಮುಂಬಯಿ ಸಹಕಾರಿ ಇಲಾಖೆಯಲ್ಲಿ ಸ್ಥಾಪಿಸಲ್ಪಟ್ಟ ಒಟ್ಟು 3,411 ಸಹಕಾರಿ ಸಂಘಗಳ ಪೈಕಿ ಧಾರವಾಡ ಜಿಲ್ಲೆಯಲ್ಲಿಯೇ 503 ಸಂಘಗಳು ಇದ್ದವು. ವಿವಿಧ ಬಗೆಯ ಸಂಘಗಳ ಹಂಚಿಕೆ ವಿವರ ಈ ರೀತಿ ಇತ್ತು. ಶೇತಕಿ ಪತ್ತಿನ ಸಂಘಗಳು (385), ಯುನಿಯನ್‌ಗಳು (23), ದನಗಳ ಉತ್ಪತ್ತಿ ಸಂಘಗಳು (10), ಗಳೇದ (ವ್ಯವಸಾಯ ಉಪಕರಣ) ಮತ್ತು ಬೀಜದ ಸಂಘಗಳು (17), ಅರ್ಬನ್ ಬ್ಯಾಂಕುಗಳು (35), ಶೇತಕಿ ಮಾಲು ವಿಕ್ರಿ ಸಂಘಗಳು (7), ಮನೆಕಟ್ಟಿಸುವ ಸಂಘಗಳು (3), ಸ್ಟೋರ (ಗ್ರಾಹಕರ) ಸಂಘಗಳು (9), ನೇಕಾರರ ಸಂಘಗಳು (14), ಮತ್ತು ಜಿಲ್ಲಾ ಬ್ಯಾಂಕ್ (1). ಅದೇ ವರದಿ ತಿಳಿಸುವಂತೆ ಹುಲಕೋಟಿ ಯುನಿಯನ್ ಕೋ ಆಪರೇಟಿವ್ ಎಜ್ಯುಕೇಶನ್ ಸೊಸೈಟಿಯ ವತಿಯಿಂದ ಹುಲಕೋಟಿಯಲ್ಲಿ ಎ.ವಿ. ಸ್ಕೂಲ್ 1919 ರಲ್ಲಿ ಪ್ರಾರಂಭಿಸಲ್ಪಟ್ಟಿತು.

ಮುಂಬಯಿ ಪ್ರಾಂತ್ಯದಲ್ಲಿ ಸಹಕಾರಿ ಚಳವಳಿಯು ಇತರ ಪ್ರಾಂತ್ಯಗಳಿಗಿಂತಲೂ ಮುಂದುವರಿದಿತ್ತು. ಆಡಳಿತ ವರದಿಯು ತಿಳಿಸುವಂತೆ 1926 ರ ಕೊನೆಯಲ್ಲಿ ಅಂದಿನ ಸಂಯುಕ್ತ ಮುಂಬಯಿ ಪ್ರಾಂತ್ಯದ ಇತರೇ ಜಿಲ್ಲೆಗಳಿಗೆ ಹೋಲಿಸಿದರೆ ಧಾರವಾಡ ಜಿಲ್ಲೆಯು ಸಹಕಾರಿ ಚಳವಳಿಯಲ್ಲಿ ಮೊದಲನೆಯ ಸ್ಥಾನದಲ್ಲಿತ್ತು. ಸಹಕಾರ ಚಳವಳಿಯು ಜಿಲ್ಲೆಯಲ್ಲಿ ಶೇ. 48.2 ರಷ್ಟು ಹಳ್ಳಿಗಳನ್ನು ವ್ಯಾಪಿಸಿತ್ತು. ಜಿಲ್ಲೆಯಲ್ಲಿದ್ದ ಒಟ್ಟು ಸಹಕಾರಿ ಸಂಸ್ಥೆಗಳ ಸಂಖ್ಯೆ 623 ಆಗಿತ್ತು. ಇವುಗಳಲ್ಲಿ 462 ವ್ಯವಸಾಯ ಸಾಲ ನೀಡುವ ಸಂಘಗಳಾಗಿದ್ದರೆ ಉಳಿದವುಗಳು ವ್ಯವಸಾಯೇತರ ಸಂಘಗಳಾಗಿದ್ದವು. ವ್ಯವಸಾಯ ಸಂಘಗಳು ಹೊಂದಿದ್ದ ಸದಸ್ಯರ ಸಂಖ್ಯೆ 40,242 ಆಗಿತ್ತು. 1929-30 ರ ಜಾಗತಿಕ ಆರ್ಥಿಕ ಹಿಂಜರಿತದ ಅವಧಿಯಲ್ಲಿ ಇತರೆಡೆಯಂತೆ ಈ ಜಿಲ್ಲೆಯಲ್ಲಿಯೂ ವ್ಯವಸಾಯ ಸಾಲ ಸಂಘಗಳು ಮತ್ತು ಇತರ ಸಾಲ ಸಂಘಗಳು ಕುಸಿಯುತ್ತಿದ್ದ ವ್ಯಸಾಯ ಉತ್ಪನ್ನಗಳ ಬೆಲೆ ಮತ್ತು ಬೇಡಿಕೆಯ ಅಭಾವದಿಂದ ತೊಂದರೆಯನ್ನು ಅನುಭವಿಸಬೇಕಾಯಿತು. ಸಹಕಾರೀ ಸಂಘಗಳಿಗೆ ಸದಸ್ಯರಿಂದ ಬರಬೇಕಾದ ಬಾಕಿಸಾಲದ ಪ್ರಮಾಣ ಹೆಚ್ಚುತ್ತ ಹೋಯಿತು. ಮರುಸಾಲ ದೊರೆಯುವುದು ತೊಂದರೆ ಆಯಿತು.

**ತಾಲೂಕು ಡೆವಲಪ್‌ಮೆಂಟ್ ಅಶೋಸಿಯೇಶನ್ಸ್:** ಈ ಹೆಸರಿನಿಂದ ಜಿಲ್ಲೆಯಾದ್ಯಂತ ಪ್ರತೀ ತಾಲೂಕಿಗೆ ಒಂದರಂತೆ 1922-23 ರ ಅವಧಿಯಲ್ಲಿ ಈ ಸಂಸ್ಥೆಗಳು ಸಹಕಾರಿ ಕಾನೂನಿನ ಅನ್ವಯ ನೋಂದಾಯಿಸಲ್ಪಟ್ಟವು. ಕೃಷಿ ಮತ್ತು ಸಹಕಾರದ ಮುನ್ನಡೆಯ ವಿಷಯವಾಗಿ ಸಮಾನ ಆಸಕ್ತಿಯನ್ನು ವಹಿಸಲು ಸಹಾಯಕವಾಗುವಂತೆ ಇವುಗಳನ್ನು ರಚಿಸಲಾಗಿತ್ತು. ಇವುಗಳಿಗೆ ಸರ್ಕಾರವು ಅನುದಾನವನ್ನು ನೀಡುತ್ತಿತ್ತು. ಸಹಕಾರ ಸಂಬಂಧವಾಗಿ ಈ ಸಂಸ್ಥೆಗಳು ಜ್ಞಾನ ಪ್ರಸಾರ, ಮಾಹಿತಿ ಕೊಡುವುದು, ಮೇಲ್ವಿಚಾರಣೆ, ಇವುಗಳನ್ನು ಕೈಕೊಳ್ಳಬಹುದಾಗಿತ್ತು. ರೈತರ ಅಡಚಣೆಗಳನ್ನು ತಿಳಿದುಕೊಂಡು ಅವುಗಳನ್ನು ಪರಿಹರಿಸುವುದು, ಸುಧಾರಿಸಿದ ಬೇಸಾಯ ಉಪಕರಣಗಳ ಉಪಯೋಗ ಮತ್ತು ಬೇಸಾಯ ಕ್ರಮಗಳ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದೂ ಸಹ ಇವುಗಳ ಕಾರ್ಯಕ್ರಮವಾಗಿತ್ತು. 1926-27 ರ ಅವಧಿಯಲ್ಲಿ ಧಾರವಾಡ ಜಿಲ್ಲೆಯಲ್ಲಿ ಇಂತಹ ಸುಮಾರು 24 ಯುನಿಯನ್‌ಗಳು ಇದ್ದುದಾಗಿ ಮತ್ತು ಅವುಗಳಿಗೆ 159 ಸಂಘಗಳು ಸಂಲಗ್ನ ಹೊಂದಿದ್ದಾಗಿ ತಿಳಿದುಬರುವುದು. ಈ ಸಂಸ್ಥೆಗಳ ಮೂಲಕ ಪ್ರತೀ ತಾಲೂಕಿನ ಕೇಂದ್ರ ಅಥವಾ ಪ್ರಮುಖ ಸ್ಥಳಗಳಲ್ಲಿ ಸಹಕಾರಿ ಸಮ್ಮೇಳನ ನಡೆದಿರುವ ಬಗ್ಗೆ "ಕರ್ನಾಟಕ ಸಹಕಾರಿ ಮಿತ್ರ" ಮಾಸ ಪತ್ರಿಕೆಯ ಹಳೆಯ (1922-26) ಸಂಚಿಕೆಗಳಿಂದ ತಿಳಿದುಬರುವುದು. ತಾಲೂಕ ಮಟ್ಟದ ಸಹಕಾರಿ ಸಮ್ಮೇಳನಗಳು ಗದಗ ತಾಲೂಕಿಗೆ 1925 ರಲ್ಲಿ ಮುಳಗುಂದದಲ್ಲಿ 1924 ರಲ್ಲಿ ಹಂಸಬಾವಿಯಲ್ಲಿ (ಹಿರೇಕೆರೂರು ತಾ||) ಹಾಗೂ 1924 ರಲ್ಲಿ ಕೋಡತಾಲೂಕು ಸಮ್ಮೇಳನಗಳು ನಡೆದವು. ಇಡೀ ಮುಂಬಯಿ ರಾಜ್ಯದಲ್ಲಿ 'ಅ' ವರ್ಗದಲ್ಲಿ ಎಣಿಸಲ್ಪಡುವ 451 ಸಂಘಗಳಲ್ಲಿ ಧಾರವಾಡ ಜಿಲ್ಲೆಯಲ್ಲಿ 109 ಸಂಘಗಳು ಇದ್ದವು ಎಂದು 1925 ರ ವರದಿ ತಿಳಿಸುವುದು. ಧಾರವಾಡ ತಾಲೂಕು ಅಮ್ಮಿನಬಾವಿಯಲ್ಲಿ 1922 ರಲ್ಲಿ ಸಹಕಾರವನ್ನು ಕುರಿತಂತೆ ಅದರ ಪ್ರಚಾರಕ್ಕಾಗಿ ಒಂದು ವಿಶೇಷ ನಾಟಕ ತಂಡವನ್ನು ರಚಿಸಲಾಗಿತ್ತು. 1924 ರ ಸುಮಾರಿಗೆ ರೈತರ ಬೆಳೆಗಳನ್ನು ಕಾಡುಮಿಕಗಳಿಂದ ರಕ್ಷಿಸಲು ಬೇಲಿಹಾಕುವ (ಫೆನ್ಸಿಂಗ್) ಸಂಘಗಳು ಹಾಗೂ ದನಗಳ ವಿಮೆ ಸಂಘಗಳು ಜಿಲ್ಲೆಯಲ್ಲಿ ಇದ್ದುದಾಗಿ ತಿಳಿದು ಬರುವುದು. ಕಾಡುಮಿಕಗಳನ್ನು ಕೊಂದವರಿಗೆ ಮತ್ತು ತಾಲ್ಲೂಕಿನ ಹದ್ದಿನಲ್ಲಿ ಮಾಲೀಕರಿಲ್ಲದೇ ಸಂಚರಿಸುತ್ತಿದ್ದ ಅಡವಿ ದನಗಳನ್ನು ಜಂಗಲ್ ಹದ್ದು ಹೊರತುಪಡಿಸಿ ಹಿಡಿದವರಿಗೆ (ದನ ಹಿಡಿದವರಿಗೆ ಐದು ರೂಪಾಯಿ ಮತ್ತು ಕರುವನ್ನು ಹಿಡಿದವರಿಗೆ ಎರಡು ರೂಪಾಯಿ) ಇನಾಮು ಕೊಡುವ ವ್ಯವಸ್ಥೆ ಗದಗ ತಾಲೂಕು ಅಭಿವೃದ್ಧಿ ಸಂಘದಲ್ಲಿ ಜಾರಿಯಲ್ಲಿ ಇದ್ದುದಾಗಿ ಕಂಡುಬರುವುದು. (ಕಾಡುಹಂದಿಗಳನ್ನು ಕೊಂದು ಅವುಗಳ ಬಾಲವನ್ನು ತಾಲೂಕು ಕಛೇರಿಯಲ್ಲಿ ಹಾಜರ ಪಡಿಸಿದವರಿಗೆ ಪ್ರತಿ ಒಂದು ಬಾಲಕ್ಕೆ ಎಂಟು ಆಣೆಯಂತೆ ಇನಾಮು ಕೊಡಲಾಗುತ್ತಿತ್ತು). ಅದರಂತೆ ನೀರು ಪುರವಟೆಯ ಸಂಘಗಳು ಪ್ರಾರಂಭಿಸಲ್ಪಟ್ಟವು. ಇಂತಹ ಸಂಘಗಳಿಗೆ ಸರ್ಕಾರದಿಂದ ತಗಾಯಿ ಸಾಲ ದೊರೆಯುತ್ತಿತ್ತು. ರೈತರ ದೀರ್ಘಾವದಿ ಸಾಲಗಳ ಅವಶ್ಯಕತೆಯನ್ನು ಪೂರೈಸಲು ಜಮೀನು ಅಡಮಾನ (ಅಭಿವೃದ್ಧಿ) ಬ್ಯಾಂಕುಗಳನ್ನು ಅಂದಿನ ಮುಂಬಯಿ ರಾಜ್ಯದ ಎರಡು ಜಿಲ್ಲೆಗಳಲ್ಲಿ (ಧಾರವಾಡ ಮತ್ತು ಬಡೋಚ) ಪ್ರಪ್ರಥಮವಾಗಿ ಪ್ರಾರಂಭಿಸಲಾಯಿತು. ಜಿಲ್ಲೆಯ ಪ್ರಥಮ ಬ್ಯಾಂಕ್ 1929 ರಲ್ಲಿ ಧಾರವಾಡದಲ್ಲಿ ಶುರುವಾಯಿತು. ನಂತರ ಹುಬ್ಬಳ್ಳಿ (1935), ಗದಗ (1939), ಹಾವೇರಿ (1939) ಗಳಲ್ಲಿ ಈ ಬ್ಯಾಂಕುಗಳು ಮೂಡಿಬಂದವು.

**ಸಹಕಾರಿ ಯುನಿಯನ್‌ಗಳು (ಸಂಘಗಳ ಕೂಟಗಳು):** ಹೊಸ ಸಹಕಾರಿ ಸಂಘಗಳ ರಚನೆ, ಮಾರ್ಗದರ್ಶನ, ಲೆಕ್ಕ ಪರಿಶೋಧನೆ, ಸೂಕ್ತ ತನಿಖೆ, ಅವುಗಳ ಮೇಲ್ವಿಚಾರಣೆ ಮುಂತಾದವುಗಳಿಂದ ಒಳ್ಳೆಯ ಸಂಘಗಳು ಕೆಡದಂತೆ, ಕೆಟ್ಟ ಸಂಘಗಳು ಸುಧಾರಿಸುವಂತೆ, ತಾಲೂಕಿಗೆ ಒಂದರಂತೆ ಸುಪರವಾಯಿಜಿಂಗ್ ಯುನಿಯನ್‌ಗಳನ್ನು ಪ್ರಾರಂಭಿಸಲಾಯಿತು. ಸುಪರವಾಯಿಜಿಂಗ್

ಯುನಿಯನ್ ಪ್ರಾರಂಭವಾಗುವ ಪೂರ್ವದಲ್ಲಿ ಗ್ರಾಮೀಣ ಸಂಘಗಳು ದೀರ್ಘಕಾಲ ಬಾಳಲು ಸಹಾಯಕವಾಗುವಂತೆ "ಗ್ಯಾರಂಟಿಂಗ್ ಯುನಿಯನ್"ಗಳು ಇದ್ದುದಾಗಿ ತಿಳಿದು ಬರುವುದು. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು ಇದಕ್ಕಾಗಿ ಇನ್‌ಸ್ಪೆಕ್ಟರ್ ಅವರನ್ನು ನೇಮಿಸಿದ್ದವು. ಒಂದು ಯುನಿಯನ್‌ನಲ್ಲಿ 20-30 ಸಂಘಗಳು ಇರುತ್ತಿದ್ದವು. ಸೆಂಟ್ರಲ್ ಬ್ಯಾಂಕಿನವರು ಯುನಿಯನ್‌ಗೆ ಸೇರಿದ ಸಂಘಗಳಿಗೆ ಧನ ಸಹಾಯ ಮಾಡುತ್ತಿದ್ದರು. ಯುನಿಯನ್ ಮೂಲಕ ಹಣ ಹೆಚ್ಚಾಗಿರುವ ಸಂಘಗಳ ಹಣವನ್ನು ಹಣದ ಅಡಚಣೆ ಇರುವ ಇತರ ಸಂಘಗಳಿಗೆ ವರ್ಗಾಯಿಸಲಾಗುತ್ತಿತ್ತು.

ಈಗ ಪ್ರತೀ ವರ್ಷ ನವೆಂಬರ್ ತಿಂಗಳ 14 ರಿಂದ ಒಂದು ವಾರ ಕಾಲ ರಾಷ್ಟ್ರಾದ್ಯಂತ ಸಹಕಾರಿ ಸಪ್ತಾಹವನ್ನು ಆಚರಿಸುವಂತೆ, ಅಂದು ಪ್ರತೀ ವರ್ಷ ಜುಲೈ ತಿಂಗಳ ಮೊದಲನೇ ಶನಿವಾರವನ್ನು ಸಹಕಾರ ದಿನವನ್ನಾಗಿ ಆಚರಿಸಲಾಗುತ್ತಿತ್ತು. ಜಿಲ್ಲೆಯಲ್ಲಿ ಪ್ರಾರಂಭಿಸಲ್ಪಟ್ಟ ತಾಲೂಕಾ ಸುಪರವಾಯಿಜಿಂಗ್ ಯುನಿಯನ್‌ಗಳಲ್ಲಿ ಗದಗ (1919), ರೋಣ (1926), ಕಲಘಟಗಿ (1927), ಧಾರವಾಡ (1928), ಇವು ಅತ್ಯಂತ ಹಳೆಯವು. ಮುಂದೆ 1937 ರಲ್ಲಿ ಧಾರವಾಡ ಜಿಲ್ಲಾ ಸಹಕಾರಿ ಯುನಿಯನ್ ಪ್ರಾರಂಭವಾಯಿತು. ಈಗ ತಾಲೂಕು ಯುನಿಯನ್‌ಗಳು ಕಾರ್ಯನಿರ್ವಹಿಸುತ್ತಿಲ್ಲ, ಅವುಗಳನ್ನು ವಿಸರ್ಜನೆಗೊಳಿಸಲಾಗಿದೆ.

ಮುಂಬಯಿ ಸೆಂಟ್ರಲ್ ಕೋ ಆಪರೇಟಿವ್ ಇನ್‌ಸ್ಟಿಟ್ಯೂಟ್ (1918), ಈ ಸಂಸ್ಥೆಯ ಧಾರವಾಡ ಜಿಲ್ಲೆಯ ಶಾಖೆಯು 1921 ರಲ್ಲಿ ಧಾರವಾಡದಲ್ಲಿ ಪ್ರಾರಂಭವಾಯಿತು. ಈ ಸಂಸ್ಥೆಯ ಮೂಲಕ ಸಹಕಾರಿ ಶಿಕ್ಷಣ ಪ್ರಚಾರ, ಸಂಘಟನೆ, ವಿಚಾರ ವಿನಿಮಯಕ್ಕೆ ಅವಕಾಶವಾದಂತಾಯಿತು. ಈ ಸಂಸ್ಥೆಯ ಉಪಶಾಖೆಗಳನ್ನು ತಾಲ್ಲೂಕು ಡೆವಲಪ್‌ಮೆಂಟ್ ಸಂಸ್ಥೆಗಳು ಎಂಬ ಹೆಸರಿನಿಂದ ಹಲವಾರು ತಾಲೂಕುಗಳಲ್ಲಿ ಪ್ರಾರಂಭಿಸಲಾಯಿತು. ಈ ಸಂಸ್ಥೆಯಿಂದ 1920 ರಲ್ಲಿ ಕನ್ನಡ ಭಾಷೆಯಲ್ಲಿ ಸಹಕಾರಿ ವಿಷಯವಾಗಿ ಸ್ವತಂತ್ರ ಮಾಸಪತ್ರಿಕೆ 'ಕರ್ನಾಟಕ ಸಹಕಾರಿ ಮಿತ್ರ' ಪ್ರಕಟವಾಗುತ್ತಿತ್ತು.

**ಸಹಕಾರಿ ಬಡ್ಡಿದರ:** ಒಂದು ವರದಿ ತಿಳಿಸುವಂತೆ 1924 ರಲ್ಲಿ ಸಹಕಾರಿ ಸಂಸ್ಥೆಗಳು ವಿವಿಧ ಠೇವಣಿಗಳ ಮೇಲೆ ಈ ಮುಂದಿನ ದರದಲ್ಲಿ ಬಡ್ಡಿಯನ್ನು ನೀಡುತ್ತಿದ್ದವು. ಉಳಿತಾಯ ಖಾತೆ ಶೇ. 4; ಕಾಲಮಿತಿ ಠೇವಣಿಗಳು-ಒಂದು ವರ್ಷ ಮತ್ತು ಹೆಚ್ಚಿನ ಅವಧಿಗೆ ಶೇ. 6 1/4; ಮೂರು ವರ್ಷ ಮತ್ತು ಹೆಚ್ಚಿನ ಅವಧಿ ಶೇ. 6 1/2; ಐದು ವರ್ಷ ಮತ್ತು ಹೆಚ್ಚಿಗೆ ಶೇ. 7; ಹತ್ತು ವರ್ಷ ಮತ್ತು ಹೆಚ್ಚಿನ ಅವಧಿ ಶೇ. 7 1/2. 1924 ರಲ್ಲಿ ಬ್ಯಾಂಕ್ ಮೂಲಕ ಸರ್ಕಾರ ನೀಡುತ್ತಿದ್ದ ತಗಾಯಿ ಸಾಲಗಳಿಗೆ ಬಡ್ಡಿದರವನ್ನು ಶೇ. 6 ಕ್ಕೆ ಇಳಿಸಲಾಯಿತು.

ಜಿಲ್ಲೆಯ ಸಹಕಾರಿ ಚಳುವಳಿಯ ಬೆಳವಣಿಗೆಯ ಮೂರನೆ ಹಂತ (1935-36 ರಿಂದ 1944-45) ದ ಅವಧಿಯಲ್ಲಿ ಸಂಭವಿಸಿದ ಬದಲಾವಣೆಗಳನ್ನು ಅವಲೋಕಿಸಿದಾಗ ಯುದ್ಧಕಾಲದಲ್ಲಿ ಮತ್ತು ಯುದ್ಧಾನಂತರದ ಕಾಲದಲ್ಲಿ ಏರುತ್ತಿರುವ ವ್ಯವಸಾಯ ಉತ್ಪನ್ನಗಳ ಬೆಲೆಯು ರೈತರಿಗೆ ಹಳೆಯ ಸಾಲವನ್ನು ತೀರಿಸಲು ಸಹಾಯಕವಾಯಿತು. ಹತ್ತಿನ ಸಹಕಾರಿ ಸಂಘಗಳ ಬಹುಪಾಲು ಅವಧಿ ಮೀರಿದ ಹಳೆಯ ಸಾಲಗಳು ವಸೂಲಾಗಿ ರೈತರಿಗೂ ಸಂಘಗಳಿಗೂ ಸಹಾಯವಾಯಿತು. ಅನೇಕ ವ್ಯವಸಾಯೇತರ ಸಂಘಗಳು ಸಹ ಇದರ ಲಾಭವನ್ನು ಪಡೆದವು. ಈ ಅವಧಿಯಲ್ಲಿ ಉಂಟಾದ ಇನ್ನೊಂದು ಮಹತ್ವದ ಬದಲಾವಣೆ ಎಂದರೆ ಅನೇಕ ಸಾಲ ನೀಡುವ ಸಹಕಾರಿ ಸಂಘಗಳು ಬ್ಯಾಂಕೇತರ ಚಟುವಟಿಕೆಗಳನ್ನು ಅಂದರೆ ಜೀವನಾವಶ್ಯಕ ವಸ್ತುಗಳ ವಿತರಣೆ, ನಿಯಂತ್ರಿತ ವಸ್ತುಗಳ ಪೂರೈಕೆ, ಎಂದರೆ ಚಿಮಣಿ ಎಣ್ಣೆ, ನೂಲು ಮುಂತಾದವುಗಳ ವಿತರಣೆಯಲ್ಲಿ ತೊಡಗಿದುವಲ್ಲದೇ ತಮ್ಮ ಆದಾಯ ಮೂಲವನ್ನು ಹೆಚ್ಚಿಸಿ ಕೊಂಡವು. ಇದೇ ಅವಧಿಯಲ್ಲಿ ಸಹಕಾರಿ ವಲಯದಲ್ಲಿ ವಿವಿಧೋದ್ದೇಶ ಸಂಘಗಳು ಪ್ರಾರಂಭಿಸಲ್ಪಟ್ಟವು. 1935-36 ರಿಂದ 1945-46 ರ ದಶಕದ ಅವಧಿಯಲ್ಲಿ ಮತ್ತು ಸ್ವಾತಂತ್ರ್ಯಾನಂತರದ ವರ್ಷಗಳಲ್ಲಿ ಜಿಲ್ಲೆಯಲ್ಲಿ ಅನೇಕ ಕೃಷಿಯೇತರ ಉತ್ಪಾದಕ, ಮಾರಾಟ, ಸಂಸ್ಕರಣ, ಬೇಸಾಯ ಅಭಿವೃದ್ಧಿ, ನೀರಾವರಿ, ಗೃಹನಿರ್ಮಾಣ ಮುಂತಾದ ಸ್ಥಳೀಯ ಅವಶ್ಯಕತೆಗಳನ್ನು ಪೂರೈಸುವ ಸಹಕಾರಿ ಸಂಘಗಳು ಕಾಣಿಸಿಕೊಂಡವು. ಅವುಗಳಲ್ಲಿ ಮುಖ್ಯವಾದವುಗಳು ನೇಕಾರರ ಉತ್ಪಾದಕರ ಸಂಘಗಳು; ನೇಕಾರರ ಸಹಕಾರ ಸಂಘಗಳಲ್ಲಿ ಗಜೇಂದ್ರಗಡ (1944), ಹೆಬ್ಬಳ್ಳಿ (1945), ಉಪ್ಪಿನ ಬೆಟಗೇರಿ (1945), ಗದಗ-ಬೆಟಗೇರಿ (1945), ಅಗಡಿ (1945), ತುಮ್ಮಿನಕಟ್ಟಿ (1945), ಹುಲಗೇರಿ (1947), ಮುಂತಾದವುಗಳು ಪ್ರಮುಖವಾದವುಗಳು.

ಜಿಲ್ಲೆಯ ಪ್ರಮುಖ ಗೃಹ ಕೈಗಾರಿಕೆಯಾದ ನೇಕಾರಿಕೆಯನ್ನು ಅಭಿವೃದ್ಧಿಪಡಿಸಲು 1935 ರಲ್ಲಿ ಕೇಂದ್ರ ಸರ್ಕಾರದ ಯೋಜನೆಯ ಅನ್ವಯ ಧಾರವಾಡ ಜಿಲ್ಲಾ ಕೈಗಾರಿಕಾ ಅಭಿವೃದ್ಧಿ ಸಹಕಾರಿ ಸಂಘವನ್ನು ಹುಬ್ಬಳ್ಳಿಯಲ್ಲಿ ಪ್ರಾರಂಭಿಸಲಾಯಿತು. ಈ ಸಂಸ್ಥೆಯ ಮುಖ್ಯ ಉದ್ದೇಶ ನೇಕಾರರಿಗೆ ಆಧುನಿಕ ನೇಯ್ಗೆ ವಿನ್ಯಾಸಗಳ ಬಗ್ಗೆ ಸೂಕ್ತ ಮಾಹಿತಿ, ಸುಧಾರಿಸಿದ ಸ್ವಯಂ ಚಾಲಿತ ಮಗ್ಗಗಳ ಉಪಯೋಗ, ಕಚ್ಚಾಮಾಲನ್ನು ಒದಗಿಸುವುದು ಮತ್ತು ಉತ್ಪಾದಕ ವಸ್ತುಗಳಿಗೆ ಮಾರುಕಟ್ಟೆಯ ಸೌಲಭ್ಯವನ್ನು ಒದಗಿಸುವುದಾಗಿತ್ತು. ಈ ಯೋಜನೆಯ ಅನ್ವಯ ಜಿಲ್ಲೆಯ ಇತರ ಭಾಗಗಳಲ್ಲಿ ಅನೇಕ ನೇಕಾರರ ಸಂಘಗಳು ಹುಟ್ಟಲು ಸಹಾಯಕವಾಯಿತು.

1940-41 ರ ಆಡಳಿತ ವರದಿ ತಿಳಿಸುವಂತೆ ಜಿಲ್ಲೆಯಲ್ಲಿ 461 ವ್ಯವಸಾಯ ಸಾಲದ ಸಂಘಗಳು ಇದ್ದವು. ಅಪರಿಮಿತ ಹೊಣೆಗಾರಿಕೆ ಸಂಘಗಳು (450) ಹೊಂದಿದ್ದ ಸದಸ್ಯರ ಸಂಖ್ಯೆ 26,135 ಆಗಿದ್ದರೆ ಅವುಗಳು ಹೊಂದಿದ ಪಾಲು ಬಂಡವಾಳ ರೂ. 4.32 ಲಕ್ಷ ಆಗಿತ್ತು. ವ್ಯವಸಾಯೇತರ ಸಂಘಗಳ ಒಟ್ಟು ಸಂಖ್ಯೆ 73 ಆಗಿದ್ದರೆ ಅವುಗಳಲ್ಲಿ 55 ಸಂಘಗಳು ವ್ಯವಸಾಯೇತರ ಉದ್ದೇಶಗಳಿಗೆ ಸಾಲ ನೀಡುವ ಸಂಘಗಳಾಗಿದ್ದವು.

ಸ್ವಾತಂತ್ರ್ಯಾ ನಂತರದ ದಶಕಗಳಲ್ಲಿ ನೇಕಾರಿಕೆಯನ್ನು ಹೊರತುಪಡಿಸಿ ಇತರ ಸ್ಥಳೀಯ ಗೃಹ ಕೈಗಾರಿಕೆಗಳನ್ನು ಸಹಕಾರಿ ವಲಯದಲ್ಲಿ ಪ್ರಾರಂಭಿಸುವ ಪ್ರಯತ್ನಗಳು ನಡೆದವು. ಹುಬ್ಬಳ್ಳಿಯಲ್ಲಿ 1947 ರಲ್ಲಿ ಪ್ರಮುಖ ಕೈಗಾರಿಕಾ ಉತ್ಪಾದನೆಗಳಾದ ತಾಮ್ರ, ಹಿತ್ತಾಳೆ ಪಾತ್ರೆಗಳನ್ನು ಉತ್ಪಾದಿಸಲು ಸಹಾಯಕವಾಗುವಂತೆ ತಾಮ್ರ ಹಿತ್ತಾಳೆ ಹಾಗೂ ವಿವಿಧ ಧಾತುಗಳ ಉತ್ಪಾದಕರ ಸಹಕಾರ ಸಂಘವನ್ನು ಸ್ಥಾಪಿಸಲಾಯಿತು. ಅದಕ್ಕೂ ಪೂರ್ವದಲ್ಲಿ ಧಾರವಾಡದಲ್ಲಿ 1944 ರಲ್ಲಿ ಜಿಲ್ಲಾ ಮಟ್ಟದಲ್ಲಿ ಮೇದಾರರ ಔದ್ಯೋಗಿಕ ವ್ಯಾಪಾರ ಸಂಘವನ್ನು ಪ್ರಾರಂಭಿಸಲಾಯಿತು. ಗದಗಿನಲ್ಲಿ 1949 ರಲ್ಲಿ ಬಡಿಗತನ ಮತ್ತು ಕೈಗಾರಿಕಾ ಸಹಕಾರ ಸಂಘಗಳು ಹುಟ್ಟಿಕೊಂಡವು. ಸಹಕಾರಿ ವಲಯದಲ್ಲಿ ಗ್ರಾಮೀಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಕೆಲವು ಆಯ್ದ ಸಹಕಾರಿ ಸಂಸ್ಥೆಗಳು ಆಯಾ ಉದ್ಯಮಗಳಿಗೆ ಸಂಬಂಧಪಟ್ಟಂತೆ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ನಡೆಸುತ್ತಿದ್ದವು. ಉಣ್ಣೆ ನೇಯ್ಗೆಕೇಂದ್ರ (ಗದಗ), ನಾರು ನೇಯ್ಗೆ ಕೇಂದ್ರ (ಹಾವನೂರು), ಬಣ್ಣ ಹಾಕುವುದು ಮತ್ತು ಅಚ್ಚು ಹಾಕುವುದು (ಗದಗ-ಬೆಟಗೇರಿ), ಹತ್ತಿ ನೂಲು ನೇಯ್ಗೆ ಕೇಂದ್ರ (ಗೋಪನಕೊಪ್ಪ), ಕುಂಬಾರಿಕೆ ಮತ್ತು ಮರಗೆಲಸ ಕೇಂದ್ರ (ರೋಣ), ರೇಷ್ಮೆ ಬೇಸಾಯವನ್ನು ಕುರಿತಂತೆ ಹಿರೇಕೆರೂರು, ಕಲ್ಲಾಪುರ (ಹಾನಗಲ್ ತಾ॥) ಮತ್ತು ಒಕ್ಕಲುತನದ ಕಾಲೇಜು, ಧಾರವಾಡ.

**ಗ್ರಾಹಕರ ಸಹಕಾರ ಸಂಘಗಳು:** ಯುದ್ಧ ಕಾಲದಲ್ಲಿ ಮತ್ತು ನಂತರದ ದಶಕಗಳಲ್ಲಿ ಹೆಚ್ಚುತ್ತಿದ್ದ ಬೆಲೆಗಳ ತೀವ್ರತೆಯನ್ನು ತಡೆಯಲು 1944 ರಲ್ಲಿ ಕಲಘಟಗಿಯಲ್ಲಿ ಪ್ರಾಥಮಿಕ ಶಿಕ್ಷಕರ, ಮತ್ತು ಬ್ಯಾಡಗಿಯಲ್ಲಿ ಕಾರ್ಮಿಕರ ಗ್ರಾಹಕರ ಸಂಘಗಳು, 1949 ರಲ್ಲಿ ಹುಬ್ಬಳ್ಳಿಯಲ್ಲಿ ರೈಲ್ವೆ ನೌಕರರ ಗ್ರಾಹಕರ ಸಂಘಗಳು ನೋಂದಾಯಿಸಲ್ಪಟ್ಟವು. ಸಹಕಾರಿ ವಲಯದಲ್ಲಿ ಗೃಹ ನಿರ್ಮಾಣ ಚಟುವಟಿಕೆಗಳು 1950-1960ರ ದಶಕದಲ್ಲಿ ತೀವ್ರಗೊಂಡು ಹೆಚ್ಚುತ್ತಾ ಹೋದವು. ಈ ಜಿಲ್ಲೆಯ ಹಲವು ಹಳೆಯ ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿ ಧಾರವಾಡದ ಸೋಮೇಶ್ವರ ಗೃಹ ನಿರ್ಮಾಣ ಸಹಕಾರ ಸಂಘ (1946), 1947 ರಲ್ಲಿ ನೆಹರುನಗರ ಗೃಹ ನಿರ್ಮಾಣ ಸಹಕಾರ ಸಂಘ, ಬ್ಯಾಡಗಿ, ವಿಜಯನಗರ ಗೃಹ ನಿರ್ಮಾಣ ಸಹಕಾರ ಸಂಘ, ಹುಬ್ಬಳ್ಳಿ (1948), ಮತ್ತು ಚಿಕ್ಕೆರೂರು ಗೃಹ ನಿರ್ಮಾಣ ಸಹಕಾರ ಸಂಘ (1948). 1949 ರಲ್ಲಿ ಪ್ರಾರಂಭಗೊಂಡ ಅಕ್ಕಿಆಲೂರು ಹಿಂದುಳಿದವರ ಗೃಹ ನಿರ್ಮಾಣ ಸಹಕಾರ ಸಂಘ ಮತ್ತು ಆನಂದವನ ಸಹಕಾರ ಸಂಘ, ರಾಣೆಬೆನ್ನೂರು ಮುಖ್ಯವಾದವುಗಳು. ಇತ್ತೀಚಿನ ವರ್ಷಗಳಲ್ಲಿ ಈ ಸಂಘಗಳು ಬಹು ವ್ಯಾಪಕವಾಗಿ ನಗರ ಕೈಗಾರಿಕಾ ಪ್ರದೇಶಗಳಲ್ಲಿ ನೊಂದಾಯಿಸಲ್ಪಟ್ಟಿವೆ.

'ಹೆಚ್ಚು ಆಹಾರ ಬೆಳೆಯಿರಿ' ಆಂದೋಲನಕ್ಕೆ ಪೂರಕವಾಗುವಂತೆ 1949 ರಲ್ಲಿ ಸರ್ಕಾರವು ಏತನೀರಾವರಿ ಯೋಜನೆಗಳನ್ನು ಸಹಕಾರಿ ವಲಯದಲ್ಲಿ ಪ್ರೋತ್ಸಾಹಿಸಿತು. ಈ ಸಂಘಗಳಿಗೆ ಯಂತ್ರೋಪಕರಣ ಅಳವಡಿಸಲು ರಿಯಾಯಿತಿ ಬಡ್ಡಿಯ ಸಾಲ ಮತ್ತು ಸಹಾಯಧನ ನೀಡುವ ಮೂಲಕ ಸರ್ಕಾರವು ನೆರವಾಯಿತು. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ (1951-56) ಜಿಲ್ಲೆಯಲ್ಲಿ ಮೂರು ಏತ ನೀರಾವರಿ ಸಂಘಗಳು ನೋಂದಾಯಿಸಲ್ಪಟ್ಟವು. ಜಿಲ್ಲೆಯಲ್ಲಿ ಪ್ರಾರಂಭವಾದ ಏತ ನೀರಾವರಿ ಸಂಘಗಳಲ್ಲಿ ಕೊಡಿಯಾಳ, ಚಿಕ್ಕಮಾಗನೂರು (ರಾಣೆಬೆನ್ನೂರು ತಾಲ್ಲೂಕು), ಅರೆ ಲಕಮಾಪುರ (ಹಾನಗಲ್ ತಾಲ್ಲೂಕು) ಇವು ಪ್ರಾರಂಭದ ಸಂಘಗಳು. ಕಲಘಟಗಿ ತಾಲ್ಲೂಕಿನ ತಂಬೂರಿನಲ್ಲಿ ಹೊಸ ಪದ್ಧತಿಯ ಒಕ್ಕಲುತನ ಸಂಘವನ್ನು 1947 ರಲ್ಲಿ ಪ್ರಾರಂಭಿಸಲಾಯಿತು.

ಜಿಲ್ಲೆಯ ಕೂಲಿಕಾರರ ಸಂಘಗಳಲ್ಲಿ ಹಾವೇರಿ ತಾಲ್ಲೂಕಿನ ನಾಗೇಂದ್ರಮಟ್ಟಿ ವಡ್ಡರ ಕೂಲಿಕಾರರ ಸಂಘ (1946) ಮೊದಲನೆಯದು, ಎಂದು ತಿಳಿದು ಬರುವುದು.

ಆಡಳಿತ ವರದಿ ತಿಳಿಸುವಂತೆ (1947-48) ರಲ್ಲಿ ಧಾರವಾಡ ಜಿಲ್ಲೆಯಲ್ಲಿದ್ದ ಒಟ್ಟು ವ್ಯವಸಾಯ ಪತ್ತಿನ ಸಹಕಾರ ಸಂಘಗಳ ಸಂಖ್ಯೆ 594, ಅವುಗಳಲ್ಲಿ 20 ಸಂಘಗಳು ಪರಿಮಿತ ಹೊಣೆಗಾರಿಕೆಯಿಂದ ಕೂಡಿದ್ದರೆ ಉಳಿದವುಗಳು ಅಪರಿಮಿತ ಹೊಣೆಗಾರಿಕೆಯಿಂದ ಕೂಡಿದ್ದವು. ಈ ಸಂಸ್ಥೆಗಳು ಹೊಂದಿದ್ದ ಸದಸ್ಯರ ಸಂಖ್ಯೆ 38,041 ಆಗಿದ್ದರೆ, ಪಾಲು ಬಂಡವಾಳ ರೂ. 7.64 ಲಕ್ಷ, ದುಡಿಯುವ ಬಂಡವಾಳ ರೂ. 47 ಲಕ್ಷ, ಸದಸ್ಯರಿಂದ ಸಂಗ್ರಹಿಸಿದ ಠೇವಣಿ ಮೊತ್ತ ರೂ. 1.87 ಲಕ್ಷ ಮತ್ತು ಈ ಸಂಸ್ಥೆಗಳು ನೀಡಿದ್ದ ಒಟ್ಟುಸಾಲ ರೂ. 17 ಲಕ್ಷ ಎಂದು ತಿಳಿದು ಬರುವುದು. ಸದರಿ ವರ್ಷದಲ್ಲಿ 13 ಅರ್ಬನ ಬ್ಯಾಂಕುಗಳು ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಕೆಲಸ ಮಾಡುತ್ತಿದ್ದವು. ತಾಲ್ಲೂಕು ಅಭಿವೃದ್ಧಿ ಸಂಘಗಳು 'ಹೆಚ್ಚು ಆಹಾರ ಬೆಳೆಯಿರಿ' ಆಂದೋಲನಕ್ಕೆ ಸಕ್ರೀಯವಾಗಿ ಸಹಾಯ ಮಾಡುತ್ತಿದ್ದವು. ಸದರಿ ವರ್ಷದಲ್ಲಿ ಜಿಲ್ಲೆಯಲ್ಲಿದ್ದ ವಿವಿಧ ವ್ಯವಸಾಯೇತರ ಸಂಘಗಳ ಸಂಖ್ಯೆ 145 ಮತ್ತು ಸದಸ್ಯರ ಸಂಖ್ಯೆ ಸುಮಾರು 33,000. ಈ ಸಂಸ್ಥೆಗಳು ಹೊಂದಿದ್ದ ಪಾಲು ಬಂಡವಾಳ ರೂ. 14.75 ಲಕ್ಷ ಎಂದು ಕಂಡುಬರುವುದು. ಆದರೆ ಈವರೆಗೆ ಕೊಟ್ಟಿರುವ ಎಲ್ಲ ಮಾಹಿತಿ ಹಾಗೂ ಅಂಕೆ ಸಂಖ್ಯೆಗಳು ಆವರೆಗೆ ಸಂಸ್ಥಾನೀ ಆಡಳಿತಕ್ಕೆ ಒಳಪಟ್ಟ (ಸವಣೂರು ಇತ್ಯಾದಿ) ಪ್ರದೇಶಗಳನ್ನು ಒಳಗೊಂಡಿಲ್ಲವೆಂದು ಗಮನಿಸಬೇಕು.

ಹಿಂದಿನ ಜಿಲ್ಲಾ ಗ್ಯಾಸೆಟಿಯರ್‌ನಲ್ಲಿ ನಮೂದಿಸಿದಂತೆ 1950-51 ರಲ್ಲಿ ಈ ಜಿಲ್ಲೆಯ ವ್ಯವಸಾಯ ಪತ್ತಿನ ಸಂಘಗಳ ಸಂಖ್ಯೆ 652 ಕ್ಕೆ ಹೆಚ್ಚಳಗೊಂಡಿತ್ತು. ಅವುಗಳು ಹೊಂದಿದ್ದ ಸದಸ್ಯರ ಸಂಖ್ಯೆ 50,957; ಅವುಗಳು ಹೊಂದಿದ್ದ ಪಾಲು ಬಂಡವಾಳ ರೂ. 13.82 ಲಕ್ಷ; ಹಾಗೂ ದುಡಿಯುವ ಬಂಡವಾಳ ರೂ. 79.51 ಲಕ್ಷ, ಈ ಅಂಕಿ ಅಂಶಗಳು ಧಾರವಾಡ ಜಿಲ್ಲೆಯಲ್ಲಿ 1949 ರಲ್ಲಿ ಸೇರ್ಪಡೆಯಾದ ದೇಶಿಯ ಸಂಸ್ಥಾನಗಳ ಪ್ರದೇಶಗಳ ವಿವರವನ್ನೂ ಸಹ ಒಳಗೊಂಡಿರುವುದು.

1950-51 ರಲ್ಲಿ ಜಿಲ್ಲೆಯಲ್ಲಿ ನಾಲ್ಕು (ಹುಬ್ಬಳ್ಳಿ, ಗದಗ, ಹಾವೇರಿ, ಧಾರವಾಡ) ಜಮೀನು ಅಡಮಾನದ ಬ್ಯಾಂಕುಗಳಿದ್ದವು. ಅವುಗಳು ಹೊಂದಿದ್ದ ಸದಸ್ಯರ ಸಂಖ್ಯೆ 4,899 ಪಾಲು ಬಂಡವಾಳ ರೂ. 22,308 ಮತ್ತು ಇವುಗಳು ವಿತರಿಸಿದ ಸಾಲದ ಮೊತ್ತ ರೂ. 3.29 ಲಕ್ಷ ಎಂದು ವರದಿಯಾಗಿದೆ.

ಸ್ವಾತಂತ್ರ್ಯೋತ್ತರದ ಪ್ರಥಮ ದಶಕದಲ್ಲಿ ಏಕೀಕೃತ ಗ್ರಾಮೀಣ ಹಣಕಾಸು ಯೋಜನೆಯ ಅನ್ವಯ ಗ್ರಾಮಾಂತರ ಪ್ರದೇಶಗಳಲ್ಲಿ ಒಕ್ಕಲುತನ ಪತ್ತಿನ ಆಂದೋಲನ ಭರದಿಂದ ಹಬ್ಬ ತೊಡಗಿತು. ಜಿಲ್ಲೆಯಲ್ಲಿ 1946-47 ರಿಂದ 7 ವರ್ಷಗಳ ಅವಧಿಯಲ್ಲಿ ಸಹಕಾರಿ ಪತ್ತನ್ನು ಬೆಳೆಸುವ ಗುರಿಯನ್ನು ಸಾಧಿಸಲಾಯಿತು. 1946 ಜೂನ್ ಕೊನೆಯಲ್ಲಿ ಸಹಕಾರಿ ಆಂದೋಲನವು ಈ ಜಿಲ್ಲೆಯ 511 ವ್ಯವಸಾಯ ಸಾಲ ಸಂಘಗಳ ಮೂಲಕ 635 ಹಳ್ಳಿಗಳನ್ನು, 30,174 ಸದಸ್ಯರನ್ನು ಒಳಗೊಂಡು, ಶೇ. 12.2 ರಷ್ಟು ಗ್ರಾಮೀಣ ಜನತೆಯನ್ನು ಆವರಿಸಿದ್ದರೆ, 1952 ಜೂನ್ ಕೊನೆಯಲ್ಲಿ ,831 ಸಂಘಗಳ ಮೂಲಕ, 1613 ಹಳ್ಳಿಗಳನ್ನು ಆವರಿಸಿ, 84,484 ಸದಸ್ಯರನ್ನು ಒಳಗೊಂಡಂತೆ, ಶೇ.39.1 ಗ್ರಾಮೀಣ ಜನತೆಯನ್ನು ಆವರಿಸಿತ್ತು. ಮುಂದಿನ ದಶಕಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ವ್ಯವಸಾಯ ಸಾಲ ಸಂಘಗಳ ಜೊತೆಯಲ್ಲಿ ವ್ಯವಸಾಯೇತರ ಉದ್ದೇಶಗಳಿಗೆ ಸಾಲ ನೀಡುವ, ಪತ್ತು ಮತ್ತು ಮಾರಾಟ ಜೋಡಿಸುವ ಸಂಘಗಳು, ಬೇಸಾಯ ಅಭಿವೃದ್ಧಿ, ಹೈನುಗಾರಿಕೆ, ಪಶುಸಂಗೋಪನೆ, ಆಹಾರ ವಸ್ತುಗಳ ಮತ್ತು ಇತರ ವ್ಯವಸಾಯ ಉತ್ಪನ್ನಗಳ ಸಂಸ್ಕರಣ ಘಟಕಗಳು, ತೋಟಗಾರಿಕೆ, ಗ್ರಾಮೀಣ ಕೈಕಸಬುಗಳನ್ನು ಪ್ರೋತ್ಸಾಹಿಸುವ ಸಹಕಾರಿ ಸಂಘಗಳು ಕಾಣಿಸಿಕೊಂಡು ಸಹಕಾರಿ ಜಾಲ ವಿಸ್ತರಣೆಗೊಂಡಿತು.

1952-53 ರಲ್ಲಿ ಜಿಲ್ಲೆಯಲ್ಲಿದ್ದ 33 ವಿವಿಧ ಬಗೆಯ ಸಹಕಾರಿ ಸಂಸ್ಥೆಗಳ ಪಟ್ಟಿಯು ಈ ರೀತಿ ಇರುವುದು: ಸಹಕಾರಿ ಒಕ್ಕಲುತನ ಪತ್ತಿನ ಸಂಘಗಳು 619; ವಿವಿಧೋದ್ದೇಶ ಸಂಘಗಳು 115; ಔದ್ಯೋಗಿಕ ಉತ್ಪಾದಕರ ಸಂಘಗಳು 44; ವೇತನದಾರರ ಗ್ರಾಹಕರ ಸಂಘಗಳು 36; ಅರ್ಬನ್ ಸಂಘಗಳು 31; ಗೃಹ ನಿರ್ಮಾಣ ಸಂಘಗಳು 28; ನೇಕಾರರ ಸಂಘಗಳು 26; ಸಾಮಾನ್ಯ ಗ್ರಾಹಕರ ಸಂಘಗಳು 21; ಪಶುಸಂಗೋಪನ ಸಂಘಗಳು 19; ತಾಲೂಕು ಸಹಕಾರಿ ಮೇಲ್ವಿಚಾರಕ ಸಂಘಗಳು 18; ಮಾರಾಟ ಸಂಘಗಳು 14; ಅರ್ಬನ್ ಬ್ಯಾಂಕುಗಳು 14; ತಾಲೂಕಾ ಅಭಿವೃದ್ಧಿ ಸಂಘಗಳು 12; ಉತ್ತಮ ಬೇಸಾಯ ಸಂಘಗಳು 10; ಬೇಲಿ ಹಾಕುವ

ಸಂಘಗಳು 10; ಲಾವಣಿ (ಗೇಣಿ)ದಾರರ ಬೇಸಾಯ ಸಂಘಗಳು 8; ಬೀಜ ಹಾಗು ಸಲಕರಣೆ ಸಂಘಗಳು 7; ಯಾತದ ನೀರಾವರಿ ಸಂಘಗಳು 5; ಭೂಮಿ ಒತ್ತೆ (ಜಮೀನು ಅಡಮಾನ) ಬ್ಯಾಂಕುಗಳು 4; ಮಹಿಳೆಯರ ಸಹಕಾರಿ ಸಂಘಗಳು 4; ಹೈನದ ಸಂಘಗಳು 3; ಜಿಲ್ಲಾ ಸಹಕಾರಿ ಔದ್ಯೋಗಿಕ ಸಂಘ 2; ಒಕ್ಕಲುತನ ಸರಕುಗಳ ಪೂರೈಕೆ ಸಂಘಗಳು 3; ಸಹಕಾರಿ ಸಾಮೂಹಿಕ ಬೇಸಾಯ ಸಂಘ 2; ಸಹಕಾರಿ ಸಾರಿಗೆ ಸಂಘ 2; ಸಹಕಾರಿ ಶಿಕ್ಷಣ ಸಂಘ 2; ಜೀವನ ಸುಧಾರಣೆ ಸಹಕಾರಿ ಸಂಘ 2; ಒಂದು ಮಧ್ಯವರ್ತಿ (ಕೇಂದ್ರೀಯ) ಸಹಕಾರಿ ಬ್ಯಾಂಕು, ಒಂದು ಜಿಲ್ಲಾ ಸಹಕಾರಿ ಪೂರೈಕೆ ಹಾಗು ಮಾರಾಟದ ಫೆಡರೇಶನ್, ಒಂದು ಜಿಲ್ಲಾ ಸಹಕಾರಿ ಖರೀದಿ-ವಿಕ್ರಿ ಸಂಘ, ಒಂದು ಜಿಲ್ಲಾ ಸಹಕಾರಿ ಮಂಡಳ, ಒಂದು ಹತ್ತಿ ಅರೆಯುವ ಹಾಗು ಗಂಟು ಕಟ್ಟುವ ಸಹಕಾರಿ ಸಂಘ, ಒಂದು ಸಹಕಾರಿ ಸುಧಾರಣಾ ಸಂಘ. 1951-52 ರಲ್ಲಿ ಜಿಲ್ಲೆಯಲ್ಲಿ 17 ವಿವಿಧ ಬಗೆಯ ಉದ್ದಿಮೆಗಳನ್ನು ಒಳಗೊಂಡ 78 ಔದ್ಯೋಗಿಕ ಸಹಕಾರಿ ಸಂಘಗಳು ಕೆಲಸ ಮಾಡುತ್ತಿರುವುದಾಗಿ ತಿಳಿದು ಬರುವುದು. ಈ ಎಲ್ಲಾ ಸಂಸ್ಥೆಗಳ ಸದಸ್ಯರ ಸಂಖ್ಯೆ 6,831 ಮತ್ತು ಪಾಲು ಬಂಡವಾಳ ರೂ. 8.25 ಲಕ್ಷ. ವರದಿಯ ವರ್ಷದಲ್ಲಿ ಈ ಸಂಘಗಳು ನಡೆಸಿದ್ದ ವ್ಯವಹಾರ ರೂ. 48.46 ಲಕ್ಷ.

ರಾಜ್ಯ ಪುನರ್ ರಚನೆಗೆ ಮೊದಲು ಜಿಲ್ಲಾ ಸಹಕಾರಿ ಆಡಳಿತವನ್ನು ನಿರ್ವಹಿಸಲು ಸಹಾಯಕ ನಿಬಂಧಕರು ಇವರ ಮೇಲೆ ಡಿವಿಜನಲ್ ಉಪನಿಬಂಧಕರು ಎಂಬ ಅಧಿಕಾರಿ ಇರುತ್ತಿದ್ದರು. ಧಾರವಾಡ ವಲಯ (ಡಿವಿಜನ್)ದಲ್ಲಿ ಬೊಂಬಾಯಿ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲದೇ ಕೊಲ್ಹಾಪೂರವೂ ಸಹ ಸೇರಿತ್ತು. ವಲಯ ಆಡಳಿತ ಕಛೇರಿ ಬೆಳಗಾವಿಯಲ್ಲಿ ಇತ್ತು. ಸಣ್ಣ ಮತ್ತು ಗುಡಿ ಕೈಗಾರಿಕೆಗಳ ನಿರ್ವಹಣಾ ಅಧಿಕಾರವೂ ಸಹಕಾರಿ ಇಲಾಖೆಯ ವ್ಯಾಪ್ತಿಗೆ ಸೇರಿತು.

ರಾಜ್ಯ ಪುನರ್ ಘಟನೆಯ ನಂತರ 1959 ರಲ್ಲಿ ಸಮಗ್ರ ಕರ್ನಾಟಕಕ್ಕೆ ಅನ್ವಯವಾಗುವಂತಹ ಹೆಚ್ಚು ವಿಸ್ತೃತ, ಸಮಗ್ರ ಸಹಕಾರಿ ಕಾನೂನನ್ನು ಜಾರಿಯಲ್ಲಿ ತರಲಾಯಿತು. ಅದುವರೆಗೆ ಜಿಲ್ಲೆಯ ಸಹಕಾರಿ ಸಂಸ್ಥೆಗಳು ಮುಂಬೈ ರಾಜ್ಯದ ಸಹಕಾರಿ ಕಾನೂನು 1935 ರ ಅನ್ವಯ ಕಾರ್ಯ ನಿರ್ವಹಿಸುತ್ತಿದ್ದವು.

ರಾಜ್ಯ ಪುನರ್ ಘಟನೆಯ ನಂತರದ ಸುಮಾರು ನಾಲ್ಕು ದಶಕಗಳ ಅವಧಿಯಲ್ಲಿ ಜಿಲ್ಲೆಯಲ್ಲಿ ಸಹಕಾರಿ ವಲಯದಲ್ಲಿ ಇತರೇ ಸಂಘಗಳೊಂದಿಗೆ ದೊಡ್ಡ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಮೂಡಿಬಂದಿವೆ. ಈ ಕೈಗಾರಿಕೆಗಳಲ್ಲಿ ರಾಜ್ಯ ಸರ್ಕಾರ, ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ, ಸಹಕಾರಿ ಮತ್ತು ಸಾರ್ವಜನಿಕ ವಲಯದ ಬ್ಯಾಂಕುಗಳು, ಸದಸ್ಯರ ಸಂಸ್ಥೆಗಳ ಹಾಗೂ ಪಾಲು ಬಂಡವಾಳಗಳ ವಿನಿಯೋಗ ಗಮನೀಯ ಪ್ರಮಾಣದಲ್ಲಿ ಏರಿದೆ. ಸರ್ಕಾರದ ಧೋರಣೆಯಂತೆ 1976-77 ರಲ್ಲಿ ದುರ್ಬಲ, ಅಶಕ್ತ, ಪ್ರಾಥಮಿಕ ವ್ಯವಸಾಯ ಪತ್ತಿನ ಮತ್ತು ಇತರೇ ಪ್ರಾಥಮಿಕ ಸಂಘಗಳನ್ನು ವಿಲೀನಿಕರಣಗೊಳಿಸಿ ಸಬಲ ಸಂಸ್ಥೆಗಳನ್ನಾಗಿ ಮಾಡಲಾಯಿತು. ಆಡಳಿತಾತ್ಮಕವಾಗಿ ಅನೇಕ ಬದಲಾವಣೆಗಳನ್ನು ಜಾರಿಗೊಳಿಸಲಾಗಿದೆ. ಸಹಕಾರಿ ವಲಯದ ಜಿಲ್ಲೆಯ ದೊಡ್ಡ ಉದ್ಯಮಗಳೆಂದರೆ ಗದಗ ಸಹಕಾರಿ ಎಣ್ಣೆಗಿರಣಿ (1959), ಬಿಂಕದ ಕಟ್ಟೆ ಸಹಕಾರಿ ಎಣ್ಣೆ ಗಿರಣಿ (1973), ಮಲಪ್ರಭಾ ಎಣ್ಣೆ ಗಿರಣಿ, ನರಗುಂದ (1987) ಮತ್ತು ಹಾವೇರಿ ಸಹಕಾರಿ ಸಕ್ಕರೆ ಕಾರ್ಖಾನೆ. ಈ ಜಿಲ್ಲೆಯಲ್ಲಿ 1981-82 ರ ಅವಧಿಯಲ್ಲಿ ಐದು ನೂಲಿನ ಗಿರಣಿಗಳು ಸಹಕಾರಿ ವಲಯದಲ್ಲಿ ಪ್ರಾರಂಭಗೊಂಡವು. ಇಂದು ಅವುಗಳ ಸಂಖ್ಯೆ 9 ಕ್ಕೆ ಏರಿದೆ. ಹಾವೇರಿಯಲ್ಲಿ 1973 ರಲ್ಲಿ ಜಿಲ್ಲೆಯ ಪ್ರಥಮ ಸಹಕಾರಿ ಸಕ್ಕರೆಕಾರ್ಖಾನೆಯನ್ನು (ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ) ಪ್ರಾರಂಭಿಸಲಾಯಿತು. ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯ ಸೇವೆಗಳನ್ನು ಸಹಕಾರಿ ವಲಯದಲ್ಲಿ ವಿಸ್ತರಿಸುವ ಪ್ರಯತ್ನವನ್ನು 1973 ರಲ್ಲಿ ಹುಲಕೋಟಿಯಲ್ಲಿ ಆರೋಗ್ಯ ಸೇವಾ ಕೇಂದ್ರವನ್ನು ಪ್ರಾರಂಭಿಸುವ ಮೂಲಕ ಮಾಡಲಾಯಿತು. ಗ್ರಾಮೀಣ ಪ್ರದೇಶದ ರೈತರ ಟ್ರಾಕ್ಟರ್ ಮುಂತಾದ ಯಂತ್ರೋಪಕರಣಗಳನ್ನು ದುರಸ್ತಿ ಮಾಡಲು ಸಹಾಯಕವಾಗುವಂತೆ 1974-81 ರ ಅವಧಿಯಲ್ಲಿ ಹುಬ್ಬಳ್ಳಿ, ನವಲಗುಂದ, ನರಗುಂದಗಳಲ್ಲಿ ತಾಲ್ಲೂಕು ಮಟ್ಟದ ವ್ಯವಸಾಯ ಸೇವಾ (ಅಗ್ರೋ ಸರ್ವಿಸ್) ಕೈಗಾರಿಕೆಗಳನ್ನು ಪ್ರಾರಂಭಿಸಲಾಯಿತು.

30.6.1992 ರಲ್ಲಿ ಇದ್ದಂತೆ ಜಿಲ್ಲೆಯಲ್ಲಿನ ವಿವಿಧ ಪ್ರಕಾರದ ಸಹಕಾರ ಸಂಘಗಳ ಯಾದಿ ಈ ರೀತಿ ಇರುವುದು: ಒಂದು ಜಿಲ್ಲಾ ಮಧ್ಯವರ್ತಿ (ಕೇಂದ್ರ) ಸಹಕಾರಿ ಬ್ಯಾಂಕ್; 393 ವ್ಯವಸಾಯ ಪತ್ತಿನ ಸಂಘಗಳು; 17 ಪ್ರಾಥಮಿಕ ಸಹಕಾರಿ ಕೃಷಿ ಹಾಗೂ

ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು; ಎರಡು ಗ್ರೇನ್ ಬ್ಯಾಂಕುಗಳು (ದವಸ ಬಂಡಾರಗಳು); 220 ವ್ಯವಸಾಯೇತರ ಪತ್ತಿನ ಸಂಘಗಳು (38 ಪಟ್ಟಣ ಸಹಕಾರಿ ಬ್ಯಾಂಕುಗಳು; 51 ಇತರ ಪತ್ತಿನ ಸಹಕಾರಿ ಬ್ಯಾಂಕುಗಳು; 131 ನೌಕರರ ಪತ್ತಿನ ಸಹಕಾರಿ ಸಂಘಗಳು); ಒಂದು ಔದ್ಯೋಗಿಕ ಸಹಕಾರಿ ಬ್ಯಾಂಕು; 81 ಮಾರಾಟ ಸಹಕಾರ ಸಂಘಗಳು (21 ಸಾಮಾನ್ಯ ಒಕ್ಕಲುತನ ಹುಟ್ಟುವಳಿ ಮಾರಾಟ ಸಂಘಗಳು, 60 ನಿರ್ದಿಷ್ಟಪಡಿಸಿದ ಮಾರಾಟ ಸಂಘಗಳು); 8 ಸಂಸ್ಕರಣ ಸಂಘಗಳು; 241 ಗೃಹ ನಿರ್ಮಾಣ ಸಂಘಗಳು; 161 ವ್ಯವಸಾಯೇತರ ಸಹಕಾರ ಸಂಘಗಳು ( 2 ಸಾಗಾಣಿಕೆ, 31 ಕೂಲಿಕಾರರ, 24 ಮಹಿಳಾ, 35 ಪ್ರಾಥಮಿಕ ಗ್ರಾಹಕರ, 9 ವಿದ್ಯಾರ್ಥಿ ಹಾಗೂ 10 ಕೇಂದ್ರ ಸಹಕಾರಿ ಸಗಟು ಮಾರಾಟ ಮಳಿಗೆಗಳು); 716 ವ್ಯವಸಾಯೇತರ ಸಹಕಾರ ಸಂಘಗಳು (ಅಗ್ರಿಕಲ್ಚರಲ್ ನಾನ್ ಕ್ರೆಡಿಟ್) (ಇದರಲ್ಲಿ 446 ಹಾಲು ಉತ್ಪಾದಕರ, 10 ಪಶುಸಂಗೋಪನಾ, 39 ಬೇಸಾಯ ಮತ್ತು 221 ನೀರಾವರಿ ಸಂಘಗಳು ಕೂಡಿವೆ). ಇದಲ್ಲದೆ 139 ಕೈಗಾರಿಕಾ ಸಹಕಾರ ಸಂಘಗಳು (ಇದರಲ್ಲಿ 102 ನೇಕಾರ, 8 ನೂಲಿನ ಗಿರಣಿ, ಒಂದು ಸಹಕಾರಿ ಸಕ್ಕರೆ ಕಾರ್ಖಾನೆ ಮತ್ತು 28 ಮೀನುಗಾರಿಕೆ ಸಂಘಗಳು ಸೇರಿವೆ); 186 ಇತರ ಸಹಕಾರಿ ಸಂಘಗಳು ಜಿಲ್ಲೆಯಲ್ಲಿವೆ.

ಕೋಷ್ಟಕ 6.8: ಇತ್ತೀಚಿನ ದಶಕದಲ್ಲಿ ಧಾರವಾಡ ಜಿಲ್ಲೆಯು ಸಹಕಾರಿ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿಯ ಸಮಗ್ರ ಚಿತ್ರಣ ಈ ಕೆಳಗಿನಂತೆ ಇರುವದು.

(ಲಕ್ಷ ರೂಸಲ್ಲಿ)

| ವಿವರಗಳು | ವರ್ಷ | | |
|---|---|---|---|
| | 1982-83 | 1987-88 | 1992-93 |
| ಸಹಕಾರ ಸಂಘಗಳ ಒಟ್ಟುಸಂಖ್ಯೆ | 2,097 | 2,414 | 2,691 |
| ಸದಸ್ಯರ ಸಂಖ್ಯೆ (ಸಾವಿರದಲ್ಲಿ) | 1,244 | 1,295 | 1,361 |
| ಪಾಲು ಬಂಡವಾಳ | 2,227.82 | 6,217.59 | 9,257.69 |
| ಸರಕಾರದ ಪಾಲು | 861.05 | 1,884.32 | 5,488.50 |
| ಕಾಯ್ದಿಟ್ಟ ಮತ್ತು ಇತರ ನಿಧಿ | 1,140.97 | 1,598.53 | 5,357.96 |
| ಠೇವಣಿಗಳು | 1,909.87 | 8,870.46 | 10,821.00 |
| ದುಡಿಯುವ ಬಂಡವಾಳ | 10,320.04 | 43,974.51 | 44,244.72 |
| ಲಾಭದಲ್ಲಿರುವ ಸಹಕಾರಿ ಸಂಘಗಳು | 972 | 1,298 | 1,105 |
| (ಲಾಭ) | 300.25 | 616.07 | 950.66 |
| ನಷ್ಟದಲ್ಲಿರುವ ಸಹಕಾರಿ ಸಂಘಗಳು | 570 | 564 | 649 |
| (ನಷ್ಟ) | 242.12 | 357.49 | 1,485.85 |
| ಖರೀದಿ | 265.11 | 3,308.15 | 9,944.43 |
| ವಿಕ್ರಿ | 1,167.02 | 6,992.97 | 13,532.92 |
| ಪಡೆದ ಇತರ ಸಾಲಗಳು | 4,437.09 | 12,213.53 | 17,782.66 |

(ಆಧಾರ: ಸಹಕಾರ ಸಂಘಗಳ ಉಪನಿಬಂಧಕರು, ಧಾರವಾಡ)

**ಸಹಕಾರಿ ಸಾಲ:** ಜಿಲ್ಲೆಯ ಬಹುಪಾಲು ಅಲ್ಪಾವಧಿ ಮತ್ತು ಬೆಳೆ ಸಾಲವು ಪ್ರಾಥಮಿಕ ಪತ್ತಿನ ಸಂಘಗಳ ಮೂಲಕ ಪ್ರವಹಿಸುವುದು; ಪ್ರಾಥಮಿಕ ಸಂಘಗಳು ತಮ್ಮ ಅವಶ್ಯಕತೆಯನ್ನು ಕೇಂದ್ರ ಸಹಕಾರೀ ಬ್ಯಾಂಕಿನ ಮೂಲಕ ನೀಗಿಸಿಕೊಳ್ಳುವವು; ಮಧ್ಯಮಾವಧಿ ಮತ್ತು ದೀರ್ಘಾವಧಿ ಅಭಿವೃದ್ಧಿ ಸಾಲಗಳನ್ನು ತಾಲೂಕು ಮಟ್ಟದ ಪ್ರಾಥಮಿಕ ವ್ಯವಸಾಯ ಮತ್ತು ಗ್ರಾಮೀಣ

ಅಭಿವೃದ್ಧಿ ಬ್ಯಾಂಕುಗಳು ನೀಡುವವು. 1992ರ ಜೂನ್ ಕೊನೆಯಲ್ಲಿ ಇದ್ದಂತೆ ಈ ಜಿಲ್ಲೆಯಲ್ಲಿದ್ದ ಒಟ್ಟು 2,165 ಸಹಕಾರಿ ಸಂಘಗಳ ಪೈಕಿ 633 ವ್ಯವಸಾಯ ಪತ್ತಿನ ಸಂಘಗಳು, ಅವುಗಳಲ್ಲಿ ಒಂದು ಜಿಲ್ಲಾ ಮಧ್ಯವರ್ತಿ ಬ್ಯಾಂಕು, 393 ವ್ಯವಸಾಯ ಪತ್ತಿನ ಸಂಘಗಳು, 17 ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು, ಎರಡು ಧಾನ್ಯದ ಬ್ಯಾಂಕುಗಳ ಸೇರಿವೆ. ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ಸದಸ್ಯತ್ವ ಪಡೆದ ಒಟ್ಟು ಕುಟುಂಬಗಳ ಸಂಖ್ಯೆ 2,72,980. ಇವರಲ್ಲಿ 94,144 ಚಿಕ್ಕ ಹಾಗೂ ಅತೀ ಚಿಕ್ಕ ರೈತ ಕುಟುಂಬಗಳು, 40,508 ಕೃಷಿ ಕಾರ್ಮಿಕರು, ಇತರ 1,08,565, ಮತ್ತು 29,763 ಪ.ಜಾತಿ\ಪ.ಪಂಗಡದ ಕುಟುಂಬಗಳು ಸೇರಿವೆ. ಜಿಲ್ಲಾ ಮಧ್ಯವರ್ತಿ ಬ್ಯಾಂಕ್ (ಕೆ.ಸಿ.ಸಿ.ಬ್ಯಾಂಕ್) 1992ರ ಮಾರ್ಚ್ ಕೊನೆಯಲ್ಲಿ ತನ್ನ 87 ಶಾಖೆಗಳ ಮೂಲಕ ರೂ. 6,150.98 ಲಕ್ಷ ಠೇವಣಿಯನ್ನು ಸಂಗ್ರಹಿಸಿ ವಿವಿಧ ಉದ್ದೇಶಗಳಿಗೆ ರೂ. 5,677.31 ಲಕ್ಷ ಸಾಲ ಮುಂಗಡವಾಗಿ ನೀಡಿತ್ತು (ಶೇ. 92 ರಷ್ಟು). ಒಟ್ಟು ಸಾಲದಲ್ಲಿ ಆದ್ಯತಾವಲಯದ ಸಾಲ 2.04 ಲಕ್ಷ ಖಾತೆಗಳನ್ನು ಒಳಗೊಂಡಂತೆ ರೂ. 5,673.31 ಲಕ್ಷ ಎಂದು ತಿಳಿದು ಬರುವುದು. ಇದೂ ಅಲ್ಲದೇ 17 ಪ್ರಾಥಮಿಕ ವ್ಯವಸಾಯ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು ವ್ಯವಸಾಯ ಅಭಿವೃದ್ಧಿ ಚಟುವಟಿಕೆಗಳಿಗೆ ರೂ. 3,085.81 ಲಕ್ಷದ ದೀರ್ಘಾವಧಿ ಸಾಲ ಮತ್ತು ರೂ. 37.90 ಲಕ್ಷದ ಸಣ್ಣ ಉದ್ಯಮಗಳ ಸಾಲವನ್ನು ನೀಡಿದವು.

ಅದರ ಮುಂದಿನ ವರ್ಷ 1993 ರ ಕೊನೆಯಲ್ಲಿ ಜಿಲ್ಲಾ ಮಧ್ಯವರ್ತಿ ಬ್ಯಾಂಕ್ ವಿತರಿಸಿದ್ದ ಒಟ್ಟು ಸಾಲ ರೂ. 7,963.65 ಲಕ್ಷ ಆಗಿದ್ದರೆ ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು 4,185.80 ಲಕ್ಷ ರೂ. ಸಾಲ ವಿತರಿಸಿದ್ದವು. 1994-95 ರ ಜಿಲ್ಲಾ ಪತ್ತಿನ ಯೋಜನೆಯ ಅನ್ವಯ ವಿವಿಧ ಸಾಂಸ್ಥಿಕ ಹಣಕಾಸು ಸಂಸ್ಥೆಗಳು ಒಟ್ಟು ರೂ. 179.99 ಕೋಟಿ ಸಾಲ ನೀಡಲು ಗುರಿಯನ್ನು ಹಾಕಿಕೊಂಡಿದ್ದವು. ಆ ಪೈಕಿ ಸಹಕಾರಿ ವಲಯವು ನೀಡಬೇಕಾಗಿದ್ದ ಸಾಲದ ಮೊತ್ತ ರೂ. 29.48ಕೋಟಿ ಎಂದು ನಿಗದಿಗೊಳಿಸಲಾಗಿತ್ತು (ಶೇ. 29.48). ಈ ಪೈಕಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿಗೆ ನಿಗದಿಪಡಿಸಿದ ಸಾಲ ರೂ. 19.52 ಕೋಟಿ (ಶೇ. 13.7) ಆಗಿದ್ದರೆ ಪ್ರಾಥಮಿಕ ವ್ಯವಸಾಯ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು (17) ನೀಡಬೇಕಾದ ಸಾಲ ರೂ. 9.96 ಕೋಟಿ (ಶೇ. 7.1) ಎಂದು ನಿಗದಿಪಡಿಸಲಾಗಿತ್ತು.

**ಸಾಲ ವಸೂಲಾತಿ:** 1992 ಜೂನ್ ಕೊನೆಯಲ್ಲಿ ಇದ್ದಂತೆ ಈ ಜಿಲ್ಲೆಯಲ್ಲಿ ಸಹಕಾರಿ ಸಂಸ್ಥೆಗಳಿಗೆ ಬರಬೇಕಾದ ದೀರ್ಘಾವದಿ ಸಾಲದ ಒಟ್ಟು ಬೇಡಿಕೆ (ಬಾಕಿ) ರೂ. 1,364.32 ಲಕ್ಷ ಆಗಿತ್ತು. ಆ ಪೈಕಿ ರೂ. 635.28 ಲಕ್ಷ ವಸೂಲಾಗಿತ್ತು (ಶೇ. 46.56); ಬರಬೇಕಾದ ಬಾಕಿ ರೂ. 729.04 ಲಕ್ಷ ಎಂದು ತಿಳಿದು ಬರುವುದು. ದೀರ್ಘಾವದಿ ಸಾಲವನ್ನು ಪ್ರಾಥಮಿಕ ವ್ಯವಸಾಯ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು ಒದಗಿಸುತ್ತವೆ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗೆ ಬರಬೇಕಾಗಿದ್ದ ವಿವಿಧ ಅವಧಿ ಸಾಲಗಳ ಒಟ್ಟು ಬೇಡಿಕೆ ರೂ. 3,624.01 ಲಕ್ಷದಲ್ಲಿ, ವಸೂಲಾದ ರೂ. 1,668.01 ಲಕ್ಷ, ವಸೂಲಾತಿಯ ಪ್ರಮಾಣ ಶೇ. 46.03 ಎಂದು ತಿಳಿದು ಬರುವುದು. ಬರಬೇಕಾದ ಸಾಲದಲ್ಲಿ ಅಲ್ಪಾವಧಿ ಮತ್ತು ಮಧ್ಯಮಾವಧಿ ಪರಿವರ್ತಿತ ಸಾಲದ ಮೊತ್ತಗಳೇ ಹಿರಿದಾಗಿದ್ದವು ಎಂದು ವರದಿಯಲ್ಲಿ ಸೂಚಿಸಲಾಗಿದೆ.

**ಕರ್ನಾಟಕ ಗ್ರಾಮೀಣ ಸಾಲ ವಿಮೋಚನಾ ಯೋಜನೆ:** 1990 ರ ಕೇಂದ್ರ ಸರ್ಕಾರದ ಈ ಯೋಜನೆಯನ್ನು ರಾಜ್ಯದಲ್ಲಿ ಸಹ ಜಾರಿಗೊಳಿಸಲಾಯಿತು. ಈ ಯೋಜನೆಯ ಅನ್ವಯ ರೂ. 10 ಸಾವಿರ ವರೆಗೆ ಆಯ್ದ ರೈತರ, ನೇಕಾರರ, ಕುಶಲಕರ್ಮಿಗಳ ಸಹಕಾರಿ ವಲಯದ ಸಾಲವನ್ನು ಮನ್ನಾ ಮಾಡಲಾಯಿತು. ಈ ಯೋಜನೆಯನ್ನು ಮಾರ್ಚ್ 1991ರ ಕೊನೆಯಲ್ಲಿ ನಿಲ್ಲಿಸಲಾಯಿತು. ಈ ಯೋಜನೆಯ ಅನ್ವಯ ಜಿಲ್ಲೆಯಲ್ಲಿ 66,245 ಫಲಾನುಭವಿಗಳಿಗೆ ರೂ. 1,979.33 ಲಕ್ಷ ಮೊತ್ತದ ಸಾಲವನ್ನು ಪ್ರಾಥಮಿಕ ಸಹಕಾರ ಸಂಘಗಳ ಮೂಲಕ ಮನ್ನಾ ಮಾಡಲಾಯಿತು. ಅದರಂತೆ ಕರ್ನಾಟಕ ರಾಜ್ಯ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕು ಮೂಲಕ ನೀಡಿದ್ದ ದೀರ್ಘಾವಧಿ ಸಾಲ ರೂ. 295.84 ಲಕ್ಷ ಮೊತ್ತವನ್ನು 11,733 ಫಲಾನುಭವಿಗಳನ್ನು ಒಳಗೊಂಡಂತೆ ಸಾಲ ಮನ್ನಾ ಮಾಡಲಾಯಿತು.

**ಸಮಾಪನಗೊಂಡ ಸಂಘಗಳು:** ಹಲವಾರು ಅನಿವಾರ್ಯ ಕಾರಣಗಳಿಂದ ಪುನಶ್ಚೇತನಗೊಳಿಸಲಾಗದ ಸಹಕಾರಿ ಸಂಸ್ಥೆಗಳು ವಿಸರ್ಜನಗೊಳ್ಳುವವು. ಇಲಾಖೆಯ ಆಡಳಿತ ವರದಿ ತಿಳಿಸುವಂತೆ 1992-1993 ವರ್ಷದಲ್ಲಿ ಸಮಾಪನಗೊಂಡ ಸಹಕಾರಿ ಸಂಸ್ಥೆಗಳ

ಸಂಖ್ಯೆ 394. ಇವುಗಳಿಗೆ ಬರಬೇಕಾಗಿದ್ದ ಆಸ್ತಿ ರೂ. 371.36 ಲಕ್ಷ ಆಗಿದ್ದರೆ ಇವುಗಳ ತೀರಿಸಬೇಕಾಗಿದ್ದ ಹೊಣೆಗಾರಿಕೆ ರೂ. 489.08 ಲಕ್ಷ ಎಂದು ತಿಳಿದು ಬರುವುದು. ಇದೇ ಅವಧಿಯಲ್ಲಿ 18 ಸಂಸ್ಥೆಗಳ ನೋಂದಣಿಯನ್ನು ರದ್ದು ಮಾಡಲಾಯಿತು. ಸಮಾಪನಗೊಂಡ ಸಹಕಾರಿ ಸಂಸ್ಥೆಗಳಲ್ಲಿ ಬಹುಪಾಲು ಪ್ರಾಥಮಿಕ ಪತ್ತಿನ ಸಹಕಾರಿ ಸಂಘಗಳು ಸೇರಿವೆ.

**ಹಣದ ದುರುಪಯೋಗ:** ಇಲಾಖೆಯ ಆಡಳಿತ ವರದಿ ತಿಳಿಸುವಂತೆ ಜಿಲ್ಲೆಯಲ್ಲಿ 1992 ರಲ್ಲಿ ಕ್ರಿಮಿನಲ್ ವಿಭಾಗಕ್ಕೆ ಸಂಬಂಧಪಟ್ಟಂತೆ ಒಟ್ಟು 343 ಹಣ ದುರುಪಯೋಗದ, ಅವ್ಯವಹಾರದ, ಪ್ರಕರಣಗಳು ವರದಿಯಾಗಿದ್ದು ಅವುಗಳ ವಿವರ ಈ ರೀತಿ ಇರುವುದು. ಆವರಣದಲ್ಲಿಯ ಸಂಖ್ಯೆಯು ದುರುಪಯೋಗವಾದ ಮೊಬಲಗನ್ನು ಸೂಚಿಸುವುದು. ಇಲಾಖೆಯ ನೌಕರರು 9 (ರೂ. 5.13 ಲಕ್ಷ), ಸಂಘದ ನೌಕರರು 317 (ರೂ. 149.45 ಲಕ್ಷ), ಅಧಿಕಾರೇತರರು 17 (ರೂ. 2.12 ಲಕ್ಷ). ವರ್ಷದ ಪ್ರಾರಂಭದಲ್ಲಿದ್ದ ಕ್ರಿಮಿನಲ್ ಪ್ರಕರಣಗಳ ಸಂಖ್ಯೆ 28 ಮತ್ತು ಒಳಗೊಂಡ ಹಣ ರೂ. 3.23 ಲಕ್ಷ. ಸಿವಿಲ್ ವಿಭಾಗಕ್ಕೆ ಸಂಬಂಧಪಟ್ಟಂತೆ ಮೇಲಿನ ಅವಧಿಯಲ್ಲಿ 492 ಪ್ರಕರಣಗಳು ವರದಿಯಾಗಿದ್ದು ಒಳಪಟ್ಟ ಮೊತ್ತ ರೂ. 183.39 ಲಕ್ಷ. ವರ್ಷಾರಂಭದಲ್ಲಿ ಬಾಕಿ ಇದ್ದ ಪ್ರಕರಣಗಳ ಸಂಖ್ಯೆ 70 ಮತ್ತು ದುರುಪಯೋಗವಾದ ಹಣದ ಮೊತ್ತ ರೂ. 14.70 ಲಕ್ಷ.

ಮುಂದಿನ ಪುಟಗಳಲ್ಲಿ ಕೆಲವೊಂದು ಆಯ್ದ ಜಿಲ್ಲಾಮಟ್ಟದ ಹಾಗೂ ವಿವಿಧ ಬಗೆಯ ಸಹಕಾರಿ ಸಂಘಗಳನ್ನು ಪ್ರತಿನಿಧಿಸುವ ಸಂಸ್ಥೆಯ ವಿವರಣೆಯನ್ನು ಸಂಕ್ಷಿಪ್ತವಾಗಿ ನೀಡಲಾಗಿದೆ.

**ಕೆ.ಸಿ.ಸಿ. ಬ್ಯಾಂಕ್, ಧಾರವಾಡ**

ಕರ್ನಾಟಕ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕ್ ಎಂಬ ಹೆಸರಿನಿಂದ 23.11.1916 ರಲ್ಲಿ, ಭಾರತ ಸಹಕಾರಿ ಕಾನೂನು 1912 ರ ಅನ್ವಯ ನೊಂದಾಯಿಸಲ್ಪಟ್ಟ ಈ ಸಂಸ್ಥೆ ಜಿಲ್ಲೆಯ ಕೇಂದ್ರ ಸಹಕಾರಿ ಬ್ಯಾಂಕಿನ ಕಾರ್ಯವನ್ನು ಪ್ರಾರಂಭದಿಂದಲೂ ನಿರ್ವಹಿಸುತ್ತಿದೆ. ದಿ|| ರಾವಬಹಾದ್ದೂರ ಅರಟಾಳ ರುದ್ರಗೌಡರು ಮತ್ತು ಶಾಂತವೀರಪ್ಪ ಮೆಣಸಿನಕಾಯಿ ಇವರು ಈ ಸಂಸ್ಥೆಯನ್ನು ಪ್ರಾರಂಭದಲ್ಲಿ ಕಟ್ಟಿ ಬೆಳೆಸಿದ ಗಣ್ಯರಲ್ಲಿ ಪ್ರಮುಖರು. ಪ್ರಾರಂಭದಲ್ಲಿ (1918 ರವರೆಗೆ) ಈ ಬ್ಯಾಂಕಿನ ಕಾರ್ಯ ವ್ಯಾಪ್ತಿ ಧಾರವಾಡ ಮತ್ತು ಬೆಳಗಾವಿ ಎರಡೂ ಜಿಲ್ಲೆಗಳಿಗೆ ವ್ಯಾಪಿಸಿತ್ತು. ಸಂಸ್ಥೆಯ ಹಲವಾರು ಪ್ರಮುಖ ಧ್ಯೇಯೋದ್ದೇಶಗಳಲ್ಲಿ ಪ್ರಾಥಮಿಕ ಪತ್ತಿನ ಸಹಕಾರಿ ಸಂಸ್ಥೆಗಳಿಗೆ ಅಲ್ಪಾವಧಿ ಬೆಳೆ ಸಾಲ ಮತ್ತು ಒಕ್ಕಲುತನಕ್ಕೆ ಪೂರಕವಾಗುವ ಇತರೇ ಉದ್ದೇಶಗಳಿಗೆ ಮಧ್ಯಮಾವಧಿ ಸಾಲ ಪೂರೈಸುವುದು, ಕೃಷಿ ಮಾರಾಟ ಯೋಜನೆಗೆ ಸಾಲ ಒದಗಿಸುವುದು, ಮುಂತಾದವುಗಳು. ವಾಣಿಜ್ಯ ಬ್ಯಾಂಕುಗಳು ನಿರ್ವಹಿಸುವ ಎಲ್ಲಾ ವ್ಯವಹಾರಗಳನ್ನು ಇಂದು ಕೇಂದ್ರ ಸಹಕಾರಿ ಬ್ಯಾಂಕುಗಳು ನಿರ್ವಹಿಸಬಹುದಾಗಿದೆ. ಬ್ಯಾಂಕಿನ ಆರ್ಥಿಕ ಬುನಾದಿಯನ್ನು ಬಲಪಡಿಸುವ ಉದ್ದೇಶದಿಂದ ಇತ್ತೀಚಿನ ವರ್ಷಗಳಲ್ಲಿ ವ್ಯಕ್ತಿ ಸದಸ್ಯರಿಗೂ ಹಾಗೂ ವ್ಯವಸಾಯೇತರ ಉದ್ದೇಶಗಳಿಗೆ ಬ್ಯಾಂಕಿನ ಹೆಚ್ಚುವರಿ ಸಂಪನ್ಮೂಲಗಳನ್ನು ತೊಡಗಿಸಲು ಸಹಾಯಕವಾಗುವಂತೆ ವೈವಿಧ್ಯಮಯ ಸಾಲ ಯೋಜನೆಗಳನ್ನು ಅಳವಡಿಸಿಕೊಳ್ಳಲಾಗಿದೆ. ಇತ್ತೀಚಿನ ವರ್ಷಗಳಲ್ಲಿ 'ನಬಾರ್ಡ್' (ನ್ಯಾಷನಲ್ ಬ್ಯಾಂಕ್ ಫಾರ್ ಅಗ್ರಿಕಲ್ಚರಲ್ ಅಂಡ್ ರೂರಲ್ ಡೆವಲಪ್‌ಮೆಂಟ್) ಮತ್ತು ಭಾರತೀಯ ರಿಸರ್ವಬ್ಯಾಂಕ್ ಮಾರ್ಗದರ್ಶನದಂತೆ ಪ್ರಾಥಮಿಕ ಪತ್ತಿನ ಸಂಘಗಳಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ಒದಗಿಸುವುದರಿಂದ ಉಂಟಾಗುವ ನಷ್ಟವನ್ನು ಭರಿಸಲು ವ್ಯಕ್ತಿ ಸದಸ್ಯರಿಗೆ ಮತ್ತು ನಬಾರ್ಡ್‌ನಿಂದ ಆಯ್ಕೆ ಮಾಡಲ್ಪಟ್ಟ ಸಣ್ಣ ಕೈಗಾರಿಕೆಗಳಿಗೆ ಸಾಲ ಮುಂಗಡಗಳನ್ನು ನೀಡಲಾಗುತ್ತಿದೆ. ಪ್ರಾರಂಭದಲ್ಲಿ (1916-17) ರೂ. 48,000, ಪಾಲು ಬಂಡವಾಳ, ರೂ. 50,000 ಠೇವಣಿಗಳನ್ನು ಹೊಂದಿದ್ದ ಈ ಸಂಸ್ಥೆ ಕಳೆದ ಸುಮಾರು 8 ದಶಕಗಳಲ್ಲಿ ಸಹಕಾರಿ ವೃಕ್ಷವಾಗಿ ಬೆಳೆದಿದೆ. ಅಭಿವೃದ್ಧಿ ಪಥದಲ್ಲಿಯ ಅನೇಕ ಅಡೆತಡೆಗಳನ್ನು ಸಮರ್ಥವಾಗಿ ಎದುರಿಸಿ ಮುನ್ನಡೆದಿದೆ. ಪ್ರಾರಂಭದ ವರ್ಷದಲ್ಲಿ ಈ ಸಂಸ್ಥೆ 41 ವ್ಯಕ್ತಿ ಸದಸ್ಯರು ಮತ್ತು 71 ಸಹಕಾರಿ ಸಂಸ್ಥೆಗಳನ್ನು ಸದಸ್ಯರನ್ನಾಗಿ ಹೊಂದಿತ್ತು. 1993 ಮಾರ್ಚ್ ಕೊನೆಯಲ್ಲಿ ಬ್ಯಾಂಕಿನ ಸದಸ್ಯತ್ವವು ಸರ್ಕಾರವೂ ಸೇರಿದಂತೆ 8,325; ಇದರಲ್ಲಿ 1,432 ಸಹಕಾರಿ ಸಂಸ್ಥೆಗಳು ಮತ್ತು 6,887 ವ್ಯಕ್ತಿ ಸದಸ್ಯರನ್ನು ಹೊಂದಿರುವುದು. ಸಂದಾಯವಾದ ಒಟ್ಟು ಪಾಲು ಬಂಡವಾಳ ರೂ. 648.66 ಲಕ್ಷದಲ್ಲಿ ರಾಜ್ಯ ಸರ್ಕಾರದ ಪಾಲು ರೂ. 95 ಲಕ್ಷ; ಉಳಿದಂತೆ ಸಹಕಾರಿ ಸಂಘಗಳು ರೂ. 546.77 ಲಕ್ಷ ಮತ್ತು ವೈಯಕ್ತಿಕ ಸದಸ್ಯರು ರೂ. 6.89 ಲಕ್ಷ. ಬ್ಯಾಂಕಿನ ದುಡಿಯುವ ಬಂಡವಾಳ ರೂ. 10,651 ಲಕ್ಷ. ಇಂದು ಬ್ಯಾಂಕು

ಜಿಲ್ಲೆಯಾದ್ಯಂತ 84 ಶಾಖೆಗಳನ್ನು ಹೊಂದಿದೆ. ಈ ಸಂಸ್ಥೆಯ ಮೊದಲ ಎರಡು ಶಾಖೆಗಳನ್ನು ಆಗಸ್ಟ್ 1920 ರಲ್ಲಿ ಗದಗ ಮತ್ತು ಹಾವೇರಿಯಲ್ಲಿಯೂ, ಮೂರನೇಯ ಶಾಖೆಯನ್ನು 1924 ರಲ್ಲಿ ಹುಬ್ಬಳ್ಳಿಯಲ್ಲಿಯೂ ಪ್ರಾರಂಭಿಸಲಾಯಿತು.

1993 ಜೂನ್ ಕೊನೆಯಲ್ಲಿ ಬ್ಯಾಂಕು ಹೊಂದಿದ್ದ ವಿವಿಧ ಠೇವಣಿಗಳ ಮೊತ್ತ ರೂ. 6,915.23 ಲಕ್ಷ ಆಗಿದ್ದರೆ ಅದರ ಹಿಂದಿನ ಮೂರು ವರ್ಷಗಳಲ್ಲಿ ಅನುಕ್ರಮವಾಗಿ ಬ್ಯಾಂಕು ಹೊಂದಿದ್ದ ಠೇವಣಿಗಳ ಮೊತ್ತ ರೂ. 6,150.09 ಲಕ್ಷ, ರೂ. 5,841.69 ಲಕ್ಷ ಮತ್ತು ರೂ. 4,864.61 ಲಕ್ಷ ಎಂದು ವರದಿಯಾಗಿದೆ. 1993 ರ ಮಾರ್ಚ್ ಕೊನೆಯಲ್ಲಿ ಇದ್ದಂತೆ ಈ ಸಂಸ್ಥೆಯು ಕೇಂದ್ರೀಯ ಹಣಕಾಸು ಸಂಸ್ಥೆಗಳಿಂದ ಪಡೆದ ಹಣ ರೂ. 2,230.58 ಲಕ್ಷ; ಇದರಲ್ಲಿ ರೂ. 1,248.46 ಲಕ್ಷ ಅಲ್ಪಾವಧಿ ಬೆಳೆ ಸಾಲವಾಗಿತ್ತು.

1992-93 ರಲ್ಲಿ ಬ್ಯಾಂಕು ನೀಡಿದ್ದ ಅಲ್ಪಾವಧಿ ಬೆಳೆ ಸಾಲದ ಮೊತ್ತ ರೂ. 2,215.92 ಲಕ್ಷ ಆಗಿತ್ತು. ಸಾಲ ಪಡೆದ ವ್ಯವಸಾಯ ಕುಟುಂಬಗಳ ಸಂಖ್ಯೆ 54,965. ಆ ಪೈಕಿ, 9,412 ಚಿಕ್ಕ ಮತ್ತು ಸೀಮಾಂತ ರೈತರ ಕುಟುಂಬಗಳು ಪಡೆದ ಸಾಲದ ಮೊತ್ತ ರೂ. 372.71 ಲಕ್ಷ ಆಗಿದ್ದರೆ, 213 ಪ.ಜಾತಿ\.ಪ.ಪಂಗಡದ ಕುಟುಂಬಗಳು ಪಡೆದ ಸಾಲದ ಮೊತ್ತ ರೂ. 7.34 ಲಕ್ಷ. ರೈತರ ಆದಾಯವನ್ನು ವೃದ್ಧಿಪಡಿಸಲು ಸಹಾಯಕವಾಗುವಂತೆ ಮೇಲಿನ ಅವಧಿಯಲ್ಲಿ 202 ಸದಸ್ಯರಿಗೆ ರೂ. 30.38 ಲಕ್ಷ ಚಿಕ್ಕ ನೀರಾವರಿ ಮತ್ತು ಹೈನಾಭಿವೃದ್ಧಿಗೆ ಸಾಲಸೌಲಭ್ಯವನ್ನು ಒದಗಿಸಲಾಯಿತು.

ನೇರವಾದ ವ್ಯವಸಾಯ ಸಾಲವಲ್ಲದೇ ವ್ಯವಸಾಯ ಆಧಾರಿತ ಸಂಸ್ಕರಣಾ ಘಟಕಗಳಾದ ಸಹಕಾರಿ ನೂಲಿನ ಗಿರಣಿಗಳು, ಸಕ್ಕರೆ ಕಾರ್ಖಾನೆಗಳು, ಎಣ್ಣೆ ಗಿರಣಿಗಳಿಗೆ ದುಡಿಯುವ ಬಂಡವಾಳವನ್ನು, ತಾಲೂಕಾ ಸಹಕಾರಿ ಮಾರಾಟ ಸಂಸ್ಥೆಗಳಿಗೆ, ಪತ್ತು-ಮಾರಾಟ ಜೋಡಣೆ, ನಗದುದ್ದರಿ (ಕ್ಯಾಷಕ್ರೆಡಿಟ್) ಮತ್ತು ಇತರೇ ಅವಧಿಯ ಸಾಲಗಳನ್ನು ನೀಡಲಾಗುತ್ತಿದೆ. ಬ್ಯಾಂಕಿನ ಸಾಲ ವಸೂಲಾತಿ ಪ್ರಮಾಣ 1991-93 ರ ಅವಧಿಯಲ್ಲಿ ಸರಾಸರಿ ಶೇ. 43 ಎಂದು ವರದಿಯಾಗಿದೆ ಮತ್ತು 1993 ರ ಮಾರ್ಚ್ ಕೊನೆಯಲ್ಲಿ ಇದ್ದಂತೆ ಈ ಸಂಸ್ಥೆಗೆ ಕೇವಲ ಪ್ರಾಥಮಿಕ ಹಂತದ ಪತ್ತಿನ ಸಂಘಗಳಿಂದ ಬರಬೇಕಾದ ಬಾಕಿ ರೂ. 1,114.98 ಲಕ್ಷ ಎಂದು ವರದಿಯಾಗಿದೆ. 1986 ರಿಂದ ಸದರಿ ಮಧ್ಯವರ್ತಿ ಬ್ಯಾಂಕನ್ನು ಸರ್ಕಾರ ದುರ್ಬಲ ಬ್ಯಾಂಕು ಎಂದು ಸಾರಿದ್ದು ಅದನ್ನು ಪುನರುಜ್ಜೀವನಗೊಳಿಸಲು ಸೂಕ್ತ ಕಾರ್ಯಕ್ರಮಗಳನ್ನು ಕ್ರಿಯಾ ಯೋಜನೆಗಳನ್ನು ರೂಪಿಸಿ ಜಾರಿಯಲ್ಲಿ ತರಲಾಗುತ್ತಿದೆ. ಈ ಸಂಸ್ಥೆಗೆ ಸರ್ಕಾರದಿಂದ ಪಾಲು ಬಂಡವಾಳ ರೂಪದಲ್ಲಿ ರೂ. 95 ಲಕ್ಷ ದೊರೆತಿರುವುದಲ್ಲದೇ ಮುಳುಗುವ ಸಾಲ ನಿಧಿಗಾಗಿ ರೂ. 3.07 ಲಕ್ಷ ವಂತಿಗೆಯೂ ದೊರೆತಿರುತ್ತದೆ. 'ನಬಾರ್ಡ' ಸಂಸ್ಥೆಯಿಂದ ಪಡೆಯಲಾಗುವ ಅಲ್ಪಾವಧಿ ಅವಧಿಗೆ ರಾಜ್ಯ ಸರ್ಕಾರ ಪ್ರತೀ ವರ್ಷ ಭದ್ರತೆಯನ್ನು (ಗ್ಯಾರಂಟಿಯನ್ನು) ಒದಗಿಸುತ್ತಿದೆ. 1988-89 ರಿಂದ 1992-93 ರ ಐದು ವರ್ಷದ ಅವಧಿಯಲ್ಲಿ 1990-91 ನೇ ವರ್ಷವನ್ನು ಹೊರತುಪಡಿಸಿ ಸಂಸ್ಥೆಯು ಹಲವಾರು ಕಾರಣಗಳಿಂದ ನಷ್ಟದಲ್ಲಿ ಮುಂದುವರೆಯುತ್ತಿದ್ದು, ಒಟ್ಟಾರೆ ನಷ್ಟವನ್ನು ಕಡಿಮೆ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗಿದೆ. 1989-90 ರಲ್ಲಿ ಇದ್ದ ರೂ. 366.93 ಲಕ್ಷ ನಷ್ಟವನ್ನು 1992-93 ರಲ್ಲಿ ರೂ. 206.04 ಲಕ್ಷಕ್ಕೆ ಕಡಿಮೆ ಮಾಡಲಾಗಿದೆ. 1993 ರ ಮಾರ್ಚ್ ಕೊನೆಯಲ್ಲಿ ಇದ್ದಂತೆ ಸಂಸ್ಥೆಯ ಒಟ್ಟು ಆಸ್ತಿಯ ಮೌಲ್ಯ ರೂ. 10,650.89 ಲಕ್ಷ; ಹೊಣೆಗಾರಿಕೆ ಸ್ವಂತ ಬಂಡವಾಳ ಹೊರತುಪಡಿಸಿ ರೂ. 9,826.70 ಲಕ್ಷ. ಸದ್ಯದ ಬ್ಯಾಂಕಿನ ಪ್ರಧಾನ ಕಛೇರಿಯ ಕಟ್ಟಡವನ್ನು 1956 ರಲ್ಲಿ ಸುವರ್ಣಮಹೋತ್ಸವ ಸಮಯದಲ್ಲಿ ಉದ್ಘಾಟಿಸಲಾಯಿತು. 1976 ರಲ್ಲಿ ಈ ಸಂಸ್ಥೆಯು ವಜ್ರಮಹೋತ್ಸವವನ್ನು ಆಚರಿಸಿತು. ಬ್ಯಾಂಕಿನ ಮಂಜೂರಾದ ಸಿಬ್ಬಂದಿಯ ಸಂಖ್ಯೆ 695; ಸದ್ಯ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ 501 ಎಂದು ವರದಿಯಾಗಿದೆ.

ಪ್ರಾರಂಭದಿಂದ ಇಂದಿನವರೆಗೆ ಬ್ಯಾಂಕು ನಡೆದು ಬಂದ ದಾರಿಯ ಪ್ರಗತಿಯ ಚಿತ್ರಣವನ್ನು ಮುಂದಿನ ತಖ್ತೆಯಲ್ಲಿ ನೀಡಲಾಗಿದೆ.

(ಕೋಷ್ಟಕ 6.9 ಮುಂದಿನ ಪುಟದಲ್ಲಿ)

**ದೊಡ್ಡ ಪ್ರಮಾಣದ ಸಹಕಾರಿ ಸಂಘ, ಕಣಗಿನಹಾಳ:** ಭಾರತದಲ್ಲಿ ಪ್ರಥಮ ಸಹಕಾರಿ ಕಾನೂನು 1904 ರಲ್ಲಿ ಜಾರಿಯಲ್ಲಿ ಬಂದ ನಂತರ ಅಂದಿನ ಮುಂಬಯಿ ಪ್ರಾಂತ್ಯದಲ್ಲಿ ಪ್ರಪ್ರಥಮವಾಗಿ ನೋಂದಾಯಿಸಲ್ಪಟ್ಟ ವ್ಯವಸಾಯ ಪತ್ತಿನ ಸಹಕಾರಿ ಸಂಘಗಳಲ್ಲಿ ಕಣಗಿನಹಾಳದ ಸಂಘವು ಮೊದಲನೆಯದು (8.5.1905). ಇದು ಭಾರತದಲ್ಲಿಯ ಇಂಥ ಸಂಘಗಳಲ್ಲಿ ಮೊದಲನೆಯದೆಂದು

## ಕೋಷ್ಟಕ 6.9: ಧಾರವಾಡ ಕೆ.ಸಿ.ಸಿ. ಬ್ಯಾಂಕ್‌ನ ಪ್ರಗತಿಯ ಚಿತ್ರ

(ರೂ. ಲಕ್ಷಗಳಲ್ಲಿ)

| ವರ್ಷ | 1916-17 | 1937-38 | 1957-58 | 1974-75 | 1984-85 | 1989-90 | 1990-91 | 1991-92 31.3.92 | 1992-93 31.3.93 |
|---|---|---|---|---|---|---|---|---|---|
| 1) ವಸೂಲಾದ ಪಾಲು ಬಂಡವಾಳ | 0.48 | 5.75 | 25.78 | 95.07 | 308.67 | 613.16 | 617.83 | 628.53 | 648.21 |
| 2) ಶಾಸನಬದ್ಧ ಕಾಪುನಿಧಿ | - | 1.63 | 7.42 | 31.08 | 40.88 | 57.33 | 58.24 | 58.58 | 86.38 |
| 3) ಇತರ ನಿಧಿಗಳು | - | 2.04 | 5.96 | 33.26 | 60.29 | 65.32 | 66.11 | 66.96 | 89.59 |
| 4) ಒಟ್ಟು ಠೇವಣಿಗಳು | 0.50 | 34.38 | 230.03 | 850.05 | 3,448.66 | 4,864.61 | 5,841.69 | 6,150.09 | 7,291.17 |
| 5) ದುಡಿಯುವ ಬಂಡವಾಳ | 1.63 | 43.53 | 334.94 | 1,384.87 | 5,294.02 | 8,020.73 | 7,835.04 | 8,149.49 | 10,650.79 |
| 6) ಸಂಘಗಳಿಗೆ ಕೊಟ್ಟ ಸಾಲ ಬಾಕಿ | 1.59 | 19.79 | 169.15 | 953.62 | 4,038.00 | 6,096.66 | 4,519.61 | 5,016.63 | 6,467.19 |
| 7) ವ್ಯಕ್ತಿಗಳಿಗೆ ಕೊಟ್ಟ ಸಾಲ ಬಾಕಿ | - | 10.81 | 16.62 | 97.42 | 302.99 | 527.98 | 670.25 | 7,056.00 | 1,371.20 |
| 8) ಹೂಡಿಕೆಗಳು (ಭದ್ರತಾ ಪತ್ರ ಮತ್ತು ಶೇರುಗಳಲ್ಲಿ) | - | 4.46 | 57.00 | 104.69 | 100.49 | 170.71 | 274.71 | 328.70 | 249.46 |
| 9) ಆಡಳಿತ ವೆಚ್ಚ | 0.01 | 0.80 | 5.86 | 36.86 | 158.60 | 211.25 | 233.63 | 215.22 | 243.29 |
| 10) ನಿವ್ವಳ ಲಾಭ | 0.02 | 1.33 | 3.23 | 15.20 | 23.02 | - | 172.58 | - | 116.74 |
| 11) ಹಾನಿ | - | | - | - | - | 366.93 | - | 80.68 | |

(ಆಧಾರ: ಸಂಸ್ಥೆಯ ಆಡಳಿತ ವರದಿ)

ಹೇಳಲಾಗುವುದು. ಈ ಸಂಘದ ಸಂಸ್ಥಾಪಕರು ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ (1843-1933) ಎಂಬ ಹಿಂದುಳಿದ (ಕುರುಬ) ಸಮಾಜಕ್ಕೆ ಸೇರಿದ ದೊಡ್ಡ ಜಮೀನುದಾರರು. ಇದೇ ಸಮಯದಲ್ಲಿ ಸಿದ್ದನಗೌಡರ ಪ್ರಯತ್ನದ ಫಲವಾಗಿ ಕಣಗಿನಹಾಳ ರೈಲು ನಿಲ್ದಾಣದ ಶಂಕು ಸ್ಥಾಪನೆಯನ್ನು ಮತ್ತು ಊರಲ್ಲಿ ಕುಡಿಯುವ ನೀರಿನ ಬಾವಿಯನ್ನು ತೋಡುವ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಮೆಕ್ಯಾನಿಯಲ್ ಉದ್ಘಾಟಿಸಿದರು ಎಂದು ತಿಳಿದು ಬರುವುದು. ಪ್ರಾರಂಭದ ದಿನಗಳಲ್ಲಿಯೇ ಈ ಸಂಘವು ಹಲವಾರು ಮಹಿಳೆಯರನ್ನು ಸದಸ್ಯರನ್ನಾಗಿ ಹೊಂದಿತ್ತು. ಸದಸ್ಯರ ಹೊಣೆಗಾರಿಕೆ ಅಪರಿಮಿತವಾಗಿದ್ದರಿಂದ ಮಹಿಳಾ ಸದಸ್ಯರ ಎರಡೂ ಕಡೆಯ ಹೆಸರು (ತವರು ಮನೆ ಮತ್ತು ಗಂಡನ ಮನೆ)ಗಳನ್ನು ಸಂಘದ ಸದಸ್ಯರ ಪುಸ್ತಕದಲ್ಲಿ ದಾಖಲಿಸಲಾಗಿದೆ. 1958 ರಲ್ಲಿ ಈ ಸಂಘವನ್ನು ದೊಡ್ಡ ಪ್ರಮಾಣದ ಪ್ರಾಥಮಿಕ ಪತ್ತಿನ ಸಂಘ ಎಂದು ಪುನರ್ ನಾಮಕರಣ ಮಾಡಲಾಯಿತು.

**ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್, ಕುಂದಗೋಳ:** ತಾಲೂಕಿನ ರೈತರ ದೀರ್ಘಾವಧಿಯ ಸಾಲಗಳ ಅವಶ್ಯಕತೆಗಳನ್ನು ಪೂರೈಸಲು 1962 ರಲ್ಲಿ ಪ್ರಾರಂಭವಾದ ಈ ಸಹಕಾರಿ ಸಂಸ್ಥೆ 1983 ರಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿಗೂ ಪೂರಕವಾಗುವಂತೆ ಕೃಷಿಯೇತರ ಚಟುವಟಿಕೆಗಳಿಗೂ ಸಾಲ ನೀಡಲು ಸಹಾಯಕವಾಗುವಂತೆ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕೆಂದು ಹೆಸರು ಬದಲಾಯಿಸಿತು. ಈ ಬ್ಯಾಂಕಿನಿಂದ ಸದಸ್ಯ ರೈತರಿಗೆ ಅವರ ಜಮೀನಿನ ಆಧಾರದ ಮೇಲೆ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ರಾಜ್ಯಮಟ್ಟದ ಬ್ಯಾಂಕಿನಿಂದ ತಾಲೂಕಿನ ಶಾಖೆಗಳ ಮೂಲಕ ನೀಡಲಾಗುವುದು. ಪ್ರಾರಂಭದ ವರ್ಷಗಳಲ್ಲಿ ಸಾಂಪ್ರದಾಯಿಕ ಸಾಲಗಳನ್ನು ನೀಡುತ್ತಿದ್ದು ಮುಂದಿನ ದಶಕಗಳಲ್ಲಿ ಈ ಬ್ಯಾಂಕು ನೀಡುವ ಸಾಲಗಳಲ್ಲಿ ವೈವಿಧ್ಯತೆ ಉಂಟಾಗಿ ವ್ಯವಸಾಯದಲ್ಲಿ ಯಾಂತ್ರೀಕರಣದ ಅಳವಡಿಕೆ, ನೀರಾವರಿ ಬಾವಿ, ಪಂಪ್‌ಸೆಟ್ಟು, ಯಂತ್ರಚಾಲಿತ ರೆಂಟೆ ಇವುಗಳ ಅಳವಡಿಕೆ, ಹನಿ ಮತ್ತು ತುಂತುರ ನೀರಾವರಿ ಹಾಗೂ ಟ್ರ್ಯಾಕ್ಟರ್ ಖರೀದಿ ಮುಂತಾದವುಗಳಿಗೆ ಸಾಲ ನೀಡುವುದಲ್ಲದೇ ವಿಶೇಷ ಯೋಜನೆಯ ಅನ್ವಯ ದ್ರಾಕ್ಷಿ ಮತ್ತು ತೆಂಗು ಬೆಳೆಯುವುದು, ರೇಷ್ಮೆ ಬೇಸಾಯ, ಪಶುಪಾಲನೆ, ಹೈನೋದ್ಯಮ, ಜೇನುಸಾಕಣೆ, ತೋಟಗಾರಿಕೆ ಮುಂತಾದವಲ್ಲದೇ ಅನೇಕ ವ್ಯವಸಾಯೇತರ ಉದ್ದೇಶಗಳಿಗೆ ಅಂದರೆ ಗೃಹನಿರ್ಮಾಣ, ಗ್ರಾಮೀಣ ಕೈಗಾರಿಕೆಗಳು, ಕೈಕಸಬುಗಳು ಆದ್ಯತಾ ವಲಯದ ಸಾಲ, ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಅನ್ವಯ ಅಳವಡಿಸಲಾದ ಇತರೇ ಯೋಜನೆಗಳಿಗೆ ನೆರವು ಒದಗಿಸಲಾಗುತ್ತಿದೆ. ಭೂ ನ್ಯಾಯ ಮಂಡಳಿಗಳ ತೀರ್ಮಾನದ ಅನ್ವಯ ಜಮೀನಿನ ಒಡೆತನ ಹೊಂದಲಿರುವವರಿಗೆ ಕಂತು ಹಣ ತುಂಬಲು ಸಹಾಯ ಒದಗಿಸುವವು.

1972-82 ರ ದಶಕದ ಅವಧಿಯಲ್ಲಿ ಸದಸ್ಯರ ಸಂಖ್ಯೆ 3,610, ಹಿಂದಿನ ದಶಕದಲ್ಲಿ ಸದಸ್ಯರ ಸಂಖ್ಯೆ 998 ಎಂದು ತಿಳಿದುಬರುವುದು. 1993 ಮಾರ್ಚ್ ಕೊನೆಯಲ್ಲಿ ಬ್ಯಾಂಕಿನ ಸದಸ್ಯರ ಸಂಖ್ಯೆ ('ಅ' ವರ್ಗ) 5,569 ಆಗಿತ್ತು; ಪಾಲು ಬಂಡವಾಳ ರೂ. 14.12 ಲಕ್ಷ, ಇದರಲ್ಲಿ ರೂ. 13.61 ಲಕ್ಷ ಸದಸ್ಯರ ಪಾಲಾಗಿದ್ದರೆ ರಾಜ್ಯ ಸರ್ಕಾರ ಪಾಲು ರೂ. 50,000. 1972-73 ರಿಂದ 1981-82 ರವರೆಗೆ ನೀಡಿದ ಸಾಲ ರೂ. 73.79 ಲಕ್ಷ; ಇತ್ತೀಚಿನ ದಶಕದಲ್ಲಿ ಅಂದರೆ 1982-83 ರಿಂದ 1992-93 ಅವಧಿಯಲ್ಲಿ ನೀಡಿದ ಸಾಲದ ಮೊತ್ತ ರೂ. 267.28 ಲಕ್ಷ. ಮೂರನೇಯ ದಶಕದ ಕೊನೆಯ ಐದು ವರ್ಷಗಳಲ್ಲಿ (1988-89 ರಿಂದ 1992-93) ಹಂಚಿದ ಸಾಲ ರೂ. 155.03 ಲಕ್ಷ. 1990-91 ರಲ್ಲಿ ಅನಾವೃಷ್ಟಿಯಿಂದಾಗಿ ಸಾಲ ವಸೂಲಾತಿಯ ಪ್ರಮಾಣ ಶೇ. 47.23 ಇದ್ದರೆ, ಮುಂದಿನ ವರ್ಷ ಒಳ್ಳೆಯ ಬೆಳೆ, ಸಿಬ್ಬಂದಿಯ ಪರಿಶ್ರಮ ಹಾಗೂ ಸಾಲ ಮರುಪಾವತಿಯ ಮೇಲೆ ಸರ್ಕಾರ ಘೋಷಿಸಿದ ಶೇ. 5 ರ ಕೃಷಿ ಪ್ರೋತ್ಸಾಹಧನ ಯೋಜನೆ ಇವುಗಳಿಂದ ಸಾಲ ವಸೂಲಾತಿಯ ಪ್ರಮಾಣ ಶೇ. 75.20 ಆಗಿತ್ತು. ಅದರ ಮುಂದಿನ ವರ್ಷ (92-93) ಚಂಡಮಾರುತದಿಂದ ಉಂಟಾದ ಬೆಳೆ ನಷ್ಟದಿಂದ ವಸೂಲಾತಿ ಪ್ರಮಾಣ ಶೇ. 63.70 ಕ್ಕೆ ಇಳಿಯಿತು. ಇತ್ತೀಚಿನ ಎರಡು ವರ್ಷಗಳಲ್ಲಿ 92-93 ಮತ್ತು 91-92 ಸಂಘವು ಅನುಕ್ರಮವಾಗಿ ರೂ. 4,121 ಮತ್ತು 1,15,000 ಲಾಭಗಳಿಸಿದ್ದರೆ ಅದರ ಹಿಂದಿನ ವರ್ಷ ಅನುಭವಿಸಿದ ಹಾನಿಯ ಪ್ರಮಾಣ ರೂ. 5.34 ಲಕ್ಷ. 1991-92 ಲೆಕ್ಕ ತಪಾಸಣಾ ವರದಿಯ ಪ್ರಕಾರ ಸಂಸ್ಥೆಯ ಒಟ್ಟು ಆಸ್ತಿ ರೂ. 160.02 ಲಕ್ಷ ಇದ್ದರೆ ಹೊಣೆಗಾರಿಕೆ ರೂ. 167.15 ಲಕ್ಷ ಆಗಿವೆ. ಹೆಚ್ಚಿನ ಹೊಣೆಗಾರಿಕೆಗೆ ಕೂಡಿಬಿದ್ದ ಹಾನಿ ರೂ. 7.12 ಲಕ್ಷ ಎಂದು ವರದಿ ತಿಳಿಸುವುದು. ಇತ್ತೀಚಿನ ಮೂರು ದಶಕಗಳ ಅವಧಿಯಲ್ಲಿ 1962-63 ರಿಂದ 1992-93 ರವರೆಗೆ ನೀಡಿದ ಸಾಲದ ಮೊತ್ತ ಈ ಕೆಳ ಸೂಚಿಸಿದಂತೆ ಇರುವುದು. ಆವರಣದಲ್ಲಿ ಹಂಚಿದ ಸಾಲದ ಮೊತ್ತವನ್ನು ಲಕ್ಷ ರೂ.ಗಳಲ್ಲಿ ಸೂಚಿಸಲಾಗಿದೆ: ಹಳೆ ಸಾಲ ತೀರುವಳಿ (1.42); ಜಮೀನು ದುರಸ್ತಿ ಮತ್ತು ದನದ

ಕೊಟ್ಟಿಗೆ (67.02); ಬಾವಿ ಹಾಗೂ ಕೊಳವೆ ಬಾವಿ (17.85); ಹಳೇ ಬಾವಿ ಆಳ ಹೆಚ್ಚಿಸಲು (1.18); ಪಂಪ್‌ಸೆಟ್\ಡೀಜಲ್ ಇಂಜಿನ್\ಸಬ್‌ಮರ್ಸಿಬಲ್ ಸೆಟ್ (14.58); ಸಣ್ಣ ನೀರಾವರಿ (1.51); ಭೂ ಮಾಲೀಕತ್ವದ ಹಕ್ಕು ಪಡೆಯಲು (17.87); ಟ್ರ್ಯಾಕ್ಟರ್ ಸಾಲ (197.57); ಎತ್ತು ಮತ್ತು ಚಕ್ಕಡಿ (26.40); ಕುರಿ ಸಾಕಣೆ (2.69); ಹೈನಾಭಿವೃದ್ಧಿ (4.96); ಗೋಬರ್ ಅನಿಲ ಯಂತ್ರ (1.46); ತೆಂಗು ಅಭಿವೃದ್ಧಿ (0.61); ಅರಣ್ಯ ಅಭಿವೃದ್ಧಿ (1.20); ಕೃಷಿಯೇತರ ಚಟುವಟಿಕೆಗಳು (5.41); ಗ್ರಾಮೀಣ ಸಣ್ಣ ಸಾರಿಗೆ ವಾಹನ (4.00); ಗ್ರಾಮೀಣ ಗೃಹ ನಿರ್ಮಾಣ (2.42).

ಇತ್ತೀಚಿನ ಹಲವಾರು ವರ್ಷಗಳಲ್ಲಿ ಬ್ಯಾಂಕು ವಿತರಿಸಿದ ಸಾಲದ ಮೊತ್ತ ಈ ಮುಂದೆ ಸೂಚಿಸಿದಂತೆ ಇರುವುದು (ಲಕ್ಷ ರೂ.ನಲ್ಲಿ): 1983-84 - 23.68; 1985-86 - 20.11; 1987-88 - 20.82; 1989-90 - 23.04; 1991-92 - 34.23; 1992-93 - 41.41.

ಇತ್ತೀಚಿನ 12 ವರ್ಷಗಳಲ್ಲಿ (1988-89 ಹೊರತುಪಡಿಸಿ) 1992-93 ರವರೆಗೆ ಜಿಲ್ಲಾಮಟ್ಟದಲ್ಲಿ ಸಾಲ ವಸೂಲಾತಿಯಲ್ಲಿ ಈ ಬ್ಯಾಂಕು ಪ್ರಥಮ ಸ್ಥಾನದಲ್ಲಿದೆ. 1991-92 ರಲ್ಲಿ ಸಾಲ ವಸೂಲಾತಿಯಲ್ಲಿ ರಾಜ್ಯದಲ್ಲಿ ಆರನೇಯ ಸ್ಥಾನವನ್ನು ಪಡೆದಿತ್ತು. ಅಲ್ಲದೇ ಸಾಲ ವಿತರಣೆಯಲ್ಲಿ ಶೇ. 100 ರಷ್ಟು ಗುರಿಸಾಧಿಸಲಾಗಿತ್ತು.

**ಸಹಕಾರಿ ನೂಲಿನ ಗಿರಣಿಗಳು**

ಈ ಜಿಲ್ಲೆಯಲ್ಲಿ ಒಟ್ಟು 9 ಸಹಕಾರಿ ನೂಲಿನ ಗಿರಣಿಗಳಿವೆ. ಜಿಲ್ಲೆಯ ಅತ್ಯಂತ ಹಳೆಯ ನೂಲಿನ ಗಿರಣಿಯಾದ ಸದರ್ನ್ ಮರಾಠಾ ಸ್ಪಿನ್ನಿಂಗ್ ಅಂಡ್ ವೀವಿಂಗ್ ಮಿಲ್ (1881) ಮುಂದೆ ಭಾರತ್ ಮಿಲ್, ನಂತರ ಕರ್ನಾಟಕ ಸಹಕಾರಿ ನೂಲಿನ ಗಿರಣಿಯಾಗಿ, ನಂತರ ಮಹಾದೇವ ಟೆಕ್ಸಟೈಲ್ ಮಿಲ್ ಎನಿಸಿ, ಈಗ ಸರಕಾರದ ಆಡಳಿತದಲ್ಲಿದೆ. ಜಿಲ್ಲೆಯ ಇನ್ನುಳಿದ ಸಹಕಾರಿ ನೂಲಿನ ಗಿರಣಿಗಳು ಯಾವುವೆಂದರೆ: ಗದಗ ಕೋ-ಆ.ಟೆಕ್ಸ್‌ಟೈಲ ಮಿಲ್ಸ್, ಹುಲಕೋಟಿ (1972), ರೈತರ ಸಹಕಾರಿ ನೂಲಿನ ಗಿರಣಿ, ಹುಲಕೋಟಿ (1979), ತುಂಗಭದ್ರಾ ಸಹಕಾರಿ ನೂಲಿನ ಗಿರಣಿ, ರಾಣೆಬೆನ್ನೂರು (ಕಮ್ಮದೋಡ್) (1981), ಮತ್ತು ಸೋಮೇಶ್ವರ ರೈತರ ಸಹಕಾರಿ ನೂಲಿನ ಗಿರಣಿ ಲಕ್ಷ್ಮೇಶ್ವರ (1981). ಈ ನಾಲ್ಕು ಗಿರಣಿಗಳು ಹಾಲಿ ಉತ್ಪಾದನೆಯಲ್ಲಿ ತೊಡಗಿರುವವು. ಈಗಾಗಲೇ ಸ್ಥಾಪನೆಯಾಗಿ ಉತ್ಪಾದನೆಯನ್ನು ಪ್ರಾರಂಭಿಸಬೇಕಾದ ಗಿರಣಿಗಳು ಎಂದರೆ, ವೆಂಕಟೇಶ್ವರ ಸಹಕಾರಿ ನೂಲಿನ ಗಿರಣಿ, ಅಣ್ಣಿಗೇರಿ (1981), ರೈತರ ನೂಲಿನ ಗಿರಣಿ, ರಾಣೆಬೆನ್ನೂರು (1981), ಸಂಜಯ ಸಹಕಾರಿ ನೂಲಿನ ಗಿರಣಿ ಹುಬ್ಬಳ್ಳಿ (1982) ಮತ್ತು ರೈತರ ಸಹಕಾರಿ ನೂಲಿನ ಗಿರಣಿ, ಮುಳಗುಂದ.ಈ ಎಲ್ಲಾ ಗಿರಣಿಗಳ ಒಟ್ಟು ಸದಸ್ಯತ್ವ 1993 ಮಾರ್ಚ್ ಕೊನೆಯಲ್ಲಿ 16,814, ಆಗಿದ್ದರೆ ಅವುಗಳ ವಿವಿಧ ಮೂಲಗಳ ಒಟ್ಟು ಪಾಲು ಬಂಡವಾಳ ರೂ. 4,321.27 ಲಕ್ಷ ಆಗಿತ್ತು. ಆ ಪೈಕಿ ಸರ್ಕಾರದ ಪಾಲು ಬಂಡವಾಳ ರೂ. 3,953.08 ಲಕ್ಷ ಆಗಿದ್ದರೆ, ಸದಸ್ಯರ ಶೇರುಬಂಡವಾಳ ರೂ. 177.55 ಲಕ್ಷ ಆಗಿತ್ತು. ಈ ಸಂಸ್ಥೆಗಳು ಸರ್ಕಾರದಿಂದ ರೂ. 1,184.49 ಲಕ್ಷ ಮತ್ತು ಹಣಕಾಸು ಸಂಸ್ಥೆಗಳಿಂದ ರೂ. 549.89 ಲಕ್ಷ ಹಾಗೂ ಇತರೇ ಮೂಲಗಳಿಂದ ರೂ. 2,790.88 ಲಕ್ಷ ಈ ರೀತಿ ಒಟ್ಟು ರೂ. 4,525.26 ಲಕ್ಷ ಸಾಲಗಳನ್ನು ಪಡೆದಿದ್ದವು. ಈ ಎಲ್ಲಾ ಸಹಕಾರಿ ಸಂಸ್ಥೆಗಳ ದುಡಿಯುವ ಬಂಡವಾಳ ರೂ. 10,971.32 ಲಕ್ಷ ಆಗಿತ್ತು.

**ಸಹಕಾರಿ ನೂಲಿನ ಗಿರಣಿ, ಹುಲಕೋಟಿ:** ಗದಗ್ಗ ಮತ್ತು ನೆರೆಯ ತಾಲೂಕುಗಳ ಕಪ್ಪು ರೇವೆ ಮಣ್ಣಿನ ಭೂಮಿಯು ಹತ್ತಿ ಬೆಳೆಗೆ ಪ್ರಾರಂಭದಿಂದಲೂ ಸುಪ್ರಸಿದ್ಧವಾಗಿದ್ದು ರೈತರಿಗೆ ಅವರು ಬೆಳೆದ ವ್ಯವಸಾಯ ಉತ್ಪನ್ನಗಳಿಗೆ ಯೋಗ್ಯ ಬೆಲೆಯನ್ನು ಒದಗಿಸಿ ಕೊಡುವಲ್ಲಿ ಸಹಾಯಕವಾಗುವಂತೆ ಹತ್ತಿಯನ್ನು ಸಂಸ್ಕರಿಸಿ (ನೂಲು ತೆಗೆದು) ಮಾರುವುದರಿಂದ ಬೆಳೆಗಾರರಿಗೆ ಉತ್ತಮ ಪ್ರತಿಫಲ ದೊರೆಯುವುದಲ್ಲದೇ ಈ ಭಾಗದಲ್ಲಿ ವ್ಯವಸಾಯ ಆಧಾರಿತ ಉದ್ಯೋಗ ಅವಕಾಶಗಳನ್ನು ಒದಗಿಸುವ ಉದ್ದೇಶದಿಂದ ಈ ನೂಲಿನ ಗಿರಣಿಯನ್ನು ಸಹಕಾರಿ ವಲಯದಲ್ಲಿ 8.7.1973 ರಲ್ಲಿ ನೋಂದಾಯಿಸಲ್ಪಟ್ಟಿತು. ಈ ಸಂಸ್ಥೆಯ ಕಾರ್ಯವ್ಯಾಪ್ತಿಯ ಇಡೀ ಧಾರವಾಡ ಜಿಲ್ಲೆಗೆ ಸೀಮಿತವಾಗಿದ್ದು ಈ ಗಿರಣಿಯ ನೂಲಿನ ಕದಿರುಗಳ ಸಾಮರ್ಥ್ಯ (ಪ್ರಾರಂಭದಿಂದಲೂ ಇಂದಿನವರೆಗೆ) 25,000 ಸ್ಪಿಂಡಲ್ಸ್ ಆಗಿತ್ತು. ಗದಗ, ಅಣ್ಣಿಗೇರಿ, ನವಲಗುಂದ, ಹಿರೇಕೆರೂರು ಹಾಗೂ ಸವದತ್ತಿಯ ಹಿನ್ನಾಡುಗಳಿಂದ ಸಹಕಾರಿ ಮಾರಾಟ ಸಂಸ್ಥೆಗಳಿಂದ

ಹತ್ತಿಯನ್ನು ಖರೀದಿಸಲಾಗುವುದು. ರೈತ ಸದಸ್ಯರ' ಹತ್ತಿಯನ್ನು ನೂಲನ್ನಾಗಿ ಪರಿವರ್ತಿಸಿ ರೈತರ ಪರವಾಗಿ ಮಾರಾಟ ಮಾಡಿ ಬಂದ ಲಾಭವನ್ನು ರೈತರಿಗೆ ನೀಡುವ 'ಜಾಬವರ್ಕ' ಮಾದರಿಯ ಯೋಜನೆಯೊಂದನ್ನು ಈ ಸಂಸ್ಥೆ ಆರಂಭಿಸಿ ಮುಂದುವರೆಸಿಕೊಂಡು ಹೋಗುತ್ತಿದೆ. ಈ ಯೋಜನೆಯ ಅಡಿ ಸಂಸ್ಥೆಗೆ ಹತ್ತಿ ನೀಡುವ ಸದಸ್ಯ ರೈತರಿಗೆ ಪ್ರತಿ ಕ್ವಿಂಟಾಲ್‌ಗೆ ರೂ. ಒಂದುನೂರರಷ್ಟು ಹೆಚ್ಚಿನ ಲಾಭ ಇದೆ, ಎಂದು ತಿಳಿದು ಬರುವದು. ಒಬ್ಬ ರೈತ ಶೇರುದಾರರು ಪ್ರತಿ ಶೇರಿಗೆ ಒಂದು ಕ್ವಿಂಟಾಲ ಹತ್ತಿಯನ್ನು ಸಂಘಕ್ಕೆ ಮಾರಾಟ ಮಾಡಬಹುದು. (ಒಂದು ಶೇರಿನ ಮುಖಬೆಲೆ ಒಂದು ನೂರು ರೂಪಾಯಿ). ಸಂಸ್ಥೆಗೆ ಹತ್ತಿಯನ್ನು ಪೂರೈಸುವ ಸದಸ್ಯರಿಗೆ ಸ್ಥಳೀಯ ಗದಗ ಕಾಟನ್ ಸೇಲ್ ಸಂಘದ ಮೂಲಕ ಉತ್ತಮಗುಣ ಮಟ್ಟದ ಬೀಜ ಮತ್ತು ರಿಯಾಯತಿ ದರದಲ್ಲಿ ರಸಗೊಬ್ಬರಗಳನ್ನು ಒದಗಿಸಲಾಗುವುದು.

ಇಂದು (1994) ಸಂಸ್ಥೆಯಲ್ಲಿ ದುಡಿಯುವ ಎಲ್ಲಾ ವಿಧದ ಕಾರ್ಮಿಕರ ಒಟ್ಟು ಸಂಖ್ಯೆ 1,200. ನೋಂದಾಯಿಸಲ್ಪಟ್ಟ ಕೇವಲ ಒಂಬತ್ತು ತಿಂಗಳ ಅವಧಿಯಲ್ಲಿ ಉತ್ಪಾದನೆಯನ್ನು ಪ್ರಾರಂಭಿಸಿದೆ. ಈ ನೂಲಿನ ಗಿರಣಿಯು ಪ್ರಾರಂಭದ ವರ್ಷ 1973-74 ರಲ್ಲಿ 2,397 ಸದಸ್ಯರನ್ನು ಒಳಗೊಂಡು ರೂ. 120 ಲಕ್ಷ ಪಾಲು ಬಂಡವಾಳವನ್ನು ಹೊಂದಿತ್ತು. ಸದಸ್ಯರ ಸಂಖ್ಯೆಯಲ್ಲಿ 2,395, 'ಅ ವರ್ಗ' (ವ್ಯಕ್ತಿಗಳು ಮತ್ತು ಸಹಕಾರಿ ಸಂಸ್ಥೆಗಳು), 'ಕ ವರ್ಗ' ರಾಜ್ಯ ಸರ್ಕಾರ ಮತ್ತು 'ಬ ವರ್ಗ' ಸರ್ಕಾರದ ಒಂದು ಉದ್ಯಮವಾದ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಇವುಗಳು ಅನುಕ್ರಮವಾಗಿ ರೂ. 25 ಲಕ್ಷ ರೂ. 80 ಲಕ್ಷ, ಮತ್ತು ರೂ. 15 ಲಕ್ಷದ ಪಾಲು ಬಂಡವಾಳವನ್ನು ಹೊಂದಿದ್ದವು. ಮುಂದಿನ ದಶಕದಲ್ಲಿ (1983-84) ಸದಸ್ಯತ್ವದ ಸಂಖ್ಯೆ 2,526 ಕ್ಕೆ ಹೆಚ್ಚಳಗೊಂಡು ಷೇರು ಬಂಡವಾಳ ರೂ. 91.18 ಲಕ್ಷ ಇತ್ತು. ಇತ್ತೀಚಿನ ವರ್ಷದಲ್ಲಿ (1993-94) ಸಂಘದ ಸದಸ್ಯತ್ವ ಏಳು ಜನ ಮಿಲ್ಲಿನ ನೌಕರರನ್ನು ಒಳಗೊಂಡಂತೆ 2,430 ಇದ್ದು ಅದರಲ್ಲಿ 2,421 'ಅ' ವರ್ಗದ ಸದಸ್ಯರು ಇದ್ದರು. ಸಂಸ್ಥೆಯ ಒಟ್ಟು ಷೇರು ಬಂಡವಾಳದಲ್ಲಿ (ರೂ. 204 ಲಕ್ಷ) ರೂ. 58.98 ಲಕ್ಷ 'ಅ' ವರ್ಗದಿಂದ, ರೂ. 15 ಲಕ್ಷ ಆಗ್ರೋ ಸಂಸ್ಥೆ ಮತ್ತು ರೂ. 130.18 ಲಕ್ಷ ಕರ್ನಾಟಕ ಸರ್ಕಾರದ ಭಾಗಿತ್ವ ಇರುವುದು. ಗಿರಣಿಯ ಕಾರ್ಯದಕ್ಷತೆಯನ್ನು ಮತ್ತು ಉತ್ಪಾದನೆಯನ್ನು ಹೆಚ್ಚಿಸುವ ಉದ್ದೇಶದಿಂದ 1991-92 ರಲ್ಲಿ ರೂ. 429 ಲಕ್ಷ ವೆಚ್ಚದಿಂದ ಆಧುನೀಕರಣಗೊಳಿಸಲಾಯಿತು. ಈ ಪೈಕಿ 193 ಲಕ್ಷ ರೂ. ಸ್ವಂತ ಬಂಡವಾಳ, ಉಳಿದಂತೆ ರೂ. 236 ಲಕ್ಷವನ್ನು ವಿವಿಧ ಸಂಸ್ಥೆಗಳಿಂದ ಸಾಲ ಪಡೆಯಲಾಗಿತ್ತು. ಗಿರಣಿಯು 10, 14, 20, 37, 40, 60 ಹಾಗೂ 80 ಮುಂತಾದ ವಿವಿಧ ಬಹು ಉಪಯೋಗಿ ಕೌಂಟುಗಳ ನೂಲನ್ನು ಉತ್ಪಾದಿಸುತ್ತಿದ್ದು ನೂಲಿನ ಹೆಚ್ಚಿನ ಪಾಲನ್ನು ರಾಜ್ಯದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಪೂರೈಸಲಾಗುವುದು. ಉಳಿದ ನೂಲನ್ನು ಕೊಯಮತ್ತೂರು (ತಮಿಳುನಾಡು), ಸೊಲ್ಲಾಪುರ, ಮಾಲೇಗಾಂವ (ಮಹಾರಾಷ್ಟ್ರ)ಗಳಲ್ಲಿರುವ ಗಿರಣಿಯ ಮಾರಾಟ ಮಳಿಗೆಗಳ ಮೂಲಕ ಹೊರ ರಾಜ್ಯಗಳಿಗೆ ವಿತರಿಸಲಾಗುವುದು. ಈ ಮೊದಲು ನೂಲನ್ನು ಬಾಂಗ್ಲಾ ಮತ್ತು ಇತರೇ ರಾಷ್ಟ್ರಗಳಿಗೆ ರಫ್ತು ಮಾಡಲಾಗುತ್ತಿತ್ತು.

1993-94 ನೇ ವರ್ಷದಲ್ಲಿ ಗಿರಣಿಯು ಉತ್ಪಾದಿಸಿದ ನೂಲಿನ ತೂಕ 29.64 ಲಕ್ಷ ಕಿಗ್ರಾ. ಆಗಿದ್ದು ಅದರ ಮಾರಾಟದ ಮೌಲ್ಯ ರೂ. 1,810.03 ಲಕ್ಷ ಆಗಿತ್ತು. ಸದರಿ ವರ್ಷದಲ್ಲಿ ಸಂಸ್ಥೆಯು ಗಳಿಸಿದ ಲಾಭ ರೂ. 122.11 ಲಕ್ಷ. 1994 ರ ಮಾರ್ಚ್ ಕೊನೆಯಲ್ಲಿ ಸಂಸ್ಥೆಯು ಹೊಂದಿದ್ದ ಭೂಮಿ, ಕಟ್ಟಡ, ಯಂತ್ರೋಪಕರಣ ಹಾಗೂ ಸ್ಥಿರಾಸ್ತಿಗಳ ಒಟ್ಟು ಮೌಲ್ಯ ರೂ. 730.46 ಲಕ್ಷ ಎಂದು ವರದಿಯಾಗಿದೆ. ಈ ಸಂಸ್ಥೆಯ ಅಧೀನದಲ್ಲಿ ನಡೆಯುತ್ತಿರುವ ಗ್ರಾಮೀಣ ವೈದ್ಯಕೀಯ ಸೇವಾ ಸಂಸ್ಥೆ (ಕೆ.ಎಚ್. ಪಾಟೀಲ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ) ಸದಸ್ಯರಿಗೆ ಉಚಿತವಾದ ವೈದ್ಯಕೀಯ ಸೇವೆ ಸಲ್ಲಿಸುವುದಲ್ಲದೇ ಸಂಸ್ಥೆಯ ಆಶ್ರಯದಲ್ಲಿ ಪದವಿಪೂರ್ವ ಕಾಲೇಜು, ಕೃಷ್ಣ ಕೃಷಿಕೇಂದ್ರ, ರಾಜೇಶ್ವರಿ ವಿದ್ಯಾನಿಕೇತನ (ಗ್ರಾಮೀಣ ವಸತಿ ಶಾಲೆ), ಗ್ರಾಮೀಣ ತಾಂತ್ರಿಕ ಶಿಕ್ಷಣ ಸಂಸ್ಥೆ ಮುಂತಾದ ಸಂಸ್ಥೆಗಳನ್ನು ಸಂಘಟಿಸಲಾಗಿದೆ.

**ಕೋಷ್ಟಕ 6.10 ಈ ಸಂಸ್ಥೆಯ ಇತ್ತೀಚಿನ ಹಲವಾರು ವರ್ಷಗಳ ವಿವಿಧ ಮುಖಗಳ ಪ್ರಗತಿಯ ಚಿತ್ರಣವನ್ನು ಈ ಕೆಳಗಿನ ತಖ್ತೆಯಲ್ಲಿ ವಿವರಿಸಲಾಗಿದೆ.**

| ವಿವರ | ವರ್ಷ | | | | |
|---|---|---|---|---|---|
| | 1974-75 | 1980-81 | 1984-85 | 1990-91 | 1992-93 |
| 1) ಕೆಲಸ ಮಾಡಿದ ದಿನಗಳು | 306 | 353 | 353 | 356 | 354 |

| ವಿವರ | ವರ್ಷ | | | | |
|---|---|---|---|---|---|
| | 1974-75 | 1980-81 | 1984-85 | 1990-91 | 1992-93 |
| 2) ಯಂತ್ರಗಳ ಬಳಕೆಯ ಪ್ರಮಾಣ (ಶೇಕಡಾ) | 61.56 | 85.44 | 85.27 | 85.85 | 81.78 |
| 3) 40 ನಂಬರಿಗೆ ಪರಿವರ್ತಿಸಿದ ಕದಿರಿನ ಉತ್ಪಾದನೆ (ಗ್ರಾಂಗಳಲ್ಲಿ) | 61.73 | 72.20 | 76.46 | 81.34 | 85.81 |
| 4) ಒಟ್ಟು ನೂಲಿನ ಉತ್ಪಾದನೆ (ಕಿ.ಗ್ರಾ.ಗಳಲ್ಲಿ) | 8,55,413 | 23,84,369 | 24,01,299 | 25,05,839 | 27,55,527 |
| 5) ನಿವ್ವಳ ಲಾಭ (+) ಅಥವಾ ನಷ್ಟ (-) ಲಕ್ಷ ರೂಗಳಲ್ಲಿ | (-) 38.10 | (+)11.85 | (+)26.44 | (+)99.12 | (+)14.43 |

**ಮಲಪ್ರಭಾ ಸಹಕಾರಿ ಎಣ್ಣೆ ಗಿರಣಿ, ನರಗುಂದ**

ಮಲಪ್ರಭಾ ಯೋಜನೆಯಲ್ಲಿ ಒಳಗೊಂಡಿರುವ ಜಲಾನಯನ ಪ್ರದೇಶಗಳಾದ ಧಾರವಾಡ ಜಿಲ್ಲೆಯ ನರಗುಂದ, ನವಲಗುಂದ ಮತ್ತು ರೋಣ ತಾಲೂಕುಗಳು, ಬೆಳಗಾವಿ ಜಿಲ್ಲೆಯ ಸವದತ್ತಿ ಮತ್ತು ರಾಮದುರ್ಗ ತಾಲೂಕುಗಳು ಮತ್ತು ಬಿಜಾಪುರ ಜಿಲ್ಲೆಯ ಬಾದಾಮಿ ತಾಲೂಕು ಈ ಪ್ರದೇಶಗಳಲ್ಲಿ ಪ್ರಮುಖ ವಾಣಿಜ್ಯ ಬೆಳೆಗಳಾದ ಹತ್ತಿ ಮತ್ತು ಸೂರ್ಯಕಾಂತಿ ಬೆಳೆಯುವ ರೈತರ ಕೃಷಿ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆಯ ಸೌಲಭ್ಯವನ್ನು ಒದಗಿಸುವುದಲ್ಲದೇ ಎಣ್ಣೆ ಬೀಜಗಳ ಉತ್ಪಾದನೆ, ಸಂಸ್ಕರಣೆಯನ್ನು ಪ್ರೋತ್ಸಾಹಿಸುವುದು, ಸಂಶೋಧನೆ, ಹತ್ತಿಯನ್ನು ಅರೆಯುವುದು ಮತ್ತು ಗಂಟು ಕಟ್ಟುವ ಘಟಕಗಳ ಸ್ಥಾಪನೆ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಅವಕಾಶಗಳನ್ನು ಹೆಚ್ಚಿಸುವ ಹಲವಾರು ಉದ್ದೇಶಗಳಿಂದ ಈ ಬೃಹತ್ ಎಣ್ಣೆ ಗಿರಣಿಯನ್ನು ಸಹಕಾರಿ ವಲಯದಲ್ಲಿ 10.2.1987 ರಲ್ಲಿ ನೋಂದಾಯಿಸಲಾಯಿತು. ಈ ಸಂಸ್ಥೆಯ ಕಾರ್ಯವ್ಯಾಪ್ತಿಯು ಮೇಲೆ ಸೂಚಿಸಿದ ಮೂರು ಜಿಲ್ಲೆಗಳ ಮಲಪ್ರಭಾ ಯೋಜನೆಯ ಜಲಾನಯನ ಪ್ರದೇಶಗಳನ್ನು ಒಳಗೊಂಡಿರುವುದು.

ವಿಶ್ವಬ್ಯಾಂಕಿನ ಕೃಷಿ ಕೈಗಾರಿಕೆಯ ಯೋಜನೆಯ ಅನ್ವಯ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ಆರ್ಥಿಕ ಸಹಾಯದೊಂದಿಗೆ, ಬಹುದೊಡ್ಡ ಪ್ರಮಾಣದಲ್ಲಿ ಸಹಕಾರಿ ವಲಯದಲ್ಲಿ ಈ ಕೈಗಾರಿಕೆ ಸ್ಥಾಪಿತವಾಗಿರುವುದು. ಪ್ರತೀ ದಿನ ಸುಮಾರು 120 ಟನ್ ಹತ್ತಿ ಬೀಜ ಸಂಸ್ಕರಣೆ ಮತ್ತು 100 ಟನ್ ಸೂರ್ಯಕಾಂತಿ ಬೀಜ ಸಂಸ್ಕರಣಾ ಸಾಮರ್ಥ್ಯದ ಘಟಕಗಳನ್ನು ಈ ಎಣ್ಣೆಗಿರಣಿಯ ಸಂಕೀರ್ಣವು ಹೊಂದಿರುವುದು. ಈ ಯೋಜನೆಯ ಪರಿಷ್ಕೃತ ಅಂದಾಜು ವೆಚ್ಚ (1993) ರೂ. 1,890 ಲಕ್ಷ ಇದ್ದು ಅದರಲ್ಲಿ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ (ದೆಹಲಿ) ಸಾಲದ ರೂಪದ ಹಣ (ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಮೂಲಕ) ರೂ. 1,134 ಲಕ್ಷ (ಶೇ. 60), ರಾಜ್ಯ ಸರ್ಕಾರದ ಪಾಲು ಯೋಜನಾ ಬಂಡವಾಳದಿಂದ ರೂ. 283.50 ಲಕ್ಷ ಮತ್ತು ಸದಸ್ಯರ ಪಾಲು ಬಂಡವಾಳ ರೂ. 94.50 ಲಕ್ಷ ಸೇರಿರುವುದು. ಒಟ್ಟು ಬಂಡವಾಳದಲ್ಲಿ ಸದಸ್ಯರ ಪಾಲು ಬಂಡವಾಳ ಕೇವಲ ಶೇ. 5 ರಷ್ಟು.

ಸೆಪ್ಟೆಂಬರ್ 1992 ರ ಕೊನೆಯ ವರೆಗೆ ಸಂಘವು ಜಮೀನು ಖರೀದಿ ಮತ್ತು ಅದರ ಅಭಿವೃದ್ಧಿ, ಕಟ್ಟಡ ಮತ್ತು ಇತರೇ ಕೆಲಸಗಳು, ಯಂತ್ರೋಪಕರಣಗಳು, ದುಡಿಯುವ ಬಂಡವಾಳ, ಪ್ರಾಥಮಿಕ ವೆಚ್ಚಗಳು, ಇವೇ ಮುಂತಾದವುಗಳಿಗೆ ರೂ. 1,740 ಲಕ್ಷ ವೆಚ್ಚ ಮಾಡಿದೆ. ಎಣ್ಣೆ ಗಿರಣಿಯ ವಿವಿಧ ವಿಭಾಗಗಳು ಅತ್ಯಂತ ಆಧುನಿಕ ಯಂತ್ರೋಪಕರಣಗಳ ಜೋಡಣೆಗಳನ್ನು ಒಳಗೊಂಡಿರುವವು. ಸಂಸ್ಥೆಯು ವಾಣಿಜ್ಯ ಉತ್ಪಾದನೆಯನ್ನು 1993 ಫೆಬ್ರವರಿಯಿಂದ ಪ್ರಾರಂಭಿಸಿದ್ದು, 1993-94 ರಲ್ಲಿ 3,914 ಜನ ಸದಸ್ಯರನ್ನು ಹೊಂದಿರುವುದು. ಸಂಸ್ಥೆಯ ಸದಸ್ಯರು ಇದುವರೆಗೆ ರೂ. 66 ಲಕ್ಷ ಪಾಲು ಬಂಡವಾಳವನ್ನು ಸಂದಾಯ ಮಾಡಿದ್ದು ಸರ್ಕಾರದ ಪಾಲು ರೂ. 661.50 ಲಕ್ಷ ಬಿಡುಗಡೆಯಾಗಿರುವುದು. 1992-93 ನೇ ಸಾಲಿನಲ್ಲಿ ಸಂಘವು ರೂ. 335.26 ಲಕ್ಷದ ವಹಿವಾಟನ್ನು ನಡೆಸಿರುವುದಾಗಿ ತಿಳಿದು ಬರುವುದು. ಗಿರಣಿಯಲ್ಲಿ ಕಾಯಂ ಆಧಾರದ ಮೇಲೆ 72 ಜನ ಮತ್ತು ದಿನಗೂಲಿ ಆಧಾರದ ಮೇಲೆ 150 ಜನ ಕಾರ್ಯ ನಿರ್ವಹಿಸುತ್ತಿರುವರು. ಎಣ್ಣೆ ಬೀಜ ಮತ್ತು ಹಿಂಡಿಯ ಸಂಗ್ರಹಣೆಗಾಗಿ ಗಿರಣಿಯು ತನ್ನದೇ ಆದ 20,000 ಮೆ.ಟ. ಸಾಮರ್ಥ್ಯದ ಗುದಾಮುಗಳನ್ನು ಹೊಂದಿರುವುದು. ಕರ್ನಾಟಕ ಸರ್ಕಾರ ವಾಣಿಜ್ಯ ಉತ್ಪಾದನೆ ಪ್ರಾರಂಭವಾದ ದಿನದಿಂದ ನಾಲ್ಕು ವರ್ಷಗಳವರೆಗೆ ಮಾರಾಟ ತೆರಿಗೆಯ ರಿಯಾಯಿತಿಯನ್ನು ಈ ಸಂಸ್ಥೆಗೆ ನೀಡಿರುವುದು.

**ರೈತರ ಸಹಕಾರಿ ಎಣ್ಣೆ ಗಿರಣಿ, ಬಿಂಕದಕಟ್ಟಿ:** ಸಹಕಾರಿ ವಲಯದ ಮೊದಲನೆಯ ಎಣ್ಣೆ ಗಿರಣಿಯು 1959 ರಲ್ಲಿ ಗದಗಿನಲ್ಲಿ ಪ್ರಾರಂಭವಾಯಿತು. ಎರಡನೆಯ ಉದ್ಯಮವು 'ದಿ ಫಾರ್ಮರ್ಸ್ ಕೋ-ಆಪರೇಟಿವ್ ಆಯಿಲ್ ಸೀಡ್ಸ್ ಪ್ರೊಸೆಸ್ಸಿಂಗ್ ಸೊಸಾಯಿಟಿ' ಎಂಬ ಹೆಸರಿನಿಂದ ಗದಗಿನಿಂದ 5 ಕಿ.ಮೀ. ದೂರದ ಬಿಂಕದಕಟ್ಟಿ ಎಂಬಲ್ಲಿ 1973 ರಲ್ಲಿ ನೋಂದಾಯಿಸಲ್ಪಟ್ಟಿತು. ನಂತರ 1987 ರಲ್ಲಿ ದಿ ಫಾರ್ಮರ್ಸ್ ಕೋ.ಆ. ಆಯಿಲ್ಸ್ ಲಿ. ಎಂದು ಹೆಸರನ್ನು ಬದಲಾಯಿಸಲಾಯಿತು. ಈ ಸಹಕಾರಿ ಸಂಸ್ಥೆಯ ಕಾರ್ಯವ್ಯಾಪ್ತಿಯು ಗದಗ ತಾಲೂಕಿನ ಕೇವಲ 39 ಹಳ್ಳಿಗಳಿಗೆ ಸೀಮಿತವಾಗಿದೆ.

**ಕೋಷ್ಟಕ 6.11: ಇತ್ತೀಚಿನ ಎರಡು ದಶಕಗಳ ಅವಧಿಯಲ್ಲಿ ಸಂಘದ ಪ್ರಗತಿಯು ಈ ಕೆಳಗಿನಂತೆ ಇದೆ.**

| ವಿವರ | ವರ್ಷ | | |
|---|---|---|---|
| | 1973-74 | 1984-85 | 1993-94 |
| 1 ಸದಸ್ಯರ ಸಂಖ್ಯೆ | 465 | 636 | 631 |
| 2. ಪಾಲು ಬಂಡವಾಳ (ಲಕ್ಷ ರೂ.) | 11.00 | 66.51 | 71.62 |
| 3. ದುಡಿಯುವ ಬಂಡವಾಳ ('') | 11.00 | 256.92 | 598.46 |
| 4. ಸಾಲ ಮುಂಗಡ ('') | - | 98.65 | 186.43 |
| 5. ಒಟ್ಟು ಖರೀದಿ ('') | - | 126.76 | 1,484.00 |
| 6. ಒಟ್ಟು ಮಾರಾಟ ('') | - | 0.85 | 22.96 |
| 7. ನಿವ್ವಳ ಹಾನಿ ('') | 0.27 | - | - |

ಈ ಸಂಸ್ಥೆ ಎಣ್ಣೆ ಉತ್ಪಾದನೆಗಳು 'ಆದರ್ಶ' ಮತ್ತು 'ಮುರಳಿ' ಎಂಬ 'ಬ್ರ್ಯಾಂಡ್'ನಿಂದ ಪ್ರಸಿದ್ಧವಾಗಿ ಮಾರುಕಟ್ಟೆಯಲ್ಲಿವೆ.

**ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ:** ಧಾರವಾಡ ಜಿಲ್ಲೆಯ ಮೊದಲನೇಯ ಸಕ್ಕರೆ ಕಾರ್ಖಾನೆಯು ಸಹಕಾರಿ ವಲಯದಲ್ಲಿ 1973 ರಲ್ಲಿ ನೋಂದಾಯಿಸಲ್ಪಟ್ಟು ಹಾವೇರಿ ಬಳಿ ಇರುವ ಸಂಗೂರಿನಲ್ಲಿ ಕಾರ್ಯಾರಂಭ ಮಾಡಿರುವುದು. ಈ ಸಹಕಾರಿ ಸಂಸ್ಥೆಯ ಕಾರ್ಯಕ್ಷೇತ್ರ ವ್ಯಾಪಕವಾಗಿದ್ದು, ಸಂಪೂರ್ಣ ಧಾರವಾಡ ಜಿಲ್ಲೆ (ಧಾರವಾಡ ತಾಲೂಕನ್ನು ಹೊರತುಪಡಿಸಿ), ಶಿವಮೊಗ್ಗ ಜಿಲ್ಲೆಯ ಸೊರಬ, ಉತ್ತರ ಕನ್ನಡ ಜಿಲ್ಲೆಯ ಕಬ್ಬು ಬೆಳೆಯುವ ಮುಂಡಗೋಡ ಮತ್ತು ಸಿರ್ಸಿ ತಾಲೂಕುಗಳ ಪೂರ್ವ ಭಾಗದ 19 ಹಳ್ಳಿಗಳು, ಹಳಿಯಾಳ ತಾಲೂಕಿನ ಕೆಲವು ಭಾಗ ಅಲ್ಲದೇ ನೆರೆಯ ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ 25 ಹಳ್ಳಿಗಳು ಹಾಗೂ ಹರಪನಹಳ್ಳಿಯ ಮೂರು ಹಳ್ಳಿಗಳನ್ನು ಒಳಗೊಂಡಿರುವುದು. ಕಾರ್ಖಾನೆಯ ಉತ್ಪಾದನೆಯ 1983-84 ರ ಸಾಲಿನಿಂದ ಪ್ರಾರಂಭವಾಗಿದ್ದು, ಸಂಘದ ಸದಸ್ಯತ್ವ ಸರ್ಕಾರವೂ ಸೇರಿದಂತೆ ನಾಲ್ಕು ಬಗೆಯದ್ದಾಗಿದೆ. ಸೆಪ್ಟೆಂಬರ್ 1992 ರ ಕೊನೆಯಲ್ಲಿ ಇದ್ದಂತೆ ಕಾರ್ಖಾನೆಯ ಒಟ್ಟು ಸದಸ್ಯತ್ವ 8,540 ಆಗಿದ್ದು, ಇದರಲ್ಲಿ ಬಹುಪಾಲು ಸದಸ್ಯರು (7,258) ಕಬ್ಬು ಬೆಳೆಗಾರರು. ಸಂಘದ ಪಾಲು ಬಂಡವಾಳ ಸರ್ಕಾರದ ಸಹಭಾಗಿತ್ವ ರೂ. 243.20 ಲಕ್ಷ ಸೇರಿದಂತೆ 1992 ರ ಸೆಪ್ಟೆಂಬರ್ ಕೊನೆಯಲ್ಲಿ ರೂ. 340.95 ಲಕ್ಷ ಆಗಿತ್ತು. ಪ್ರಾರಂಭದಿಂದ 1992 ಜೂನ್ ಕೊನೆಯವರೆಗೆ ಸಂಸ್ಥೆಯು ಸ್ಥಾಪನೆಗಾಗಿ ಮತ್ತು ಕಾರ್ಯನಿರ್ವಹಣೆಗೆ ವಿವಿಧ ಮೂಲಗಳಿಂದ ಪಡೆದಿದ್ದ ಒಟ್ಟು ಸಾಲ ರೂ. 306.4 ಲಕ್ಷವನ್ನು ಸಂಪೂರ್ಣವಾಗಿ ಮರುಪಾವತಿ ಮಾಡಿದ್ದು, 1992 ರಲ್ಲಿ ಕೇವಲ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ (ಎನ್.ಸಿ.ಡಿ.ಸಿ.) ಮತ್ತು ರಾಜ್ಯಸರ್ಕಾರದ ಸಾಲ ಒಟ್ಟು ರೂ. 218 ಲಕ್ಷ ಮಾತ್ರ ಬಾಕಿ ಎಂದು ವರದಿಯಲ್ಲಿ ತಿಳಿಸಲಾಗಿದೆ. 1991-92 ರಲ್ಲಿ ಸಂಸ್ಥೆಯು ರೂ. 350 ಲಕ್ಷವನ್ನು ಸಕ್ಕರೆ ಅಡಮಾನ ಸಾಲವಾಗಿ ಪಡೆದಿತ್ತು. ಕಾರ್ಖಾನೆಯ ಕಬ್ಬು ಬೆಳೆಯುವ ಸೀಮಿತ ಕ್ಷೇತ್ರವನ್ನು ವಿಸ್ತರಿಸಲು ಸಹಾಯಕವಾಗುವಂತೆ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ಸಾಲವನ್ನು ವಿನಿಯೋಗಿಸಲಾಗಿದೆ. 1990-91 ನೇ ಸಾಲಿನಲ್ಲಿ ಕಾರ್ಖಾನೆಯ ಕಾರ್ಯವ್ಯಾಪ್ತಿಯಲ್ಲಿ 10,500 ಎಕರೆ ಪ್ರದೇಶವಿದೆ. ಕಾರ್ಖಾನೆಯ ಅಂದಾಜಿನ ಪ್ರಕಾರ ಪ್ರತಿ ಎಕರೆಗೆ 25 ಮೆ.ಟ. ಕಬ್ಬಿನ ಇಳುವರಿಯಂತೆ 1992-93 ನೇ ಸಾಲಿನಲ್ಲಿ ಸುಮಾರು ಎರಡು ಲಕ್ಷಮೆ.ಟನ್. ಕಬ್ಬು ಅರೆಯುವ

ಗುರಿಯನ್ನು ಹೊಂದಲಾಗಿತ್ತು. ವರದಿ ತಿಳಿಸುವಂತೆ 1983-84 ರಿಂದ 1991-92 ರ ಒಂದು ದಶಕದ ಅವಧಿಯಲ್ಲಿ ಸಕ್ಕರೆಯ ಇಳುವರಿಯು ಪ್ರತಿಶತ ಕನಿಷ್ಠ 8.31 ರಿಂದ (1983-84) ಗರಿಷ್ಠ 10.82 (91-92) ಎಂದು ತಿಳಿದು ಬರುವುದು.

1992-93 ರಲ್ಲಿ ಕಾರ್ಖಾನೆಯು ಬೆಳೆಗಾರ ಸದಸ್ಯರಿಗೆ ರೂ. 50 ಲಕ್ಷ ಬೆಳೆ ಸಾಲವನ್ನು (ಎಕರೆಗೆ ರೂ. 2,500 ರಂತೆ ಗರಿಷ್ಠ ಮೂರು ಎಕರೆವರೆಗೆ) ವಿತರಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿತ್ತು. 1992 ಸೆಪ್ಟೆಂಬರ್ ಕೊನೆಯಲ್ಲಿ ಇದ್ದಂತೆ ಸಂಸ್ಥೆಗೆ ವಿವಿಧ ಸಾಲದ ಬಾಬ್ತುಗಳಿಂದ ಅಂದರೆ ಕಬ್ಬಿನ ಬೀಜದ ಸಾಲ, ರಾಸಾಯನಿಕ ಗೊಬ್ಬರ ಸಾಲ, ಸಣ್ಣ ನೀರಾವರಿ ಯೋಜನೆ ಮತ್ತು ಅಲ್ಪಾವಧಿ ಸಾಲ, ಈ ಎಲ್ಲಾ ಲೆಕ್ಕದಲ್ಲಿ ಸಂಸ್ಥೆಗೆ ಬರಬೇಕಾಗಿದ್ದ ಬಾಕಿ ಸಾಲ ರೂ. 34.89 ಲಕ್ಷ. ಇವುಗಳಲ್ಲಿ ಸಣ್ಣ ನೀರಾವರಿ ಯೋಜನೆ ಸಾಲ ಮತ್ತು ಬೀಜದ ಸಾಲದ ಪ್ರಮಾಣ ಬಹುದೊಡ್ಡದಾಗಿತ್ತು. ಸಕ್ಕರೆಯ ಸಂಗ್ರಹಣೆಗೆ ಸಂಸ್ಥೆಯು 7,500 ಮೆ.ಟನ್ ಸಾಮರ್ಥ್ಯದ ಉಗ್ರಾಣವನ್ನು ಹೊಂದಿರುವುದು.

ಕಾರ್ಖಾನೆಯಲ್ಲಿ ದಿನ ಒಂದಕ್ಕೆ 1,250 ಟನ್ ಕಬ್ಬು ನುರಿಯುವ ಯಂತ್ರವನ್ನು ಅಳವಡಿಸಲಾಗಿದ್ದು, 1991-92 ಸಾಲಿನಲ್ಲಿ 163 ದಿನ ಯಂತ್ರಗಳು ಕೆಲಸ ಮಾಡಿದ್ದು ಶೇ. 90 ರಷ್ಟು ಯಂತ್ರ ಸಾಮರ್ಥ್ಯ ಉಪಯೋಗಿಸಲಾಯಿತು. ಕಾರ್ಖಾನೆಯ ಎಲ್ಲಾ ವರ್ಗದ ಸಿಬ್ಬಂದಿಯ ಒಟ್ಟು ಸಂಖ್ಯೆ 612; ಇವರಲ್ಲಿ ಕಾಯಂ ನೌಕರರ ಸಂಖ್ಯೆ 219. ಮಾರ್ಚ್ 1992ರ ಕೊನೆಯಲ್ಲಿ ಇದ್ದಂತೆ ಸಂಘ ಹೊಂದಿದ್ದ ವಿವಿಧ ಆಸ್ತಿಗಳ ವಿವರ: ಸ್ಥಿರಾಸ್ತಿ ರೂ. 191.66 ಲಕ್ಷ; ಮೂಲ ಧನೀಕರಿಸುವ ಆಸ್ತಿಗಳು ರೂ. 10.56 ಲಕ್ಷ; ಇತರೇ ಆಸ್ತಿಗಳು ರೂ. 71.88 ಲಕ್ಷ ಎಂದು ತಿಳಿಯುವುದು. ಸಂಸ್ಥೆಯು ಇತ್ತೀಚಿನ ನಾಲ್ಕು ವರ್ಷಗಳಿಂದ ಲಾಭ ಗಳಿಸುತ್ತಿದ್ದರೂ ಹಿಂದಿನ ಅನೇಕ ವರ್ಷಗಳಲ್ಲಿ ಅನುಭವಿಸಿದ ಒಟ್ಟು ನಷ್ಟದ ಮೊತ್ತ ರೂ. 449 ಲಕ್ಷ ಎಂದು ವರದಿ ತಿಳಿಸುವುದು.

**ಕೋಷ್ಟಕ 6.12: ಇತ್ತೀಚಿನ ಕೆಲವು ವರ್ಷಗಳಲ್ಲಿ ಕಾರ್ಖಾನೆಯು ನುರಿಸಿದ ಕಬ್ಬು (ಮೆ.ಟನ್‌ಗಳಲ್ಲಿ) ಮತ್ತು ಉತ್ಪಾದಿಸಿದ ಸಕ್ಕರೆ (ಕ್ವಿಂಟಾಲ್‌ಗಳಲ್ಲಿ) ಈ ರೀತಿ ಇರುವುದು.**

| ವರ್ಷ | ನುರಿಸಿದ ಕಬ್ಬು (ಮೆ.ಟನ್‌ಗಳಲ್ಲಿ) | ಉತ್ಪಾದಿಸಿದ ಸಕ್ಕರೆ (ಕ್ವಿಂಟಾಲ್‌ಗಳಲ್ಲಿ) | ಸಕ್ಕರೆ ಇಳುವರಿ (ಪ್ರತಿಶತ) |
|---|---|---|---|
| 1983-84 | 12019 | 9513 | 8.31 |
| 1985-86 | 36947 | 39655 | 10.73 |
| 1987-88 | 153028 | 161376 | 10.50 |
| 1989-90 | 75277 | 81175 | 10.80 |
| 1990-91 | 130927 | 141057 | 10.78 |
| 1991-92 | 196616 | 212640 | 10.82 |

**ವ್ಯವಸಾಯೇತರ ಸಾಲ ಸಹಕಾರಿ ಸಂಘಗಳು**

ಧಾರವಾಡ ಜಿಲ್ಲೆಯಲ್ಲಿ ವ್ಯವಸಾಯೇತರ ಆರ್ಥಿಕ ಚಟುವಟಿಕೆಗಳಿಗೆ ಹಣಕಾಸಿನ ನೆರವನ್ನು ಒದಗಿಸಲು ವ್ಯಾಪಕವಾದ ಸಹಕಾರಿ ಹಣಕಾಸು ಸಂಸ್ಥೆಗಳ ಜಾಲವೇ ಇರುವುದು. ಈ ಬಗೆಯ ಒಟ್ಟು ಸಂಘಗಳ ಸಂಖ್ಯೆ 220, ಇವುಗಳಲ್ಲಿ ಪಟ್ಟಣ ಸಹಕಾರಿ ಬ್ಯಾಂಕುಗಳು, ಸುಸಂಘಟಿತ ವಲಯದ ನೌಕರರ ಪತ್ತಿನ ಸಂಘಗಳು ಮತ್ತು ಇತರೇ ಸಾಲ ನೀಡುವ ಸಹಕಾರಿ ಸಂಘಗಳು ಎಂದು ವರ್ಗೀಕರಿಸಬಹುದು.

ನಮ್ಮ ರಾಜ್ಯದಲ್ಲಿ ಬೆಂಗಳೂರು ನಗರ ಮತ್ತು ಬೆಳಗಾವಿ ಜಿಲ್ಲೆಯ ನಂತರ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಪಟ್ಟಣ ಸಹಕಾರಿ ಬ್ಯಾಂಕುಗಳನ್ನು ಹೊಂದಿದ ಜಿಲ್ಲೆ ಧಾರವಾಡ ಎಂದು ತಿಳಿದು ಬರುವುದು. ಈ ಜಿಲ್ಲೆಯಲ್ಲಿ ವ್ಯವಸಾಯೇತರ ಸಂಘಗಳ ಪೈಕಿ 38 ಪಟ್ಟಣ ಬ್ಯಾಂಕುಗಳು, 131 ನೌಕರರ ಸಾಲ ಸಂಘಗಳು, 51 ಇತರೇ ಸಾಲ ನೀಡುವ ಸಂಘಗಳು ಇರುವವು. ಇತರೆಡೆಯಂತೆ,

ಪ್ರಾರಂಭದಲ್ಲಿ, ಇಲ್ಲಿಯೂ ವ್ಯವಸಾಯೇತರ ಸಂಘಗಳು ಭಾಷೆ, ಜಾತಿ, ಮತ-ಧರ್ಮ, ವ್ಯಕ್ತಿಗಳು ಮುಂತಾದವುಗಳ ಪ್ರಭಾವದಿಂದ ಸಂಘಟನೆಗೊಂಡು ಪರಸ್ಪರ ಸ್ಪರ್ಧಾತ್ಮಕ ಮನೋಭಾವನೆಯಿಂದ ಇಂದು ಬಹು ಎತ್ತರವಾಗಿ ಮತ್ತು ವ್ಯಾಪಕವಾಗಿ ಬೆಳೆದಿವೆ. 1993 ಜೂನ್ ಕೊನೆಯಲ್ಲಿ ಇದ್ದಂತೆ, ಈ ಜಿಲ್ಲೆಯಲ್ಲಿರುವ ಒಟ್ಟು ಪಟ್ಟಣ ಸಹಕಾರಿ ಬ್ಯಾಂಕುಗಳ ಸಂಖ್ಯೆ 34 ಆಗಿದ್ದರೆ ಅವುಗಳು ಹೊಂದಿರುವ ಶಾಖೆಗಳು 156, ಸದಸ್ಯರ ಸಂಖ್ಯೆ 1.55 ಲಕ್ಷ ಆಗಿದ್ದರೆ, ಪಾಲು ಬಂಡವಾಳ ರೂ. 649 ಲಕ್ಷ ಎಂದು ವರದಿಯಾಗಿದೆ.

ವರದಿ ವರ್ಷದಲ್ಲಿ (1992-93) ಈ ಸಂಸ್ಥೆಗಳು ಸಂಗ್ರಹಿಸಿದ್ದ ಠೇವಣಿ ಮತ್ತು ನೀಡಿದ್ದ ಸಾಲ ಮುಂಗಡಗಳ ಮೊತ್ತ ಅನುಕ್ರಮವಾಗಿ ರೂ. 9,121.35 ಲಕ್ಷ ಮತ್ತು ರೂ. 7046.89 ಲಕ್ಷ. ಒಟ್ಟು ಬ್ಯಾಂಕುಗಳ ಪೈಕಿ 31 ಲಾಭದಲ್ಲಿದ್ದು ಅವುಗಳ ಒಟ್ಟು ಲಾಭ ರೂ. 305.07 ಲಕ್ಷ. ಒಟ್ಟು ನೌಕರರ ಸಂಖ್ಯೆ 444 ಎಂದು ತಿಳಿದು ಬರುವುದು.

ಈ ಜಿಲ್ಲೆಯ ಪಟ್ಟಣ ಸಹಕಾರಿ ಬ್ಯಾಂಕುಗಳ ಪೈಕಿ ಧಾರವಾಡದ ರಡ್ಡಿ ಬ್ಯಾಂಕ್ (1914) ಅತಿ ಹೆಚ್ಚಿನ ಸಂಖ್ಯೆಯ (22) ಶಾಖೆಗಳನ್ನು ಹೊಂದಿರುವುದು, ಅವುಗಳ ಪೈಕಿ 8 ಶಾಖೆಗಳು ಧಾರವಾಡ ಜಿಲ್ಲೆಯಲ್ಲಿ ಇರುವವು.

### ಶ್ರೀ ಗುರುಸಿದ್ದೇಶ್ವರ ಸಹಕಾರಿ ಬ್ಯಾಂಕ್ ಹುಬ್ಬಳ್ಳಿ

ಧಾರವಾಡ ಜಿಲ್ಲೆಯ ಪಟ್ಟಣ ಸಹಕಾರಿ ಬ್ಯಾಂಕುಗಳಲ್ಲಿ (34) ಶ್ರೀ ಗುರುಸಿದ್ದೇಶ್ವರ ಸಹಕಾರಿ ಬ್ಯಾಂಕ್ ಸರ್ವಾಂಗೀಣ ಅಭಿವೃದ್ಧಿಯನ್ನು ಅಲ್ಪಾವಧಿಯಲ್ಲಿ ಸಾಧಿಸಿದ ಬ್ಯಾಂಕುಗಳಲ್ಲಿ ಪ್ರಮುಖವಾದುದು. ಈ ಸಹಕಾರಿ ಸಂಸ್ಥೆಯ ಮೂಲ ಪ್ರೇರಕ ಶಕ್ತಿ ಸ್ಥಳೀಯ ಮೂರು ಸಾವಿರ ಮಠದ ಸ್ವಾಮೀಜಿಯವರು. ದಿನಾಂಕ 25.10.1979 ರಂದು ಸ್ಥಾಪಿತವಾದ ಈ ಸಂಸ್ಥೆ ಕಳೆದ ಸುಮಾರು 15 ವರ್ಷಗಳಲ್ಲಿ ಬೃಹತ್ ಪ್ರಮಾಣದಲ್ಲಿ ಬೆಳೆದಿದೆ. ವಾಣಿಜ್ಯ ಬ್ಯಾಂಕುಗಳು ನೀಡುವ ಎಲ್ಲಾ ಗ್ರಾಹಕರ ಸೇವೆಯನ್ನು ಈ ಬ್ಯಾಂಕು ತನ್ನ ಸದಸ್ಯರಿಗೆ ಒದಗಿಸುವುದು. ಪ್ರಾರಂಭದಲ್ಲಿ 774 ಸದಸ್ಯರು ಮತ್ತು ರೂ. 3.45 ಲಕ್ಷ ಪಾಲು ಬಂಡವಾಳದಿಂದ ಪ್ರಾರಂಭಗೊಂಡ ಬ್ಯಾಂಕು 1994 ಮಾರ್ಚ್ ಕೊನೆಯಲ್ಲಿ 10,330 ಸದಸ್ಯರನ್ನು ಒಳಗೊಂಡಂತೆ ರೂ. 84.17 ಲಕ್ಷ ಪಾಲು ಬಂಡವಾಳವನ್ನು ಸುಮಾರು 12 ಕೋಟಿ ರೂ.ಗಳಷ್ಟು ಠೇವಣಿಯನ್ನು ಹೊಂದಿರುವುದು ಗಮನಾರ್ಹ. ಮಾರ್ಚ್ 1994 ರ ಕೊನೆಯಲ್ಲಿ ಬ್ಯಾಂಕು ನೀಡಿದ್ದ ಒಟ್ಟು ಸಾಲ ರೂ. 1,005.82 ಲಕ್ಷ; ಆ ಪೈಕಿ ರೂ. 421.22 ಲಕ್ಷ ವ್ಯಾಪಾರೋದ್ಯಮದ ಅಭಿವೃದ್ಧಿಗೆ, ರೂ. 269.11 ಲಕ್ಷ ಗೃಹನಿರ್ಮಾಣ ಯೋಜನೆಗಳಿಗೆ ನೀಡಲಾಗಿತ್ತು. ಒಟ್ಟು ಸಾಲದಲ್ಲಿ ಶೇ.88 (ನಿಗದಿತ ಪ್ರಮಾಣ ಶೇ.60) ರಷ್ಟು ಆದ್ಯತಾವಲಯದ ಸಾಲವೆಂದು ತಿಳಿದುಬರುವುದು. 1993-94 ರಲ್ಲಿ ಈ ಬ್ಯಾಂಕು ಗಳಿಸಿದ ನಿವ್ವಳ ಲಾಭ ರೂ. 68.30 ಲಕ್ಷ. ತಾಲೂಕಿನ ಪ್ರಾಥಮಿಕ ಶಿಕ್ಷಕರ ವೇತನವನ್ನು ಸರ್ಕಾರಿ ಖಜಾನೆಯಿಂದ ಪಡೆದು ಹಂಚುವ ಸೇವೆಯನ್ನು ಈ ಸಂಸ್ಥೆಯ ಮೂಲಕ ಒದಗಿಸಲಾಗಿದೆ. ಅದರಂತೆ ಪ್ರತೀವರ್ಷ ನಿವೃತ್ತರಾಗುವ ಶಿಕ್ಷಕರನ್ನು ಈ ಸಂಸ್ಥೆಯಿಂದ ಸನ್ಮಾನ ಮಾಡುವ ಸಂಪ್ರದಾಯವನ್ನು ಪಾಲಿಸಿಕೊಂಡು ಬರಲಾಗುತ್ತಿದೆ.

ಕೇವಲ 'ಪಿಗ್ಮಿ' ಡಿಪಾಜಿಟ್ ಯೋಜನೆ ಒಂದರಿಂದಲೇ ಸುಮಾರು ಪ್ರತೀತಿಂಗಳು ರೂ.65 ಲಕ್ಷ ಈ ಬ್ಯಾಂಕಿನಿಂದ ಅಲ್ಪ ಉಳಿತಾಯ ರೂಪದಲ್ಲಿ ಸಂಗ್ರಹಿಸಲಾಗುತ್ತಿದೆ. 1986 ರಿಂದ ಸದರಿ ಬ್ಯಾಂಕು 'ಮ್ಯುಚುವಲ್ ಅರೆಂಜ್‌ಮೆಂಟ್' ಜವಾಬುದಾರಿಯನ್ನು ಹೊತ್ತುಕೊಂಡಿರುವುದರಿಂದ ಈ ಭಾಗದ ಸಾರ್ವಜನಿಕ ವಲಯದ ಬ್ಯಾಂಕುಗಳು ಹುಬ್ಬಳ್ಳಿಯಲ್ಲಿ ಹಣ ಸ್ವೀಕಾರ (ಕಲೆಕ್ಷನ್) ಮತ್ತು ಪಾವತಿಗಳನ್ನು ಈ ಬ್ಯಾಂಕಿನ ಮೂಲಕ ಮಾಡುತ್ತಾರೆ. ಪ್ರತಿನಿತ್ಯವೂ ಸರಾಸರಿ ಸುಮಾರು ರೂ.25 ಲಕ್ಷ ಮೌಲ್ಯದ ಚೆಕ್ಕುಗಳನ್ನು ಈ ಬ್ಯಾಂಕಿನ ಮೂಲಕ ಪಾವತಿ ಮಾಡಲಾಗುವುದು. ಅಲ್ಲದೇ ಪ್ರತಿನಿತ್ಯ ಈ ಬ್ಯಾಂಕಿನಿಂದ ಸುಮಾರು ರೂ. 20 ಲಕ್ಷದಷ್ಟು ಡಿಮ್ಯಾಂಡ್ ಡ್ರಾಫ್ಟುಗಳು ಬೇರೆ ಬೇರೆ ಬ್ಯಾಂಕುಗಳ ಮೇಲೆ ನೀಡಲ್ಪಡುತ್ತಿವೆ.

ಪ್ರತೀವರ್ಷ ಬ್ಯಾಂಕು ತನ್ನ ನಿವ್ವಳ ಲಾಭದಲ್ಲಿ ಒಂದು ಅಂಶವನ್ನು ವಿದ್ಯಾಸಂಸ್ಥೆಗಳು, ಅಂಧರ ಸೇವಾಸಂಸ್ಥೆಗಳು, ನೋಂದಾಯಿಸಲ್ಪಟ್ಟ ದೇವಸ್ಥಾನಗಳು ಮತ್ತು ಕಲ್ಯಾಣ ಮಂಟಪ ಮುಂತಾದ ಸಂಸ್ಥೆಗಳಿಗೆ ನೀಡುತ್ತಿದೆ. 1993 ರಲ್ಲಿ ಭೂಕಂಪ ಪರಿಹಾರ ನಿಧಿಗೆ ಸದರಿ ಸಂಸ್ಥೆಯ ವತಿಯಿಂದ ರೂ. 21,000 ದೇಣಿಗೆಯನ್ನು ನೀಡಲಾಯಿತು. ಬ್ಯಾಂಕು ದೇಶಪಾಂಡೆ ನಗರದಲ್ಲಿ ಒಂದು ಶಾಖೆಯನ್ನು ಹೊಂದಿರುವುದು. ಬ್ಯಾಂಕಿನ ಸಿಬ್ಬಂದಿ ಸಂಖ್ಯೆ 88.

ಕಳೆದ ಒಂದೂವರೆ ದಶಕದಲ್ಲಿ ಬ್ಯಾಂಕು ಸಾಧಿಸಿದ ವಿವಿಧ ಮುಖಗಳ ಪ್ರಗತಿಯನ್ನು ಈ ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

(ಕೋಷ್ಟಕ 6.13 ಮುಂದಿನ ಪುಟದಲ್ಲಿ)

**ಸಹಕಾರಿ ಕೈಗಾರಿಕಾ ವಸಾಹತು ಗದಗ**

ಹುಬ್ಬಳ್ಳಿಯ ನಂತರ ಜಿಲ್ಲೆಯ ಪ್ರಮುಖ ವಾಣಿಜ್ಯ ಕೇಂದ್ರ ಗದಗ. ಈ ಭಾಗದಲ್ಲಿ ತಾಲೂಕ ಮಟ್ಟದಲ್ಲಿ ಕೃಷಿ ಪ್ರಧಾನ ಕೈಗಾರಿಕೆಗಳ ಬೆಳವಣಿಗೆಗೆ ಸೂಕ್ತ ಪ್ರೋತ್ಸಾಹ ನೀಡುವ ಉದ್ದೇಶದಿಂದ ಸಹಕಾರಿ ವಲಯದಲ್ಲಿ ಈ ಕೈಗಾರಿಕಾ ವಸಾಹತನ್ನು ಗದಗ-ಹುಬ್ಬಳ್ಳಿ ರಸ್ತೆಗೆ ಹೊಂದಿಕೊಂಡಂತೆ ಜಿಲ್ಲೆಯ ಇಂಥ ಮೊದಲ ವಸಾಹತಾಗಿ ಅಭಿವೃದ್ಧಿಪಡಿಸಲಾಗಿದೆ (27.8.90 ರಂದು ನೋಂದಾಯಿಸಲಾಗಿದೆ). ಕೈಗಾರಿಕೆಗಳ ಸ್ಥಾಪನೆಗೆ ಶೆಡ್ಡುಗಳನ್ನು ಒದಗಿಸುವುದರಿಂದ ಮೊದಲುಗೊಂಡು ಅವು ಸಮರ್ಥವಾಗಿ ಕಾರ್ಯನಿರ್ವಹಿಸಲು ಸಹಾಯಕವಾಗುವಂತೆ ವಿವಿಧ ಹಂತಗಳಲ್ಲಿ ಆ ಸಂಸ್ಥೆಯು ಉದ್ಯಮಿಗಳಿಗೆ ಸೂಕ್ತ ಸಹಾಯ ಸಲಹೆ ನೀಡುವುದು. ಕೈಗಾರಿಕೋದ್ಯಮಿಗಳಿಗೆ ಸುಲಭ ಕಂತುಗಳ ಮೂಲಕ 15 ರಿಂದ 20 ವರ್ಷಗಳ ಗುತ್ತಿಗೆಯ ಮೇಲೆ ನಿವೇಶನ ಅಥವಾ ಕಟ್ಟಡ ಒದಗಿಸುವುದಲ್ಲದೇ ಬಂಡವಾಳದ ಸಹಾಯ (ಹಣಕಾಸು ಸಂಸ್ಥೆಗಳ ಮೂಲಕ), ನೀರು, ವಿದ್ಯುತ್ ಪೂರೈಕೆ, ಸ್ಥಳೀಯ ಸಂಸ್ಥೆಗಳಿಂದ (ಮುನಿಸಿಪಾಲಿಟಿ) ಬೇಕಾದ ಸಹಾಯ ಒದಗಿಸುವುದು, ಸಾಮೂಹಿಕವಾಗಿ ಉದ್ಯಮಿಗಳಿಗೆ ದೂರವಾಣಿ, ಕಂಪ್ಯೂಟರ್, ಟೆಲೆಕ್ಸ್, ಟೆಲಿಫ್ಯಾಕ್ಸ್, ಬ್ಯಾಂಕಿಂಗ್, ಅಂಚೆ ಸೇವೆ ಮುಂತಾದವುಗಳನ್ನು ಒದಗಿಸುವುದು. ಸ್ಥಳೀಯ ಪ್ರತಿಭೆಗೆ ಸೂಕ್ತ ಪ್ರೋತ್ಸಾಹ ದೊರಕಲು ಸಂಸ್ಥೆ ಸಹಾಯ ಮಾಡಿದೆ. ಇದೂ ಅಲ್ಲದೇ ಕೈಗಾರಿಕೆಗಳು ಆಧುನಿಕ ರೀತಿಯಿಂದ ಅಭಿವೃದ್ಧಿ ಹೊಂದಲು ಸಹಾಯಕವಾಗುವಂತೆ ಬೇಕಾಗುವ ಪ್ರಯೋಗಶಾಲೆ, ತರಬೇತಿ ಕೇಂದ್ರ, ವ್ಯಯಕ್ತಿಕ ಕೈಗಾರಿಕೆಗಳ ಯೋಜನಾ ವರದಿಯ ತಯಾರಿಕೆ, ಮಾರುಕಟ್ಟೆ ಮತ್ತು ಸಂಶೋಧನೆ ಮುಂತಾದವುಗಳನ್ನು ಸಾಮೂಹಿಕವಾಗಿ ಸದಸ್ಯರಿಗೆ ಸಂಸ್ಥೆಯ ಮೂಲಕ ಒದಗಿಸಲಾಗುವುದು. ಸಂಘವು ಈ ಉದ್ದೇಶಕ್ಕಾಗಿ ಸುಮಾರು 35 ಎಕರೆ ಭೂಮಿಯನ್ನು ಹೊಂದಿದ್ದು ಇದರಲ್ಲಿ ಸುಮಾರು 12 ಎಕರೆಯಷ್ಟು ಅಭಿವೃದ್ಧಿಪಡಿಸಲಾಗಿದೆ. ಸಂಘವು ಇದುವರೆಗೆ ಸುಮಾರು 60 ವಿವಿಧ ಗಾತ್ರದ ನಿವೇಶನಗಳನ್ನು ಹಂಚಿದೆ. ಸುಮಾರು 40 ಸದಸ್ಯರು ಉತ್ಪಾದನೆಯನ್ನು ಈಗಾಗಲೇ ಪ್ರಾರಂಭಿಸಿರುವರು. ಕೈಗಾರಿಕಾ ವಸಾಹತಿನಲ್ಲಿ ಜನರಲ್ ಇಂಜನಿಯರಿಂಗ್ ವಸ್ತುಗಳು, ಎಣ್ಣೆ ಗಿರಣಿಗಳು, ಅವಲಕ್ಕಿ, ಎಲೆಕ್ಟ್ರಿಕಲ್ ವಸ್ತುಗಳು, ಮಸಾಲೆ ಪುಡಿ, ಹತ್ತಿಯ ಬಾರದಾನ, ತಾಡಪತ್ರಿ ಇವುಗಳ ಉತ್ಪಾದನೆ, ಪಾಟಿ ಕಲ್ಲುಗಳಿಗೆ ಹೊಳಪು ಕೊಡುವುದು, ಕಸಬರಿಗೆ (ಪೊರಕೆ), ಪೀಠೋಪಕರಣಗಳ ತಯಾರಿಕೆ, ಇವೇ ಮುಂತಾದ ಹಲವಾರು ವಿವಿಧ ಕೈಗಾರಿಕೆಗಳಿಂದ ವಸಾಹತು ತುಂಬಿದೆ.

ಸದಸ್ಯರು ಹೊಂದಿರುವ ನಿವೇಶನದ ಅಳತೆಗೆ ಅನುಗುಣವಾಗಿ ಸದಸ್ಯರು ಷೇರು ಹಣವನ್ನು ನೀಡಬೇಕಾಗುವುದು. 1993 ರಲ್ಲಿ ಈ ಸಂಸ್ಥೆಯ ಸದಸ್ಯರ ಸಂಖ್ಯೆ 90 ಇದ್ದು ಒಟ್ಟು ಪಾಲು ಬಂಡವಾಳ ರೂ. 15.95 ಲಕ್ಷ ಇದ್ದು ಇದರಲ್ಲಿ ರೂ. 12 ಲಕ್ಷ ಸರ್ಕಾರದ ಪಾಲು ಉಳಿದದ್ದು ವೈಯಕ್ತಿಕ ಪಾಲು ಬಂಡವಾಳವಾಗಿದೆ. ಈ ಸಂಸ್ಥೆಯು ಹೊಸದಾಗಿರುವುದರಿಂದ ಹಾಗೂ ಸಂಸ್ಥೆಯು ನಿರ್ಮಿಸಿದ ಮೂಲಭೂತ ಸೌಕರ್ಯಗಳು ಅಂದರೆ ಮಳಿಗೆ, ವಿದ್ಯುತ್ ಪೂರೈಕೆ ಮುಂತಾದವುಗಳನ್ನು ಹಲವಾರು ಕಾರಣಗಳಿಂದ ಸಕಾಲಕ್ಕೆ ಸದಸ್ಯರಿಗೆ ಒದಗಿಸದೇ ಇರುವುದರಿಂದ, ಸಾಲದ ಮೇಲಿನ ಬಡ್ಡಿಯು ವಿಪರೀತವಾಗಿ ಬೆಳೆದು ಸಂಸ್ಥೆಯು ಸದ್ಯದಲ್ಲಿ ನಷ್ಟದಲ್ಲಿ ಇದೆ. 1994ರ ಮಾರ್ಚ್ ಕೊನೆಯಲ್ಲಿ ಸಂಸ್ಥೆಯು ಹೊಂದಿದ ವಿವಿಧ ಆಸ್ತಿಗಳು ರೂ.36.73 ಲಕ್ಷ ಇದ್ದರೆ ಹೊಣೆಗಾರಿಕೆಗಳ ಮೊತ್ತ ರೂ.110.95 ಲಕ್ಷ ಎಂದು ವರದಿಯಾಗಿದೆ. ಸಂಸ್ಥೆಯ ನೌಕರರ ಸಂಖ್ಯೆ 13.

ಈ ಸಂಸ್ಥೆಯ ಎರಡನೇ ಹಂತದ ಇನ್ನೊಂದು ಪ್ರಮುಖ ಕೈಗಾರಿಕಾ ಅಭಿವೃದ್ಧಿ ಯೋಜನೆ ಎಂದರೆ ಗದಗ ಬಳಿಯ ನರಸಾಪುರದಲ್ಲಿ ಒಂದು ಸಾವಿರ ಯಂತ್ರಚಾಲಿತ ಮಗ್ಗಗಳ ಸಂಕೀರ್ಣವನ್ನು ಪ್ರಾರಂಬಿಸಿರುವುದು. ಇದು ಗದಗ-ಬೆಟಗೇರಿ ಭಾಗದ ಪ್ರಮುಖ ಗೃಹ ಕೈಗಾರಿಕೆ ನಡೆಸುವ ನೇಕಾರರಿಗೆ ಹೆಚ್ಚು ಸಹಾಯಕವಾಗಿದ್ದು ಪರಂಪರಾಗತವಾದ ನೇಕಾರಿಕೆಗೆ ಹೊಸ ಆಯಾಮಗಳನ್ನು ಒದಗಿಸಿದೆ. ಕೈಮಗ್ಗದ ಉತ್ಪನ್ನಗಳನ್ನು ರಫ್ತು ಮಾರುಕಟ್ಟೆಗೆ ಅನುಗುಣವಾಗಿ ಗುಣಾತ್ಮಕವಾಗಿ ತಯಾರಿಸಲು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಈ ಯೋಜನೆಯ ಮೊದಲನೆಯ ಹಂತವಾಗಿ ಭೂಮಿಯ ಖರೀದಿ, ಕಟ್ಟಡಗಳ ರಚನೆ, ಯಂತ್ರೋಪಕರಣಗಳ ಅಳವಡಿಕೆ ಮುಂತಾದವುಗಳಿಗೆ ಇದುವರೆಗೆ ಸುಮಾರು ರೂ. 42 ಲಕ್ಷ ವ್ಯಯ ಮಾಡಿದೆ. ಈ ಯೋಜನೆಯನ್ನು ಸಾಕಾರಗೊಳಿಸಲು ಈ ಸಂಸ್ಥೆಗೆ ಕರ್ನಾಟಕ ರಾಜ್ಯ ಕೈಗಾರಿಕೆಗಳ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮವು (ಕೆ.ಎಸ್.ಆಯ್.ಆಯ್.ಡಿ.ಸಿ) ರೂ. 248 ಲಕ್ಷಗಳ ನೆರವು ಒದಗಿಸಿದೆ.

**ಕೋಷ್ಟಕ 6.13: ಹುಬ್ಬಳ್ಳಿ ಶ್ರೀಗುರು ಸಿದ್ಧೇಶ್ವರ ಬ್ಯಾಂಕ್‌ನ ಪ್ರಗತಿಯ ವಿವರ.**

(ರೂ. ಲಕ್ಷಗಳಲ್ಲಿ)

| ವರ್ಷ | ಸದಸ್ಯರು (ಸಂ.) | ಪಾವತಿಯಾದ ಪಾಲುಬಂಡವಾಳ | ನಿಧಿಗಳು | ಠೇವುಗಳು | ದುಡಿಯುವ ಬಂಡವಾಳ | ಸಾಲಕೊಟ್ಟಿದ್ದು | ಅವಧಿ ಮೀರಿದ ಸಾಲ | ನಿವ್ವಳ ಲಾಭ |
|---|---|---|---|---|---|---|---|---|
| 1979-80 | 774 | 3,45,250 | 967 | 82,970 | 4,29,187 | - | - | 8,204 |
| 1981-82 | 1,706 | 5,44,550 | 22,223 | 52,37,566 | 58,04,339 | 36,76,596 | 1,11,428 | 1,05,409 |
| 1983-84 | 3,185 | 10,67,500 | 2,26,174 | 173,93,082 | 230,60,525 | 122,13,412 | 9,55,554 | 3,00,796 |
| 1985-86 | 6,079 | 21,09,298 | 7,48,303 | 356,41,279 | 411,15,460 | 275,97,039 | 30,01,384 | 7,03,534 |
| 1987-88 | 7,610 | 46,18,325 | 18,69,557 | 697,00,000 | 816,79,441 | 563,25,000 | 46,03,723 | 25,56,205 |
| 1989-90 | 9,704 | 74,34,925 | 40,66,338 | 895,72,569 | 10,97,72,593 | 764,17,375 | 1,34,98,601 | 22,41,758 |
| 1991-92 | 9,086 | 73,93,725 | 69,59,750 | 867,96,226 | 12,15,75,992 | 687,01,803 | 1,70,53,224 | 25,24,348 |
| 1992-93 | 9,291 | 79,20,075 | 1,04,76,622 | 955,07,744 | 12,97,20,131 | 824,96,784 | 1,93,14,327 | 58,10,460 |

## ಧಾರವಾಡ ಜಿಲ್ಲಾ ಸಹಕಾರಿ ಮಾರಾಟ ಮಹಾಮಂಡಳ, ಹುಬ್ಬಳ್ಳಿ

ತಾಲೂಕುಮಟ್ಟದ ಪ್ರಾಥಮಿಕ ಸಹಕಾರ ಮಾರಾಟ ಸಂಘಗಳಿಗೆ ರೈತರು ಮಾರುವ ವಾಣಿಜ್ಯ ಬೆಳೆಗಳಾದ ಹತ್ತಿ, ಸೂರ್ಯಕಾಂತಿ, ಶೇಂಗಾ, ಕುಸುಬೆ ಮುಂತಾದವುಗಳನ್ನು ಸದಸ್ಯ ಸಹಕಾರಿ ಸಂಸ್ಥೆಗಳಿಂದ ಯೋಗ್ಯ ಬೆಲೆಗೆ ಖರೀದಿಸಿ [ ತಾಲೂಕ ವ್ಯವಸಾಯ ಉತ್ಪನ್ನಗಳ ಸಹಕಾರಿ ಮಾರಾಟ ಸಂಘಗಳ ಮೂಲಕ (ಟಿ.ಎ.ಪಿ.ಸಿ.ಎಂ.ಎಸ್)] ಸಂಸ್ಕರಿಸಿ ಪ್ರಮುಖ ವಾಣಿಜ್ಯ ಸಂಸ್ಥೆಗಳಿಗೆ ಮಾರಾಟ ಮಾಡುವುದು ಈ ಸಂಸ್ಥೆಯ ಉದ್ದೇಶ. ಜಿಲ್ಲಾಮಟ್ಟದಲ್ಲಿ ಪ್ರಮುಖ ವಾಣಿಜ್ಯ ಬೆಳೆಯಾದ ಹತ್ತಿಯ ಖರೀದಿ, ಸಂಸ್ಕರಣ ಮತ್ತು ಮಾರಾಟದಲ್ಲಿ ಈ ಸಂಸ್ಥೆಯು ಸಹಕಾರಿ ವಲಯದ ಶೃಂಗ ಸಂಸ್ಥೆಯಂತೆ ಕಾರ್ಯನಿರ್ವಹಿಸುವುದು.

ಫೆಡರಲ್ (ಒಕ್ಕೂಟ) ಮಾದರಿಯ ಈ ವಿಶೇಷ ಮಾರಾಟ ಸಂಸ್ಥೆಯನ್ನು 1959ರಲ್ಲಿ ಐದು ಸಹಕಾರಿ ಸಂಘಗಳ ಸಮಾವೇಶದಿಂದ ನೋಂದಾಯಿಸಲಾಯಿತು. ಸಂಸ್ಥೆಯ ಕಾರ್ಯವ್ಯಾಪ್ತಿ ಧಾರವಾಡ ಜಿಲ್ಲೆಗೆ ಸೀಮಿತವಾಗಿರುವುದು. ಕರ್ನಾಟಕ ರಾಜ್ಯದಲ್ಲಿ ಅರಳೆ ಖರೀದಿ ಮತ್ತು ವಿಕ್ರಿಯಲ್ಲಿ ಇದು ಮೊದಲನೆಯ ಫೆಡರಲ್ ಮಾದರಿಯ ಖರೀದಿ ಮತ್ತು ಮಾರಾಟ ಸಂಸ್ಥೆಯಾಗಿದ್ದು ಇದರ ಸದಸ್ಯತ್ವ ಕೇವಲ ತಾಲೂಕು ಮಟ್ಟದ ವ್ಯವಸಾಯ ಉತ್ಪನ್ನಗಳ ಮಾರಾಟ ಸಹಕಾರಿ ಸಂಘಗಳು ಮತ್ತು ಹತ್ತಿ, ಎಣ್ಣೆಬೀಜ ಮುಂತಾದವುಗಳ ಸಂಸ್ಕರಣಾ ಘಟಕಗಳಿಗೆ ಸೀಮಿತವಾಗಿರುವುದು. ಪ್ರಾರಂಭದಲ್ಲಿ (1959-60) ಐದು ಸಂಸ್ಥೆಗಳ ಸದಸ್ಯತ್ವ ಮತ್ತು ರೂ. 50,000 ಪಾಲು ಬಂಡವಾಳ ಹೊಂದಿದ್ದ ಸಂಸ್ಥೆ 1971 ರ ಸುಮಾರಿಗೆ ಆರು ಸಂಸ್ಥೆಗಳ ಸದಸ್ಯತ್ವ ಹೊಂದಿ ರೂ. ನಾಲ್ಕು ಲಕ್ಷ ಪಾಲುಬಂಡವಾಳದೊಂದಿಗೆ ಆ ವರ್ಷ ರೂ. 152 ಲಕ್ಷದ ವಹಿವಾಟನ್ನು ನಡೆಸಿತು. 1971 ರಲ್ಲಿ ಗಳಿಸಿದ್ದ ನಿವ್ವಳಲಾಭ ರೂ. 66,144 ಆಗಿತ್ತು. 1992-93 ರಲ್ಲಿ ಸಂಘದ ಸದಸ್ಯತ್ವ 13 ಕ್ಕೆ ಹೆಚ್ಚಳಗೊಂಡು ಪಾಲು ಬಂಡವಾಳ ರೂ.46.70 ಲಕ್ಷಕ್ಕೆ ವೃದ್ಧಿಗೊಂಡಿತು. ಈ ವರ್ಷದಲ್ಲಿ ಸಂಘವು ನಡೆಸಿದ ವಹಿವಾಟು ರೂ. 448.26 ಲಕ್ಷ ಆಗಿದ್ದು ಆ ವರ್ಷ ಸಂಸ್ಥೆಯು ರೂ. 7.20 ಲಕ್ಷ ನಿವ್ವಳ ಲಾಭಗಳಿಸಿತ್ತು.

1993-94 ರಲ್ಲಿ ಸಂಘವು ಕೇವಲ ಸದಸ್ಯ ಸಂಸ್ಥೆಗಳಿಂದ ಜಯಧರಹತ್ತಿ: 30,897 ಕ್ವಿಂಟಾಲ್ (ಮೌಲ್ಯ ರೂ. 402 ಲಕ್ಷ); ಡಿ.ಸಿ.ಎಚ್.ಹತ್ತಿ: 9,275 ಕ್ವಿಂಟಾಲ್ (ಮೌಲ್ಯ ರೂ. 176 ಲಕ್ಷ); ಜಯಧರ ಅರಳೆ: 1,832 ಕ್ವಿಂಟಾಲ್ (ಮೌಲ್ಯ ರೂ. 40.75 ಲಕ್ಷ); ಡಿ.ಸಿ.ಎಚ್ (32) ಅರಳೆ: 132 ಕ್ವಿಂಟಾಲ್ (ಮೌಲ್ಯ ರೂ. 7.83 ಲಕ್ಷ); ಹೀಗೆ ಒಟ್ಟು 42,137 ಕ್ವಿಂಟಾಲ್ (ಹತ್ತಿ ಮತ್ತು ಅರಳೆ), ಒಟ್ಟು ಮೌಲ್ಯ ರೂ.626.74 ಲಕ್ಷದ ಮಾಲನ್ನು ಖರೀದಿಸಿದ್ದಾಗಿ ವರದಿಯಿಂದ ತಿಳಿದು ಬರುವುದು. ಮಹಾಮಂಡಳವು ತಾನು ಖರೀದಿಸಿದ ಮಾಲನ್ನು ಕರ್ನಾಟಕದ ಹತ್ತಿಗಿರಣಿಗಳಿಗೆ ಅಲ್ಲದೇ ಬೊಂಬಾಯಿ, ಕೊಯಮತ್ತೂರು, ಅಹಮ್ಮದಾಬಾದ, ತಂಜಾವೂರು, ಮುಂತಾದ ಮಿಲ್ಲುಗಳಿಗೆ ಮಾರಾಟ ಮಾಡುವುದು.

ಈ ಸಂಸ್ಥೆಗೆ 1987-88 ಮತ್ತು 1988-89 ರಲ್ಲಿ ರಾಷ್ಟ್ರಮಟ್ಟದ ಎರಡನೇಯ ಬಹುಮಾನವನ್ನು ಮತ್ತು 1989-90 ರಲ್ಲಿ ಒಂದನೇಯ ಬಹುಮಾನವನ್ನು ರಾಷ್ಟ್ರೀಯ ಉತ್ಪಾದಕ ಮಂಡಳಿ (ನ್ಯಾಷನಲ್ ಪ್ರಾಡಕ್ಟಿವಿಟಿ ಕೌನ್ಸಿಲ್) ದೆಹಲಿ ಇದರಿಂದ ಕೊಡಲಾಗಿದೆ. 1968-69 ರಿಂದ 1990-91 ರವರೆಗೆ ಸಂಸ್ಥೆಯು ಸರ್ಕಾರದ ಮತ್ತು ಯಾವುದೇ ಹಣಕಾಸು ಸಂಸ್ಥೆಯ ನೆರವಿಲ್ಲದೇ ಸ್ವಂತ ಬಂಡವಾಳದ ಮೇಲೆ ತನ್ನ ವ್ಯವಹಾರವನ್ನು ನಡೆಸುತ್ತ ಪ್ರಗತಿ ಹೊಂದಿದ್ದು ಇತ್ತೀಚೆಗೆ 1991-92, 92-93 ರಲ್ಲಿ ರೈತರಿಗೆ ಬೇಗ ಹಣ ಪಾವತಿ ಮಾಡಲು ಅನುಕೂಲವಾಗುವಂತೆ ಕೇಂದ್ರ ಸಹಕಾರಿ ಬ್ಯಾಂಕಿನಿಂದ ಒಂದು ಕೋಟಿ ರೂ. ಸಾಲ ಪಡೆಯಿತು. 1993-94 ನೇ ವರ್ಷದಲ್ಲಿ ಹತ್ತಿ, ಅರಳೆ ಬೆಲೆಗಳು ಗಗನಕ್ಕೇರಿ ಒಮ್ಮೆಲೆ ಕುಸಿದಿದ್ದರಿಂದ ಸಂಸ್ಥೆಯು ಬಹಳ ತೊಂದರೆಯನ್ನು ಅನುಭವಿಸಬೇಕಾಯಿತು. ಸಂಘದ ನೌಕರರ ಸಂಖ್ಯೆ 15.

**ಕೋಷ್ಟಕ 6.14: ಧಾರವಾಡ ಜಿ।। ಸಹಕಾರಿ ಮಹಾಮಂಡಳ, ಹುಬ್ಬಳ್ಳಿ, ಇದರ ಇತ್ತೀಚಿನ ಹಲವಾರು ವರ್ಷಗಳ ಪ್ರಗತಿ ಈ ಕೆಳಗಿನಂತೆ ಇರುವುದು.**

| ವಿವರ | 1987-88 | 1988-89 | 1989-90 | 1990-91 | 1991-92 | 1992-93 | 1993-94 |
|---|---|---|---|---|---|---|---|
| ಸದಸ್ಯರ ಸಂಖ್ಯೆ | 11 | 11 | 11 | 11 | 11 | 13 | 13 |
| ವಸೂಲಾದ ಪಾಲು ಬಂಡವಾಳ | 27,00,000 | 27,00,000 | 38,50,000 | 38,50,000 | 43,80,000 | 46,70,000 | 46,70,000 |
| ದರ ಏರಿಳಿತ ನಿಧಿ | 1,70,857 | 1,70,857 | 1,99,047 | 3,99,047 | 3,99,047 | 5,49,048 | 5,49,048 |
| ದುರ್ಬಲ ಸಾಲ ನಿಧಿ | 7,88,075 | 7,88,075 | 9,18,107 | 11,18,107 | 11,18,107 | 12,18,107 | 12,18,107 |
| ಬಂಡವಾಳ ಮರು ಪಾವತಿ ನಿಧಿ | 3,08,802 | 3,08,802 | 3,59,754 | 4,06,755 | 4,06,755 | 4,06,755 | 4,06,755 |
| ಠೇವುಗಳು | 9,72,428 | 8,30,368 | 7,28,590 | 5,51,890 | 4,60,477 | 2,17,625 | 4,29,565 |
| ಲಾಭಗಳು | 3,51,407 | 1,38,275 | 4,22,611 | 7,21,279 | 6,89,015 | 7,17,443 | 14,82,675 |

**ರಾಜ್ಯ ಸರಕಾರಿ ನೌಕರರ ಗೃಹನಿರ್ಮಾಣ ಸಂಘ, ಹುಬ್ಬಳ್ಳಿ**

ಹುಬ್ಬಳ್ಳಿ-ಧಾರವಾಡ ಮಹಾನಗರವನ್ನು ಒಳಗೊಂಡಂತೆ ಎರಡೂ ತಾಲೂಕುಗಳ ಕಾರ್ಯವ್ಯಾಪ್ತಿಯನ್ನು ಒಳಗೊಂಡ ಈ ಸಹಕಾರಿ ಸಂಸ್ಥೆಯನ್ನು ದಿನಾಂಕ 5.11.1981 ರಂದು ನೋಂದಾಯಿಸಲಾಯಿತು. ಸಂಸ್ಥೆಯ ಪ್ರಮುಖ ಉದ್ದೇಶ ಸದಸ್ಯರಿಗೆ ಕಡಿಮೆ ಬೆಲೆಯಲ್ಲಿ ಗೃಹನಿವೇಶನಗಳನ್ನು ಒದಗಿಸುವುದು ಮತ್ತು ನಿರ್ಮಾಣಕ್ಕೆ ಹಣಕಾಸಿನ ನೆರವು ಒದಗಿಸುವುದು ಇತ್ಯಾದಿ. ಈ ಸಂಸ್ಥೆಯು ತನ್ನದೇ ಆದ ಇನ್ನೊಂದು ಸಹೋದರ ಸಂಸ್ಥೆ "ರಾಜ್ಯ ಸರ್ಕಾರಿ ನೌಕರರ ಶಿಕ್ಷಣ ಸಂಘ"ದ (1984) ಮೂಲಕ ವಿದ್ಯಾದಾನ ಕಾರ್ಯಕ್ರಮವನ್ನು ಹಾಕಿಕೊಂಡಿರುವುದು. ಈ ಸಂಸ್ಥೆಯ ಮೂಲಕ ಗ್ರಾಮಾಂತರ ತಾಂತ್ರಿಕ ಶಿಕ್ಷಣ ಸಂಸ್ಥೆ (1986), ಪಾಲಿಟೆಕ್ನಿಕ್ ಪ್ರಾಥಮಿಕ ಶಾಲೆ (1989) ಮತ್ತು ಪ್ರೌಢಶಾಲೆಗಳನ್ನೂ (1991) ಸಹ ನಡೆಸುತ್ತಿರುವುದು.

ಈ ಶಿಕ್ಷಣ ಸಂಸ್ಥೆಗಳಲ್ಲದೇ ಪ.ಜಾ\ಪ.ಪಂ. ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಸತಿ ನಿಲಯವನ್ನು ನಡೆಸುತ್ತಿದ್ದು 125 ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯ ಕಲ್ಪಿಸಲಾಗಿದೆ. ಈ ಎಲ್ಲಾ ವಿದ್ಯಾ ಸಂಸ್ಥೆಗಳ ಸಂಕೀರ್ಣ ಹುಬ್ಬಳ್ಳಿ ತಾಲೂಕಿನ ತಾರಿಹಾಳ (ಹುಬ್ಬಳ್ಳಿ ನಗರದಿಂದ ಸುಮಾರು 5 ಕಿ.ಮಿ. ದೂರದಲ್ಲಿ) ಗ್ರಾಮದಲ್ಲಿ ಸುಮಾರು 16 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ನೆಲೆಗೊಂಡಿದೆ. ಈ ಎಲ್ಲಾ ವಿದ್ಯಾ ಸಂಸ್ಥೆಗಳಿಗೆ ಗೃಹನಿರ್ಮಾಣ ಸಂಘ ಮಾತೃಸಂಸ್ಥೆಯಾಗಿರುವುದು. ಈ ಶಿಕ್ಷಣ ಸಂಸ್ಥೆಗಳಲ್ಲಿ ರಾಜ್ಯಸರ್ಕಾರದ ನೌಕರರ ಮತ್ತು ಅವರನ್ನು ಅವಲಂಬಿಸಿದವರ ಮಕ್ಕಳಿಗೆ ಆದ್ಯತೆಯ ಮೇಲೆ ಯಾವುದೇ ದೇಣಿಗೆ ಪಡೆಯದೇ ಪ್ರವೇಶ ನೀಡಲಾಗುವುದು.

ಸದಸ್ಯರ ಪೈಕಿ (4,197) ಇದುವರೆಗೆ 2,833 ಜನರಿಗೆ ಗೃಹ ನಿವೇಶನ ಒದಗಿಸಲಾಗಿದ್ದು ಉಳಿದವರಿಗೆ ಒದಗಿಸುವ ಪ್ರಯತ್ನ ಮುಂದುವರಿಯುತ್ತಿದೆ. ಸಂಘವು ಸದಸ್ಯರಿಗೆ ಹಂಚಿದ ಅಭಿವೃದ್ಧಿಪಡಿಸಿದ ನಿವೇಶನದ ಬೆಲೆ 1981 ರಲ್ಲಿ ಪ್ರತಿ ಗುಂಟೆಗೆ ರೂ. 6000 ಇದ್ದರೆ, 1991 ರಲ್ಲಿ ರೂ. 23,000, 1993 ರಲ್ಲಿ ರೂ.25,000 ಆಗಿದೆ. ಧಾರವಾಡ ಜಿಲ್ಲೆಯ ಗೃಹನಿರ್ಮಾಣ ಸಂಘಗಳಲ್ಲಿ ಇದನ್ನು ಅತ್ಯಂತ ದೊಡ್ಡದು ಎಂದು ಪರಿಗಣಿಸಲಾಗಿದೆ. ಸಂಘದ ನಿವೇಶನಗಳು ಉಣಕಲ್, ನವನಗರ, ಹಳೇಹುಬ್ಬಳ್ಳಿಯ ಕೃಷ್ಣಾಪುರ, ಗಾಮನಗಟ್ಟಿ, ಧಾರವಾಡದ ಕಲಗೇರಿ, ತಪೋವನ, ಹೆಬ್ಬಳ್ಳಿಯ ಅಗಸೆ ಮುಂತಾದ ಕಡೆಗೆ ವ್ಯಾಪಿಸಿವೆ ಮತ್ತು ಆಯಾ ಭಾಗಗಳಲ್ಲಿ ವಾಸಿಸುವ ಸದಸ್ಯರು ತಮ್ಮದೇ ಆದ ಅಭಿವೃದ್ಧಿ ಸಮಿತಿಗಳನ್ನು ರಚಿಸಿಕೊಂಡಿರುವರು.

1981 ರಲ್ಲಿ ಕೇವಲ 61 ಜನ ಸದಸ್ಯರು 6,100 ರೂ. ಪಾಲು ಬಂಡವಾಳದೊಂದಿಗೆ ಪ್ರಾರಂಭವಾದ ಸಂಸ್ಥೆ 1993 ಮಾರ್ಚ್ ಕೊನೆಯಲ್ಲಿ 4,197 ಜನ ಸದಸ್ಯರನ್ನು ರೂ.4.20 ಲಕ್ಷ ಷೇರು ಬಂಡವಾಳವನ್ನು ಹೊಂದಿರುವುದು. ಪ್ರಾರಂಭದಿಂದ ಇದುವರೆಗೆ ಒಟ್ಟು 2,833 ನಿವೇಶನಗಳನ್ನು ಸಂಘದಿಂದ ಹಂಚಲಾಗಿದೆ. ಪ್ರಾರಂಭದಲ್ಲಿ ಕೇವಲ 14,000 ರೂ. ವ್ಯವಹಾರ ನಿರ್ವಹಿಸಿದ ಸಂಸ್ಥೆ 1993ರ ಕೊನೆಯಲ್ಲಿ ನಿರ್ವಹಿಸಿದ ವ್ಯವಹಾರ ರೂ. 79.83 ಲಕ್ಷ (ನಿವೇಶನಗಳ ಕಿಮ್ಮತ್ತು) ಮತ್ತು ದುಡಿಯುವ ಬಂಡವಾಳ ರೂ.109.39 ಲಕ್ಷ ಆಗಿದೆ.

**ಜಿಲ್ಲಾ ಸಹಕಾರಿ ಬೋರ್ಡ**: ಸಹಕಾರಿ ಚಳವಳಿಯು ಗುಣಾತ್ಮಕವಾಗಿ ಮತ್ತು ವ್ಯಾಪಕವಾಗಿ ಬೆಳೆಯಲು ಸಹಕಾರಿಗಳಿಗೆ ಮತ್ತು ಸಂಘಗಳ ಸದಸ್ಯರಿಗೆ ಉತ್ತಮ ತರಬೇತಿ ಮತ್ತು ಮಾರ್ಗದರ್ಶನದ ಅವಶ್ಯಕತೆ ಉಂಟು. ಇದನ್ನು ಮನಗಂಡು ಸ್ವಾತಂತ್ರ್ಯ ಪೂರ್ವದಲ್ಲಿಯೇ ಜಿಲ್ಲೆಗೆ ಒಂದರಂತೆ ಜಿಲ್ಲಾ ಸಹಕಾರಿ ಬೋರ್ಡುಗಳು (ಮಂಡಳ) ಪ್ರಾರಂಭಿಸಲ್ಪಟ್ಟವು. ಈ ಬೋರ್ಡುಗಳು ಮುಂಬಯಿ ಪ್ರಾಂತೀಯ ಸಹಕಾರಿ ಸಂಸ್ಥೆಯ ಅಧೀನದಲ್ಲಿ ಅದರ ಮಾರ್ಗದರ್ಶನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಜಿಲ್ಲಾ ಬೋರ್ಡುಗಳಂತೆ (ಡಿವಿಜನಲ್) ವಿಭಾಗೀಯ ಬೋರ್ಡುಗಳೂ ಸಹ ಇದ್ದವು. ಜಿಲ್ಲಾ ಮತ್ತು ವಿಭಾಗೀಯ ಬೋರ್ಡುಗಳ ಆಡಳಿತ ಕಛೇರಿಗಳು ಧಾರವಾಡದಲ್ಲಿಯೇ ಇದ್ದವು. ಈ ಬೋರ್ಡುಗಳ ಸದಸ್ಯತ್ವ ಎರಡು ಬಗೆಯದಾಗಿತ್ತು: ಸಾಮಾನ್ಯ ಸದಸ್ಯ ವರ್ಗದಲ್ಲಿ ಜಿಲ್ಲೆಯ ಎಲ್ಲಾ ಬಗೆಯ ಸಹಕಾರಿ ಸಂಘಗಳು, ಅಸೋಸಿಯೇಟ್ಸ್ ವರ್ಗದಲ್ಲಿ ವ್ಯಕ್ತಿಗಳು ಸದಸ್ಯತ್ವ ಹೊಂದಬಹುದಾಗಿತ್ತು. ಇದೂ ಅಲ್ಲದೇ ಜಿಲ್ಲಾ ಮಧ್ಯವರ್ತಿ ಹಣ ಕಾಸು ಸಂಸ್ಥೆಯ ಪ್ರತಿನಿಧಿ, ಧಾರವಾಡ ಜಿಲ್ಲೆಯ ಸಹಾಯಕ ನಿಬಂಧಕರು, ಮುಂಬೈ ಪ್ರಾಂತೀಯ ಸಹಕಾರಿ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕರು, ಈ ಸಂಸ್ಥೆಯ ಪದನಿಮಿತ್ತ ಸದಸ್ಯರಾಗಿರುತ್ತಿದ್ದರು. ಬೋರ್ಡ ಆಡಳಿತ ನಡೆಸಲು ಆಡಳಿತ ಮಂಡಳಿಯು ಇರುತ್ತಿತ್ತು.

**ಜಿಲ್ಲಾ ಸಹಕಾರಿ ಯುನಿಯನ್**: ಸಹಕಾರಿ ಆಂದೋಲನದ ವ್ಯಾಪಕ ಮತ್ತು ಆರೋಗ್ಯಕರ ಬೆಳವಣಿಗೆಯಲ್ಲಿ ಸಹಕಾರಿ ಯುನಿಯನ್‌ಗಳು ಪ್ರಾರಂಭದಿಂದಲೂ ಬಹುಮಹತ್ವದ ಪಾತ್ರವನ್ನು ವಹಿಸುತ್ತ ಬಂದಿರುವುವು. ಮೂಲಭೂತ ಸಹಕಾರಿ ತತ್ವಗಳ ಪ್ರಚಾರ, ಸಂಘಗಳ ರಚನೆ, ನಿರ್ವಹಣೆ ಮತ್ತು ಮಾರ್ಗದರ್ಶನ, ಪರಸ್ಪರ ಸಮನ್ವಯ ಸಾಧನೆ, ಸಹಕಾರಿ ಧೋರಣೆಯ ನಿರೂಪಣೆ, ಸದಸ್ಯರಿಗೆ ಸಹಕಾರಿ ಶಿಕ್ಷಣದ ಪ್ರಚಾರ ಇವೇ ಮುಂತಾದವುಗಳು ಸಂಸ್ಥೆಯ ಪ್ರಮುಖ ಉದ್ದೇಶಗಳು. ರಾಜ್ಯ ಪುನರ್ ಘಟನೆಯ ನಂತರ 1963-64 ರಲ್ಲಿ ರಾಜ್ಯಮಟ್ಟದಲ್ಲಿ ಫೆಡರಲ್ ಮಾದರಿಯ ಸಹಕಾರಿ ಯುನಿಯನ್ (ಮಹಾಮಂಡಳ) ರಚನೆಗೊಂಡ ನಂತರ ಸದಸ್ಯರ ಸಹಕಾರಿ ಶಿಕ್ಷಣಕ್ಕೆ ವ್ಯಾಪಕವಾದ ಮತ್ತು ಕಾನೂನುಬದ್ಧವಾದ ಚಾಲನೆ ದೊರೆತಿದ್ದು ಸಹಕಾರಿ ಆಂದೋಲನಕ್ಕೆ ಮಾರ್ಗದರ್ಶನ ಮಾಡುವಲ್ಲಿ ಮಹಾಮಂಡಳ ಏಕೀಕೃತ ಪ್ರಬಲಶಕ್ತಿಯಾಗಿದೆ. ಸದಸ್ಯ ಶಿಕ್ಷಣ ಕಾರ್ಯಕ್ರಮ, ಸಹಕಾರಿ ತರಬೇತಿ, ಸಮ್ಮೇಳನ, ವಿಚಾರಗೋಷ್ಠಿ ಮುಂತಾದ ಚಟುವಟಿಕೆಗಳನ್ನು ಯುನಿಯನ್ ನಡೆಸುತ್ತಿದೆ. ಮಹಿಳೆಯರ ಸಹಕಾರಿ ತರಬೇತಿಯ ಬಗ್ಗೆ ಹೆಚ್ಚು ಒತ್ತು ಕೊಡಲಾಗುತ್ತಿದೆ.

ಧಾರವಾಡ ಜಿಲ್ಲೆಯ ಸಹಕಾರಿ ಯುನಿಯನ್ ಅನ್ನು 1937 ರಲ್ಲಿ ಬೊಂಬಾಯಿ ಪ್ರಾಂತೀಯ ಸಹಕಾರಿ ಯುನಿಯನ್ನಿನ ಜಿಲ್ಲಾ ಶಾಖೆಯಾಗಿ ಪ್ರಾರಂಭಿಸಲಾಯಿತು; 1957 ರಲ್ಲಿ ಅದು ಪುನರ್ರಚನೆಗೊಂಡಿತು. ಸದಸ್ಯ ಸಂಸ್ಥೆಗಳಿಗೆ ಬರುವ ವಂತಿಗೆ, ಸಹಕಾರ ಸಂಘಗಳು ಗಳಿಸಿದ ಲಾಭದಲ್ಲಿ ನೀಡುವ ಕಡ್ಡಾಯ ಶಿಕ್ಷಣ ನಿಧಿ, ಸರ್ಕಾರದ ಧನ ಸಹಾಯ ಇವುಗಳು ಸಂಸ್ಥೆಯ ಆರ್ಥಿಕ ಮೂಲಗಳಾಗಿವೆ. ಸಾಮಾನ್ಯವಾಗಿ ಜಿಲ್ಲೆಯ ಪ್ರತಿ ಒಂದು ಸಹಕಾರಿ ಸಂಸ್ಥೆಯು ಜಿಲ್ಲಾ ಯುನಿಯನ್ನಿನ ಸದಸ್ಯತ್ವವನ್ನು ಹೊಂದಿರುವುದು. ಜಿಲ್ಲಾ ಯುನಿಯನ್ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ (ಬೆಂಗಳೂರು) ಅಂಗಸಂಸ್ಥೆಯಂತೆ ಜಿಲ್ಲಾಮಟ್ಟದಲ್ಲಿ ಕಾರ್ಯ ನಿರ್ವಹಿಸುವುದು. ಸಹಕಾರಿ ಶಿಕ್ಷಣ ಮತ್ತು ಅಭಿವೃದ್ಧಿ ಯೋಜನೆಯ ಅನ್ವಯ ಒಬ್ಬರು ಕಾರ್ಯನಿರ್ವಾಹಕ ಅಧಿಕಾರಿ, ಮೂವರು ಸಹಕಾರಿ ಶಿಕ್ಷಕರು, ಒಬ್ಬ ಮಹಿಳಾ ಶಿಕ್ಷಕಿ ಸಹಕಾರಿ ಶಿಕ್ಷಣ ತರಬೇತಿ ಮತ್ತು ಶಿಕ್ಷಣ ಪ್ರಚಾರ ಕಾರ್ಯದಲ್ಲಿ ನಿರತರಾಗಿರುವರು. ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಮಹಿಳೆಯರ ಸಹಕಾರಿ ಶಿಕ್ಷಣವನ್ನು ಕುರಿತಂತೆ ಹೆಚ್ಚು ಒತ್ತು ನೀಡಲಾಗುತ್ತಿದೆ. 1992-93 ರಲ್ಲಿ ಯುನಿಯನ್ನಿನ ಸದಸ್ಯರ ಸಂಖ್ಯೆ 25 ಅಜೀವ ಸದಸ್ಯರನ್ನೂ ಒಳಗೊಂಡಂತೆ 375 ಎಂದು ತಿಳಿದು ಬರುವುದು.

**ಸಹಕಾರಿ ತರಬೇತಿ ಕೇಂದ್ರ, ಧಾರವಾಡ**: ಸಹಕಾರಿ ಚಳುವಳಿಯ ಆರೋಗ್ಯಕರ ಬೆಳವಣಿಗೆಗೆ ಪೂರಕವಾದ ಹಲವಾರು ಅಂಶಗಳಲ್ಲಿ ಸಹಕಾರಿ ತರಬೇತಿಯು ಒಂದು ಪ್ರಧಾನ ಅಂಶವಾಗಿದ್ದು ಇದನ್ನು ಪೂರೈಸಲು ಸಹಾಯಕವಾಗುವಂತೆ 1947 ರಲ್ಲಿ

ಅಂದಿನ ಮುಂಬಯಿ ಪ್ರಾಂತೀಯ ಸರ್ಕಾರದವರು ಈ ತರಬೇತಿ ಕೇಂದ್ರವನ್ನು ಪ್ರಾರಂಭಿಸಿದರು. ರಾಜ್ಯ ಪುನರ್ವಿಂಗಡನೆಯ ನಂತರ ಕರ್ನಾಟಕ ಸರ್ಕಾರದ ಅಧೀನದಲ್ಲಿ ಈ ಕೇಂದ್ರವು ಕಾರ್ಯ ನಿರ್ವಹಿಸುತ್ತಿತ್ತು. ನಂತರ 1963-64 ರಲ್ಲಿ ಈ ತರಬೇತಿ ಕೇಂದ್ರವನ್ನು ಅಂದಿನ ರಾಜ್ಯ ಸಹಕಾರಿ ಯುನಿಯನ್ (1987 ರಿಂದ ಸಹಕಾರ ಮಹಾಮಂಡಳ) ಬೆಂಗಳೂರು ಈ ಸಂಸ್ಥೆಗೆ ವಹಿಸಲಾಯಿತು. ಪ್ರಾರಂಭದಲ್ಲಿ ಈ ಸಂಸ್ಥೆಯನ್ನು ಕಟ್ಟಿಬೆಳೆಸಿದ ಜಿಲ್ಲೆಯ ಹಿರಿಯ ಸಹಕಾರಿ ದುರೀಣರಲ್ಲಿ ದಿ|| ಎ.ಎಸ್. ಪಾಟೀಲರು ಪ್ರಮುಖರು.

ಸಂಸ್ಥೆಯ ಸದಸ್ಯ ತರಬೇತಿ ಚಟುವಟಿಕೆಗಳೆಂದರೆ ಸಹಕಾರಿ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುತ್ತಿರುವ ಕಿರಿಯ ಅಧಿಕಾರಿಗಳಿಗೆ, ಸಂಘಗಳ ನೌಕರರಿಗೆ 24 ವಾರಗಳ 'ಸಹಕಾರಿ ಡಿಪ್ಲೋಮಾ' ತರಬೇತಿಯನ್ನು ನೀಡುವ ಮೂಲಕ ಸಹಕಾರಿ ಆಂದೋಲನದ ಸಮಗ್ರ ತಿಳುವಳಿಕೆ ಮಾಡಿಕೊಡುವುದು. ಸಹಕಾರಿ ಕಾನೂನು, ಲೆಕ್ಕಪತ್ರ, ಲೆಕ್ಕಪರಿಶೋಧನೆ, ಸಂಘಗಳ ಕಾರ್ಯನಿರ್ವಹಣೆ ಮುಂತಾದ ಹತ್ತು ಹಲವಾರು ವಿಷಯಗಳನ್ನು ತರಬೇತಿಯ ಅವಧಿಯಲ್ಲಿ ತಿಳಿಸಿಕೊಡಲಾಗುವುದು. ತರಬೇತಿಯು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ತರಬೇತಿ ಯೋಜನೆಯ ಅನ್ವಯ ನೀಡಲಾಗುವುದು. ಸಂಸ್ಥೆಯ ವತಿಯಿಂದ ಗ್ರಾಮೀಣ ಪ್ರದೇಶಗಳಲ್ಲಿ ಸಹಕಾರಿ ಆಂದೋಳನದ ಬಗ್ಗೆ ಚಲನಚಿತ್ರಗಳ ಮೂಲಕ ತಿಳುವಳಿಕೆ ನೀಡಲಾಗುವುದು. ದುರ್ಬಲ ವ್ಯವಸಾಯ ಪತ್ತಿನ ಸಂಘಗಳನ್ನು ದತ್ತು ಪಡೆದು, ಆ ಸಂಸ್ಥೆಗಳನ್ನು ಪುನರುಜ್ಜೀವಗೊಳಿಸುವ ಕಾರ್ಯವನ್ನೂ ಸಹ ತರಬೇತಿ ಕೇಂದ್ರದ ಮೂಲಕ ಕೈಗೊಳ್ಳಲಾಗುವುದು.

1988-89 ರಿಂದ 1991-92 ರವರೆಗೆ ಎನ್.ಸಿ.ಡಿ.ಸಿ. (ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ) ಯೋಜನೆಯ ಅಡಿಯಲ್ಲಿ ಗೋದಾಮುಗಳನ್ನು ಹೊಂದಿದ ವ್ಯವಸಾಯ ಪತ್ತಿನ ಸೇವಾ ಸಹಕಾರಿ ಸಂಘಗಳ ಕಾರ್ಯದರ್ಶಿಗಳಿಗೆ ಒಂದು ತಿಂಗಳ ಅವಧಿಯ ತರಬೇತಿಯನ್ನು ನೀಡಲಾಯಿತು. ಪರಿಶಿಷ್ಟಜಾತಿ\ಪಂಗಡದ ಸದಸ್ಯರ ತರಬೇತಿಗಾಗಿ ವಿಶೇಷ ತರಬೇತಿ ವರ್ಗಗಳನ್ನು ಈ ಸಂಸ್ಥೆಯ ವತಿಯಿಂದ ನಡೆಸಲಾಗುವುದು.

ಪ್ರತೀವರ್ಷ ಜನವರಿ ಮತ್ತು ಜುಲೈನಲ್ಲಿ ತರಬೇತಿಯು ಪ್ರಾರಂಭವಾಗುವುದು. ತರಬೇತಿಗೆ ಆಯ್ಕೆ ಮಾಡುವ ಗರಿಷ್ಠ ಅಭ್ಯರ್ಥಿಗಳ ಸಂಖ್ಯೆ 100. ತರಬೇತಿದಾರರ ಅನುಕೂಲತೆಗೆ ಹಾಸ್ಟೇಲ ವ್ಯವಸ್ಥೆ ಇರುವುದು. 1992-93 (ಜನವರಿ-ಡಿಸೆಂಬರ್) ವರ್ಷದಲ್ಲಿ ಈ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆದವರ ಸಂಖ್ಯೆ 192; ಇವರಲ್ಲಿ ಬಹುಪಾಲು ಅಭ್ಯರ್ಥಿಗಳು 144 ಸಹಕಾರಿ ಸಂಸ್ಥೆಗಳಿಂದ ಕಳಿಸಲ್ಪಟ್ಟವರಾಗಿದ್ದರೆ 11 ಜನರು ಸರ್ಕಾರದ ಅಭ್ಯರ್ಥಿಗಳಾಗಿದ್ದರು. 37 ಜನ ಖಾಸಗಿಯವರಾಗಿದ್ದರು.

## ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳು

ಒಂದು ಪ್ರದೇಶದ ವ್ಯಾಪಾರ ಮತ್ತು ವಾಣಿಜ್ಯೋದ್ಯಮದ ಬೆಳವಣಿಗೆಗೆ ಆ ಪ್ರದೇಶದಲ್ಲಿ ಲಭ್ಯ ಇರುವ ಮೂಲಭೂತ ಸೌಕರ್ಯಗಳಾದ ಉತ್ತಮ ಸಂಚಾರ ಸೌಲಭ್ಯ (ಸರ್ವ ಋತು ರಸ್ತೆಗಳು), ಸಂಪರ್ಕ ಸಾಧನಗಳು, ಮಾರುಕಟ್ಟೆಗಳು, ಅಭಿವೃದ್ಧಿ ಹೊಂದಿದ ಹಿನ್ನಾಡು, ಹಣಕಾಸು ಸಂಸ್ಥೆಗಳು, ವೃತ್ತಿನಿರತರು, ಆ ಪ್ರದೇಶದ ಮುಖ್ಯ ವ್ಯವಸಾಯ ಮತ್ತು ವ್ಯವಸಾಯೇತರ ಉತ್ಪನ್ನಗಳು, ನಗರೀಕರಣ ಮತ್ತು ಕೈಗಾರೀಕರಣ, ಆಮದು-ರಫ್ತುಗಳು, ಇವೇ ಮುಂತಾದ ಹಲವಾರು ಸಂಗತಿಗಳು ಬಹು ಮುಖ್ಯವಾದ ಪಾತ್ರವನ್ನು ವಹಿಸುವವು.

ಈ ಮೇಲಿನ ಹಲವಾರು ಸೌಲಭ್ಯಗಳ ಲಭ್ಯತೆಯ ಪರಿಮಿತಿಯಲ್ಲಿ ಜಿಲ್ಲೆಯ ಇಂದಿನ ಮತ್ತು ಕಳೆದ ಒಂದೆರಡು ಶತಮಾನಗಳ ಹಿಂದೆ ಲಭ್ಯ ಇದ್ದ ಸೌಲಭ್ಯಗಳನ್ನು ಮತ್ತು ಈ ಪ್ರದೇಶ ದೇಶದ ಇತರ ಭಾಗಗಳೊಂದಿಗೆ ಹೊಂದಿದ್ದ ನೇರ ಸಂಪರ್ಕ, ಸಂಚಾರಸೌಲಭ್ಯ, ಆಮದು-ರಫ್ತು ವ್ಯವಹಾರ ಮುಂತಾದವುಗಳನ್ನು ಗಮನಿಸಿದಲ್ಲಿ ಉತ್ತರ ಕರ್ನಾಟಕದ ಈ ಪ್ರದೇಶ ಅಂದಿನ ದಕ್ಷಿಣ ಮಹಾರಾಷ್ಟ್ರ ಪ್ರದೇಶವನ್ನು ಒಳಗೊಂಡಂತೆ ವ್ಯಾಪಾರ-ವಾಣಿಜ್ಯದಲ್ಲಿ ಪ್ರಾರಂಭದಿಂದಲೂ ಮುಂದುವರೆದಿದ್ದ ಜಿಲ್ಲೆ ಎಂದು ಗುರುತಿಸಬಹುದು. ಅದರಂತೆ ಪ್ರಾಚೀನ ಮತ್ತು ಮಧ್ಯಕಾಲಿನ ಚರಿತ್ರೆಯಲ್ಲಿಯೂ ಈ ಜಿಲ್ಲೆಯು ಇಂದಿನ ಹಲವಾರು ಸ್ಥಳಗಳು ಅಂದು ಪ್ರಮುಖ ವ್ಯಾಪಾರ ಕೇಂದ್ರಗಳು ಮತ್ತು ವ್ಯಾಪಾರಿ ಸಂಘಟನೆಗಳ ಪ್ರಮುಖ ಕೇಂದ್ರಗಳಾಗಿದ್ದವು.

**ಪ್ರಾಚೀನ ಕಾಲ:** ಪ್ರಾಚೀನ ಕರ್ನಾಟಕದ ಶಾಸನಗಳಲ್ಲಿ ವ್ಯಾಪಕವಾಗಿ ಉಲ್ಲೇಖಿತವಾಗಿರುವ ಕರ್ನಾಟಕದ ವಿವಿಧ ಬಗೆಯ ವರ್ತಕರನ್ನು, ವೃತ್ತಿನಿರತರನ್ನು, ವರ್ತಕರ ಸಮುದಾಯಗಳನ್ನು, ಅವರ ಸಂಘ ಸಂಸ್ಥೆಗಳನ್ನು ಆಯಾ ವರ್ತಕರು ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಹೊಂದಿದ್ದ ಗೌರವ, ಮಾನಸನ್ಮಾನಗಳನ್ನು, ಅವರ ಸಾಮಾಜಿಕ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೊಡುಗೆಗಳನ್ನು

ಈ ಜಿಲ್ಲೆಯ ಹಲವಾರು ಶಾಸನಗಳಲ್ಲಿ ಕಾಣಬಹುದು. ಕರ್ನಾಟಕದ ವರ್ತಕರಲ್ಲಿ ವ್ಯಾಪಾರವನ್ನು ವೃತ್ತಿಯಾಗಿ ರೂಢಿಸಿಕೊಂಡ ಸೆಟ್ಟಿ ಬಣಜಿಗ, ಸೆಟಿಗುತ್ತ, ನಕರ, ಮುಮ್ಮರಿದಂಡ, ವಡ್ಡ ವ್ಯವಹಾರಿ, ಗವರೆ, ಗಾತ್ರಿಗ, ಸೆಟ್ಟಿಕಾರ, ಮುಂತಾದ ಶಾಸನೋಕ್ತ ಹೆಸರುಗಳಿಂದ ಪರಿಚಯಿಸಲ್ಪಡುವ ವರ್ತಕರ ಬಗ್ಗೆ ತಿಳಿದು ಬರುವುದು. ಅದರಂತೆ "ಅಯ್ಯಾವೊಳೆ" ಐನೂರ್ವರು, ತಂಬುಲಿಗ ಸಾಸಿರ್ವರು, ನಕರ, ತೆಲ್ಲಿಗರು, ಮಾಲೆಗಾರರು ಮುಂತಾದ ವೃತ್ತಿ ನಿರತರು ಹಾಗೂ ವರ್ತಕ ಸಂಘಗಳ ಪ್ರಸ್ತಾವನೆಯನ್ನು ಹಲವಾರು ಶಾಸನಗಳಲ್ಲಿ ಕಾಣಬಹುದು. ವರ್ತಕರಲ್ಲಿ ಅವರ ವೃತ್ತಿಗೆ ಅನುಸಾರವಾಗಿ ಹಲವಾರು ಬಗೆಗಳು ಇದ್ದವು. ವೃತ್ತಿಯಲ್ಲಿ ಅದರ ನಿರ್ವಹಣೆಯಲ್ಲಿ ಇಂದಿನಂತೆ ಬಹುವೈವಿಧ್ಯತೆಯನ್ನು ಕಾಣಬಹುದಾಗಿತ್ತು.

ವರ್ತಕರಲ್ಲಿ ಅನೇಕರು ಉತ್ಪಾದನೆ ಮತ್ತು ಅವುಗಳ ಪೂರೈಕೆ (ಹಂಚಿಕೆ) ಎರಡನ್ನು ಜೊತೆಜೊತೆಯಾಗಿ ನಿರ್ವಹಿಸುತ್ತಿದ್ದರು. ಅನೇಕ ಸಂದರ್ಭಗಳಲ್ಲಿ ಶಾಸನಗಳಲ್ಲಿ ವರ್ತಕರ ಪ್ರಕಾರಗಳನ್ನು ಸಂಖ್ಯೆಗಳಿಂದ ಗುರುತಿಸಲಾಗಿದೆ. ಉದಾ: ನಾಲ್ಕು ಪಟ್ಟಣದ 'ಪಟ್ಟಣಿಗರು', ಪಟ್ಟಣದ ವರ್ತಕರು (ಧಾರವಾಡದ 1215-16 ರ ಶಾಸನ, ಕ.ಇ.68 ಧಾರವಾಡ), 'ಎರಡು ಸಾವಿರ ವರ್ತಕರು' (ಮುಳಗುಂದದ ಕ್ರಿ.ಶ. 903-904 ರ ಶಾಸನ), ಸೂಡಿಯ 1075 ರ ಶಾಸನದಲ್ಲಿ 'ಏಣ್ಬರ್ ಶೆಟ್ಟಿಯರು' ಎಂಬ ಉಲ್ಲೇಖ ಬರುವುದು. ಈ ಮೇಲಿನ ಉಲ್ಲೇಖಗಳು ಆಯಾ ಗ್ರಾಮ ಮತ್ತು ಪ್ರದೇಶಗಳ ವರ್ತಕರ ಸಂಖ್ಯೆಯನ್ನು ಗುರುತಿಸಲು ಸಹಾಯಕವಾಗುವುದು. ಈ ಮೇಲಿನ ಶಾಸನಗಳಲ್ಲದೇ ಹನುಮನಹಾಳ (ರೋಣ ತಾ||), ಸಂಶಿ (ಕುಂದಗೋಳ ತಾ||), ಹುಯಿಲಗೋಳ (ಗದಗ ತಾ||), ಹಾನಗಲ್ಲು ಇವುಗಳಲ್ಲಿನ ಅನುಕ್ರಮವಾಗಿ ಕ್ರಿ.ಶ. 1099, 1144, 1166 ಮತ್ತು 1121 ರ ಶಾಸನಗಳು ವರ್ತಕರ ಸಂಖ್ಯೆಯನ್ನು ವಿವರಿಸುವವು. ಶಾಸನಗಳಲ್ಲಿ ವ್ಯಾಪಕವಾಗಿ ಹೆಸರಿಸಿರುವ ವರ್ತಕರು, ವೈದಿಕ, ಜೈನ, ಶೈವ ಮತ್ತು ಇತರ ಮತಗಳವರಾಗಿದ್ದರು. ಡಂಬಳದ ಒಂದು ಶಾಸನದಲ್ಲಿ ಬೌದ್ಧಮತದ ಸೆಟ್ಟಿಯರ ಉಲ್ಲೇಖ ಬರುವುದು. ವರ್ತಕರು ವಿವಿಧ ರಾಜಕೀಯ ಅಧಿಕಾರಗಳನ್ನು ಹೊಂದಿರುವ ಬಗ್ಗೆ ಲಕ್ಕುಂಡಿ, ಸಂಗೂರುಗಳು ಕ್ರಿ.ಶ. 1179 ಮತ್ತು 1412 ರ ಶಾಸನಗಳಿಂದ ತಿಳಿದುಬರುವುದು. ವರ್ತಕರು ಅಚ್ಚಿನ ಶ್ರೇಣಿ (ಟಂಕಸಾಲೆ), ಬೊಕ್ಕಸ, ಮಳಿಗೆ ಇವುಗಳ ಅಧಿಕಾರಿಗಳಾಗಿದ್ದರು ಎಂದು ಈ ಮೇಲಿನ ಶಾಸನಗಳಿಂದ ತಿಳಿದು ಬರುವುದು. ಸಾತೇನಹಳ್ಳಿಯ (ಹಿರೇಕೆರೂರು ತಾ:) ಕ್ರಿ.ಶ. 1204 ರ ಶಾಸನವು ಬಣಂಜು ಸಮಯ ರಕ್ಷಣೆಗಾಗಿ ಸಮರ್ಪಣಾಭಾವದಿಂದ ಹೋರಾಡಿದ ವೆಣ್ಣಲ ಸೆಟ್ಟಿಕಬ್ವೆಯ ವೀರ ವ್ಯಕ್ತಿತ್ವವನ್ನು ವರ್ಣಿಸುತ್ತದೆ. ನರಗುಂದದ ಒಂದು ಶಾಸನದಲ್ಲಿ ವೈಶ್ಯಕುಲದ ಕುಪ್ಪಟ ಏಚಿಸೆಟ್ಟಿಯ ಟಂಕಸಾಲೆಯ ಪ್ರಸ್ತಾಪವು ಬರುವುದು. ದೇವರ ಹುಬ್ಬಳ್ಳಿಯ (ಧಾರವಾಡ ತಾ:) 1206 ರ ಶಾಸನದಲ್ಲಿ ಸೆಟ್ಟಿಗುತ್ತರು ಅಯ್ಯಾವೊಳೆ ಐನೂರ್ವರು ಜೊತೆ ಸಂಪರ್ಕವಿದ್ದವರು ಎಂದು ಉಲ್ಲೇಖ ಬರುವುದು. ಸೆಟ್ಟಿಗುತ್ತರು ಮಧ್ಯಕಾಲೀನ ಕರ್ನಾಟಕದ ವರ್ತಕರ ಸಮಾಜದಲ್ಲಿ ಉನ್ನತ ವರ್ಗದ ಸೆಟ್ಟಿಯರಾಗಿದ್ದು ವಾಣಿಜ್ಯಧೋರಣೆ, ವ್ಯಾಪಾರ ಧರ್ಮಗಳನ್ನು ಪರಿಪಾಲಿಸುತ್ತಿದ್ದರು ಎಂದು ಶಾಸನಗಳಿಂದ ತಿಳಿದು ಬರುವುದು.

ವರ್ತಕರ ಪ್ರಕಾರಗಳಲ್ಲಿ ಒಂದಾಗಿದ್ದ ಮತ್ತು ಬಹುವ್ಯಾಪಕವಾಗಿದ್ದ 'ನಕರ'ರನ್ನು ಜಿಲ್ಲೆಯ ಶಾಸನಗಳಲ್ಲಿ 'ಅಂಗಡಿಯ ಸೆಟ್ಟರು' ಎಂದು ಗುರುತಿಸಲಾಗಿದೆ. ಸಂತೆಗಳಲ್ಲಿ, ಪಟ್ಟಣಗಳಲ್ಲಿ, ನೆಲೆನಿಂತು ವ್ಯಾಪಾರ ನಡೆಸುವ ವರ್ತಕರು ಇವರಾಗಿದ್ದಿರಬಹುದು. ಲಕ್ಷ್ಮೇಶ್ವರದ (ಕ್ರಿ.ಶ. 725 ಮತ್ತು 1153 ರ ಶಾಸನ), ಡಂಬಳದ (ಕ್ರಿ.ಶ. 1124 ರ ಶಾಸನ), ಹಾವೇರಿ (ಕ್ರಿ.ಶ.1228 ರ ಶಾಸನ), ಲಕ್ಕುಂಡಿ (ಕ್ರಿ.ಶ.1179), ಎಲಿಶಿರೂರು (ಕ್ರಿ.ಶ.1109), ಅಗಡಿ (ಕ್ರಿ.ಶ. 1166), ಮುಳಗುಂದ (ಕ್ರಿ.ಶ. 925), ಬಂಕಾಪುರ (ಕ್ರಿ.ಶ. 1062), ಮತ್ತು ಕಾಗಿನೆಲೆ (ಕ್ರಿ.ಶ. 1077) ರ ಶಾಸನಗಳು ನಕರವನ್ನು ಕುರಿತು ವಿವರಣೆಯನ್ನು ನೀಡುತ್ತವೆ. ಇವರೇ ನಡೆಸುವ ನಗರೇಶ್ವರ ದೇವಾಲಯಗಳು ನರಗುಂದ, ಹುಬ್ಬಳ್ಳಿ, ಬಂಕಾಪುರ ಮುಂತಾದೆಡೆ ಇದ್ದವು.

ಸಂಚಾರಿ ವರ್ತಕರಾಗಿದ್ದ ಮುಮ್ಮರಿದಂಡರು ಸರಕು ಹೇರಿಕೊಂಡು ಸಂತೆ ಪೇಟೆಗೆ ಹೋಗಿ ವ್ಯಾಪಾರ ಮಾಡುವ ವರ್ತಕರಾಗಿದ್ದರು. ಅಲ್ಲದೇ ಸ್ಥಳೀಯವಾಗಿ ಸರಕು ಖರೀದಿಸಿ ಬೇರೆ ಸ್ಥಳಗಳಲ್ಲಿ ಮಾರಾಟ ಮಾಡುತ್ತಿದ್ದರು. ಧಾರವಾಡ ತಾಲೂಕಿನ ಮೇವುಂಡಿಯ ಕ್ರಿ.ಶ.1196 ರ ಶಾಸನ, ಹಾಗೂ ದೇವರ ಹುಬ್ಬಳ್ಳಿ, ಹುಯಿಲಹೋಳ, ಮುಳಗುಂದ, ರಾಜೂರು, ಆರೆಕುರಹಟ್ಟಿ, ಕಾಗಿನೆಲೆ, ಹಾನಗಲ್ಲು, ಕಲಕೇರಿ, ಹಾವೇರಿ, ದೇವಿಹೊಸೂರು, ಲಕ್ಷ್ಮೇಶ್ವರ, ಹುಲಗೂರು ಮತ್ತು ಚೌಡದಾನಪುರದ ಶಾಸನಗಳಲ್ಲಿ ಇವರ ಉಲ್ಲೇಖ ಬರುವುದು. ಮುಮ್ಮರಿದಂಡರು ವ್ಯಾಪಾರ ಧರ್ಮಕ್ಕೆ ಬದ್ಧರಾದುದರಿಂದ ಅವರನ್ನು "ಸಮಯ ಮುಮ್ಮರಿದಂಡಂ"

ಎಂದು ಶಾಸನದಲ್ಲಿ (ಹರಿಹರ, ಕ್ರಿ.ಶ. 1280 ) ಉಲ್ಲೇಖಿಸಲಾಗಿದೆ. ಇವರು ಹಲವು ಶಾಸನಗಳಲ್ಲಿ ತಮ್ಮನ್ನು 'ಅಯ್ಯವೊಳೆ ಐನೂರ್ವರ' ವಂಶದವರೆಂದು ಹೇಳಿಕೊಂಡಿರುವರು.

ವಿವಿಧ ವ್ಯಾಪಾರಿ ಸಮುದಾಯಗಳಲ್ಲಿ ವಡ್ಡ ವ್ಯವಹಾರಿಗಳನ್ನು ಹಿರಿಯರು, ವೃದ್ಧರು, ದೊಡ್ಡವರೆಂದು ಗೌರವಿಸಲಾಗುತ್ತಿತ್ತು. ಈ ಬಗೆಯ ವರ್ತಕ ಸಮುದಾಯದಲ್ಲಿ ಅನೇಕರು ರಾಜಪೂಜಿತರು, ರಾಜಾನುಗ್ರಹಯುಕ್ತರು ಆಗಿರುತ್ತಿದ್ದರು. ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಈ ಬಗೆಯ ವರ್ತಕರು ಸಂಖ್ಯೆಯಲ್ಲಿ ವಿರಳವಾಗಿದ್ದರೆ ಯಾದವ ಮತ್ತು ಹೊಯ್ಸಳರ ಕಾಲದಲ್ಲಿ ಇವರು ಬಹುಸಂಖ್ಯೆಯಲ್ಲಿ ಇದ್ದುದಾಗಿ ಶಾಸನಗಳಿಂದ ತಿಳಿದು ಬರುವುದು. ಇವರು ರಾಜಕೀಯವಾಗಿ ಬಹು ಪ್ರಭಾವಶಾಲಿಗಳಾಗಿದ್ದರು. ಇವರಲ್ಲಿ ಶೈವ ಮತ್ತು ಜೈನಮತೀಯರನ್ನು ಕಾಣಬಹುದು. ಕ್ರಿ.ಶ. 1054 ರಿಂದ 1427 ರ ವರೆಗಿನ ಶಾಸನಗಳು ಈ ವಡ್ಡ ವ್ಯವಹಾರಿಗಳ ಬಹುಮುಖದ ಪರಿಚಯವನ್ನು ಮಾಡಿಕೊಡುವವು. ಈ ಜಿಲ್ಲೆಯ ಗುತ್ತಲದ ಕ್ರಿ.ಶ. 1162 ರ ಶಾಸನ, ಹಿರೇಕೋಣತಿ (ತಾ।। ಹಿರೇಕೆರೂರು)ಯ 1271 ರ ಶಾಸನ, ಹರಳಹಳ್ಳಿ (ತಾ।। ಹಾವೇರಿ)ಯ ಯಾಧವನ ಸಿಂಘಣನ ಕಾಲದ ಶಾಸನ, ರೋಣ ತಾಲೂಕಿನ ರಾಜೂರು (ಕ್ರಿ.ಶ. 1033) ಮತ್ತು ಹನುಮನಹಾಳದ (ಕ್ರಿ.ಶ. 1099 ರ) ಶಾಸನ, ಸಂಶಿಯ ಕ್ರಿ.ಶ. 1144 ರ ಶಾಸನಗಳಲ್ಲಿ ಈ ವಡ್ಡ ವ್ಯವಹಾರಿಗಳ ಬಗ್ಗೆ ಉಲ್ಲೇಖಿಸಲಾಗಿದೆ. ಕ್ರಿ.ಶ. 1180 ರ ನರೆಗಲ್ಲಿನ ಶಾಸನ ಸ್ಥಳೀಯ ಕೇಶವಯ್ಯನು 'ಮಹಾವಡ್ಡ ವ್ಯವಹಾರಿ'ಯಾಗಿದ್ದನೆಂದು ವಿವರಿಸುವುದು. ವೈದಿಕ ವಡ್ಡ ವ್ಯವಹಾರಿಗಳು ತಮ್ಮನ್ನು "ಶ್ವೇತಕುಲ ವೈಶ್ಯರೆಂದು" ಹೇಳಿಕೊಂಡರೆ ಶೈವ ವಡ್ಡ ವ್ಯವಹಾರಿಗಳು ತಮ್ಮನ್ನು "ಕುಬೇರ ವಂಶಾನ್ವಯ" ಹಾಗೂ "ಪಂಚಮ ವಂಶದವರೆಂದು" ಕರೆದುಕೊಂಡಿರುವರು. ಗುತ್ತಲ ಮತ್ತು ಹಿರೇಕೆರೂರಿನ ಕ್ರಿ.ಶ. 1162 ಮತ್ತು 1271 ರ ಶಾಸನಗಳು ಜೈನ ಮತದ ವಡ್ಡ ವ್ಯವಹಾರಿಗಳನ್ನು ಕುರಿತು ವಿವರಿಸುತ್ತವೆ.

ಇಂದಿನಂತೆ ಪ್ರಾಚೀನ ಮತ್ತು ಮಧ್ಯಕಾಲೀನ ಯುಗದಲ್ಲಿಯೂ ಈ ಜಿಲ್ಲೆಯು ದಕ್ಷಿಣ ಭಾಗ ವಿಳ್ಯದ ಎಲೆಯ ವ್ಯವಸಾಯ ಮತ್ತು ಅದರ ವ್ಯವಸ್ಥಿತ ಮಾರಾಟಕ್ಕೆ ಪ್ರಸಿದ್ಧವಾಗಿತ್ತಲ್ಲದೇ ಈ ವೃತ್ತಿ ನಿರತರು ತಮ್ಮದೇ ಆದ ಪ್ರಭಾವಶಾಲಿ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡಿರುವುದಾಗಿ ಶಾಸನಗಳಿಂದ ತಿಳಿದು ಬರುವುದು. ವಿಳ್ಯದೆಲೆಯ ವರ್ತಕರಲ್ಲಿ ಗವರೆ, ಗಾತ್ರಿಗ, ತಂಬುಲಿಗರು ಎಂಬ ಪಂಗಡಗಳು ಇದ್ದುದಾಗಿ ತಿಳಿದು ಬರುವುದು. ದೇವರ ಹುಬ್ಬಳ್ಳಿಯ ಕ್ರಿ.ಶ. 1206 ರ ಶಾಸನ, ಹನುಮನಹಾಳದ ಕ್ರಿ.ಶ. 1099 ರ ಶಾಸನ, ಹಾವೇರಿಯ ಕ್ರಿ.ಶ. 1109 ರ ಶಾಸನ, ಸಂಶಿಯ ಕ್ರಿ.ಶ. 1144 ರ ಶಾಸನ, ಕಾಗಿನೆಲೆಯ ಕ್ರಿ.ಶ. 1072 ರ ಶಾಸನಗಳು ವೀಳ್ಯದೆಲೆಯ ವ್ಯಾಪಾರಸ್ಥರನ್ನು ಕುರಿತು ವ್ಯಾಪಕವಾಗಿ ವಿವರಿಸುತ್ತವೆ. ಎಲೆಕೀಳುವವರು 'ಉಗುರ ಮುನ್ನೂರ್ವರು' ಎಂಬ ಶ್ರೇಣಿಯನ್ನು ಹೊಂದಿದ್ದರು.

ನಾನಾದೇಶಿ ಹಾಗೂ ಉಭಯ ನಾನಾದೇಶಿ ಎಂಬ ವರ್ತಕರು ಸಾಮಾನ್ಯವಾಗಿ ಹಲವು ಬಗೆಯ ಸರಕು ಹೇರಿಕೊಂಡು ವಿವಿಧ ಭಾಗಗಳಿಗೆ ಸಂಚರಿಸಿ ಅಲ್ಲಿ ಅವುಗಳ ಮಾರಾಟ ಮಾಡುತ್ತಿದ್ದರು ಮತ್ತು ಆಯಾ ಪ್ರದೇಶದಲ್ಲಿ ಉತ್ಪಾದನೆಯಾಗುತ್ತಿದ್ದ ವಸ್ತುಗಳನ್ನು ಕೊಳ್ಳುತ್ತಿದ್ದರು. ಇವರು ಕ್ರಯ-ವಿಕ್ರಯ ಎರಡರಲ್ಲಿಯೂ ತಮ್ಮನ್ನು ತೊಡಗಿಸಿಕೊಂಡವರಾಗಿದ್ದರು. ಈ ಜಿಲ್ಲೆಯಲ್ಲಿ ಇವರ ಪ್ರಭಾವ ಹೆಚ್ಚಾಗಿ ಇದ್ದಂತೆ ಶಾಸನಗಳಿಂದ ತಿಳಿದು ಬರುವುದಿಲ್ಲ. ಕೇವಲ ಕೆಲವೊಂದು ಶಾಸನಗಳಲ್ಲಿ ಅಂದರೆ ಕ್ರಿ.ಶ.1166 ರ ಹುಯಿಲಗೋಳ ಶಾಸನ, ಲಕ್ಕುಂಡಿಯ ಕ್ರಿ.ಶ.1179 ರ ಶಾಸನ, ಸಾತೇನಹಳ್ಳಿಯ ಕ್ರಿ.ಶ.1241 ರ ಶಾಸನ ಧಾರವಾಡದ ಕ್ರಿ.ಶ.1207 ರ ಶಾಸನ ಮತ್ತು ಹಾವೇರಿಯ ಒಂದು ಶಾಸನದಲ್ಲಿ ಮಾತ್ರ ಈ ವರ್ತಕರನ್ನು ಕುರಿತು ಪ್ರಸ್ತಾಪಿಸಲಾಗಿದೆ.

### ವ್ಯಾಪಾರದ ಪ್ರಮುಖ ಕೇಂದ್ರಗಳು

ಪ್ರಾಚೀನ ಪ್ರಮುಖ ವ್ಯಾಪಾರ ಪಟ್ಟಣಗಳನ್ನು ಶಾಸನಗಳಲ್ಲಿ 'ಆದಿ ಬಣಂಜು ಪಟ್ಟಣ', 'ಅನಾದಿ ಬಣಂಜು ಪಟ್ಟಣ', 'ವೀರ ಬಣಂಜು ಪಟ್ಟಣ', 'ಮಹಾಪಟ್ಟಣ', 'ಪೇಂಠೆದಾಣ', 'ಹೆಗ್ಗಡೆ ಮನೆ', 'ಮಳಿಗೆ ಮನೆ' ಎಂಬ ವಿಶೇಷಣಗಳಿಂದ ಕರೆಯಲಾಗಿದೆ. ಧಾರವಾಡ ಜಿಲ್ಲೆಯ ಹುಬ್ಬಳ್ಳಿ, ಹುಯಿಲಗೋಳ, ಸಾತೇನಹಳ್ಳಿ, ಹಿರೇಕೆರೂರು, ಕಲಕೇರಿ, ಅಣ್ಣಿಗೇರಿ, ಮೇವುಂಡಿ, ಹುಲಗೂರು, ಮುಳಗುಂದ, ಮುಂತಾದವುಗಳು ಪ್ರಧಾನ ವ್ಯಾಪಾರ ಕೇಂದ್ರಗಳಾಗಿದ್ದವು ಎಂದು ಸಮಕಾಲಿನ ಶಾಸನದಿಂದ ವ್ಯಕ್ತವಾಗುವುದು.

ಸಮಾಜದಲ್ಲಿ ರಾಜಕೀಯದಲ್ಲಿ, ಸ್ಥಳೀಯ ಆಡಳಿತದಲ್ಲಿ, ವರ್ತಕರು ಅನೇಕ ಅಧಿಕಾರಗಳನ್ನು ಹೊಂದಿರುತ್ತಿದ್ದರು. ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತಿದ್ದರು. ಹುಯಿಲಗೋಳದ ಕ್ರಿ.ಶ.1166 ರ ಶಾಸನವು ಸ್ಥಳೀಯ ವರ್ತಕರು ಪಟ್ಟಣ ಪ್ರಭು

ಆಗಿದ್ದರೆಂದು ತಿಳಿಸುವುದು. ವ್ಯಾಪಾರಕ್ಕಾಗಿ ಪರಸ್ಥಳಕ್ಕೆ ಹೋದ ವರ್ತಕರನ್ನು ಆಯಾ ಗ್ರಾಮ ಅಥವಾ ಪ್ರದೇಶದ ಪುರ ಪ್ರಮುಖರು ವೀಳ್ಯದೆಲೆ ಉಡುಗೊರೆಯೊಂದಿಗೆ ಬರಮಾಡಿಕೊಳ್ಳುತ್ತಿದ್ದರು. ಚಾಳುಕ್ಯ ಇಮ್ಮಡಿ ಜಗದೇಕಮಲ್ಲನ ಕಾಲದ ಧರ್ಮಪೊಳಲ (ಡಂಬಳದ ಕ್ರಿ.ಶ.1095-96) ಶಾಸನ 16 ಜನ ಸೆಟ್ಟಿಯರಿಗೆ ಸತ್ತಿಗೆ, ಚಾಮರ, ಶಾಸನಗಳನ್ನು ನೀಡಿ ಗೌರವಿಸಿದ ಬಗ್ಗೆ ವಿವರಣೆಯನ್ನು ನೀಡುವುದು. ಪಟ್ಟಣಗಳಲ್ಲಿ ಸಾರ್ವಜನಿಕವಾಗಿ ದಾನ, ದೇವಕಾರ್ಯಗಳಿಗೆ ದತ್ತಿ ನೀಡುವ ಸಂದರ್ಭಗಳಲ್ಲಿ ಸಮಾಜದ ವಿವಿಧ ವರ್ಗದ ಜನ, ಅಧಿಕಾರಿ, ಸಂಘಸಂಸ್ಥೆಯ ಜೊತೆಗೆ ಸ್ಥಳೀಯ ವರ್ತಕರ ಅನುಮತಿಯನ್ನು ಅವಶ್ಯ ಪಡೆಯುತ್ತಿದ್ದರು. ಮಹಾಮಂಡಲೇಶ್ವರ ಹೆಮ್ಮಾಡಿಯ ಅರಸ ಧರ್ಮಪೊಳಲದ 16 ಜನ ಸೆಟ್ಟಿಯರಿಗೂ, ಮಹಾನಕರರಿಗೂ ಪಾದ ಪೂಜೆ ಸಲ್ಲಿಸಿ ಭೂಮಿ ಖರೀದಿಸಿ ಅಜ್ಜಮೇಶ್ವರ ದೇವಾಲಯಕ್ಕೆ ದತ್ತಿಯನ್ನು ಬಿಟ್ಟ ವಿಷಯ ಕ್ರಿ.ಶ.1124 ರ ಡಂಬಳ ಶಾಸನದಲ್ಲಿದೆ. ಇದಲ್ಲದೇ ವೃತ್ತಿ, ಆಸ್ತಿ ವ್ಯಾಜ್ಯದ ಇತ್ಯರ್ಥದ ಸಮಯದಲ್ಲಿಯೂ ಇತರರೊಂದಿಗೆ ವರ್ತಕರ ಸಾನಿಧ್ಯ ಅನಿವಾರ್ಯವೆನಿಸಿದ್ದಿತು.

**ವರ್ತಕರ ಸಂಘಗಳು:** ಇಂದಿನಂತೆ ಹಿಂದಿನ ಕಾಲದಲ್ಲಿಯೂ ವಿವಿಧ ವೃತ್ತಿ ಮತ್ತು ವ್ಯಾಪಾರ ನಿರತ ವರ್ತಕರ ಸಮುದಾಯ ತಮ್ಮ ವೈಯಕ್ತಿಕ ಮತ್ತು ಸಮುದಾಯದ ಹಿತರಕ್ಷಣೆಗೋಸ್ಕರ ತಮ್ಮದೇ ಆದ ಸ್ವಯಂ ಪ್ರೇರಿತ ವರ್ತಕ ಸಂಘಗಳನ್ನು ರಚಿಸಿಕೊಂಡ ಉದಾಹರಣೆಗಳು ಸಮಕಾಲೀನ ಶಾಸನಗಳಲ್ಲಿ ವಿಪುಲವಾಗಿ ದೊರೆಯುವವು. ಶ್ರೇಣಿ, ಕೊಟ್ಟಳಿ, ಹಿಟ್ಟು, ಸಮಯ, ಸೇಣಿ ಇತ್ಯಾದಿ ಪದಗಳು ವ್ಯಾಪಾರಿ ಸಂಘಗಳಿಗೆ ಬಳಕೆಯಾಗಿವೆ. ಇವುಗಳಲ್ಲಿ ಸಂಘಸೂಚಿಯಾಗಿ ಸಂಖ್ಯೆಗಳನ್ನು ಅಧಿಕವಾಗಿ ಉಪಯೋಗಿಸಲಾಗಿದೆ. ಲಕ್ಕುಂಡಿ ಶಾಸನ (ಕ್ರಿ.ಶ.1185) ದಲ್ಲಿ 'ಕೊಟ್ಟಳಿ', ಲಕ್ಷ್ಮೇಶ್ವರ (ಕ್ರಿ.ಶ725)ರ ಶಾಸನದಲ್ಲಿ ಸೇಣಿ ಮತ್ತು ಮನಗುಂಡಿಯ ಶಾಸನ (ಕ್ರಿ.ಶ.1221)ದಲ್ಲಿ ಸಂಖ್ಯೆ ಎಂಟನ್ನು ಸಂಘ ಪದಕ್ಕೆ ಪರ್ಯಾಯವಾಗಿ ಉಪಯೋಗಿಸಲಾಗಿದೆ. ಈ ಸಂಘಗಳು ಒಂದೇ ಬಗೆಯಾಗಿರಲಿಲ್ಲ. ಧರ್ಮಬುದ್ಧಿಯಿಂದ ಪ್ರೇರಿತರಾದ ಅನೇಕ ಜನ ವರ್ತಕರು ದೇವಾಲಯಗಳ ನಿರ್ಮಾಣ ಮುಂತಾದ ಅನೇಕ ಧಾರ್ಮಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರೆಂದು ತಿಳಿದು ಬರುವುದು. ಉದಾ: ಏಚಿ ಸೆಟ್ಟಿಯು ಲಕ್ಕುಂಡಿಯ ಅಭಿನವ ಪ್ರಸನ್ನ ಕೇಶವ ದೇವಾಲಯ ಕಟ್ಟಿಸಿದ ಬಗ್ಗೆ ಸ್ಥಳೀಯ ಕ್ರಿ.ಶ.1179 ರ ಶಾಸನದಿಂದ ತಿಳಿದು ಬರುವುದು. ಅದರಂತೆ ಬಮ್ಮಿಶೆಟ್ಟಿಯು ನೂಲಗೇರಿಯ (ತಾ|| ಹಿರೇಕೆರೂರ) ಗವರೇಶ್ವರ ದೇವಾಲಯ (ಕ್ರಿ.ಶ.1109 ರ ಶಾಸನ), ಕಾಗಿನೆಲೆಯ ಕಾಳಸೆಟ್ಟಿ ಬ್ರಹ್ಮೇಶ್ವರ ದೇವಾಲಯ (ಕ್ರಿ.ಶ.1122 ರ ಶಾಸನ), ಸಾತೇನಹಳ್ಳಿಯ ಹರಿಹರದೇವಾಲಯವನ್ನು ವೆಣ್ಣಲ ಸೆಟ್ಟಿಕಪ್ಪೆ ಎಂಬವಳು ಕಟ್ಟಿಸಿದ ಬಗ್ಗೆ ಕ್ರಿ.ಶ.1204 ರ ಶಾಸನಗಳಿಂದ ತಿಳಿದು ಬರುವುದು. ಈ ಜಿಲ್ಲೆಯಲ್ಲಿ ಈ ಮೇಲಿನ ಎಲ್ಲಾ ವಿಧದ ವರ್ತಕ ಸಂಘಗಳು ಇದ್ದುದಾಗಿ ಶಾಸನಗಳು ವಿವರಿಸುತ್ತಿವೆ. 'ತಂಬುಲಿಗ ಸಾಸಿರ್ವರು', ಎನ್ನುವ ವರ್ತಕ ಸಮುದಾಯ ವೀಳ್ಯದ ಎಲೆ ಮಾರುವವರ ಸಂಘವನ್ನು ಸೂಚಿಸುವುದು. ಎಲೆ ಮಾರುವವರ ಸಂಘಗಳನ್ನು ದೇವರಹುಬ್ಬಳ್ಳಿಯ 1206 ರ ಶಾಸನದಲ್ಲಿ 'ಎಲೆಯ ಬೋಜಂಗರು' ಎಂದು ವಿವರಿಸಿದೆ. ಧಾರವಾಡ ತಾಲೂಕಿನ ಮನಗುಂಡಿಯ ಕ್ರಿ.ಶ.1215-17 ರ ಶಾಸನ, ಕುಂದಗೋಳ ತಾಲೂಕಿನ ಸಂಶಿ ಗ್ರಾಮದ 1145ರ ಶಾಸನ, ತಂಬುಲಿಗ ಸಾಸಿರ್ವರ ಸುಬುದ್ಧಿ, ಮಹಿಮೆ, ಧರ್ಮಾಚಾರ, ಔದಾರ್ಯ, ಸಚ್ಚಾರಿತ್ರ್ಯ, ಧರ್ಮಬುದ್ಧಿ, ಪರೋಪಕಾರ, ದಯೆ, ಸತ್ಯನಿಷ್ಠೆ ಮುಂತಾದ ವಿಶೇಷ ಗುಣಗಳನ್ನು ಕುರಿತು ವಿವರಿಸುವವು.

ಶಾಸನಗಳಲ್ಲಿ ಉಲ್ಲೇಖಿತವಾಗಿರುವಂತೆ ಹೆಬ್ಬುರು (ಶಿಗ್ಗಾಂವಿ 911), ರಾಜೂರು, ಹನುಮನಹಾಳ, ಬಾಳಂಬೀಡು, ಕಾಗಿನೆಲೆ, ಕೋಡಿಕೊಪ್ಪ (ತಾ|| ರೋಣ), ಸಂಶಿ, ಹರತಿ, ಮನಗುಂಡಿ, ದೇವರ ಹುಬ್ಬಳ್ಳಿ, ಕಳಕಪ್ಪನಗುಡ್ಡ (ತಾ||. ರೋಣ), ಸೊರಟೂರು, ಶಿರೋಳ (ತಾ|| ಗದಗ), ಇವುಗಳು ತುಂಬುಲಿಗ ಸಾಸಿರ್ವರ ಪ್ರಮುಖ ವ್ಯಾಪಾರ ಕೇಂದ್ರಗಳಾಗಿದ್ದವು. ಮಾಲೆಗಾರರರು (ಹೂಗಾರರು) ಸಹ ತಮ್ಮದೇ ಆದ ಸಂಘಗಳನ್ನು ರಚಿಸಿಕೊಂಡ ಬಗ್ಗೆ ಮುಳಗುಂದದ ಕ್ರಿ.ಶ.1062ರ ಶಾಸನ 'ತೋಟಿಗರೈನೂರ್ವರು' ಎಂದು ವಿವರಿಸುವುದು. ಅದರಂತೆ ಧಾರವಾಡದ ಕ್ರಿ.ಶ.1215 ರ ಮತ್ತು ಕಾಗಿನೆಲೆಯ ಕ್ರಿ.ಶ.1145 ರ ಶಾಸನಗಳು ಆಯಾ ಗ್ರಾಮದ ತೋಟಿಗರನ್ನು ಕುರಿತು ಉಲ್ಲೇಖಿಸುವವು. 'ಗಳೆ ಮುನ್ನೂರ್ವರು' ಹಣ್ಣುಕೊಯ್ಯುವವರ ಸಂಘವಾಗಿತ್ತು.

**ಅಯ್ಯಾವೊಳೆ ಐನೂರ್ವರು:** ಬಾದಾಮಿಯ ಚಾಳುಕ್ಯರ ಕಾಲದಲ್ಲಿ (ಕ್ರಿ.ಶ.535-757) ತುಂಬಾ ಪ್ರವೃದ್ಧಮಾನದಲ್ಲಿದ್ದು ಅನೇಕ ಬಗೆಯ ವ್ಯಾಪಾರಸ್ಥರನ್ನು ಒಳಗೊಂಡಿದ್ದ, ವ್ಯಾಪಕ ಶಾಖೆಗಳನ್ನು ಒಳಗೊಂಡಿದ್ದ ಸಂಯುಕ್ತ ಮಾದರಿಯ ಈ ವ್ಯಾಪಾರಿ ಸಂಘವು ಕಾಲ ಕ್ರಮೇಣ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು. ವಿಭಿನ್ನ ಜಾತಿ ಮತದ ಈ ವರ್ತಕ ಸಂಘದ ಸದಸ್ಯರು ಬೇರೆ ಬೇರೆ ಭಾಗಗಳಲ್ಲಿ ನೆಲೆಸಿದ್ದರೂ ಈ ಹೆಸರಿನಿಂದ ತಮ್ಮನ್ನು ಗುರುತಿಸಿಕೊಂಡಿರುವುದು ಈ ವಣಿಕ ಸಂಸ್ಥೆಯ ವಿಶೇಷತೆ. ಧಾರವಾಡ ಜಿಲ್ಲೆಯ ಈ

ಮುಂದಿನ ಶಾಸನಗಳಲ್ಲಿ ಅಯ್ಯವೊಳೆ ಐನೂರ್ವರ ಉಲ್ಲೇಖ ಬರುವುದು: ಹಾನಗಲ್ಲ (ಕ್ರಿ.ಶ. 1121ಶಾಸನ), ಲಕ್ಷ್ಮೇಶ್ವರ (ಕ್ರಿ.ಶ.1132 ಮತ್ತು 1153), ರಾಜೂರು (ಕ್ರಿ.ಶ.1033), ಬಾಳಂಬೀಡು (ಕ್ರಿ.ಶ.1165), ಮುಂತಾದವುಗಳು. ಅಯ್ಯಾವೊಳೆ ವರ್ತಕರು ತಮ್ಮದೇ ಆದ ವರ್ತಕ ಸಂಹಿತೆಯನ್ನು (ಗುಡ್ಡಶಾಸ್ತ್ರ ಕ್ರಮ) ಅನುಸರಿಸುತ್ತಿದ್ದ ಬಗ್ಗೆ ಶಾಸನಗಳಿಂದ ತಿಳಿದು ಬರುವುದು. ಸದರಿ ವರ್ತಕರು ಗುಡ್ಡದಜ, ಗರುಡಧ್ವಜ ಮತ್ತು ಚಕ್ರಧ್ವಜಗಳನ್ನು ಹೊಂದಿದ್ದರು.

**ಮಧ್ಯಯುಗದಲ್ಲಿ**

ಮಧ್ಯಯುಗದಲ್ಲಿ ಕೂಡ ಈ ವ್ಯಾಪಾರ ಕ್ರಮಬದ್ಧವಾಗಿ ಬೆಳೆಯಿತು. ವಿಜಯನಗರದ ಕಾಲದಲ್ಲಿ, ಕರಾವಳಿಯಲ್ಲಿ ಪಾಶ್ಚಾತ್ಯರ ಆಗಮನದಿಂದ ಜಿಲ್ಲೆಯ ವ್ಯಾಪಾರಕ್ಕೆ ಹೆಚ್ಚಿನ ಚಾಲನೆ ಸಿಕ್ಕಿತು. ರಾಯರ ಹುಬ್ಬಳ್ಳಿ (ಹಳೇ ಹುಬ್ಬಳ್ಳಿ) ಒಂದು ಪ್ರಮುಖ ಕೇಂದ್ರವಾಗಿ ಅಲ್ಲಿಂದ ಸೋರುಪ್ಪು, (ಪೊಟೆಶಿಯಂ ನೈಟ್ರೇಟ್), ಕಬ್ಬಿಣಗಳ ವ್ಯಾಪಾರ ವಿಶೇಷವಾಗಿ ನಡೆಯುತ್ತಿತ್ತೆಂದು ಪೋರ್ತುಗೀಸ್ ದಾಖಲೆ ಹೇಳಿದೆ (1547). ಹತ್ತಿ ಉತ್ಪಾದನೆ ಮತ್ತು ನೇಕಾರಿಕೆ ಉಚ್ಛಾಯ ಸ್ಥಿತಿಯಲ್ಲಿದ್ದು ಈಗಿನ ಕಾರವಾರ ಬಳಿಯ ಕಡವಾಡದಲ್ಲಿ ಬ್ರಿಟಿಷರು ಒಂದು ಮಳಿಗೆ ಸ್ಥಾಪಿಸಿ ಇಲ್ಲಿಂದ 50,000ಮಗ್ಗಗಳಿಂದ ಬಟ್ಟೆ ಖರೀದಿಸುವ ಒಪ್ಪಂದ ಮಾಡಿಕೊಂಡರು. ಹುಬ್ಬಳ್ಳಿಯಲ್ಲೂ ಅವರ ಒಂದು ಮಳಿಗೆ ಇತ್ತು. ಆಗ ಈ ಪ್ರದೇಶ ಆದಿಲ್‌ಷಾಹಿಗಳ ರಾಜ್ಯದಲ್ಲಿ ಇತ್ತು. ಶಿವಾಜಿಯ ಸೇನಾನಿ ಅಣ್ಣಾಜಿ ದತ್ತೊ ಹುಬ್ಬಳ್ಳಿಯನ್ನು 1673ರಲ್ಲಿ ಸುಲಿಯಲು ಇಲ್ಲಿಯ ವ್ಯಾಪಾರ ಸಮೃದ್ಧಿಯೇ ಕಾರಣ. ಸವಣೂರು ನವಾಬರ ಕಾಲದಲ್ಲಿ ಅಣ್ಣಿಗೇರಿಯಲ್ಲಿ ಒಂದು ಹೊಸ ವ್ಯಾಪಾರೀ ಪೇಟೆ ಸ್ಥಾಪನೆಯಾಯಿತು. ಹೊಸ ಹುಬ್ಬಳ್ಳಿ 1727ರಲ್ಲಿ ಹುಟ್ಟಿಕೊಂಡಿತು. 1753ರಲ್ಲಿ ಧಾರವಾಡ, ಹುಬ್ಬಳ್ಳಿಗಳು ಪೇಶ್ವೆಯರ ವಶವಾದಾಗಲೂ ಇಲ್ಲಿನ ವಾಣಿಜ್ಯ ಮುಂದುವರಿಯಿತು. ಧಾರವಾಡ, ಹಾವೇರಿ ಮುಂತಾದ ಕಡೆ ಹೊಸ ವ್ಯಾಪಾರೀ ಪೇಟೆಗಳು ಪೇಶ್ವೆಯರ ಕಾಲದಲ್ಲಿ ಆದವು. ಹಾವೇರಿ, ಬ್ಯಾಡಗಿಗಳು ಕುಮಟಾ ಬಂದರಿನ ಜೊತೆ ವ್ಯಾಪಾರ ಸಂಬಂಧ ಹೊಂದಿದ್ದವು. ಧಾರವಾಡ, ಹುಬ್ಬಳ್ಳಿ, ಕಲಘಟಗಿ, ಮಿಶ್ರಿಕೋಟಿಗಳು ಕದ್ರಾವರೆಗೆ ಕಾಲುದಾರಿಯಿಂದ ಹೇರನ್ನು ಸಾಗಿಸಿ ಕಾಳಿ ನದೀಯಿಂದ ಸದಾಶಿವಗಡ ಮೂಲಕ ಸಮುದ್ರ ವಾಣಿಜ್ಯ ಹೊಂದಿದ್ದವು. ಪೇಶ್ವೆಯರ ಕಾಲದಲ್ಲಿ ಮಾರವಾಡಿಗಳೂ ಗುಜರಾತಿಗಳೂ ಹುಬ್ಬಳ್ಳಿ, ಧಾರವಾಡ, ಗದುಗುಗಳಿಗೆ ವ್ಯಾಪಾರಕ್ಕೆ ಬರುವುದು ಹೆಚ್ಚಿತು. ರಟ್ಟಿಹಳ್ಳಿಯಿಂದ ಕುಮಟಾ ಬಂದರಿಗೆ 12,000 ಎತ್ತಿನ ಹೇರಿನಷ್ಟು ತಂಬಾಕು, ಹತ್ತಿ, ಅಕ್ಕಿ, ಕಬ್ಬಿಣ ಪ್ರತೀವರ್ಷ ಹೋಗುತ್ತಿತ್ತು.

1800 ರಲ್ಲಿ ಬುಕನನ್ ಹೇಳುವಂತೆ ಅಗಡಿ, ಧಾರವಾಡ, ಹುಬ್ಬಳ್ಳಿ, ನವಲಗುಂದ, ನರಗುಂದ ಮುಂತಾದ ಊರುಗಳ ವ್ಯಾಪಾರಿಗಳು ಬೆಂಗಳೂರಿಗೆ ಹತ್ತಿ, ಹತ್ತಿಬಟ್ಟೆ, ಧೋತರ, ಕಂಬಳಿ, ಗೋಧಿ, ಇಂಗುಗಳನ್ನು ಹೈದರ್, ಟಿಪ್ಪುವಿನ ಕಾಲದಿಂದಲೂ ಬೆಂಗಳೂರಿಗೆ ಒಯ್ಯುತ್ತಿದ್ದರು. ಬ್ರಿಟಿಷರ ಆಗಮನಾನಂತರವೂ ಕೇವಲ ಕಾಲುದಾರಿಯಿಂದ ನಡೆಯುತ್ತಿದ್ದ ವ್ಯಾಪಾರವು 1853 ರ ನಂತರ ಆದ ಸರ್ವಋತು ರಸ್ತೆಗಳಿಂದ ಮತ್ತು 19 ನೇಯ ಶತಮಾನದ ಕೊನೆಗೆ ಬಂದ ರೈಲುಗಳಿಂದ ಹೆಚ್ಚಿತು.

ಪೇಶ್ವೆಯ ಕಾಲದ ವಾರದ ಸಂತೆಗಳು ಧಾರವಾಡದಲ್ಲಿ ಹಾವೇರಿ ಪೇಟೆ, ಮಂಗಳವಾರ ಪೇಟೆ, ಶುಕ್ರವಾರಪೇಟೆ , ಸದಾಶಿವಪೇಟೆ (ಈಗಿನ ರವಿವಾರ ಪೇಟೆ) ಇಲ್ಲೆಲ್ಲ ನಡೆಯುತ್ತಿತ್ತು. ಇದಕ್ಕೆ ವ್ಯಾಪಾರಿಗಳ ಜೊತೆ ಕೌಲ್ (ಒಪ್ಪಂದ) ಮಾಡಿಕೊಂಡಿದ್ದರು. ರಸ್ತೆಗಳಲ್ಲಿ ಸರಕಿನ ಸುಂಕ (ಜಕಾತಿ) ವಸೂಲಿಗೆ ಗುತ್ತಿಗೆದಾರರನ್ನು ನೇಮಿಸುತ್ತಿದ್ದರು. ಸವಣೂರು, ಹಂಸಭಾವಿ ತಿಳುವಳ್ಳಿ, ಚಿಕ್ಕಬಾಸೂರು, ಕಾಗಿನೆಲೆ, ತೇಗೂರು, ಚಿಕ್ಕೆರೂರು, ಕರಜಗಿ, ದೇವಿಹೊಸೂರು, ಕಲಕೇರಿ, ಹುಲಗೊಪ್ಪ, ಗುತ್ತಲ, ಅಣ್ಣಿಗೇರಿ, ರಾಣೆಬೆನ್ನೂರು, ಗದಗ, ಪ್ರಮುಖ ವಾಣಿಜ್ಯ ಕೇಂದ್ರಗಳು. ಕಲಘಟಗಿಗೆ ಗೋವಾದ ಜೊತೆ ಸಂಬಂಧವಿದ್ದು ಗೋವಾದಿಂದ ಉಪ್ಪು, ಕೊಬ್ಬರಿ ಎಣ್ಣೆ, ತೆಂಗಿನಕಾಯಿ, ಗೋಡಂಬಿ ಬರುತ್ತಿದ್ದು ಇಲ್ಲಿಂದ ಮುಖ್ಯವಾಗಿ ಅಕ್ಕಿ, ಹತ್ತಿ, ಬಟ್ಟೆ ಗೋವೆಗೆ ಹೋಗುತ್ತಿದ್ದು, ಡಿಗ್ಗಿ ಕಣಿವೆಯ ಮಾರ್ಗ 10ದಿನದ್ದೂ, ತಳೇವಾಡಿ ಕಣಿವೆಯ ಮಾರ್ಗ 16ದಿನಗಳದ್ದೂ ಆಗಿದ್ದು ಎಲ್ಲ ಸಾಗಿಕೆ ಹೇರು ಪ್ರಾಣಿಗಳಿಂದ ಆಗುತ್ತಿತ್ತು.ಗೋವೆಯಲ್ಲಿ ಮಣಕ್ಕೆ ಒಂದಾಣೆ ಇದ್ದ ಉಪ್ಪು ಇಲ್ಲಿ ಒಂದು ಕಾಲು ರೂ. ಬೆಲೆ ಬಾಳುತ್ತಿತ್ತು. ದಾರಿಯಲ್ಲಿ ಕೊಡಬೇಕಾದ ಜಕಾತಿಗಳೂ ಈ ಬೆಲೆ ಹೆಚ್ಚಳಕ್ಕೆ ಕಾರಣ. ಪ್ರತೀ ವರ್ಷ 5000 ಮಣ ಉಪ್ಪು ಕಲಘಟಗಿಗೆ ಬರುತ್ತಿತ್ತು. ಹುಲಿಗೊಪ್ಪದ ಸಂತೆಗೆ ಜಮಖಂಡಿ, ರಾಮದುರ್ಗಗಳಿಂದ ಅಕ್ಕಿ ಖರೀದಿಗೆ ವರ್ತಕರು ಬರುತ್ತಿದ್ದರು.

ಧಾರವಾಡದ ವರ್ತಕರ ಇಚ್ಛೆಯಂತೆ ಧಾರವಾಡದಲ್ಲಿ ಪೇಶ್ವೆಯರು ಮುರುಘಾ ಮಠ ಕಟ್ಟಲು ನಿವೇಶನ ಮತ್ತು ತೆರಿಗೆ ವಿನಾಯತಿ ನೀಡಿದರು. ಪೇಟೆಯ ಅಭಿವೃದ್ಧಿಗೆ 'ಪೋತದಾರ' ಎಂಬ ಅಧಿಕಾರಿಯನ್ನು ನೇಮಿಸಿದ್ದರಲ್ಲದೆ ವರ್ತಕರಿಗೆ ರೂ.25,000 ದ ವರೆಗೆ ಎರಡು ವರ್ಷಗಳ ಸಾಲವನ್ನು ಪೇಶ್ವೆಯರ ಕಾಲದಲ್ಲಿ ನೀಡಲಾಗುತ್ತಿತ್ತು. ಧಾರವಾಡದ ಹಾವೇರಿ ಪೇಟೆಯು ಶ್ರೀಮಂತ ಲಿಂಗಾಯತ ವ್ಯಾಪಾರಿಗಳ ಕೇಂದ್ರವಾಗಿ ಅದು 'ಧಾರವಾಡ ಪಟ್ಟಣದ ಖಜಾನೆ' ಎಂದು ವರ್ಣಿತವಾಗಿತ್ತು. ನೆರೆಯ ಸವಣೂರು, ಬಿದನೂರು, ಸೋಂದೆ, ಗಜೇಂದ್ರಗಡಗಳ ಸಂಸ್ಥಾನಿಕರು ಹಾಗೂ ನವಲಗುಂದ, ನರಗುಂದ, ಹುಬ್ಬಳ್ಳಿ, ಮುದ್ದೇಬಿಹಾಳಗಳ ಕಿಲ್ಲೆದಾರರ ಜೊತೆ ಜಕಾತಿಯ ಬಗ್ಗೆ ರಿಯಾಯತಿಯ ಪರಸ್ಪರ ಒಪ್ಪಂದವನ್ನು ಪೇಶ್ವೆಯರು ಮಾಡಿಕೊಂಡಿದ್ದರು. ಜಕಾತಿದರ ಸವಣೂರು ನವಾಬನ ರಾಜ್ಯದಲ್ಲಿದ್ದಷ್ಟೇ ಇತ್ತು. ಹೈದರ್, ಟಿಪ್ಪು ಇವರ ಕೈಗೆ ಧಾರವಾಡ, ಕಿತ್ತೂರುವರೆಗಿನ ಪ್ರದೇಶ ಬಂದು ಇಲ್ಲಿನ ವ್ಯಾಪಾರಕ್ಕೆ ಹೆಚ್ಚಿನ ಚಾಲನೆ ಸಿಕ್ಕರೂ ಮುಂದೆ 18 ನೇಯ ಶತಮಾನ ಕೊನೆಗೆ ಹಾಗೂ 1800 ರ ನಂತರ ಆದ ಅನೇಕ ಯುದ್ಧ ಬಂಡಾಯ ಹಾಗೂ ದಂಡಯಾತ್ರೆಗಳಿಂದ ಕೆಲಮಟ್ಟಿಗೆ ಇಲ್ಲಿನ ವ್ಯಾಪಾರದಲ್ಲಿ ಹಿನ್ನಡೆಯಾಯಿತು. .

ಪೇಶ್ವೆಯರ ಕಾಲದಲ್ಲಿ ರೂಢಿಯಲ್ಲಿದ್ದ 'ಮೋಹತರ್ಫ' (ಸಾಮಾನ್ಯ ವಾಣಿಜ್ಯ ತೆರಿಗೆ) ತೆರಿಗೆಯನ್ನು ಆನುವಂಶಿಕ ಸುಂಕದ ಅಧಿಕಾರಿಗಳು ಅನೇಕ ಕಂತುಗಳ ಮೂಲಕ ವಸೂಲಿನ ಮಾಡುತ್ತಿದ್ದರು. ಇದನ್ನು ಹಳ್ಳಿಯ ಗೌಡ ಅಥವಾ ಕುಲಕರ್ಣಿ ವಸೂಲಿ ಮಾಡುತ್ತಿದ್ದರು. ಆದರೆ ವಸೂಲಿ ಮಾಡುವವರು ಅವರ ಸಂಬಂಧಿಕರು ಸುಂಕ ಕೊಡಬೇಕಾಗಿರಲಿಲ್ಲ. ಸಾಮಾನ್ಯವಾಗಿ ಹೆಚ್ಚು ಸುಂಕವನ್ನು ಕೊಡುವವರು ಶ್ರೀಮಂತ ವರ್ತಕರಾಗಿರುತ್ತಿದ್ದರು. 1762 ರಲ್ಲಿ ಧಾರವಾಡ ಪೇಟೆಯಲ್ಲಿ ಸಂಗ್ರಹಿಸಿದ ಮೋಹತರ್ಫ ರೂ.2,819 ಎಂದು ತಿಳಿದು ಬರುವುದು. ಇವನ್ನು 375 ವಿವಿಧ ವೃತ್ತಿಯ ವ್ಯಕ್ತಿಗಳಿಂದ ಸಂಗ್ರಹ ಮಾಡಲಾಗಿತ್ತು.

### ಆಧುನಿಕ ಕಾಲ

ಬ್ರಿಟಿಷರ ಆಗಮನಾನಂತರ ಅವರ ವಸಾಹತು ಶಾಹಿ ನೀತಿಯಿಂದ ಹಾಗೂ ಸಾರಿಗೆ ಸಂಪರ್ಕಗಳ ವೃದ್ಧಿಯಿಂದ ಹೊಸ ಬಗೆಯ ಬದಲಾವಣೆಗಳು ಆದುವು. ನೂಲುವ, ಕಬ್ಬಿಣದ, ಕಾಗದದ ಕೈಗಾರಿಕೆಗಳು ನಶಿಸಿದರೂ ವಾಣಿಜ್ಯ ಚಟುವಟಿಕೆಗೆ ವ್ಯತ್ಯಯವಾಗಲಿಲ್ಲ. ಅಮೆರಿಕನ್ ಜಾತಿಯ ಉದ್ದ ಎಳೆಯ ಹತ್ತಿಯನ್ನು ಇಂಗ್ಲೆಂಡ್‌ನ ತಮ್ಮ ಗಿರಣಿಗಳಿಗಾಗಿ ಬೆಳೆಯಲು ಅವರು ವಿಶೇಷ ಮುತುವರ್ಜಿ ವಹಿಸಿದರು. ಹತ್ತಿ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಹತ್ತಿಯನ್ನು ಅರೆಯುವ (ಜಿನ್ನಿಂಗ್), ಬೇಲುಕಟ್ಟುವ (ಪ್ರೆಸ್ಸಿಂಗ್) ಮತ್ತು ಹತ್ತಿಬೀಜ ಸಂಸ್ಕರಣೆ ಮುಂತಾದ ವಾಣಿಜ್ಯ ವ್ಯವಹಾರಗಳು ಬೆಳೆಯಲು ಅನೇಕ ವ್ಯಾಪಾರಿ ಕಂಪನಿಗಳು (ಕೂಡು ಬಂಡವಾಳ ಸಂಸ್ಥೆಗಳು) ಮೂಡಿಬಂದವು. ಅಂದಿನ ಸರ್ಕಾರವು 1828 ರಿಂದಲೇ ಈ ಭಾಗದ ಹತ್ತಿಯ ವ್ಯಾಪಾರವನ್ನು ಉತ್ತೇಜಿಸಲು ಅನೇಕ ಕ್ರಮಗಳನ್ನು ಕೈಗೊಂಡಿತ್ತು. 1842 ರಿಂದ ಈ ಭಾಗದಲ್ಲಿ ಅಮೇರಿಕನ್ ಹತ್ತಿಯನ್ನು ಬೆಳೆಯುವ ಪ್ರಯೋಗಗಳನ್ನು ಮಾಡಿ ಅದರಲ್ಲಿ ಯಶಸ್ಸು ಸಾಧಿಸಲಾಯಿತು. ಹತ್ತಿಯ ಉದ್ಯಮದ ಬಹುಮುಖ ಅಧ್ಯಯನವನ್ನು ಕುರಿತಂತೆ 1847 ರಲ್ಲಿ 'ಕಾಟನ್ ಕಮಿಶನ್' ನಿಯಮಿಸಲಾಯಿತು. 1873-83 ರ ದಶಕದಲ್ಲಿ ಧಾರವಾಡ ಜಿಲ್ಲೆಯಿಂದ ವಾರ್ಷಿಕ ಸರಾಸರಿ 9,500 ಟನ್ (ಬೆಲೆ ಸುಮಾರು ರೂ. 45 ಲಕ್ಷ) ಹತ್ತಿ ಇಲ್ಲಿಂದ ಮುಂಬಯಿಗೆ ರಫ್ತಾಗುತ್ತಿತ್ತು. ಮುಂಬಯಿ ಮಾರುಕಟ್ಟೆಗೆ ಧಾರವಾಡ ಜಿಲ್ಲೆಯಿಂದ ಶೇ.68 ಪ್ರಮಾಣದಷ್ಟು ಅಮೇರಿಕನ್ ಹತ್ತಿ ರಫ್ತಾಗುತ್ತಿತ್ತು. ಈ ಉದ್ಯಮಕ್ಕೆ ಹಣಕಾಸಿನ ನೆರವು ನೀಡಿ ಪ್ರೋತ್ಸಾಹಿಸುವ ಉದ್ದೇಶದಿಂದಲೇ 1863 ರಲ್ಲಿ ಧಾರವಾಡದಲ್ಲಿ, 1870 ರಲ್ಲಿ ಹುಬ್ಬಳ್ಳಿಯಲ್ಲಿ ಬೊಂಬಾಯಿ ಪ್ರೆಸಿಡೆನ್ಸಿ ಬ್ಯಾಂಕಿನ ಶಾಖೆಗಳನ್ನು ಪ್ರಾರಂಭಿಸಲಾಯಿತು. 1862 ರಲ್ಲಿ ಅಮೇರಿಕನ್ ಸಿವಿಲ್ ಯುದ್ಧದಿಂದ ಉಂಟಾದ 'ಅರಳೆಯ ಉಬ್ಬರ' (ಕಾಟನ್ ಬೂಮ) ವ್ಯಾಪಾರಿ ವಲಯದಲ್ಲಿ ಮತ್ತು ಬೆಳೆಗಾರರಲ್ಲಿ ಹೆಚ್ಚಿನ ಭರವಸೆಯನ್ನು ಮೂಡಿಸಿತ್ತು. (ವಿವರಕ್ಕೆ ಅಧ್ಯಾಯ 2 ನೋಡಿ). ಈ ಹೆಚ್ಚಳದ ಪರಿಣಾಮ ಕೇವಲ ವಾಣಿಜ್ಯ ಚಟುವಟಿಕೆಗಳಲ್ಲದೇ ಸಾಮಾಜಿಕ ಆರ್ಥಿಕ ವಲಯದಲ್ಲಿಯೂ ತನ್ನ ಪ್ರಭಾವವನ್ನು ಬೀರಿದ್ದಾಗಿ ಕಂಡುಬರುವುದು. ಈ ನಡುವೆ 1876-78, ಮುಂದೆ 1896-97 ರಲ್ಲಿ ಭೀಕರ ಬರಗಾಲದಿಂದ ವಾಣಿಜ್ಯ ಚಟುವಟಿಕೆಗಳಿಗೆ ಹಿನ್ನಡೆ ಉಂಟಾಯಿತು. 1897 ರಲ್ಲಿ ಹುಬ್ಬಳ್ಳಿಯ ಪೇಟೆಯನ್ನು ದುಷ್ಕಾಳದ ಮೂಲಕ ಎರಡು ಸಲ ಲೂಟಿ ಮಾಡಲಾಯಿತು. ಪ್ಲೇಗು ಪೀಡೆ ಕೂಡ ಈ ಕಾಲದಲ್ಲಿ ಸಾಕಷ್ಟು ಹಾವಳಿ ಮಾಡಿತು.

18 ನೇ ಶತಮಾನದಲ್ಲಿ ಯೂರೋಪ್‌ನಲ್ಲಿ ಪ್ರಾರಂಭವಾದ ಕೈಗಾರಿಕಾ ಕ್ರಾಂತಿಯ ಪರಿಣಾಮ, 1860 ರ ನಂತರದ ದಶಕಗಳಲ್ಲಿ ಇಂಗ್ಲೀಷ್ ಕಂಪನಿಯ ಕಾನೂನಿನ ಅನ್ವಯ ಅನೇಕ ಕಂಪನಿಗಳು ಕೂಡು ಬಂಡವಾಳದೊಂದಿಗೆ (ಜಾಯಿಂಟ್ ಸ್ಟಾಕ್) ವ್ಯಾಪಾರ ಉದ್ದಿಮೆಗಳನ್ನು ಪ್ರಾರಂಭಿಸಿದವು. ಇದೇ ಅವಧಿಯಲ್ಲಿ ಸುಸಂಘಟಿತ ಬ್ಯಾಂಕಿಂಗ್ ಉದ್ಯಮಗಳು ನಿಧಾನ ಗತಿಯಲ್ಲಿ ಜಿಲ್ಲೆಯ ವಾಣಿಜ್ಯವನ್ನು ಪ್ರೋತ್ಸಾಹಿಸಿದವು. ಈ ಉದ್ಯಮಗಳು ಸಾರ್ವಜನಿಕರ ಉಳಿತಾಯಗಳನ್ನು ಆಕರ್ಷಿಸಿದವು. 1867 ರಲ್ಲಿ ಜಿಲ್ಲೆಗೆ ಮೊದಲನೆಯದಾಗಿ 'ಧಾರವಾಡ ಕಂಪನಿ' ಎಂಬ ಹೆಸರಿನ ಬಟ್ಟೆಯ-ಆಮದು ರಫ್ತು ಕಂಪನಿಯು ರೂ.40,000 ಬಂಡವಾಳದೊಂದಿಗೆ ಪ್ರಾರಂಭವಾಯಿತು. ಇದೇ ಕಂಪನಿಯ ಒಂದು ಶಾಖೆಯು 1877 ರಲ್ಲಿ ಹುಬ್ಬಳ್ಳಿಯಲ್ಲಿ ಪ್ರಾರಂಭವಾಯಿತು. ಅದರ ಮುಂದಿನ ವರ್ಷ 1878 ರಲ್ಲಿ ಹುಬ್ಬಳ್ಳಿಯಲ್ಲಿ 'ಹುಬ್ಬಳ್ಳಿ ಕ್ಲಾಥ ಕಂಪನಿ' ಎಂಬ ಸ್ವತಂತ್ರ ಕಂಪನಿಯು ರೂ. 22,000 ಬಂಡವಾಳದೊಂದಿಗೆ ಪ್ರಾರಂಭವಾಯಿತು. ಈ ಕಂಪನಿಯು ಯೂರೋಪ್‌ನಿಂದ ಮತ್ತು ಮುಂಬಯಿಯಿಂದ ಯಾಂತ್ರೀಕೃತ ನೂಲನ್ನೂ ಹಾಗೂ ಬೆಂಗಳೂರಿನಿಂದ ಸಕ್ಕರೆಯನ್ನೂ ಆಮದು ಮಾಡಿಕೊಳ್ಳುತ್ತಿತ್ತು. ಮುಂದೆ 1881 ರಲ್ಲಿ ಹುಬ್ಬಳ್ಳಿಯಲ್ಲಿ 'ಸದರ್ನ್ ಮರಾಠಾ ಸ್ಪಿನ್ನಿಂಗ್ ಮತ್ತು ವೀವಿಂಗ್ ಕಂಪನಿ'ಯು ಅಂದು ರೂ. ಆರು ಲಕ್ಷ ಬಂಡವಾಳದೊಂದಿಗೆ 18 ಸಾವಿರ ಕದಿರುಗಳ ಸಾಮರ್ಥ್ಯದೊಂದಿಗೆ ಪ್ರಾರಂಭಿಸಲ್ಪಟ್ಟಿತು. 1882-83 ರಲ್ಲಿ ಹುಬ್ಬಳ್ಳಿ ಮತ್ತು ಗದಗನಲ್ಲಿ ಅನುಕ್ರಮವಾಗಿ ರಾಬರ್ಟಸನ್ ಬದ್ರರ್ಸ್ ಮತ್ತು ಕಂ. ಮತ್ತು ಕ್ರಿಸ್ವೆಲ್ ಮತ್ತು ಕಂ. ಎಂಬ ಎರಡು ಯುರೋಪ್ ಮೂಲದ ಬಹುದೊಡ್ಡ ವ್ಯಪಾರಿ ಕಂಪನಿಗಳು ಇದ್ದವು.

1884 ರ ಗ್ಯಾಸೆಟಿಯರ್‌ನಲ್ಲಿ ವಿವರಿಸುವಂತೆ ಹುಬ್ಬಳ್ಳಿಯಲ್ಲಿ ಸುಮಾರು 700 ಜನ ವ್ಯಾಪಾರಸ್ಥರಿದ್ದರು. ಇವರಲ್ಲಿ ಸುಮಾರು 300 ಜನರ ವ್ಯಾಪಾರಿಗಳ ಬಂಡವಾಳ ರೂ. ಹತ್ತು ಸಾವಿರದಿಂದ ಒಂದು ಲಕ್ಷದವರೆಗೆ ಇತ್ತು; ಗದಗಿನಲ್ಲಿ ವೆಂಕಟದಾಸ ಎಂಬ ಗುಜರಾತಿ ವ್ಯಾಪಾರಿಯು ರೂ. ಹತ್ತು ಸಾವಿರವರೆಗೆ ಹುಂಡಿಯ ವ್ಯಾಪಾರ ಮಾಡುತ್ತಿದ್ದನು. ಅದೇ ಗ್ಯಾಸೆಟಿಯರ್ ವರದಿ ಮಾಡುವಂತೆ ಧಾರವಾಡ ಜಿಲ್ಲೆಯಲ್ಲಿ ಹತ್ತು ಗ್ರಾಮಗಳು ವ್ಯಾಪಾರದ ಪಡಮೂಲೆಯ ಸ್ಥಳಗಳಾಗಿದ್ದವು. ಅವುಗಳಲ್ಲಿ ಹುಬ್ಬಳ್ಳಿ, ಧಾರವಾಡ, ನವಲಗುಂದ, ಗದಗ, ರಾಣೆಬೆನ್ನೂರು, ಈ ಐದು ಗ್ರಾಮಗಳಲ್ಲಿ ಸಗಟು ಮತ್ತು ಚಿಲ್ಲರೆ ಮಾರಾಟ ಎರಡೂ ನಡೆಯುತ್ತಿದ್ದವು. ಇವುಗಳ ಹೊರತು ಮುಂಡರಗಿ, ಬ್ಯಾಡಗಿ, ಹಾವೇರಿ, ಧುಂಡಸಿ, ನರಗುಂದಗಳಲ್ಲಿ ಸಗಟು ವ್ಯವಹಾರ ಮಾತ್ರ ನಡೆಯುತ್ತಿತ್ತು. "ಈ ಹತ್ತು ಪಡಮೂಲೆಗಳಲ್ಲಿ ಹುಬ್ಬಳ್ಳಿ ಗದಗ ಎಲ್ಲಕ್ಕೂ ಶ್ರೇಷ್ಠ ಇರುತ್ತದೆ."

ಮುಂಬೈ ರಾಜ್ಯದ ಕರ್ನಾಟಕದ ಸೀಮೆಯಲ್ಲಿ ಬೆಳಗಾವಿಯ ನಂತರ ಹುಬ್ಬಳ್ಳಿ ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ಹುಬ್ಬಳ್ಳಿಯ ವ್ಯಾಪಾರಸ್ಥರು ಮುಂಬಯಿಯಿಂದ ನೂಲು, ರೇಷ್ಮೆ ಕಸ್ತೂರಿ, ಕೇಸರ, ಚಿಮಣಿ ಎಣ್ಣೆ, ಅರಿಶಿಣ ಬೇರು, ದೇಶಿ ಮತ್ತು ವಿಲಾಯತಿ ವಸ್ತ್ರಗಳು, ಜೀರಿಗೆ, ತೆಂಗಿನ ಕಾಯಿ, ಕೊಬ್ಬರಿ, ಗಾಂಜಾ, ಸಕ್ಕರೆ, ಬೆಲ್ಲ, ಕಂಬಳಿ, ಮೆಣಸಿನಕಾಯಿ, ತಂಬಾಕು, ಅಡಿಕೆ, ಏಲಕ್ಕಿ ಮೆಣಸು ಮುಂತಾದವುಗಳನ್ನು ಹೊರಗಿನಿಂಗ ತರಿಸುತ್ತಿದ್ದರೆ, ಅರಳೆ, ಕುಸುಬೆ, ಸೀರೆ ಮತ್ತು ಖಣ ಮುಂತಾದ ದೇಶಿವಸ್ತ್ರ, ತಾಮ್ರ ಹಿತ್ತಾಳೆ ಪಾತ್ರೆಗಳು, ಹುಣಿಸೆಹಣ್ಣು, ಈರುಳ್ಳಿ, ಬೆಳ್ಳುಳ್ಳಿ ಮುಂತಾದವುಗಳನ್ನು ಹೊರಗೆ ಕಳಿಸುತ್ತಿದ್ದರು. 1883 ರಲ್ಲಿ ಹುಬ್ಬಳ್ಳಿಯಲ್ಲಿ ಒಟ್ಟಿಗೆ ರೂ.41 ಲಕ್ಷದ ವ್ಯಾಪಾರವಾಯಿತು. ಅದರಲ್ಲಿ ರೂ.32.36 ಲಕ್ಷ ಮಾಲು ಹೊರಗಿನಿಂದ ಬಂದದ್ದು, ರೂ. 8.50 ಲಕ್ಷದ ಮಾಲು ಸ್ಥಳೀಯವಾಗಿ ಉತ್ಪಾದನೆ ಆದದ್ದು. ಹೊರಗಿನಿಂದ ಬಂದ ಮಾಲಿನಲ್ಲಿ ರೂ.18.56 ಲಕ್ಷದ್ದು ಹುಬ್ಬಳ್ಳಿಯಲ್ಲಿ ಖರ್ಚಾಗಿ ಉಳಿದದ್ದು ಹೊರ ಪೇಟೆಗಳಿಗೆ ಹೋಯಿತು ಎಂದು ಗ್ಯಾಸೆಟಿಯರ್‌ನಿಂದ ತಿಳಿದು ಬರುವುದು. ಇದು ಸ್ಥಳೀಯ ವ್ಯಾಪಾರದ ವಿವಿಧ ಮುಖಗಳ ಪರಿಮಾಣವನ್ನು ಸೂಚಿಸುವುದು. ಈ ಭಾಗದಲ್ಲಿ ಉಗಿಬಂಡಿ ಬಂದ ನಂತರ ವ್ಯಾಪಾರಕ್ಕೆ ಹೆಚ್ಚು ಉತ್ತೇಜನ ದೊರೆಯಿತು. 1884 ರಲ್ಲಿ ಹುಬ್ಬಳ್ಳಿಯ ಮುಖ್ಯ ವ್ಯಾಪಾರದ ಸರಕುಗಳಲ್ಲಿ ಅರಳೆ, ಧಾನ್ಯ, ವಸ್ತ್ರ ಪಾತ್ರೆಗಳು, ಚರ್ಮ, ಪ್ರಾಣಿಗಳ ಕೊಂಬುಗಳು, ಮುಂತಾದವು ಪರಪೇಟೆಗೆ ರಫ್ತಾಗುತ್ತಿದ್ದವು. ಮುಂಬಯಿಯ ಅರಿವೆ, ಯುರೋಪದ ಅರಿವೆ, ನೂಲು, ಧಾನ್ಯ, ನೀಲಿ, ಬೆಲ್ಲ, ತೆಂಗಿನಕಾಯಿ, ಅಡಿಕೆ ಮುಂತಾದವು ಪರಪೇಟೆಯಿಂದ ಬರುತ್ತಿದ್ದವು. ಧಾರವಾಡದ ಕಲೆಕ್ಟರ ರಾಬರ್ಟಸನ್ ಎಂಬುವವರು 1874 ರಲ್ಲಿ ಹುಬ್ಬಳ್ಳಿಯ ಮಾರುಕಟ್ಟೆಯನ್ನು ರೂ.65,000 ವೆಚ್ಚದಲ್ಲಿ ಕಟ್ಟಿಸಿದರು. ಈ ಮಾರುಕಟ್ಟೆಯಿಂದ ಮುನಸಿಪಾಲಿಟಿಗೆ ವಾರ್ಷಿಕ ರೂ. 2,700 ಆದಾಯ ಬರುತ್ತಿತ್ತು. ಹುಬ್ಬಳ್ಳಿ, ಗದಗ, ಬೆಟಗೇರಿ, ಲಕ್ಷ್ಮೇಶ್ವರ ಬೆಲೆಯುಳ್ಳ ಸೀರೆಗಳಿಗೆ ಪ್ರಸಿದ್ಧವಾಗಿದ್ದರೆ, ಹುಬ್ಬಳ್ಳಿ, ಅಣ್ಣಿಗೇರಿ, ಲಕ್ಕುಂಡಿ, ನರಗುಂದ ಬೆಲೆಯುಳ್ಳ ಧೋತ್ರಗಳಿಗೆ ಪ್ರಸಿದ್ಧವಾಗಿದ್ದವು. ಧಾರವಾಡ ತುರಂಗದಲ್ಲಿ, ನವಲಗುಂದದಲ್ಲಿ, ಹುಬ್ಬಳ್ಳಿಯಲ್ಲಿ ಜಮಖಾನೆಗಳು ತಯಾರಾಗುತ್ತಿದ್ದವು. ಹುಬ್ಬಳ್ಳಿಯು ರಟ್ಟಿನ ಟೊಪ್ಪಿಗೆ, ತಾಮ್ರ-ಹಿತ್ತಾಳೆಯ ಪಾತ್ರೆಗಳು, ರಾಣೆಬೆನ್ನೂರು, ಶಿರಹಟ್ಟಿ, ಲಕ್ಷ್ಮೇಶ್ವರ ಕಂಬಳಿಗಳು, ಹಾನಗಲ್ಲಿನ ಬೆಲ್ಲ ಪ್ರಸಿದ್ಧ 'ಸರಕು'ಗಳಾಗಿದ್ದವು. ಕಪ್ಪತಗುಡ್ಡದ ಕೆಲವು ಭಾಗಗಳಲ್ಲಿ ಬೀಸುವಕಲ್ಲು

ಮತ್ತು ಕಲ್ಲಗಡಿಗೆ ಉತ್ಪಾದನೆಯಾಗುತ್ತಿದ್ದವು. ಗದಗ ಪಟ್ಟಣದಲ್ಲಿ ನೂರು ವರ್ಷದ ಹಿಂದೆ (1884) ಒಂಭತ್ತು ಜನ ಪ್ರಮುಖ ವ್ಯಾಪಾರಸ್ಥರು ರೂ. ಐದುಸಾವಿರದಿಂದ ಎರಡು ಲಕ್ಷದವರೆಗೆ ಬಂಡವಾಳ ಉಳ್ಳವರು; ವಿಲಾಯತಿ ವಸ್ತ್ರ, ನೂಲು, ರೇಷ್ಮೆ ಮುಂತಾದವುಗಳನ್ನು ಹೊರಗಿನಿಂದ ತರುತ್ತಿದ್ದರು. ಮತ್ತು ಅರಳೆ, ದೇಶೀವಸ್ತ್ರ ಮುಂತಾದವುಗಳನ್ನು ಪರಪೇಟೆಗೆ ಕಳಿಸುತ್ತಿದ್ದರು ಎಂದು ವಿವರಿಸಲಾಗಿದೆ.

ಅದರಂತೆ ಬ್ಯಾಡಗಿ ಪೇಟೆಗೆ ಅಕ್ಕಿ, ಜೋಳ, ಗೋಧಿ, ತೊಗರಿ, ಬೆಲ್ಲ, ಸಕ್ಕರೆ, ಮೆಣಸಿನಕಾಯಿ, ಅಡಿಕೆ, ಕೊಬ್ಬರಿ, ತೆಂಗಿನಕಾಯಿ ಮುಂತಾದ ಸರಕುಗಳು ಮೈಸೂರು ಸೀಮೆಯಿಂದಲೂ ಉತ್ತರ ಕನ್ನಡ ಜಿಲ್ಲೆಯಿಂದಲೂ ಬಂದು ಸಗಟು ಮಾರಾಟದಿಂದ ಹೊರ ಪೇಟೆಗಳಿಗೆ ಹೋಗುತ್ತಿದ್ದವು. ಇದೇ ರೀತಿಯಲ್ಲಿ ಮುಂಡರಗಿಯಲ್ಲಿ ಬಳ್ಳಾರಿಯಿಂದಲೂ ನಿಜಾಮನ ರಾಜ್ಯದಿಂದಲೂ ಸದರಿ ಸರಕುಗಳು ಬಂದು ಅಲ್ಲಿಂದ ಪರಪೇಟೆಗೆ ಹೋಗುತ್ತಿದ್ದವು. ಹಾವೇರಿಯಲ್ಲಿ ರೂ. ಒಂದು ಸಾವಿರದಿಂದ ಐವತ್ತು ಸಾವಿರದವರೆಗೆ ಬಂಡವಾಳವುಳ್ಳ 25 ಜನ ವ್ಯಾಪಾರಸ್ಥರು ಇದ್ದುದಾಗಿ ಮತ್ತು ಇವರು ಮುಖ್ಯವಾಗಿ ಉತ್ತರ ಕನ್ನಡ ಮತ್ತು ಮೈಸೂರು ಸೀಮೆಯಿಂದಲೂ ಬರುತ್ತಿದ್ದ ಏಲಕ್ಕಿ, ಅಡಿಕೆ, ಮೆಣಸುಗಳನ್ನು ಕೊಂಡು ದೂರದ ವ್ಯಾಪಾರಸ್ಥರಿಗೆ ಮಾರುತ್ತಿದ್ದರು ಎಂದು ವಿವರಿಸಲಾಗಿದೆ. ಹಾವೇರಿಯಲ್ಲಿ ವರ್ಷಕ್ಕೆ ಸುಮಾರು ರೂ. 1.20 ಲಕ್ಷದ ಅಡಿಕೆ ವ್ಯಾಪಾರ ಆಗುತ್ತಿದ್ದುದಾಗಿ ನಮೂದಿಸಲಾಗಿದೆ. ಇಲ್ಲಿನ ಯಾಲಕ್ಕಿಯನ್ನು ತೊಳೆಯುವ ಮತ್ತು ಸಂಸ್ಕರಿಸುವ ವಿಧಾನವನ್ನು ವಿವರಿಸಲಾಗಿದೆ. ಅದರಂತೆ ಜಿಲ್ಲೆಯ ಮಲೆನಾಡ ಭಾಗದಲ್ಲಿ ಧುಂಡಸಿಯು ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ಧುಂಡಸಿಯಲ್ಲಿ ಸುಮಾರು 250 ಜನ ವ್ಯಾಪಾರಸ್ಥರು ರೂ. ಒಂದು ಸಾವಿರದಿಂದ ಐವತ್ತು ಸಾವಿರವರೆಗೆ ವ್ಯಾಪಾರದಲ್ಲಿ ಹಣ ವಿನಿಯೋಗಿಸಿದ್ದರು ಮತ್ತು ಅವರು ತೆಂಗಿನಕಾಯಿ, ಅಡಿಕೆ, ಕೊಬ್ಬರಿ, ಬೆಲ್ಲ, ಸಕ್ಕರೆ, ಮೆಣಸು, ಉಪ್ಪು, ಎಣ್ಣೆ, ತಂಬಾಕು ಮುಂತಾದವುಗಳನ್ನು ಕೊಂಡು ಹೊರಪೇಟೆಗೆ ಕಳಿಸುತ್ತಿದ್ದರು ಎಂದು ತಿಳಿದು ಬರುವುದು.

ಬೆಳವಲನಾಡಿನ ಪ್ರಮುಖ ಕೇಂದ್ರವಾದ ನರಗುಂದವು 1857 ರ ಬಂಡಾಯವಾಗುವವರೆಗೆ ಒಂದನೆಯ ದರ್ಜೆಯ ಪಡಮೂಲೆಯ ಸ್ಥಳವೆನಿಸಿತ್ತು. ಆ ವರ್ಷದಿಂದ ಈ ಪೇಟೆಯ ವ್ಯಾಪಾರವು ಹಿಮ್ಮೆಟ್ಟಿತು ಎಂದು ವರದಿಯಾಗಿದೆ.

### ಇತ್ತೀಚಿನ ಆಮದು ರಫ್ತುಗಳು

ಸ್ವಾತಂತ್ರ್ಯ ನಂತರದ ದಶಕಗಳಲ್ಲಿ ಅದರಲ್ಲಿಯೂ ವಿಶೇಷವಾಗಿ ರಾಜ್ಯ ಪುನರ್ ಘಟನೆಯ ನಂತರದ ದಶಕಗಳಲ್ಲಿ ವ್ಯವಸಾಯ, ಕೈಗಾರಿಕೆ, ವಾಣಿಜ್ಯ ಉದ್ಯಮಗಳಲ್ಲಿ ಉಂಟಾದ ತೀವ್ರತರ ಬದಲಾವಣೆ, ಸರ್ಕಾರದ ಮುಕ್ತವ್ಯಾಪಾರ ನೀತಿ, ಕೈಗಾರಿಕಾ ನೀತಿ, ಉದಾರ ಹಣಕಾಸಿನ ಸೌಲಭ್ಯಗಳು ಇವೇ ಮುಂತಾದವುಗಳಿಂದ ಮತ್ತು ಹೆಚ್ಚುತ್ತಿರು ಸ್ಥಳೀಯ ಕೈಗಾರೀಕರಣ, ಉತ್ತಮ ಮಾರುಕಟ್ಟೆಯ ಸೌಲಭ್ಯ, ಸ್ಥಳೀಯ ಮತ್ತು ಹೊರಗಿನ ವ್ಯಾಪಾರದ ಪೈಪೋಟಿ ಮುಂತಾದ ಕಾರಣಗಳಿಂದ ಜಿಲ್ಲೆಯ ಇತ್ತೀಚಿನ ಆಮದು ಮತ್ತು ರಫ್ತುಗಳಲ್ಲಿ ಬಹುಮಟ್ಟಿನ ವೈವಿಧ್ಯತೆಯನ್ನು ಕಾಣಬಹುದು. ಎರಡು ಮಹಾಯುದ್ಧಗಳ ಕಾಲದಲ್ಲಿ ಆಮದಿನ ಮಿತಿ ಹಾಗೂ ಸೈನ್ಯದ ಬೇಡಿಕೆಗಳ ಪೂರೈಸುವಿಕೆಯಿಂದ ವ್ಯಾಪಾರ ಸರ್ವತೋಮುಖವಾಗಿ ಬೆಳೆಯಿತು. ಹಣದುಬ್ಬರ ಹಾಗೂ ಆಹಾರಧಾನ್ಯಗಳ ಕೊರತೆಯಿಂದ ಧಾನ್ಯಗಳ ಸಾಗಾಟದ ಮೇಲೆ ಅಂತರ್ಜಿಲ್ಲಾ ಬಂಧಿ ಹಾಗೂ ಪಡಿತರ ಅಂಗಡಿಗಳ ಆರಂಭ 1940 ರ ನಂತರ ಆಯಿತು. ಈ ಜಿಲ್ಲೆಯ ವ್ಯಾಪಾರ ವಹಿವಾಟು ಇತರ ನೆರೆಹೊರೆಯ ತಗಲಿರುವ ಏಳು ಜಿಲ್ಲೆಗಳೊಂದಿಗೆ ವ್ಯಾಪಕವಾಗಿ ಹರಡಲು ಜಿಲ್ಲೆಯಲ್ಲಿ ಲಭ್ಯ ಇರುವ ಉತ್ತಮ ಸಂಚಾರ ಸೌಲಭ್ಯಗಳು ಸಂಪರ್ಕ ಸಾಧನಗಳು ಪೂರಕವಾಗಿದೆ.

ಸುಮಾರು 44 ವರ್ಷಗಳ ಹಿಂದೆ ಅಂದರೆ 1951 ರಲ್ಲಿ ಈ ಜಿಲ್ಲೆಗೆ ಆಮದಾಗುತ್ತಿದ್ದ ಪ್ರಮುಖ ವ್ಯಾಪಾರಿ ಸರಕುಗಳಲ್ಲಿ ಕಟ್ಟಡ ಸಾಮಗ್ರಿಗಳು, ಗೃಹ ಬಳಕೆಯ ಪೀಠೋಪಕರಣಗಳು, ಪಾತ್ರೆಗಳು, ಕಿರಾಣಿ ವಸ್ತುಗಳು, ಆಹಾರ ವಸ್ತುಗಳು, ಔಷಧಿಗಳು, ಯಂತ್ರೋಪಕರಣಗಳು, ಬಟ್ಟೆ, ಆಟದ ಸಾಮಾನು, ಉರುವಲು, ಸೌಂದರ್ಯ ವರ್ಧಕ ವಸ್ತುಗಳು ಮುಂತಾದವುಗಳು ಮುಖ್ಯವಾಗಿದ್ದವು. ಕಟ್ಟಡ ಸಾಮಗ್ರಿಗಳಲ್ಲಿ ಮರಮಟ್ಟುಗಳು, ಬಿದಿರು, ಉತ್ತರ ಕನ್ನಡ ಮತ್ತು ಬೆಳಗಾವಿ ಜಿಲ್ಲೆಯಿಂದ, ಕಬ್ಬಿಣ ಸಾಮಾನುಗಳು ಮುಂಬಯಿಯಿಂದ ಬರುತ್ತಿದ್ದವು. ಆಹಾರ ವಸ್ತುಗಳ ಆಮದು ಕಡಿಮೆ ಇರುತ್ತಿತ್ತು. ಕಿರಾಣಿ ವಸ್ತುಗಳಲ್ಲಿ ಹವೀಜವನ್ನು (ದನಿಯ) ಹೈದರಾಬಾದ್ ಮತ್ತು ಬಳ್ಳಾರಿಗಳಿಂದ, ಬೇಳೆ ಮತ್ತು ಹೆಸರುಕಾಳನ್ನು ಇಂದೂರು, ಪಂಜಾಬಿನಿಂದ, ತೊಗರಿಬೇಳೆ ಬಿಜಾಪುರ, ಸೊಲ್ಲಾಪುರಗಳಿಂದ, ಹೆಸರುಕಾಳು, ಬಿಜಾಪುರದಿಂದ, ತೆಂಗು ಅರಸೀಕೆರಿಯಿಂದ, ಕೊಬ್ಬರಿ ಎಣ್ಣೆ ಕೊಚ್ಚಿಯಿಂದ, ಬೆಲ್ಲ,

ಬೆಳಗಾವಿ ಮತ್ತು ಕೊಲ್ಲಾಪುರಗಳಿಂದ, ಚಿಮಣಿ ಎಣ್ಣೆ ಮುಂಬಯಿಯಿಂದ, ಅಡಿಕೆಯನ್ನು, ಸಿರಸಿ, ಸಾಗರ ಸಿದ್ದಾಪುರಗಳಿಂದ, ಕರಿಮೆಣಸು ಸಿರ್ಸಿ,| ಕಾರವಾರದಿಂದ, ಸಕ್ಕರೆ ಬಿಜಾಪುರ, ಕೊಲ್ಲಾಪುರ, ಹೊಸಪೇಟೆಗಳಿಂದ, ಈರುಳ್ಳಿ ಬಿಜಾಪುರ, ಬಳ್ಳಾರಿ, ಬೆಳಗಾವಿಗಳಿಂದ, ಅರಶಿನ ಸಾಂಗಲಿಯಿಂದ, ಉಪ್ಪು ಗೋವೆ, ಮುಂಬಯಿಗಳಿಂದ, ಮೀನು ಕಾರವಾರದಿಂದ, ತಂಬಾಕು ನಿಪ್ಪಾಣಿಯಿಂದ, ಬಂಗಾರ ಮತ್ತು ಬೆಳ್ಳಿ ಮುಂಬಯಿಯಿಂದ, ಕಬ್ಬಿಣ, ತಾಮ್ರ, ಹಿತ್ತಾಳೆ ತಗಡುಗಳು ಮುಂಬಯಿಯಿಂದ, ಧೋತ್ರ, ಸೀರೆ, ಖಣಗಳು. ಕೈಮಗ್ಗದ ಬಟ್ಟೆಗಳನ್ನು ಆದವಾನಿ, ರಬಕವಿ, ಮಹಾಲಿಂಗಪುರ, ಜಮಖಂಡಿ, ಸೊಲ್ಲಾಪುರಗಳಿಂದ, ಯಂತ್ರಚಾಲಿತ ಮಗ್ಗಗಳ ನೂಲಿನ ಮತ್ತು ರೇಷ್ಮೆ ಸೀರೆಗಳನ್ನು ಇಚಲಕರಂಜಿ ಇಂದ, ರುಮಾಲುಗಳು ಆಂಧ್ರದ ಪಲಕೋಲದಿಂದ, ರೇಷ್ಮೆ ಬಟ್ಟೆಯನ್ನು ಬೆಂಗಳೂರು, ಮೈಸೂರುಗಳಿಂದ, ಮಿಲ್ಲಿನಲ್ಲಿ ತಯಾರಾದ ಗಂಡಸರ ಉಡುಪಿನ ಬಟ್ಟೆಗಳು ಮುಂಬಯಿ ಮತ್ತು ಸೊಲ್ಲಾಪುರಗಳಿಂದ, ಉತ್ತಮ ಗುಣ ಮಟ್ಟದ ಧೋತ್ರಗಳು ಸೊಲ್ಲಾಪುರ, ಮುಂಬಯಿ, ಅಹಮದಾಬಾದ್‌ಗಳಿಂದ, ಉಲನ್ ರಗ್ಗುಗಳು ಮುಂಬಯಿ, ಬೆಂಗಳೂರು, ಕಾನಪುರ, ಧಾರಿವಾಲ ಮತ್ತು ಅಮೃತಸರಗಳಿಂದ ಆಮದಾಗುತ್ತಿದ್ದವು. ಔಷಧಿಗಳು ಮುಂಬಯಿ, ಬರೋಡ, ಕಲ್ಕತ್ತ, ಅಹಮ್ಮದನಗರ, ಮೈಸೂರುಗಳಿಂದ ತರಿಸಲಾಗುತ್ತಿತ್ತು. ಒಕ್ಕಲುತನದ ಉಪಕರಣಗಳು ಮುಂಬಯಿ ಪುಣೆಗಳಿಂದ, ಚಿನ್ನದ ಆಭರಣಗಳು ಕಾರವಾರ ಮತ್ತು ಕೊಲ್ಲಾಪುರದಿಂದ, ಬೆಳ್ಳಿಯ ಆಭರಣಗಳು ಕಾರವಾರ, ಕೊಲ್ಲಾಪುರ, ಬೆಂಗಳೂರು ಮತ್ತು ಮದ್ರಾಸ್‌ಗಳಿಂದ, ಕಬ್ಬಿಣ (ಹಾರ್ಡ್‌ವೇರ್ಸ್) ಸಾಮಾನುಗಳು ಮುಂಬಯಿ ಮತ್ತು ಭದ್ರಾವತಿಯಿಂದ, ಗಾಜಿನ ಸಾಮಾನು ಮತ್ತು ಪಿಂಗಾಣಿ ವಸ್ತುಗಳು ಓಗಲೇವಾಡಿ (ಸತಾರಾ), ಮೈಸೂರುಗಳಿಂದ, ಸಿದ್ಧ ಉಡುಪುಗಳು ಮದ್ರಾಸ್, ಬೆಂಗಳೂರುಗಳಿಂದ, ಆಟದ ಸಾಮಾನುಗಳು ಬೊಂಬಾಯಿ, ಮದ್ರಾಸ್‌ಗಳಿಂದ ಆಮದು ಮಾಡಿಕೊಳ್ಳಲಾಗುತ್ತಿತ್ತು. ಜಲಾವ (ಉರುವಲು) ಕಟ್ಟಿಗೆಯನ್ನು ಕಾರವಾರದಿಂದ ತರಿಸಲಾಗುತ್ತಿತ್ತು.

**ರಫ್ತುಗಳು**

ಶತಮಾನಗಳಿಂದಲೂ ಈ ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆ ಹತ್ತಿಯಾಗಿದ್ದು 1940-50 ದಶಕದಲ್ಲಿಯೂ ಇದು ಮುಂದುವರಿಯಿತು. ವಾರ್ಷಿಕ ಸರಾಸರಿ 1.20 ಲಕ್ಷ ಬೇಲುಗಳಷ್ಟು (ಒಂದು ಬೇಲು ತೂಕ 400 ಪೌಂಡು) ಹತ್ತಿ ಈ ಜಿಲ್ಲೆಯಿಂದ ಉತ್ಪಾದನೆಯಾಗುತ್ತಿತ್ತು. ಅದರಲ್ಲಿ ಬಹುಪಾಲು (ಶೇ. 95) ರಫ್ತಾಗಿ, ಉಳಿದ ಅಲ್ಪಸ್ವಲ್ಪ ಹತ್ತಿಯನ್ನು ಸ್ಥಳೀಯವಾಗಿ ಉಪಯೋಗಿಸಲಾಗುತ್ತಿತ್ತು. ಇಲ್ಲಿಯ ಹತ್ತಿಯು ಮುಖ್ಯವಾಗಿ ಮುಂಬಯಿ, ಅಹಮ್ಮದಾಬಾದ್, ಸೊಲ್ಲಾಪುರ, ಗೋಕಾಕ, ಮದ್ರಾಸ, ಕೊಯಮತ್ತೂರು, ಕಾನಪುರ, ಉಜ್ಜೈನಿ, ಬೆಂಗಳೂರು, ದಾವಣಗೆರೆ, ಬಾರಸಿ, ಸೊಲ್ಲಾಪುರ, ಮುಂತಾದ ಸ್ಥಳಗಳ ಹತ್ತಿ ಗಿರಣಿಗಳಿಗೆ ರಫ್ತು ಆಗುತ್ತಿತ್ತು. ಜಿಲ್ಲೆಯ ಒಟ್ಟು ಹತ್ತಿ ಬೆಳೆಯಲ್ಲಿ ಅರ್ಧ ಮುಂಬಯಿಗೆ ಹೋಗುತ್ತಿತ್ತು. ಈ ಜಿಲ್ಲೆಯ ಹುಬ್ಬಳ್ಳಿ, ಗದಗ, ಧಾರವಾಡ, ರಾಣೆಬೆನ್ನೂರು, ನರಗುಂದ, ಅಣ್ಣಿಗೇರಿ, ಪ್ರಮುಖ ಹತ್ತಿಯ ವ್ಯಾಪಾರದ ಕೇಂದ್ರಗಳಾಗಿದ್ದವು. ಇಂದಿಗೂ ಇವು ಹತ್ತಿಯ ಪ್ರಮುಖ ಮಾರಾಟ ಕೇಂದ್ರಗಳಾಗಿವೆ.

ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ನಂತರ ಈ ಭಾಗದ ಹತ್ತಿಯನ್ನು ಮುಂಬಯಿಗೆ ಮೂರು ಮಾರ್ಗಗಳ ಮೂಲಕ ಕಳಿಸಲಾಗುತ್ತಿತ್ತು. (1) ಪುಣೆ ಅಥವಾ ಹುಟಗಿ ಮೂಲಕ ರೈಲಿನಲ್ಲಿ, (2) ಅರ್ಧ ರೈಲು ಅರ್ಧ ಜಲಮಾರ್ಗದ ಮೂಲಕ ಅಂದರೆ ಲೋಂಡಾ ಮತ್ತು ಗೋವಾದ ಮೂಲಕ, ಹಾಗೂ (3) ಪುಣೆ-ಬೆಂಗಳೂರು ಹೆದ್ದಾರಿಯ ಮೂಲಕ, ಅದಕ್ಕೂ ಪೂರ್ವದಲ್ಲಿ ಕುಮಟಾ ಬಂದರಿನ ಮೂಲಕ ಮುಂಬಯಿಗೆ ಕಳಿಸಲಾಗುತ್ತಿತ್ತು.

1940-50 ದಶಕದಲ್ಲಿ ಜಿಲ್ಲೆಯ ಇತರ ರಫ್ತುಗಳಲ್ಲಿ ಪ್ರಮುಖವಾಗಿ, ಗದಗ, ಬೆಟಗೇರಿ, ಹುಬ್ಬಳ್ಳಿ, ರಾಣೆಬೆನ್ನೂರುಗಳಿಂದ, ನೂಲಿನ ಸೀರೆ ಮತ್ತು ಖಣಗಳು ಕರ್ನಾಟಕ-ಮಹಾರಾಷ್ಟ್ರದ ಇತರ ಜಿಲ್ಲೆಗಳಿಗೆ ಹೋಗುತ್ತಿದ್ದವು. ಕಾರವಾರದಿಂದ ಆಮದುಮಾಡಿಕೊಂಡ ಗೋಡಂಬಿ ಹುಬ್ಬಳ್ಳಿಯಿಂದ ಬೆಳಗಾವಿ, ಮಿರ್ಜಿ, ಪುಣೆ, ಸಾಂಗಲಿ, ಕೊಲ್ಲಾಪುರ, ಮುಂಬಯಿ ಮುಂತಾದ ಉತ್ತರ ಭಾಗದ ಪ್ರದೇಶಗಳಿಗೆ ಹೋಗುತ್ತಿತ್ತು. ಇಲ್ಲಿಂದ ಅಡಿಕೆ ಬಿಜಾಪುರ, ಬೆಳಗಾಂವಿಗಳಿಗೆ, ಮೆಣಸಿನಕಾಯಿ ಬಿಜಾಪುರ-ಮುಂಬಯಿ, ಕೊಚ್ಚಿ, ಮದ್ರಾಸ, ಗೋವಾಗಳಿಗೆ, ಶೇಂಗಾ (ಕಡಲೆಕಾಯಿ) ಮುಂಬಯಿ, ಸೊಲ್ಲಾಪುರ, ಆದವಾನಿ, ವಾಡಿ, ಕರ್ನೂಲ, ದಾವಣಗೆರೆ, ಅಕೋಲಾ (ವಿದರ್ಭ) ಮುಂತಾದ ಕಡೆಗೆ ಕಳಿಸಲ್ಪಟ್ಟರೆ ಸೂರ್ಯಕಾಂತಿ ಬೀಜಗಳನ್ನು ಪುಣೆ, ವಿಜಾಪುರ, ಸತಾರಗಳಿಗೆ, ಜೋಳವನ್ನು ಗುಜರಾತ ಮಹಾರಾಷ್ಟ್ರಗಳಿಗೆ, ಗೋಧಿಯನ್ನು ಬೆಳಗಾಂವಿ, ಸತಾರಾ, ಪುಣೆ, ಠಾಣಾ ಮುಂತಾದ ಪ್ರದೇಶಗಳಿಗೆ ಕಳಿಸಲಾಗುತ್ತಿತ್ತು.

ಸಾವೆಯನ್ನು ಮುಂಬಯಿ, ನಾಸಿಕ, ಬೆಳಗಾವಿಗಳಿಗೆ ರಫ್ತು ಮಾಡಲಾಗುತ್ತಿತ್ತು ಎಂದು ಇತ್ತೀಚಿನ ಗ್ಯಾಸೆಟಿಯರ್‌ನಲ್ಲಿ (1959) ವಿವರಿಸಲಾಗಿದೆ.

ಧಾರವಾಡ ಜಿಲ್ಲೆಯು ಮನೆಕಟ್ಟಲು ಮತ್ತು ಪಿಠೋಪಕರಣ ತಯಾರಿಸಲು ಉಪಯೋಗಿಸುವ ಮರಮಟ್ಟು (ಟೌಬೀನ್) ರಫ್ತಿಗೆ ಮೊದಲಿನಿಂದಲೂ ಪ್ರಸಿದ್ಧವಾಗಿದೆ. ಈ ಜಿಲ್ಲೆಯ ಹುಬ್ಬಳ್ಳಿ, ಧಾರವಾಡ, ಅಳ್ನಾವರ ಇವು ಮರಮಟ್ಟಿನ ವ್ಯಾಪಾರಕ್ಕೆ ಮತ್ತು ರಫ್ತಿಗೆ ಪ್ರಸಿದ್ಧವಾದವುಗಳು. ಇಲ್ಲಿಂದ ಸಾಗವಾನಿ (ತೇಗ) ಮತ್ತು ಮತ್ತಿಮರದ ದಿಮ್ಮಿಗಳು ಸೊಲ್ಲಾಪುರ ಸಾಂಗಲಿ, ಕೊಲ್ಲಾಪುರ, ಮಿರ್ಜಿ, ಬಿಜಾಪುರ, ಬಾಗಲಕೋಟೆ, ಗುಂತಕಲ್, ಬಳ್ಳಾರಿ ಮುಂತಾದವುಗಳ ಕಡೆಗೆ, ಕೇವಲ ಸಾಗವಾನಿ ಮರ ಮಾತ್ರ ಬೆಂಗಳೂರು, ದಾವಣಗೆರೆ ಕಡೆಗೆ, ಕರಿಮರ (ರೋಸ್‌ವುಡ್) ಮದ್ರಾಸ, ಮಚಲಿಪಟ್ಟಣಗಳಿಗೆ, ಮತ್ತಿಮರ ಬೆಳಗಾಂವಿಗೆ ರಫ್ತು ಆಗುತ್ತಿದ್ದವು.

**ಹಿಡಮೂಲೆ ವ್ಯಾಪಾರದ ಸ್ಥಳಗಳು**

1950 ರ ದಶಕದ ಅವಧಿಯಲ್ಲಿ ಈ ಜಿಲ್ಲೆಯ ಸಗಟು ಮಾರಾಟದ ಸ್ಥಳಗಳಲ್ಲಿ ಹುಬ್ಬಳ್ಳಿ, ಧಾರವಾಡ, ಗದಗ, ಬ್ಯಾಡಗಿ, ಹಾವೇರಿ, ರಾಣೆಬೆನ್ನೂರು, ಅಣ್ಣಿಗೇರಿ, ಯಲವಿಗಿ, ಕುಂದಗೋಳ, ಸವಣೂರು, ಹೊಳೆಆಲೂರು ಪ್ರಮುಖವಾಗಿದ್ದವು.

ಹುಬ್ಬಳ್ಳಿಯು ಹತ್ತಿ, ಶೇಂಗಾ, ಹತ್ತಿಬೀಜ, ಮರಮಟ್ಟು, ಉರುವಲು ಕಟ್ಟಿಗೆ, ಶೇಂಗಾ ಎಣ್ಣೆ, ಹಿತ್ತಾಳೆ ಪಾತ್ರೆಗಳು, ಸ್ತ್ರೀಯರ ಕೈಮಗ್ಗದ ಬಟ್ಟೆಗಳು, ಬೆಲ್ಲ ಮತ್ತು ಅಡಿಕೆಗಳ ಪ್ರಮುಖ ಮಾರಾಟ ಕೇಂದ್ರವಾಗಿತ್ತು. ಧಾರವಾಡವು ಹತ್ತಿ, ಹತ್ತಿಬೀಜ, ಶೇಂಗಾ, ಕುಸುಬೆ, ಇವುಗಳ ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದರೆ, ಗದಗು ಹತ್ತಿ, ಹತ್ತಿ ಬೀಜ, ಶೇಂಗಾ, ಶೇಂಗಾ ಎಣ್ಣೆ, ಸ್ತ್ರೀಯರ ಕೈಮಗ್ಗದ ಬಟ್ಟೆಗಳಿಗೆ ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ಮೆಣಸಿನಕಾಯಿ ಮತ್ತು ಅಡಿಕೆಗೆ ಬ್ಯಾಡಗಿ ಪ್ರಸಿದ್ಧವಾಗಿದ್ದರೆ, ಹಾವೇರಿಯು ಶೇಂಗಾ ಮತ್ತು ಏಲಕ್ಕಿ ವ್ಯಾಪಾರಕ್ಕೆ, ರಾಣೆಬೆನ್ನೂರು ಹತ್ತಿ, ಹತ್ತಿಬೀಜ ಶೇಂಗಾ ವ್ಯಾಪಾರಕ್ಕೆ, ನರಗುಂದ ಹತ್ತಿ ಮತ್ತು ಶೇಂಗಾ ಬೀಜಕ್ಕೆ, ಅಣ್ಣಿಗೇರಿ ಹತ್ತಿ ವ್ಯಾಪಾರಕ್ಕೆ ಯಲವಿಗಿ ಹವೀಜಕ್ಕೆ (ಧನಿಯಾ), ಕುಂದಗೋಳ ಹತ್ತಿ ಮತ್ತು ಶೇಂಗಾ ಬೀಜಕ್ಕೆ ಸವಣೂರು ಮತ್ತು ಹೊಳೆಆಲೂರು ಶೇಂಗಾ ಬೀಜಕ್ಕೆ ಪ್ರಸಿದ್ಧ ವ್ಯಾಪಾರ ಕೇಂದ್ರಗಳಾಗಿದ್ದವು.

1950 ರ ದಶಕದಲ್ಲಿ ಸೂಚಿಸಿದ ಜಿಲ್ಲೆಯ ಆಮದು ರಫ್ತುಗಳಲ್ಲಿ ಕಳೆದ ಸುಮಾರು ನಾಲ್ಕು ದಶಕಗಳ ಅವಧಿಯಲ್ಲಿ ಅನೇಕ ಬದಲಾವಣೆಗಳು ಉಂಟಾಗಿವೆ. ರಾಜ್ಯ ಪುನರ್‌ಘಟನೆಯ ನಂತರ ಕೈಗಾರಿಕೆ ಮತ್ತು ವ್ಯವಸಾಯ ವಲಯದಲ್ಲಿ ಉಂಟಾದ ತೀವ್ರತರ ಅಭಿವೃದ್ಧಿ ಅದರಲ್ಲಿಯೂ ವಿಶೇಷವಾಗಿ ಎಣ್ಣೆ ಬೀಜ ಬೆಳೆಗೆ ಹೆಚ್ಚು ಪ್ರೋತ್ಸಾಹ, ವ್ಯವಸಾಯ ಆಧಾರಿತ ಸಂಸ್ಕರಣಾ ಘಟಕಗಳ ಸ್ಥಾಪನೆ, ಯಂತ್ರೋಪಕರಣ, ಸೆರಾಮಿಕ್ಸ್, ವಿದ್ಯುತ್ ಉಪಕರಣಗಳು, ಗಡಿಯಾರ, ಇಲೆಕ್ಟ್ರಾನಿಕ್ಸ್ ಉಪಕರಣಗಳು, ಗ್ರಾಹಕ ಬಳಕೆಯ ವಸ್ತುಗಳು, ಸಿದ್ದೇಶ್ವರ ಕಂಪನಿಯ ಉಕ್ಕಿನ ಗೃಹ ಬಳಕೆಯ ವಸ್ತುಗಳು, ನೂಲಿನ, ಸಕ್ಕರೆ ಮತ್ತು ಎಣ್ಣೆಯ ಗಿರಣಿ ಮುಂತಾದ ಹೊಸ ಉದ್ಯಮಗಳಿಂದ ಜಿಲ್ಲೆಯ ರಫ್ತುಗಳಲ್ಲಿ ಸಾಂಪ್ರದಾಯಕ ವಸ್ತುಗಳಲ್ಲದೇ ಯಂತ್ರೋಪಕರಣಗಳ ಪ್ರಮಾಣ ಮತ್ತು ಇತರೇ ಜನರಲ್ ಇಂಜನಿಯರಿಂಗ್, ದೀರ್ಘಬಾಳಿಕೆಯ ಗೃಹಪಯೋಗಿ ವಸ್ತುಗಳ ಪ್ರಮಾಣ ಹೆಚ್ಚುತ್ತಿದೆ. ಸರ್ಕಾರದ ಪತಿಯಿಂದ ಕೈಗೊಳ್ಳಲಾದ ಕೈಮಗ್ಗ, ಖಾದಿ ಅಭಿವೃದ್ಧಿ ಯೋಜನೆಗಳು, ರೇಷ್ಮೆ ಕೈಗಾರಿಕೆ, ಗುಡಿ ಕೈಗಾರಿಕೆ, ವಿಶ್ವಯೋಜನೆ ಮುಂತಾದವುಗಳು ರಫ್ತನ್ನು ಹೆಚ್ಚಿಸಲು ಸಹಾಯಕವಾಗಿವೆ.

ಉತ್ತಮ ಸಂಚಾರ ಸೌಲಭ್ಯಗಳನ್ನು ಸಂಪರ್ಕ ಸಾಧನಗಳನ್ನು ಹೊಂದಿದ ಹುಬ್ಬಳ್ಳಿ, ಧಾರವಾಡ ಅವಳಿ ನಗರಗಳು ಜಿಲ್ಲೆಯ ವಾಣಿಜ್ಯ ಚಟುವಟಿಕೆಗಳ ಪ್ರಮುಖ ಕೇಂದ್ರಗಳಾಗಿವೆ. ಹುಬ್ಬಳ್ಳಿ ಧಾರವಾಡ ನಡುವೆ ಸುಮಾರು 20 ಕಿ.ಮಿ. ರಾಷ್ಟ್ರೀಯ ಹೆದ್ದಾರಿಗುಂಟ ನಗರೀಕರಣ ಮತ್ತು ಕೈಗಾರಿಕಾ ವಲಯಗಳು ವ್ಯಾಪಿಸಿರುವುದನ್ನು ಕಾಣಬಹುದು. ಈ ಜಿಲ್ಲೆಯಲ್ಲಿ ಹುಬ್ಬಳ್ಳಿ ಮತ್ತು ಧಾರವಾಡಗಳು ವಸ್ತುಗಳನ್ನು ಖರೀದಿಸಿ ಮರು ರಫ್ತು ಮಾಡುವ ('ಎಂಟ್ರಿಪಾಟ್') ಕೇಂದ್ರಗಳಾಗಿದ್ದು ಪಶ್ಚಿಮ ಭಾಗದ ಪ್ರಮುಖ ವ್ಯಾಪಾರ ಕೇಂದ್ರವಾದ ಮುಂಬಯಿಯೊಂದಿಗೆ ನೇರ ಸಂಪರ್ಕ ಹೊಂದಿರುವವು. ಹುಬ್ಬಳ್ಳಿ-ಧಾರವಾಡಗಳು ದಾವಣಗೆರೆ, ಬಳ್ಳಾರಿ, ಬೆಂಗಳೂರು, ಬಿಜಾಪುರ ಮುಂತಾದ ಪ್ರಮುಖ ನಗರಗಳೊಂದಿಗೆ ನೇರ ಸಂಪರ್ಕ ಹೊಂದಿರುವವು. ಜಿಲ್ಲೆಯ ಆಂತರಿಕ ವಾಣಿಜ್ಯ ಕೇಂದ್ರಗಳಾದ ಗದಗ, ಬ್ಯಾಡಗಿ, ಹಾವೇರಿ ಮತ್ತು ರಾಣೆಬೆನ್ನೂರು ಇಂದಿಗೂ ಪ್ರಮುಖವಾಗಿವೆ. ಹತ್ತಿಯು ಈ ಜಿಲ್ಲೆಯ ಪ್ರಮುಖ ರಫ್ತು ವಾಣಿಜ್ಯ ಬೆಳೆಯಾಗಿದ್ದು ಹುಬ್ಬಳ್ಳಿ, ಧಾರವಾಡ, ಗದಗ, ರಾಣೆಬೆನ್ನೂರು, ನರಗುಂದ ಮತ್ತು ಅಣ್ಣಿಗೇರಿ, ಹತ್ತಿಯ ವ್ಯಾಪಾರದ ಪ್ರಮುಖ ಸಗ

ಮಾರಾಟ ಕೇಂದ್ರಗಳಾಗಿವೆ. ಈ ಜಿಲ್ಲೆಯಿಂದ ಹೊರಗೆ ಹೋಗುವ ಪ್ರಮುಖ ವ್ಯವಸಾಯ ಉತ್ಪನ್ನಗಳಲ್ಲಿ ಶೇಂಗಾ, ಹತ್ತಿಬೀಜ, ಮೆಣಸಿನಕಾಯಿ, ಅಡಿಕೆ ಮತ್ತು ಏಲಕ್ಕಿ ಎಂದು ಸೂಚಿಸಲಾಗಿದೆ. ಕಿಲಮಟ್ಟಿಗೆ ಧಾರವಾಡ ಮತ್ತು ಅಳ್ನಾವರಗಳಿಂದ ಮರಮಟ್ಟು (ಟಿಂಬರ್) ರಫ್ತಾಗುವುದು.

ಯಂತ್ರ ತಯಾರಿಕಾ ವಸ್ತುಗಳಲ್ಲಿ ಈ ಜಿಲ್ಲೆಯ ಪ್ರಮುಖ ರಫ್ತುಗಳು ಎಂದರೆ ಹತ್ತಿ ಬಟ್ಟೆ ಮತ್ತು ಕೈಮಗ್ಗದ ಬಟ್ಟೆ, ಕಬ್ಬಿಣ ಉಕ್ಕಿನ ಸಾಮಾನುಗಳು, ಇಂಜನಿಯರಿಂಗ್ ವಸ್ತುಗಳು ಮತ್ತು ಬೀಡಿ ಮುಂತಾದವುಗಳು ಎಂದು ವರದಿಯಾಗಿದೆ. ಈ ಮುಂದಿನ ತಖ್ತೆಯಲ್ಲಿ (ಪುಟ 440) 1979 ನೇ ವರ್ಷದಲ್ಲಿ ಇದ್ದಂತೆ ಜಿಲ್ಲೆಯ ಪ್ರಮುಖ ನಗರಗಳ ಮೂರು ಬಹು ಮುಖ್ಯ ಆಮದು ಮತ್ತು ರಫ್ತು ವಸ್ತುಗಳು ಮತ್ತು ಆಯಾ ಸ್ಥಳದ ಮೂರು ಪ್ರಮುಖ ತಯಾರಿಕಾ ವಸ್ತುಗಳನ್ನು ಸೂಚಿಸಲಾಗಿದೆ. (ಆಧಾರ 1981 ರ ಜನಗಣತಿ).

ವಾಣಿಜ್ಯ ಚಟುವಟಿಕೆಗಳು ಹೆಚ್ಚಾದಂತೆ ವ್ಯಾಪಾರ ವಾಣಿಜ್ಯದಲ್ಲಿ ನಿರತರಾದವರ ಸಂಖ್ಯೆಯು ಹೆಚ್ಚುತ್ತಿರುವುದು. ಅನೇಕ ಗ್ರಾಮೀಣ ಪ್ರದೇಶಗಳು ನಗರೀಕರಣ ಮತ್ತು ಕೈಗಾರೀಕರಣದ ಪ್ರಭಾವ ವಲಯಕ್ಕೆ ಒಳಗಾಗಿವೆ. ಇತ್ತೀಚೆಗೆ ಮುಕ್ತಾಯ ಹಂತದಲ್ಲಿರುವ ಯುನಿಗೇಜ ರೈಲುಮಾರ್ಗ ಪರಿವರ್ತನಾ ಯೋಜನೆ, ಕಾರವಾರದ ನೌಕಾನೆಲೆ ಯೋಜನೆ (ಸಿಬರ್ಡ), ಕೈಗಾ ಅಣು ವಿದ್ಯುತ್ ಯೋಜನೆ, ಬಹಳ ದಿನಗಳಿಂದ ಬೇಡಿಕೆಯಲ್ಲಿರುವ ಕಾರವಾರ - ಹುಬ್ಬಳ್ಳಿ ರೈಲು ಮಾರ್ಗ, ಹುಬ್ಬಳ್ಳಿಯಲ್ಲಿ ಪ್ರಾಯೋಗಿಕವಾಗಿ ಪ್ರಾರಂಭವಾಗಿರುವ ಶೇರು ಮಾರುಕಟ್ಟೆ, ಹೊಸದಾಗಿ ಹುಬ್ಬಳ್ಳಿಗೆ ಇತ್ತೀಚೆಗೆ ಒದಗಿಸಲಾಗಿರುವ ವಿಮಾನಯಾನ ಸಂಪರ್ಕ, ಹೆಚ್ಚುತ್ತಿರುವ ಪತ್ರಿಕೆಗಳ ಹಾಗೂ ಇತರ ಸಂಪರ್ಕ ಮಾಧ್ಯಮಗಳ ಪರಿಣಾಮ, ಪ್ರಮುಖ ನಗರಗಳಲ್ಲಿ ಬೆಳೆಯುತ್ತಿರುವ ಹೋಟೆಲ್ ಉದ್ಯಮ, ವ್ಯಾಪಕವಾಗುತ್ತಿರುವ ಶೈಕ್ಷಣಿಕ ಮತ್ತು ಆರೋಗ್ಯ ಸೇವಾ ವ್ಯವಸ್ಥೆ, ಇವೆಲ್ಲ ಈ ಜಿಲ್ಲೆಯ ವ್ಯಾಪಾರ ವಾಣಿಜ್ಯಕ್ಕೆ ಹೊಸ ಆಯಾಮವನ್ನು ಒದಗಿಸಿಕೊಡಲಿವೆ.

### ವ್ಯಾಪಾರ ವಾಣಿಜ್ಯ ವೃತ್ತಿ ನಿರತರು

ಬಹಳ ಹಿಂದಿನಿಂದಲೂ ಜಿಲ್ಲೆಯ ಬಹುಪಾಲು ಜನರು ಒಕ್ಕಲುತನದ ನಂತರ ವ್ಯಾಪಾರ ವಾಣಿಜ್ಯ ಚಟುವಟಿಕೆಗಳನ್ನು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ತಮ್ಮ ಉಪ ಜೀವನಕ್ಕೆ ಅವಲಂಬಿಸಿರುವುದನ್ನು ಅಂಕಿ ಅಂಶಗಳು ಸಮರ್ಥಿಸುತ್ತವೆ. ವಾಣಿಜ್ಯ ಶಾಸ್ತ್ರಕ್ಕೆ ಬಹು ವ್ಯಾಪಕ ವಿಸ್ತೃತ ಅರ್ಥವ್ಯಾಖ್ಯೆ ಇದ್ದು ಅದು ಕೇವಲ ಕೊಳ್ಳುವ ಮಾರುವವರ ಮಧ್ಯದ ಸೀಮಿತ ಚಟುವಟಿಕೆಯಾಗಿರದೇ ಇವೆರಡಕ್ಕೂ ಹಿನ್ನಲೆಯಾಗಿರುವ, ಪೂರಕವಾಗಿರುವ ವಿವಿಧ ಚಟುವಟಿಕೆಗಳು ಅಂದರೆ ಮಾರುಕಟ್ಟೆ, ಸಾಗಾಣಿಕೆ, ವಿಮೆ, ದಾಸ್ತಾನುಮಳಿಗೆ, ಬ್ಯಾಂಕಿಂಗ್ ಮುಂತಾದ ಹಲವಾರು ಚಟುವಟಿಕೆಗಳನ್ನು ನಿರ್ವಹಿಸುವ ಸಂಸ್ಥೆಗಳನ್ನೂ, ಕಾರ್ಯನಿರತರನ್ನೂ ಒಳಗೊಂಡಿರುವುದು. ಈ ಕಾರಣಗಳಿಂದ ಬೇರೆಬೇರೆ ಜನಗಣತಿಯಲ್ಲಿ ವಾಣಿಜ್ಯ ನಿರತರ ಸಂಖ್ಯೆ ಬೇರೆಬೇರೆಯಾಗಿ ಕಂಡುಬರುವುದು. 1971 ಜನಗಣತಿಯಲ್ಲಿ ವಾಣಿಜ್ಯ ನಿರತರಾದವರ ಸಂಖ್ಯೆಯು ಸೀಮಿತ ವ್ಯಾಖ್ಯೆ ಮತ್ತು ವ್ಯಾಪ್ತಿಯಲ್ಲಿ ಬಂದಿದ್ದರೆ 1981 ರಲ್ಲಿ ಮೀನುಗಾರಿಕೆ, ಅರಣ್ಯ, ತೋಟಗಾರಿಕೆ (ಪ್ಲಾಂಟೇಶನ್), ನಿರ್ಮಾಣ ಕೆಲಸದಲ್ಲಿ ತೊಡಗಿರುವವರು, ಮನೆಯ ಹೊರಗೆ ಉತ್ಪಾದನಾ ಉದ್ಯಮದಲ್ಲಿ ತೊಡಗಿದವರು, ಸಾಗಾಣಿಕೆ ಮುಂತಾದ ವೃತ್ತಿ ನಿರತರನ್ನು ಇದರಲ್ಲಿ ಸೇರಿಸಲಾಗಿತ್ತು. ಆದ್ದರಿಂದ ಸಂಖ್ಯೆಯಲ್ಲಿ ಗಮನೀಯ ಹೆಚ್ಚಳ ಕಂಡು ಬರುವುದು (1991 ರ ಗಣತಿಯ ಮಾಹಿತಿ ಲಭ್ಯ ಇಲ್ಲ).

1881 ರಲ್ಲಿ ಈ ಜಿಲ್ಲೆಯಲ್ಲಿ 3,704 ಜನರು ವ್ಯಾಪಾರ ವಾಣಿಜ್ಯದಲ್ಲಿ ತೊಡಗಿದ್ದರು. (ಅಂದಿನ ಜಿಲ್ಲೆಯ ಒಟ್ಟು ಜನ ಸಂಖ್ಯೆ 8.82 ಲಕ್ಷ). ಇತ್ತೀಚಿನ ದಶಕಗಳಲ್ಲಿ ಅಂದರೆ 1951 ರಲ್ಲಿ ವ್ಯವಸಾಯದ ನಂತರ ವಾಣಿಜ್ಯ ವೃತ್ತಿಯನ್ನು ಜೀವನಾಧಾರಕ್ಕೆ ಅವಲಂಬಿಸಿದವರ ಸಂಖ್ಯೆ ಒಟ್ಟು ಜನ ಸಂಖ್ಯೆಯಲ್ಲಿ (15.75 ಲಕ್ಷ) 1.14 ಲಕ್ಷ ಎಂದು (ಶೇ. 7). ಇವರಲ್ಲಿ 30,960 ಜನರು ನೇರವಾಗಿ ವ್ಯಾಪಾರವನ್ನು ಅವಲಂಬಿಸಿದ್ದರು. ಅವರ ಪೈಕಿ ಸುಮಾರು 26,627 ಜನರು ಚಿಲ್ಲರೆ ವ್ಯಾಪಾರಸ್ಥರಾಗಿದ್ದರೆ, 1,484 ಜನರು ಸಗಟು ವ್ಯವಹಾರದವರು ಮತ್ತು ಉಳಿದ 2,849 ಜನರು ಇತರ ವ್ಯಾಪಾರಸ್ಥರಾಗಿದ್ದರು.

ಈ ಜಿಲ್ಲೆಯಲ್ಲಿ 1971 ರಲ್ಲಿ ಒಟ್ಟು ಜನಸಂಖ್ಯೆ (23.42 ಲಕ್ಷ)ಯ ಪೈಕಿ ವ್ಯಾಪಾರ ವಾಣಿಜ್ಯದಲ್ಲಿ ನಿರತರಾದವರ ಸಂಖ್ಯೆ 60,968 ಆಗಿದ್ದರೆ ಅವರಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ನಿರತರಾದವರ ಸಂಖ್ಯೆ ಅನುಕ್ರಮವಾಗಿ 40,726 ಮತ್ತು

**ಕೋಷ್ಟಕ 6.15: ಮುಖ್ಯ ಕೇಂದ್ರಗಳ ಆಯಾತ-ನಿರ್ಯಾತ ವಿವರ (1981 ರಂತೆ)**

| ಪಟ್ಟಣಗಳು | ಆಯಾತವಾಗುವ ಮೂರು ಪ್ರಮುಖ ವಸ್ತುಗಳು | | | ನಿರ್ಯಾತವಾಗುವ ಮೂರು ಪ್ರಮುಖ ವಸ್ತುಗಳು | | | ತಯಾರಾಗುವ ಮೂರು ಪ್ರಮುಖ ವಸ್ತುಗಳು | | |
|---|---|---|---|---|---|---|---|---|---|
| 1 ಆಳ್ನಾವರ | ಬಟ್ಟೆ | ಕಬ್ಬಿಣ ಮತ್ತು ಸಿಮೆಂಟ್ | - | ಮರಮಟ್ಟು | ಭತ್ತ | - | ಮರದ ಸಾಮಾನು | ಅವಲಕ್ಕಿ | - |
| 2 ಅಣ್ಣಿಗೇರಿ | ಅಕ್ಕಿ | ಖಾದ್ಯ ಎಣ್ಣೆ | ಬಟ್ಟೆ | ಅರಳೆ | ಗೋದಿ | ಶೇಂಗಾ | ಅರಳೆ | - | - |
| 3 ಬ್ಯಾಡಗಿ | ಆಹಾರ ಧಾನ್ಯ | ಖಾದ್ಯ ಎಣ್ಣೆ | ಬಟ್ಟೆ | ಮೆಣಸಿನಕಾಯಿ | ಬೀಡಿ | ಮಂಡಕ್ಕಿ | ಬೀಡಿ | ಮಂಡಕ್ಕಿ | ಅರಳೆ |
| 4 ಗದಗ-ಬೆಟಗೇರಿ | ಹತ್ತಿ | ಎಣ್ಣೆಕಾಳು | ಬೀಡಿ ಎಲೆ ಮತ್ತು ತಂಬಾಕು | ಬಟ್ಟೆ | ಖಾದ್ಯ ಎಣ್ಣೆ ಮತ್ತು ಎಣ್ಣೆಹಿಂಡಿ | ಗೋದಿಯ ರವೆ, ಮೈದಾ | ಖಾದ್ಯ ಎಣ್ಣೆ ಮತ್ತು ಎಣ್ಣೆಹಿಂಡಿ | ನೂಲಿನ ಸೀರೆ | ಗೋಧಿ, ರವೆ, ಮೈದಾ |
| 5 ಗಜೇಂದ್ರಗಡ | ಬಟ್ಟೆ | ಲೇಖನ ಸಾಮಗ್ರಿ | ಲೋಹ | ಅರಳೆ | ಶೇಂಗಾ ಬೀಜ | ಜೋಳ | ಕೈಮಗ್ಗದ ಸೀರೆ | ಎಣ್ಣೆ ಮತ್ತು ಹಿಂಡಿ | ಗೋಧಿ ಉತ್ಪನ್ನ |
| 6 ಹಾನಗಲ್ | ಭತ್ತ | - | - | ಅಕ್ಕಿ | ಗೋದಿ ಉತ್ಪನ್ನ | - | ಗೋದಿ ಉತ್ಪನ್ನಗಳು | - | - |
| 7 ಹಾವೇರಿ | ಶೇಂಗಾ | ಏಲಕ್ಕಿ (ಕಚ್ಚಾ) | ಹತ್ತಿ | ಏಲಕ್ಕಿ (ಸಂಸ್ಕರಿಸಿದ) | ಸಿಮೆಂಟ್ ಇಟ್ಟಿಗೆ | ಖಾದ್ಯ ಎಣ್ಣೆ | ಅರಳೆ | ಶೇಂಗಾ ಎಣ್ಣೆ | ಸಿಮೆಂಟ ಇಟ್ಟಿಗೆ |
| 8. ಹಿರೇಕೆರೂರು | ಬಟ್ಟೆ | ಆಹಾರಧಾನ್ಯ | - | ಅರಳೆ | ಮೆಣಸಿನ ಕಾಯಿ | - | - | - | - |
| 9 ಹುಬ್ಬಳ್ಳಿ ಧಾರವಾಡ | ಬಟ್ಟೆ | ಔಷಧಿಗಳು | ಹತ್ತಿ | ಅರಳೆ | ತಾಮ್ರ ಹಿತ್ತಾಳೆ ಅಲ್ಯೂಮಿನಿಯಂ ಪಾತ್ರೆ | ಯಂತ್ರೋಪಕರಣ | ಲೇತ್ ಯಂತ್ರ | ವಿದ್ಯುತ್ ಮೋಟಾರು | ವಿಶೇಷ ಮಾದರಿ ಪಂಪು |
| 10 ಕಲಘಟಗಿ | ಮದುಕಟ್ಟಿಗೆ ಮತ್ತು ಕಾಡುಕಟ್ಟಿಗೆ | ಸಕ್ಕರೆ | ಶೇಂಗಾ ಎಣ್ಣೆ | ಕಡ್ಡಿ ಪೆಟ್ಟಿಗೆ | ಪ್ಲೈವುಡ್ | ಅವಲಕ್ಕಿ | ಕಡ್ಡಿಪೆಟ್ಟಿಗೆ | ಪ್ಲೈವುಡ್ | - |
| 11 ಕುಂದಗೋಳ | ಅಕ್ಕಿ | ಜೋಳ | ಖಾದ್ಯ ತೈಲ | ಮೆಣಸಿನಕಾಯಿ | ಅರಳೆ | ಶೇಂಗಾ ಬೀಜ | ಅರಳೆ | ಮಡಿಕೆ ಕುಡಿಕೆಗಳು | ಬೇಕರಿ ವಸ್ತುಗಳು |
| 12 ಲಕ್ಷ್ಮೇಶ್ವರ | ಅಕ್ಕಿ | ಜೋಳ | ಬೆಲ್ಲ | ಸಾಸಿವೆ | ಶೇಂಗಾ | ಒಣಮೆಣಸಿನ ಕಾಯಿ | - | - | - |

| | ಪಟ್ಟಣಗಳು | ಆಯಾತವಾಗುವ ಮೂರು ಪ್ರಮುಖ ವಸ್ತುಗಳು | | | ನಿರ್ಯಾತವಾಗುವ ಮೂರು ಪ್ರಮುಖ ವಸ್ತುಗಳು | | | ತಯಾರಾಗುವ ಮೂರು ಪ್ರಮುಖ ವಸ್ತುಗಳು | | |
|---|---|---|---|---|---|---|---|---|---|---|
| 13 | ಮುಳಗುಂದ | ಸಿಮೆಂಟ್ | ಸಕ್ಕರೆ | ಹತ್ತಿ | ಅರಳೆ | ಶೇಂಗಾ | ಮೆಣಸಿನಕಾಯಿ | ಶೇಂಗಾಎಣ್ಣೆ | ಮಡಿಕೆ ಕುಡಿಕೆಗಳು | ಅರಳೆ |
| 14 | ಮುಂಡರಗಿ | ಅಕ್ಕಿ | ಚಿಮಣಿ ಎಣ್ಣೆ | ಸಕ್ಕರೆ | ಶೇಂಗಾ ಎಣ್ಣೆ | ಅರಳೆ | ಕಚ್ಚಾರೇಷ್ಮೆ | ಖಾದಿಬಟ್ಟೆ | ಶೇಂಗಾ ಎಣ್ಣೆ | ಅರಳೆ |
| 15 | ನರೇಗಲ್ | ಹತ್ತಿ | ಶೇಂಗಾ | ಅಕ್ಕಿ | ಶೇಂಗಾ ಎಣ್ಣೆ | ಅರಳೆ | - | ಶೇಂಗಾ ಎಣ್ಣೆ | ಅರಳೆ | - |
| 16 | ನರಗುಂದ | ಒಕ್ಕಲುತನ ಸಾಮಗ್ರಿ | ಔಷಧಿಗಳು | ಕಿರಾಣಿ ಸಾಮಾನು | ನೂಲು (ಹತ್ತಿ) | ಗೋಧಿ ಉತ್ಪನ್ನ | ಖಾದ್ಯತೈಲ | ನೂಲು (ಹತ್ತಿ) | ಗೋಧಿ ಉತ್ಪನ್ನ | - |
| 17 | ನವಲಗುಂದ | ಗೋದಿ | ಹತ್ತಿ | - | ಗೋಧಿ ಉತ್ಪನ್ನ | ಅರಳೆ | - | ಅರಳೆ | ಗೋದಿ ಉತ್ಪನ್ನ | - |
| 18 | ರಾಣೆಬೆನ್ನೂರು | ಜೋಳ | ಬೆಲ್ಲ | ಅಕ್ಕಿ | ಕೈಮಗ್ಗದ ಸೀರೆ | ಶೇಂಗಾ ಎಣ್ಣೆ | ಉರುಟು ಉಣ್ಣೆ ಕಂಬಳಿ | ಕೈಮಗ್ಗದ ಸೀರೆ | ಉರುಟು ಉಣ್ಣೆ ಕಂಬಳಿ | ಶೇಂಗಾಎಣ್ಣೆ |
| 19 | ರೋಣ | ಆಹಾರಧಾನ್ಯ | ಶೇಂಗಾ | ಬಟ್ಟೆ | ಶೇಂಗಾಎಣ್ಣೆ | - | - | ಶೇಂಗಾಎಣ್ಣೆ | - | - |
| 20 | ಸವಣೂರು | ಸಕ್ಕರೆ | ಸೀಮೆಎಣ್ಣೆ | ಅಕ್ಕಿ | ಬೀಡಿ | ವೀಳ್ಯವಎಲೆ | ಅರಳೆ | ಬೀಡಿ | ಸಾಬೂನು ಪುಡಿ | ಅರಳೆ |
| 21 | ಶಿಗ್ಗಾಂವಿ | ತಂಬಾಕು | ಸಕ್ಕರೆ | ಹತ್ತಿ | ವೀಳ್ಯದ ಎಲೆ | ಜೋಳ | ಅರಳೆ | ಬೀಡಿ | - | - |
| 22 | ಶಿರಹಟ್ಟಿ | ಅಕ್ಕಿ | ಶೇಂಗಾ | ಹತ್ತಿ | ಜೋಳ | ಶೇಂಗಾಎಣ್ಣೆ | ಮೆಣಸಿನ ಕಾಯಿ | ಶೇಂಗಾಎಣ್ಣೆ | ಗೋಣಿಚೀಲ | - |

20,242. ವ್ಯಾಪಾರ ವಾಣಿಜ್ಯದಲ್ಲಿ ತೊಡಗಿದ ಒಟ್ಟು ಜನಸಂಖ್ಯೆಯಲ್ಲಿ 55,781 ಜನ ಪುರುಷರಾಗಿದ್ದರೆ, ಮಹಿಳೆಯರ ಸಂಖ್ಯೆ 644.

ಗದಗ ತಾಲೂಕಿನ ನಂತರ ಅನುಕ್ರಮವಾಗಿ ರಾಣೆಬೆನ್ನೂರು (4,153), ಹಾವೇರಿ (3,563), ರೋಣ (3,150), ಹಿರೇಕೆರೂರು (2,501), ಶಿರಹಟ್ಟಿ (2,427), ಹಾನಗಲ್ (2,218) ತಾಲೂಕುಗಳು ಇಳಿಕೆ ಕ್ರಮ ಸಂಖ್ಯೆಯಲ್ಲಿ ವ್ಯಾಪಾರ ವಾಣಿಜ್ಯ ನಿರತರನ್ನು ಹೊಂದಿದ್ದವು. ಈ ತಾಲೂಕುಗಳಲ್ಲಿಯೂ ಕೂಡ ವಾಡಿಕೆಯಂತೆ ನಗರ ಪ್ರದೇಶಗಳಲ್ಲಿ ವ್ಯಾಪಾರ ಉದ್ಯಮಗಳಲ್ಲಿ ತೊಡಗಿದವರ ಸಂಖ್ಯೆ ಹೆಚ್ಚಾಗಿತ್ತು, ಎಂದು 1971 ಜನಗಣತಿಯ ವರದಿಯಿಂದ ತಿಳಿದುಬರುವುದು.

1981 ರಲ್ಲಿ ಜಿಲ್ಲೆಯ ಒಟ್ಟು ಜನಸಂಖ್ಯೆ 29.45 ಲಕ್ಷ; ಆ ಪೈಕಿ ವಾಣಿಜ್ಯ ವ್ಯವಹಾರಗಳಲ್ಲಿ ತೊಡಗಿದವರ ಸಂಖ್ಯೆ 2,93,359 ಆಗಿದ್ದರೆ ಅವರಲ್ಲಿ 2,60,269 ಜನ ಪುರುಷರು ಮತ್ತು 33,090 ಮಹಿಳೆಯರು ಸೇರಿದ್ದರು. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಇವರ ಹಂಚಿಕೆ ಅನುಕ್ರಮವಾಗಿ 86,089 ಮತ್ತು 2,07,270 ಆಗಿತ್ತು. ಜಿಲ್ಲೆಯ ನಗರ ಪ್ರದೇಶಗಳ ವಾಣಿಜ್ಯ ನಿರತರ ಒಟ್ಟು ಸಂಖ್ಯೆಯಲ್ಲಿ ಅರ್ಧಕ್ಕಿಂತ ಹೆಚ್ಚು, 1,20,271 ಜನರು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಪರಿಮಿತಿಯಲ್ಲಿ ವಾಸವಾಗಿದ್ದರು. ಹುಬ್ಬಳ್ಳಿ ಧಾರವಾಡ ನಂತರ ಬಹುಸಂಖ್ಯೆಯಲ್ಲಿ ವಾಣಿಜ್ಯ ನಿರತರನ್ನು ಹೊಂದಿದ ತಾಲೂಕುಗಳು ಎಂದರೆ ಕ್ರಮವಾಗಿ ಗದಗ (35,698), ರಾಣೆಬೆನ್ನೂರು (23,235), ಹಾವೇರಿ (14,656), ರೋಣ (11,529), ಶಿರಹಟ್ಟಿ (9,138), ಧಾರವಾಡ (9,023), ನವಲಗುಂದ (8,236) ಮತ್ತು ಹಿರೇಕೆರೂರು (8,184). ನಗರಪಾಲಿಕೆಗಳ ವ್ಯಾಪ್ತಿಯಲ್ಲಿ ಹುಬ್ಬಳ್ಳಿ ಧಾರವಾಡ ನಂತರ ಹೆಚ್ಚು ವಾಣಿಜ್ಯ ನಿರತರನ್ನು ಹೊಂದಿದ ನಗರಗಳಲ್ಲಿ ರಾಣೆಬೆನ್ನೂರು (12,349), ಗದಗ (8,429), ಹಾವೇರಿ (7,392), ನರಗುಂದ (3,869), ಬ್ಯಾಡಗಿ (3,719), ಲಕ್ಷ್ಮೇಶ್ವರ (3,340), ಸವಣೂರು (3,083) ಮುಂತಾದವುಗಳು ಪ್ರಮುಖವಾಗಿದ್ದವು.

### ನೊಂದಾಯಿತ ವ್ಯಾಪಾರಿ ಸಂಸ್ಥೆಗಳು

ಬೊಂಬಾಯಿ ವಾಣಿಜ್ಯ ತೆರಿಗೆ ಅಧಿನಿಯಮ 1946ರ ಅನ್ವಯ, ಆಮದು ಮತ್ತು ಉತ್ಪಾದನೆಯಲ್ಲಿ ತೊಡಗಿರುವ ವ್ಯವಹಾರಸ್ಥರ ವಹಿವಾಟು ವಾರ್ಷಿಕ ರೂ. ಹತ್ತು ಸಾವಿರಕ್ಕಿಂತ ಹೆಚ್ಚಾಗಿದ್ದಲ್ಲಿ ಮತ್ತು ಉಳಿದಂತೆ ಇತರೇ ವಸ್ತುಗಳ ವ್ಯಾಪಾರಸ್ಥರು ವಾರ್ಷಿಕ ವಹಿವಾಟು ರೂ.30 ಸಾವಿರಕ್ಕಿಂತ ಹೆಚ್ಚಾಗಿದ್ದಲ್ಲಿ ಕಾನೂನಿನ ಪ್ರಕಾರ ನೋಂದಾಯಿಸಬೇಕಾಗುತ್ತಿತ್ತು. ಈ ಜಿಲ್ಲೆಯಲ್ಲಿ ಬಹುಸಂಖ್ಯೆಯ ವರ್ತಕರು ಈ ಮೇಲಿನ ಕಾನೂನಿನ ಕಕ್ಷೆಯಲ್ಲಿ ಬರುತ್ತಿರಲಿಲ್ಲ ಎಂದು 1951ರ ವರದಿಯನ್ನು ಗ್ಯಾಸೆಟಿಯರ್‌ನಲ್ಲಿ ನಮೂದಿಸಲಾಗಿದೆ. 1951 ಮಾರ್ಚ್ ಅವಧಿಯಲ್ಲಿ ಹುಬ್ಬಳ್ಳಿ, ಧಾರವಾಡ, ಗದಗ ಈ ನಗರಗಳನ್ನು ಹೊರತುಪಡಿಸಿ ಜಿಲ್ಲೆಯಲ್ಲಿ ನೋಂದಾಯಿಸಲ್ಪಟ್ಟ ವ್ಯಾಪಾರಸ್ಥರ ಸಂಖ್ಯೆ 432 ಆಗಿದ್ದು ಅವರೆಲ್ಲರ ವಾರ್ಷಿಕ ಒಟ್ಟು ವಹಿವಾಟು ರೂ. 210 ಲಕ್ಷ ಎಂದು ತಿಳಿದು ಬರುವುದು. ಈ ವಾಣಿಜ್ಯ ಸಂಸ್ಥೆಗಳ ಪೈಕಿ, ಬಹುಪಾಲು 239 (ಶೇ. 55) ವರ್ತಕರು ಆಹಾರಧಾನ್ಯ ವಸ್ತುಗಳ ಮಾರಾಟದವರಾಗಿದ್ದು ಅವರ ವಾರ್ಷಿಕ ವಹಿವಾಟು ರೂ. 141 ಲಕ್ಷ (ಒಟ್ಟು ವಹಿವಾಟಿನಲ್ಲಿ ಶೇ. 66) ಆಗಿತ್ತು. ಬಟ್ಟೆ ಮತ್ತು ಇತರ ಗ್ರಾಹಕ ವಸ್ತುಗಳ ವ್ಯಾಪಾರದಲ್ಲಿ ನಿರತರಾಗಿದ್ದ ವ್ಯಾಪಾರಸ್ಥರ ಸಂಖ್ಯೆ 104 ಆಗಿದ್ದು (ಶೇ. 24 ) ಅವರೆಲ್ಲರ ವಾರ್ಷಿಕ ವಹಿವಾಟು ರೂ. 19.65 ಲಕ್ಷ (ಶೇ. 9.4) ಆಗಿತ್ತು. ಇತರ ವಸ್ತುಗಳ ವ್ಯಾಪಾರದಲ್ಲಿ ನಿರತರಾಗಿದ್ದ ವ್ಯಾಪಾರಸ್ಥರ ಸಂಖ್ಯೆ 65 ಆಗಿದ್ದು ಅವರೆಲ್ಲರ ವಾರ್ಷಿಕ ವಹಿವಾಟು ರೂ. 43.80 (ಶೇ. 20 ) ಲಕ್ಷ. ಕಟ್ಟಡ ಸಾಮಗ್ರಿಗಳ ನೋಂದಾಯಿತ ಮಾರಾಟಗಾರರು ಕೇವಲ ಧಾರವಾಡ, ರೋಣ ತಾಲೂಕುಗಳು ಮತ್ತು ಹಾವೇರಿ ನಗರದಲ್ಲಿ ಇದ್ದರು. ಕೈಗಾರಿಕಾ ವಸ್ತುಗಳ ವ್ಯಾಪಾರದಲ್ಲಿ ನಿರತರಾದ ನೊಂದಾಯಿಸಲ್ಪಟ್ಟ ವ್ಯಾಪಾರಸ್ಥರು, ಧಾರವಾಡ, ಮುಂಡರಗಿ, ಹಾವೇರಿ 'ಮತ್ತು ಶಿರಹಟ್ಟಿಗಳಲ್ಲಿ ಇದ್ದುದಾಗಿ ತಿಳಿದು ಬರುವುದು.

**ಚಿಲ್ಲರೆ ವ್ಯಾಪಾರಸ್ಥರು:** ಮೇಲೆ ವಿವರಿಸಿದ ಸಗಟು (ಠೋಕ) ವ್ಯಾಪಾರಸ್ಥರಲ್ಲದೇ ಜಿಲ್ಲೆಯಾದ್ಯಂತ ಹಲವಾರು ಸಾವಿರ ಚಿಲ್ಲರೆ ವರ್ತಕರು ವ್ಯಾಪಾರ ವೃತ್ತಿಯಲ್ಲಿ ನಿರತರಾಗಿದ್ದರು. ಇವರಿಗೆ ನೋಂದಾವಣೆ ಕಡ್ಡಾಯವಾಗಿರಲಿಲ್ಲ. 1952 ಮಾರ್ಚ್ ಕೊನೆಯಲ್ಲಿ ಇದ್ದಂತೆ ಬೊಂಬಾಯಿ ಅಂಗಡಿ ಮತ್ತು ಮುಂಗಟ್ಟು (ಶಾಪ್ಸ ಮತ್ತು ಎಸ್ಟಾಬ್ಲಿಶಮೆಂಟ್ಸ್) ಕಾನೂನು 1948 ರ ಅನ್ವಯ ಪ್ರಮುಖ ನಗರ ಸಭೆಗಳಾದ ಹುಬ್ಬಳ್ಳಿ, ಗದಗ-ಬೆಟಗೇರಿ ಮತ್ತು ಧಾರವಾಡಗಳಲ್ಲಿ ಅನುಕ್ರಮವಾಗಿ 3,935, 1,478 ಮತ್ತು 992 ವಿವಿಧ

ವಸ್ತುಗಳನ್ನು ಮಾರುವ ನಗರ ಸಭೆಯ ಒಪ್ಪಿಗೆ ಪಡೆದ ಅಂಗಡಿಗಳು ಇದ್ದವು. ಈ ಅಂಗಡಿಗಳಲ್ಲಿ ಹುಬ್ಬಳ್ಳಿಯಲ್ಲಿ ಸುಮಾರು 8,000 ಜನರು (ಪುರುಷರೂ ಮಹಿಳೆಯರೂ ಸೇರಿ), ಗದಗ ಬೆಟಗೇರಿಯಲ್ಲಿ 3,200 ಜನರು, ಧಾರವಾಡದಲ್ಲಿ 1,512 ಜನರು ಕೆಲಸ ಮಾಡುತ್ತಿದ್ದರು. ಹುಬ್ಬಳ್ಳಿಯಲ್ಲಿನ ಒಟ್ಟು ಚಿಲ್ಲರೆ ಅಂಗಡಿಗಳಲ್ಲಿ ಬಹು ಸಂಖ್ಯೆಯಲ್ಲಿ ಪಾನ ಬೀಡಾ ಸಿಗರೇಟ್ ಅಂಗಡಿಗಳು 663, ಕಿರಾಣಿ 617, ಬಟ್ಟೆ ಅಂಗಡಿ 218, ಸಿಹಿತಿಂಡಿ ಮಾರಾಟದ ಅಂಗಡಿಗಳು 125, ಸರಾಫಿ ಅಂಗಡಿಗಳು 223, ಸ್ಟೇಶನರಿ 134 ಹಾಗೂ ಇತರೇ ವಸ್ತುಗಳ ಅಂಗಡಿಗಳು 617 ಇದ್ದವು. ಧಾರವಾಡ ನಗರ ಸಭೆಯ ಹದ್ದಿನಲ್ಲಿ ಇದ್ದ ಅಂಗಡಿಗಳಲ್ಲಿ ಹೆಚ್ಚಿನವುಗಳು ಕಿರಾಣಿ ಅಂಗಡಿಗಳು - 221, ಪಾನ ಬೀಡಾ ಅಂಗಡಿಗಳು - 198, ಮರಮಟ್ಟು ಮತ್ತು ಜಲಾವ ಕಟ್ಟಿಗೆ ಅಡ್ಡೆಗಳು - 75, ಬಟ್ಟೆ ಅಂಗಡಿ - 63, ಸರಾಫ ಅಂಗಡಿಗಳು - 35, ಚರ್ಮದ ವಸ್ತು ಚಪ್ಪಲಿಗಳು - 33 ಮತ್ತು ಸಿಹಿತಿಂಡಿ ಅಂಗಡಿಗಳು - 33 ಇದ್ದವು. ಧಾರವಾಡ ನಗರದ ಅಂಗಡಿಗಳಲ್ಲಿ ಮಾತ್ರ ಮಹಿಳೆಯರು ಕೆಲಸ ಮಾಡುತ್ತಿರಲಿಲ್ಲ ಎಂದು ತಿಳಿದುಬರುವುದು. ಗದಗ-ಬೆಟಗೇರಿ ನಗರ ಸಭೆಯ ವ್ಯಾಪ್ತಿಯಲ್ಲಿ ಇದ್ದ ಅಂಗಡಿಗಳಲ್ಲಿ ಬಹುಪಾಲು 431 ಕಿರಾಣಿ ಅಂಗಡಿಗಳು, 347 ಪಾನಬೀಡಾ ಅಂಗಡಿಗಳು 352 ಬಟ್ಟೆ ಮತ್ತು ಹೊಸೈರಿ ಅಂಗಡಿಗಳು, 150 ಸಿದ್ದ ಉಡುಪುಗಳ ಅಂಗಡಿಗಳು ಇದ್ದರೆ ಚಪ್ಪಲಿ ಮತ್ತು ಚರ್ಮದ ವಸ್ತುಗಳನ್ನು ಮಾರುವ 94 ಅಂಗಡಿಗಳು, 78 ಸ್ಟೇಶನರಿ ಅಂಗಡಿಗಳು, 27 ಪುಸ್ತಕ ಮಾರಾಟ ಮತ್ತು ಪ್ರಕಟಣಾ ಸಂಸ್ಥೆಗಳಲ್ಲದೇ 436 ಇತರೇ ಅಂಗಡಿಗಳು ಇದ್ದವು. 1971 ರ ಜನಗಣತಿಯ ಪ್ರಕಾರ ಧಾರವಾಡ ಜಿಲ್ಲೆಯಲ್ಲಿ ಚಿಲ್ಲರೆ ವ್ಯಾಪಾರಸ್ಥರ ಸಂಖ್ಯೆ 17,577 ಆಗಿತ್ತು. ಆ ಪೈಕಿ ಗ್ರಾಮೀಣ ಪ್ರದೇಶಗಳಲ್ಲಿ ಇದ್ದಂಥ 14,637 ಅಂಗಡಿಗಳ ಸಂಖ್ಯೆ ಇಡೀ ರಾಜ್ಯದಲ್ಲಿಯೇ ಹೆಚ್ಚಾಗಿತ್ತು. ಅದರಂತೆ ಸಗಟು ಮಾರಾಟ ಕೇಂದ್ರವಾಗಿದ್ದ ರಾಜ್ಯದ 9 ಪ್ರಮುಖ ನಗರಗಳ ಪೈಕಿ ಹುಬ್ಬಳ್ಳಿ, ಧಾರವಾಡಗಳಲ್ಲಿ ಸೇರಿ 493 ಸಗಟು ಮಾರಾಟಗಾರರು ಇದ್ದರು. ಇದು ರಾಜ್ಯದಲ್ಲಿ ಬೆಂಗಳೂರಿನ ನಂತರ (2,312) ಎರಡನೇಯ ದೊಡ್ಡ ಸಂಖ್ಯೆಯಾಗಿತ್ತು. ಜಿಲ್ಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕ ಮಾರಾಟ ತೆರಿಗೆ ಮತ್ತು ಕೇಂದ್ರ ಮಾರಾಟ ತೆರಿಗೆ ಕಾನೂನಿನ ಅನ್ವಯ ನೋಂದಾಯಿಸಲ್ಪಟ್ಟ ವಾಣಿಜ್ಯ ಸಂಸ್ಥೆಗಳು ಹೆಚ್ಚಾಗಿದ್ದು ಅವುಗಳ ವಿವರಗಳು ಈ ಮುಂದಿನಂತೆ ಇರುವುದು. ಆವರಣಗಳಲ್ಲಿನ ಸಂಖ್ಯೆಗಳು ಕೇಂದ್ರ ಮಾರಾಟ ಕಾನೂನಿನ ಅನ್ವಯ ನೋಂದಾಯಿಸಲ್ಪಟ್ಟ ವಾಣಿಜ್ಯ ಸಂಸ್ಥೆಗಳ ಸಂಖ್ಯೆಯನ್ನು ಸೂಚಿಸುವವು.

1988-89 : 12,928 (6,145); 1989-90 : 15,106 (7,396); 1990-91 : 16,711 (4,726); 1991-92 : 15,375 (7,956); ಮತ್ತು 1992-93 : 15,858 (7,907).

ಜಿಲ್ಲೆಯ ಪ್ರಮುಖ ವಾಣಿಜ್ಯ ಕೇಂದ್ರಗಳಾದ ಹುಬ್ಬಳ್ಳಿ, ಧಾರವಾಡ, ಗದಗ, ಹಾವೇರಿ, ರಾಣೆಬೆನ್ನೂರುಗಳಲ್ಲಿ ಇತ್ತೀಚಿನ ಐದು ವರ್ಷಗಳಲ್ಲಿ ರಾಜ್ಯ ಮಾರಾಟ ತೆರಿಗೆ ಕಾನೂನಿನ (ಕೆ.ಎಸ್.ಟಿ.) ಮತ್ತು ಕೇಂದ್ರ ಮಾರಾಟ ತೆರಿಗೆ (ಸಿ.ಎಸ್.ಟಿ) ಕಾನೂನಿನ ಅನ್ವಯ ನೋಂದಾಯಿತ ವ್ಯಾಪಾರಿ ಸಂಸ್ಥೆಗಳು ಮಾರಾಟ ತೆರಿಗೆ ಇಲಾಖೆ ಒದಗಿಸಿದ ಮಾಹಿತಿಯಂತೆ ಈ ಕೆಳಗೆ ಸೂಚಿಸಿದಂತೆ ಇರುವುದು.

| | 1988-89 | | 1989-90 | | 1990-91 | | 1991-92 | | 1992-93 | |
|---|---|---|---|---|---|---|---|---|---|---|
| ಸ್ಥಳ | ಕೆ.ಎಸ್.ಟಿ. | ಸಿ.ಎಸ್.ಟಿ. | ಕೆ.ಎಸ್.ಟಿ. | ಸಿ.ಎಸ್.ಟಿ. | ಕೆ.ಎಸ್.ಟಿ. | ಸಿ.ಎಸ್.ಟಿ. | ಕೆ.ಎಸ್.ಟಿ. | ಸಿ.ಎಸ್.ಟಿ. | ಕೆ.ಎಸ್.ಟಿ. | ಸಿ.ಎಸ್.ಟಿ. |
| ಹುಬ್ಬಳ್ಳಿ | 4,997 | 3,295 | 6,583 | 3,989 | 6,621 | 3,532 | 6,207 | 3,792 | 7,040 | 4,306 |
| ಧಾರವಾಡ | 1,812 | 764 | 2,142 | 942 | 2,616 | 1,348 | 2,406 | 1,164 | 2,300 | 1,094 |
| ಗದಗ | 2,530 | 855 | 3,061 | 1,147 | 3,094 | 1,572 | 3,019 | 1,218 | 2,996 | 1,254 |
| ಹಾವೇರಿ | 1,615 | 561 | 1,652 | 504 | 1,534 | 456 | 1,522 | 456 | 1,405 | 482 |
| ರಾಣೆಬೆನ್ನೂರು | 1,580 | 665 | 1,642 | 734 | 1,750 | 730 | 1,577 | 817 | 1,611 | 707 |

**ನಿಯಂತ್ರಿತ ಮಾರುಕಟ್ಟೆಗಳು**

ವ್ಯವಸಾಯದ ಅಭಿವೃದ್ಧಿಗೆ ಪೂರಕವಾದ ಹಲವಾರು ಅಂಶಗಳಲ್ಲಿ ಕೃಷಿ ಉತ್ಪನ್ನಗಳ ಸುವ್ಯವಸ್ಥಿತ ಮಾರಾಟ ವ್ಯವಸ್ಥೆ ಒಂದು ಪ್ರಮುಖ ಪಾತ್ರವನ್ನು ವಹಿಸುವುದು. ವ್ಯವಸಾಯ ಹುಟ್ಟುವಳಿಗಳ ಮಾರಾಟವನ್ನು ನಿಯಂತ್ರಣಗೊಳಿಸುವ ಪೂರ್ವದಲ್ಲಿ ಬಹುಪಾಲು

ಒಕ್ಕಲುತನದ ಮತ್ತು ಇತರ ಉತ್ಪನ್ನಗಳನ್ನು ಸ್ಥಳೀಯ ವಾರದ ಸಂತೆಯಲ್ಲಿ ವರ್ತಕರ ಮೂಲಕ ಅಥವಾ ನೇರವಾಗಿ ಮಾರಾಟ ಮಾಡಲಾಗುತ್ತಿತ್ತು. ಈ ಮಾರಾಟ ವ್ಯವಸ್ಥೆಯು ಹಲವಾರು ರೀತಿಯಲ್ಲಿ ಅಸಮರ್ಪಕವಾಗಿತ್ತು. ಶೋಷಣೆಯ ಹಲವಾರು ಅಂಶಗಳನ್ನು ಬಹು ವಿಧದ ಮಧ್ಯವರ್ತಿಗಳನ್ನು ಹೊಂದಿತ್ತು. ಅನೇಕ ಸಂದರ್ಭಗಳಲ್ಲಿ ಬೆಳೆಗಾರರಿಗೆ ನ್ಯಾಯೋಚಿತವಾದ ಪ್ರತಿಫಲ ದೊರೆಯುತ್ತಿರಲಿಲ್ಲ. ಗ್ರಾಹಕರೂ ಒಂದು ರೀತಿಯ ಶೋಷಣೆಗೆ ಒಳಗಾಗುತ್ತಿದ್ದರು. ಈ ಜಿಲ್ಲೆಯ ಬಹು ಪ್ರಮುಖ ವಾಣಿಜ್ಯ ಬೆಳೆಯಾದ ಹತ್ತಿಯ ಮಾರಾಟವನ್ನು 1927 ರಲ್ಲಿ (ಮುಂಬಯಿ ಹತ್ತಿ ಮಾರುಕಟ್ಟೆ ಅಧಿನಿಯಮ 1927 ರ ಅನ್ವಯ) ನಿಯಂತ್ರಣಕ್ಕೆ ಒಳಪಡಿಸಲಾಯಿತು. ಅದರ ಅನ್ವಯ 1938 ರಲ್ಲಿ ಗದಗ ಮತ್ತು ಹುಬ್ಬಳ್ಳಿ ಹತ್ತಿ ಮಾರುಕಟ್ಟೆಗಳನ್ನು ನಿಯಂತ್ರಣಕ್ಕೆ ಒಳಪಡಿಸಲಾಯಿತು. ಮುಂದಿನ ವರ್ಷ, 1939 ರಲ್ಲಿ ಮುಂಬಯಿ ವ್ಯವಸಾಯ ಹುಟ್ಟುವಳಿಗಳ ಮಾರಾಟ ಕಾನೂನು 1939 ರಚಿಸಲಾಯಿತು. ಅದರ ಅನ್ವಯ ಇತರೇ ಪ್ರಮುಖ ಒಕ್ಕಲುತನ ಹುಟ್ಟುವಳಿಗಳನ್ನು (ತೃಣಧಾನ್ಯಗಳನ್ನು ಹೊರತುಪಡಿಸಿ) ನಿಯಂತ್ರಣಕ್ಕೆ ಒಳಪಡಿಸಲಾಯಿತು. ಯುದ್ಧದ ಅವಧಿಯಲ್ಲಿ (1939-45) ತೃಣಧಾನ್ಯಗಳ (ಬೇಳೆಕಾಳುಗಳು) ಮಾರಾಟದ ಮೇಲೆ ಸರ್ಕಾರ ನಿಯಂತ್ರಣ ಹೇರಿದ್ದರಿಂದ ಮತ್ತು ಪಡಿತರ (ಕಂಟ್ರೋಲ್) ವ್ಯವಸ್ಥೆಯನ್ನು ಜಾರಿಯಲ್ಲಿ ತಂದದ್ದರಿಂದ ಸದರಿ ಕಾಯಿದೆಯು ಪರಿಣಾಮಕಾರಿಯಾಗಿ ಜಾರಿಯಲ್ಲಿ ಬರಲಿಲ್ಲ, ಮತ್ತು ಬಹುಪಾಲು ಮಾರುಕಟ್ಟೆಗಳು ಆರ್ಥಿಕವಾಗಿ ಸಬಲವಾಗಿರಲಿಲ್ಲ. ಹಳೆಯ ಮಾರುಕಟ್ಟೆಗಳಾದ ಹುಬ್ಬಳ್ಳಿ ಮತ್ತು ಗದಗ ಮಾರುಕಟ್ಟೆಗಳನ್ನು 1942 ರಲ್ಲಿ ಹೊಸ ಕಾನೂನಿನ (1939) ವ್ಯಾಪ್ತಿಯಲ್ಲಿ ತರಲಾಯಿತು. 1947-48 ರಲ್ಲಿ ನಿಯಂತ್ರಿತ ಕಾನೂನನ್ನು ನರಗುಂದ, ಅಣ್ಣಿಗೇರಿ, ಧಾರವಾಡ ಮತ್ತು ಬ್ಯಾಡಗಿ ಮಾರುಕಟ್ಟೆಗಳಿಗೆ ವಿಸ್ತರಿಸಲಾಯಿತು. 1939 ರ ಕಾಯಿದೆಯ ಅನ್ವಯ ಮಾರುಕಟ್ಟೆ ಸಮಿತಿಯು 15 ಜನ ಸದಸ್ಯರನ್ನು ಒಳಗೊಂಡಿರುತ್ತಿತ್ತು. ಅವರ ಪೈಕಿ ಮಾರುಕಟ್ಟೆಯ ವ್ಯಾಪ್ತಿಯಲ್ಲಿ ಬರುವ ಆರು ಜನರು ವ್ಯವಸಾಯಕ್ಕೆ ಸಂಬಂಧಪಟ್ಟ ಸಂಸ್ಥೆ ಅಥವಾ ವ್ಯವಸಾಯಗಾರರಿಂದ ಚುನಾಯಿಸಲ್ಪಡುತ್ತಿದ್ದರು. ಇನ್ನುಳಿದಂತೆ ಐವರು ಲೈಸೆನ್ಸ್ ಪಡೆದ ವ್ಯಾಪಾರಸ್ಥರ ಚುನಾಯಿತ ಪ್ರತಿನಿಧಿಗಳು; ಇಬ್ಬರು ಸ್ಥಳೀಯ ಸಂಸ್ಥೆಯಿಂದ, ಇನ್ನಿಬ್ಬರು ಸರ್ಕಾರದಿಂದ ನಾಮಕರಣಗೊಂಡ ಸದಸ್ಯರಾಗಿರುತ್ತಿದ್ದರು.

ರಾಜ್ಯ ಪುನರ್‌ಘಟನೆಗೆ ಮೊದಲು ಸಹಕಾರಿ ಸಂಘಗಳ ನಿಬಂಧಕರೇ ವ್ಯವಸಾಯ ಉತ್ಪನ್ನಗಳ ಮಾರುಕಟ್ಟೆಗಳ ನಿರ್ದೇಶಕರಾಗಿರುತ್ತಿದ್ದರು. ಜಿಲ್ಲೆಯಲ್ಲಿ, ವ್ಯವಸಾಯ ಹುಟ್ಟುವಳಿ ಮಾರುಕಟ್ಟೆಗಳ ಕಾನೂನು 1939 ರನ್ನು ಜಾರಿಯಲ್ಲಿ ತರುವ ಅಧಿಕಾರ ಜಿಲ್ಲಾಧಿಕಾರಿಗೆ ಸೇರಿತ್ತು; ಮಾರುಕಟ್ಟೆ ಸಮಿತಿಗಳ ರಚನೆ, ನಿಯಂತ್ರಣ ಸಹ ಜಿಲ್ಲಾಧಿಕಾರಿಗೆ ಸೇರಿತ್ತು. ಜಿಲ್ಲೆಯ ಆಡಳಿತ ನೋಡಿಕೊಳ್ಳಲು ಜಿಲ್ಲೆಗೆ ಒಬ್ಬರಂತೆ ಮಾರ್ಕೆಟಿಂಗ್ ಇನ್‌ಸ್ಪೆಕ್ಟರ್ ಎಂಬ ಹುದ್ದೆಯ ಅಧಿಕಾರಿ ಇದ್ದರು. ಅವರು ವಿಭಾಗ ಮಟ್ಟದಲ್ಲಿ ಸಹಾಯಕ ಮಾರುಕಟ್ಟೆ ಅಧಿಕಾರಿ (ಅಸಿಸ್ಟಂಟ್ ಮಾರ್ಕೆಟಿಂಗ್ ಆಫೀಸರ್) ಅವರ ಅಧೀನದಲ್ಲಿ ಕೆಲಸ ಮಾಡುತ್ತಿದ್ದರು. ವಿಭಾಗ ಮಟ್ಟದ ಕಛೇರಿಯು ಧಾರವಾಡದಲ್ಲಿ ಇತ್ತು.

### ವ್ಯವಸಾಯ ಉತ್ಪನ್ನ (ನಿಯಂತ್ರಣ) ಕಾನೂನು 1966

ರಾಜ್ಯ ಪುನರ್‌ಘಟನೆಯ ಒಂದು ದಶಕದ ನಂತರ ಇಡೀ ರಾಜ್ಯಕ್ಕೆ ಅನ್ವಯವಾಗುವ ಸಮಗ್ರ, ಏಕೀಕೃತ, ಕರ್ನಾಟಕ ವ್ಯವಸಾಯ ಉತ್ಪನ್ನ ಮಾರಾಟ (ನಿಯಂತ್ರಣ) ಅಧಿನಿಯಮ 1966 ರನ್ನು ರೂಪಿಸಲಾಯಿತು. ಜಿಲ್ಲೆಯಲ್ಲಿನ ನಿಯಂತ್ರಿತ ವ್ಯವಸಾಯ ಮಾರುಕಟ್ಟೆಗಳನ್ನು ನೋಡಿಕೊಳ್ಳಲು ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಇವರ ಕಛೇರಿಯನ್ನು ಧಾರವಾಡದಲ್ಲಿ ತೆರೆಯಲಾಯಿತು. ಈ ಇಲಾಖೆಯು 1966 ರ ಕರ್ನಾಟಕ ವ್ಯವಸಾಯೋತ್ಪನ್ನಗಳ ಮಾರಾಟ (ನಿಯಂತ್ರಣ) ಕಾಯಿದೆ, ಕರ್ನಾಟಕ ದಾಸ್ತಾನು ಮಳಿಗೆ ಕಾನೂನು (1961), ಮತ್ತು ಕೇಂದ್ರ ಸರ್ಕಾರದ ವ್ಯವಸಾಯೋತ್ಪನ್ನಗಳ (ವರ್ಗೀಕರಣ ಮತ್ತು ಮಾರಾಟ) ಕಾಯಿದೆ 1937 ಮುಂತಾದವುಗಳನ್ನು ಕಾರ್ಯಾಚರಣೆಗೆ ತರುತ್ತಿದೆ. ನಮ್ಮ ರಾಜ್ಯದಲ್ಲಿಯೇ ಅತೀ ಹೆಚ್ಚಿನ ಸಂಖ್ಯೆಯ ನಿಯಂತ್ರಿತ ಮಾರುಕಟ್ಟೆಗಳನ್ನು ಹೊಂದಿದ ಜಿಲ್ಲೆ ಧಾರವಾಡ. ನಿಯಂತ್ರಿತ ಮಾರುಕಟ್ಟೆಗಳ ಉಸ್ತುವಾರಿ ನೋಡಿಕೊಳ್ಳಲು ಉತ್ಪಾದಕರು, ವ್ಯಾಪಾರಸ್ಥರು, ದಲಾಲರು, ಸ್ಥಳೀಯ ಸಂಸ್ಥೆಗಳು, ಸಹಕಾರಿ ಸಂಘಗಳು, ಮತ್ತು ಸರ್ಕಾರದವರನ್ನು ಪ್ರತಿನಿಧಿಸುವ ಒಂದು ಮಾರುಕಟ್ಟೆ ಸಮಿತಿಯನ್ನು ಪ್ರತೀ ಮಾರುಕಟ್ಟೆಯಲ್ಲಿ ರಚಿಸುವಂತೆ ಈ ಕಾನೂನು ಅವಕಾಶ ಕಲ್ಪಿಸಿದೆ. ಮಾರುಕಟ್ಟೆ ಸಮಿತಿಯ ಮುಖ್ಯ ಆದಾಯದ ಮೂಲ ಎಂದರೆ ಮಾರುಕಟ್ಟೆ ಶುಲ್ಕ ಮತ್ತು ಪರವಾನಗಿ ಶುಲ್ಕ ಕೊಳ್ಳುವವರು ಕೊಡಬೇಕಾದ ಪರಮಾವಧಿ ಮಾರುಕಟ್ಟೆ ಶುಲ್ಕ

ಒಂದು ನೂರು ರೂಪಾಯಿ ಬೆಲೆಯ ಸರಕಿಗೆ ಒಂದು ರೂಪಾಯಿ (1978 ರಿಂದ). ಸದರಿ ಕಾಯಿದೆಯ ಮಾರುಕಟ್ಟೆಯ ನಿಧಿಯನ್ನು ಸ್ಥಾಪಿಸಲು ಅನುವು ಮಾಡಿಕೊಡುತ್ತದೆ ಮತ್ತು ಸಮಿತಿಯ ಎಲ್ಲಾ ಖರ್ಚುವೆಚ್ಚಗಳನ್ನು ಈ ನಿಧಿಯಿಂದ ಭರಿಸಲಾಗುವುದು.

**ನಿಯಂತ್ರಿತ ಸರಕುಗಳು:** ವ್ಯವಸಾಯ ಉತ್ಪನ್ನಗಳ ಈಗಿನ ವಿಸ್ತೃತ ವ್ಯಾಖ್ಯೆಯ ಪರಿವ್ಯಾಪ್ತಿಯಲ್ಲಿ ಜಾನುವಾರು, ಕೋಳಿ, ಸಂಸ್ಕರಿಸಿ ಅಥವಾ ಸಂಸ್ಕರಿಸಲಾಗದ ಎಲ್ಲಾ ವ್ಯವಸಾಯ ಉತ್ಪನ್ನಗಳು, ತೋಟಗಾರಿಕೆ, ಹೈನುಗಾರಿಕೆ, ಮತ್ಸ್ಯೋದ್ಯಮ, ಅರಣ್ಯ ಉತ್ಪನ್ನ ವಸ್ತುಗಳು ಮತ್ತು ರಾಜ್ಯ ಸರ್ಕಾರದಿಂದ ಕಾಲಕಾಲಕ್ಕೆ ಆಯಾ ಪ್ರದೇಶಗಳಲ್ಲಿ ಪ್ರಕಟಿಸಲ್ಪಟ್ಟ ವ್ಯವಸಾಯ ಉತ್ಪನ್ನ ವಸ್ತುಗಳೆಂದು ಘೋಷಿಸಲ್ಪಟ್ಟ ಉತ್ಪನ್ನಗಳನ್ನು ನಿಯಂತ್ರಿತ ಸರಕುಗಳು ಎಂದು ಸಾರಲಾಗುವುದು. ಸಾಮಾನ್ಯವಾಗಿ ಮಾರುಕಟ್ಟೆಯ ಕ್ಷೇತ್ರದಲ್ಲಿ ಸಮೀಕ್ಷೆ ನಡೆಸಿ ವ್ಯವಸಾಯ ಉತ್ಪನ್ನಗಳು ಆಯಾ ಕ್ಷೇತ್ರಗಳಲ್ಲಿ ಬೆಳೆಯುತ್ತಿದ್ದಲ್ಲಿ ಅಥವಾ ಸಂಗ್ರಹವಾದಲ್ಲಿ ಅಂತಹ ಉತ್ಪನ್ನಗಳು ನಿಯಂತ್ರಣಕ್ಕೆ ಒಳಪಡಿಸಲಾಗುತ್ತದೆ.

ಧಾರವಾಡ ಜಿಲ್ಲೆಯಲ್ಲಿ 16ಮುಖ್ಯ ಮಾರುಕಟ್ಟೆಗಳು ಮತ್ತು 36ಉಪ ಮಾರುಕಟ್ಟೆಗಳು ಇರುವುವು. ಅವುಗಳ ಕಾರ್ಯವ್ಯಾಪ್ತಿಯ ವಿವರ, ಪ್ರಾರಂಭವಾದ ವರ್ಷ, ಆದಾಯ ಮತ್ತು ಖರ್ಚು, ಮಾರುಕಟ್ಟೆಯ ಕಾರ್ಯಕರ್ತರ ಸಂಖ್ಯೆ ಪ್ರಮುಖವಾಗಿ ಆಮದು ಮತ್ತು ರಫ್ತು ಆಗುವ ಹುಟ್ಟುವಳಿಗಳು ಮುಂತಾದ ವಿವರಗಳನ್ನು ಮುಂದಿನ ತಖ್ತೆಗಳಲ್ಲಿ ಕೊಡಲಾಗಿದೆ.

(ಕೋಷ್ಟಕ 6.16 ಮುಂದಿನ ಪುಟದಲ್ಲಿ)

**ಕೋಷ್ಟಕ 6.17: ಧಾರವಾಡ ಜಿಲ್ಲೆಯಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ 1987-88 ಮತ್ತು 1991-92 ರ ಸಾಲಿನಲ್ಲಿದ್ದಂತೆ ಆದಾಯ ಮತ್ತು ಖರ್ಚುಗಳ ವಿವರವನ್ನು ತೋರಿಸುವ ತಖ್ತೆ (ಮೊತ್ತ ಲಕ್ಷ ರೂ.ಗಳಲ್ಲಿ)**

| ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಹೆಸರು | 1987-88 | | 1991-92 | |
|---|---|---|---|---|
| | ಆದಾಯ ರೂ. | ಖರ್ಚು ರೂ. | ಆದಾಯ ರೂ. | ಖರ್ಚು ರೂ. |
| ಧಾರವಾಡ | 27.52 | 15.92 | 37.58 | 14.11 |
| ಹಾವೇರಿ | 19.51 | 10.50 | 26.37 | 11.93 |
| ರಾಣೆಬೆನ್ನೂರು | 37.61 | 20,66 | 71.28 | 22.52 |
| ಹಾನಗಲ್ | 2.44 | 1.99 | 3.09 | 3.50 |
| ಸವಣೂರು | 3.84 | 2.29 | 8.01 | 2.63 |
| ಬ್ಯಾಡಗಿ | 16.30 | 8.18 | 44.47 | 21.17 |
| ಲಕ್ಷ್ಮೇಶ್ವರ | 6.48 | 4.17 | 7.69 | 3.71 |
| ಕುಂದಗೋಳ | 3.24 | 1.99 | 2.65 | 1.50 |
| ಗದಗ | 49.76 | 27.03 | 77.49 | 37.07 |
| ಮುಂಡರಗಿ | 3.58 | 3.18 | 3.00 | 1.06 |
| ಹೊಳಲೂರು | 3.94 | 3.02 | 5.85 | 3.48 |
| ನರಗುಂದ | 18.01 | 11.95 | 37.47 | 11.46 |
| ಅಣ್ಣಿಗೇರಿ | 4.69 | 4.27 | 10.42 | 4.22 |
| ಹಿರೇಕೆರೂರು | 3.27 | 2.32 | 4.50 | 2.60 |
| ಹುಬ್ಬಳ್ಳಿ | 65.92 | 39.59 | 92.09 | 52.81 |

ಆಧಾರ: ಕೃಷಿ ಮಾರಾಟ ಇಲಾಖೆ, ಧಾರವಾಡ.

**ಕೋಷ್ಟಕ 6.16: ಧಾರವಾಡ ಜಿಲ್ಲೆಯಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಹೆಸರು, ಉಪಮಾರುಕಟ್ಟೆಯ ಹೆಸರು, ಸ್ಥಾಪನೆಯ ದಿನಾಂಕ, ಮಾರುಕಟ್ಟೆ ಕ್ಷೇತ್ರ ತೋರಿಸುವ ತಖ್ತೆ.**

| ಕ್ರಮ ಸಂಖ್ಯೆ | ಮಾರುಕಟ್ಟೆಯ ಹೆಸರು | ಮಾರುಕಟ್ಟೆಯ ಕ್ಷೇತ್ರ | ಮುಖ್ಯ ಮಾರುಕಟ್ಟೆ ಸ್ಥಾಪನೆ, ದಿನಾಂಕ | ಉಪ ಮಾರುಕಟ್ಟೆಯ ಸ್ಥಾಪನೆ, | ದಿನಾಂಕ | |
|---|---|---|---|---|---|---|
| 1 | 2 | 3 | 4 | 5 | | |
| 1. | ಧಾರವಾಡ | ಸಂಪೂರ್ಣ ಧಾರವಾಡ ತಾ. | 5.2.1947 | 1. ಅಳ್ಣಾವರ. | 19.4.75 | |
| | | ದಿನಾಂಕ: 11.8.93 ರಿಂದ | | 2. ಮೊರಬ. | 3.12.86. | 11.8.93 ರಿಂದ ಅಣ್ಣಿಗೇರಿ ಮಾರುಕಟ್ಟೆ ಕ್ಷೇತ್ರಕ್ಕೆ ಒಳಪಡುತ್ತದೆ |
| 2. | ಹಾವೇರಿ | ಸಂಪೂರ್ಣ ಹಾವೇರಿ ತಾ. | 1.11.1955 | 1. ಗುತ್ತಲ. | 3.11.60 | |
| | | | | 2. ಕರ್ಜಗಿ. | 07.1.87 | |
| 3. | ಸವಣೂರು | ಸಂಪೂರ್ಣ ಸವಣೂರು ತಾ. | 15.5.1956 | 1. ಯಲವಗಿ. | 20.6.92 | |
| 4. | ಬ್ಯಾಡಗಿ | ಸಂಪೂರ್ಣ ಬ್ಯಾಡಗಿ ತಾ. | 15.12.1947 | 1. ಚಿಕ್ಕಬಾಸೂರು. | 1.3.84 | |
| | | | | 2. ಮೊಟೆಬೆನ್ನೂರು. | 12.2.87 | |
| 5. | ರಾಣೆಬೆನ್ನೂರು | ಸಂಪೂರ್ಣ ರಾಣೆಬೆನ್ನೂರು ತಾ. | 27.5.1953 | 1. ಹಲಗೇರಿ. | 6.12.68 | |
| 6. | ಹಾನಗಲ್ | ಸಂಪೂರ್ಣ ಹಾನಗಲ್ ತಾ. | 26.3.1976 | 1. ಅಕ್ಕಿಆಲೂರು. | 26.03.76 | |
| 7. | ಲಕ್ಷ್ಮೇಶ್ವರ | ಸಂಪೂರ್ಣ ಶಿರಹಟ್ಟಿ ತಾ. | 26.5.1992 | 2. ಶಿರಹಟ್ಟಿ. | 23.6.55 | |
| | | | | 2. ಬೆಳ್ಳಟ್ಟಿ. | 23.6.55 | |
| | | | | 3. ಶಿಗ್ಲಿ. | 23.6.55 | |
| 8. | ಕುಂದಗೋಳ | ಸಂಪೂರ್ಣ ಕುಂದಗೋಳ ತಾ. | 9.2.1961 | 1. ಸಂಶಿ. | 8.7.72 | |
| | | | | 2. ಗುಡಿಗೇರಿ. | 17.4.77. | |
| 9. | ಗದಗ | ಸಂಪೂರ್ಣ ಗದಗ ತಾ. | 1.3.1943 | 1. ಮುಳಗುಂದ | 1.6.48 | |
| | | | | 2. ಹುಲಕೋಟಿ. | 8.3.60 | |
| | | | | 3. ಕುರ್ತಕೋಟಿ. | 2.10.87 | |
| | | | | 4. ಹೊಂಬಳ. | 14.3.88 | |
| | | | | 5. ಕೋಟುಮಚಗಿ. | 14.3.88 | |
| | | | | 6. ಸೊರಟೂರು. | 30.6.88 | |
| 10. | ಮುಂಡರಗಿ | ಸಂಪೂರ್ಣ ಮುಂಡರಗಿ ತಾ. | 28.5.1959 | 1. ಡಂಬಳ. | 30.11.61 | |

| 1 | 2 | 3 | 4 | 5 | | |
|---|---|---|---|---|---|---|
| 11. | ಹೊಳೇಆಲೂರು | ಸಂಪೂರ್ಣ ರೋಣ ತಾ. | 28.5.1954. | 1. ರೋಣ. | 13.5.69 | |
| | | | | 2. ಗಜೇಂದ್ರಗಡ. | 13.5.69 | |
| | | | | 3. ನರೇಗಲ್ಲ. | 13.5.69 | |
| | | | | 4. ಸೂಡಿ. | 13.5.69 | |
| 12. | ಹಿರೇಕೆರೂರು | ಸಂಪೂರ್ಣ ಹಿರೇಕೆರೂರು ತಾ. | 24.1.1962 | 1. ಮಾಸೂರು. | 5.8.65 | |
| | | | | 2. ರಟ್ಟೀಹಳ್ಳಿ. | 5.8.65 | |
| | | | | 3. ಹಂಸಭಾವಿ. | 5.8.65 | |
| 13. | ಹುಬ್ಬಳ್ಳಿ | ಸಂಪೂರ್ಣ ಹುಬ್ಬಳ್ಳಿ ತಾ. ದಿನಾಂಕ 20.6.92 ರಿಂದ | 4.6.1943 | ಉಪ ಮಾರುಕಟ್ಟೆ ಇರುವುದಿಲ್ಲ. | | |
| 14. | ನರಗುಂದ | ಸಂಪೂರ್ಣ ನರಗುಂದ ತಾ. ದಿನಾಂಕ: 11.8.1993 ರಿಂದ | 25.05.1947 | 1. ಶಿರೋಳ. | 14.3.85 | |
| | | | | 2. ಕೊಣ್ಣೂರು. | 18.10.85 | |
| | | | | 3. ಚಿಕ್ಕನರಗುಂದ. | 8.5.89 | |
| | | | | 4. ಆಳಗವಾಡಿ. | 23.5.86 | ದಿ: 11.8.93 ರಿಂದ ಈ 3 ಉಪಮಾರುಕಟ್ಟೆಗಳು ಅಣ್ಣಿಗೇರಿ ಮಾರುಕಟ್ಟೆ ಕ್ಷೇತ್ರಕ್ಕೆ ಒಳಪಡುತ್ತವೆ. |
| | | | | 5. ಹೆಬ್ಬಾಳ. | 16.10.86 | |
| | | | | 6. ಶಲವಡಿ. | 21.1.88 | |
| 15. | ಅಣ್ಣಿಗೇರಿ | ಸಂಪೂರ್ಣ ನವಲಗುಂದ ತಾ. ದಿನಾಂಕ: 11.8.93 ರಿಂದ | 5.2.1948 | 1. ನವಲಗುಂದ. | 16.4.69 | 1. ಧಾರವಾಡ ಮಾರುಕಟ್ಟೆ ಕ್ಷೇತ್ರದ ಮೊರಬ ಉಪಮಾರುಕಟ್ಟೆ 2. ನರಗುಂದ ಮಾರುಕಟ್ಟೆ ಕ್ಷೇತ್ರದ 1. ಆಳಗವಾಡಿ, 2. ಹೆಬ್ಬಾಳ, 3. ಶಲವಡಿ ಈ 3 ಉಪಮಾರುಕಟ್ಟೆಗಳ ದಿ: 11.8.93 ರಿಂದ ಅಣ್ಣಿಗೇರಿ ಮಾರುಕಟ್ಟೆ ಕ್ಷೇತ್ರಕ್ಕೆ ಒಳಪಡುತ್ತವೆ. |
| 16. | ಶಿಗ್ಗಾಂವಿ | ಸಂಪೂರ್ಣ ಶಿಗ್ಗಾಂವಿ ತಾ. ಹಾಗೂ ಸಂಪೂರ್ಣ ಕಲಘಟಗಿ ತಾ. ಈ ಎರಡು ತಾಲೂಕುಗಳ ಕ್ಷೇತ್ರ ಒಳಗೊಂಡಿರುತ್ತದೆ. ದಿನಾಂಕ: 20.6.92 | 20.6.1992 | 1. ಕಲಘಟಗಿ. | 20.6.92. | ಹುಬ್ಬಳ್ಳಿ ಮಾರುಕಟ್ಟೆ ಕ್ಷೇತ್ರದಿಂದ ಬೇರ್ಪಟ್ಟು ಸ್ವತಂತ್ರ ಮಾರುಕಟ್ಟೆಯಾಗಿ ಸ್ಥಾಪನೆ ಆಗಿರುತ್ತದೆ. |

ಆಧಾರ: ಕೃಷಿ ಮಾರಾಟ ಇಲಾಖೆ, ಧಾರವಾಡ.

**ಕೋಷ್ಟಕ 6.18: 1991-92 ರಲ್ಲಿದ್ದಂತೆ ಧಾರವಾಡ ಜಿಲ್ಲೆಯಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿನ ಲೈಸನ್ಸ್ ಪಡೆದ ಪ್ರಮುಖ ಪೇಟೆಯ ಕಾರ್ಯಕರ್ತರು.**

| ಮಾರುಕಟ್ಟೆ ಸಮಿತಿ | ದಲಾಲರು | ಖರೀದಿದಾರರು (ಟ್ರೇಡರ್ಸ್) | ಕಿರುಕಳ ವರ್ತಕರು | ತೂಕದವರು | ಹಮಾಲರು | ರಫ್ತುಗಾರರು | ಆಮದು ಗಾರರು | ಲಾರಿಯವರು | ಚಕ್ಕಡಿಯವರು | ಸಂಗ್ರಹಕಾರರು | ರೂಪಾಂತ ರಿಸುವವರು |
|---|---|---|---|---|---|---|---|---|---|---|---|
| ಧಾರವಾಡ | 101 | 202 | 202 | 11 | 94 | 83 | 132 | 18 | 16 | 6 | 20 |
| ಹಾವೇರಿ | 95 | 93 | 385 | 4 | 31 | 66 | 60 | - | - | 80 | 10 |
| ರಾಣೆಬೆನ್ನೂರು | 368 | 152 | 60 | 26 | 572 | 134 | 85 | 3 | 9 | - | 14 |
| ಸವಣೂರು | 29 | 27 | 204 | 1 | 43 | 23 | 21 | 4 | 8 | 22 | 5 |
| ಬ್ಯಾಡಗಿ | 142 | 187 | 333 | 17 | 156 | 134 | 111 | 2 | 18 | - | 1 |
| ಹಾನಗಲ್ | 1 | 57 | 179 | 1 | - | 46 | 32 | - | - | 50 | 38 |
| ಲಕ್ಷ್ಮೇಶ್ವರ | 26 | 62 | 448 | 8 | 103. | 52 | 83 | 16 | - | 46 | 19 |
| ಕುಂದಗೋಳ | 8 | 32 | 723 | 4 | 14 | 30 | 15 | - | - | 15 | - |
| ಗದಗ | 178 | 331 | 363 | 37 | 206 | 189 | 190 | 14 | 1 | 249 | 71 |
| ಮುಂಡರಗಿ | 17 | 16 | 155 | 4 | 91 | 15 | 13 | 8 | 2 | 26 | 9 |
| ಹೊಳೆಆಲೂರು | 49 | 73 | 346 | 3 | 36 | 46 | 35 | 7 | - | 64 | 19 |
| ಅಣ್ಣಿಗೇರಿ | 42 | 71 | 78 | 2 | 33 | 39 | 39 | 23 | 5 | 24 | 5 |
| ನರಗುಂದ | 70 | 79 | 215 | - | 55 | 57 | 49 | - | - | 53 | 53 |
| ಹಿರೇಕೆರೂರು | 13 | 26 | 380 | 4 | 8 | 6 | 1 | 1 | - | 6 | 12 |
| ಹುಬ್ಬಳ್ಳಿ | 267 | 567 | 1,093 | 60 | 245 | 211 | 291 | 12 | - | 12 | 87 |

ಆಧಾರ: ಕೃಷಿ ಮಾರಾಟ ಇಲಾಖೆ, ಧಾರವಾಡ.

**ಕೋಷ್ಟಕ 6.19: ಧಾರವಾಡ ಜಿಲ್ಲೆಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿಯ ಪ್ರಮುಖವಾಗಿ ಆಮದು ಮತ್ತು ರಫ್ತು ಆಗುವ ಹುಟ್ಟುವಳಿಗಳು.**

| ಕ್ರಮ ಸಂಖ್ಯೆ | ಸಮಿತಿಯ ಹೆಸರು | ಪ್ರಮುಖವಾಗಿ ಆಮದಾಗುವ ಮತ್ತು ರಫ್ತು ಆಗುವ ಹುಟ್ಟುವಳಿಗಳು: ಆಮದು | | ರಫ್ತು | | |
|---|---|---|---|---|---|---|
| 1. | ಧಾರವಾಡ | 1. ಬೆಲ್ಲ | 4. ವೀಳ್ಯದೆಲೆ | 1. ಹತ್ತಿ | 4. ಶೇಂಗಾಕಾಯಿ | 7. ತೊಗರಿ |
| | | 2. ಅಕ್ಕಿ | | 2. ಗೋಧಿ | 5. ಹೆಸರುಕಾಳು | |
| | | 3. ಮರಮಟ್ಟು ಮತ್ತು ಮರದ ವಸ್ತುಗಳು | | 3. ಜೋಳ | 6. ಕಡ್ಲೆಕಾಳು | |
| 2. | ಹಾವೇರಿ | 1. ಜೋಳ | | 1. ಎಣ್ಣೆಬೀಜಗಳು | 4. ಬೇಳೆಕಾಳು | |
| | | 2. ಬೇಳೆಕಾಳುಗಳು | | 2. ಒಣ ಮೆಣಸಿನಕಾಯಿ | | |
| | | | | 3. ಹತ್ತಿ | | |
| 3. | ಸವಣೂರು | 1. ಅರಳೆ | | 1. ಅರಳೆ | | |
| | | 2. ಶೇಂಗಾಕಾಯಿ | | 2. ಶೇಂಗಾಕಾಯಿ | | |
| | | 3. ವೀಳ್ಯದೆಲೆ | | 3. ವೀಳ್ಯದೆಲೆ | | |
| 4. | ಬ್ಯಾಡಗಿ | 1. ಒಣಮೆಣಸಿನಕಾಯಿ | | 1. ಒಣಮೆಣಸಿನಕಾಯಿ | | |
| 5. | ರಾಣೆಬೆನ್ನೂರು | 1. ಹತ್ತಿ | 4. ಆಹಾರ ಧಾನ್ಯಗಳು | 1. ಹತ್ತಿ | 4. ಆಹಾರ ಧಾನ್ಯಗಳು | |
| | | 2. ಶೇಂಗಾಕಾಯಿ | | 2. ಶೇಂಗಾಕಾಯಿ | | |
| | | 3. ಗೋವಿನಜೋಳ | | 3. ಗೋವಿನಜೋಳ | | |
| 6. | ಹಾನಗಲ್ | 1. ಭತ್ತ | | 1. ಭತ್ತ | | |
| | | 2. ಅಕ್ಕಿ | | 2. ಅಕ್ಕಿ | | |
| | | 3. ಹತ್ತಿ | | 3. ಹತ್ತಿ | | |
| 7. | ಲಕ್ಷ್ಮೇಶ್ವರ | 1. ಅಕ್ಕಿ | | 1. ಒಣಮೆಣಸಿನಕಾಯಿ | | |
| | | 2. ಬೆಲ್ಲ | | 2. ಎಳ್ಳು | | |
| | | | | 3. ಹತ್ತಿ | | |
| 8. | ಕುಂದಗೋಳ | 1. ಅಕ್ಕಿ | | 1. ಒಣಮೆಣಸಿನಕಾಯಿ, 2. ಹತ್ತಿ 3. ಅರಳೆ | | |

| ಕ್ರಮ ಸಂಖ್ಯೆ | ಸಮಿತಿಯ ಹೆಸರು | ಪ್ರಮುಖವಾಗಿ ಆಮದಾಗುವ ಮತ್ತು ರಫ್ತು ಆಗುವ ಹುಟ್ಟುವಳಿಗಳು: ಆಮದು | | | ರಫ್ತು | |
|---|---|---|---|---|---|---|
| 9. | ಮುಂಡರಗಿ | 1. ಶೇಂಗಾಕಾಯಿ<br>2. ಜೋಳ | | | 1. ಎಳ್ಳು<br>2. ಗೋವಿನ ಜೋಳ | |
| 10. | ನರಗುಂದ | 1. ಹತ್ತಿ<br>2. ಗೋವಿನ ಜೋಳ | | | 1. ಹತ್ತಿ<br>2. ಗೋವಿನ ಜೋಳ | |
| 11. | ಅಣ್ಣಿಗೇರಿ | 1. ಗೋದಿ | | | 1. ಹತ್ತಿ<br>2. ಅರಳೆ | |
| 12. | ಶಿಗ್ಗಾಂವಿ | 1. ಶೇಂಗಾಕಾಯಿ<br>2. ಹತ್ತಿ | | | 1. ಶೇಂಗಾಕಾಯಿ<br>2. ಹತ್ತಿ | |
| 13. | ಹೊಳಿಆಲೂರು | 1. ಹೆಸರುಕಾಳು<br>2. ಗೋವಿನಜೋಳ<br>3. ಜೋಳ | 4. ಎಳ್ಳು<br>5. ಶೇಂಗಾಕಾಯಿ<br>6. ಸೂರ್ಯಕಾಂತಿ ಬೀಜ<br>7. ಕಡ್ಲೆಕಾಳು | | 1. ಹೆಸರು ಕಾಳು<br>2. ಗೋವಿನ ಜೋಳ<br>3. ಜೋಳ | 4. ಎಳ್ಳು<br>5. ಶೇಂಗಾಕಾಯಿ<br>6. ಸೂರ್ಯಕಾಂತಿ ಬೀಜ<br>7. ಕಡಲೆಕಾಳು |
| 14. | ಗದಗ | 1. ಹೆಸರಕಾಳು<br>2. ಜೋಳ<br>3. ಗೋವಿನ ಜೋಳ | 4. ತೊಗರಿಕಾಳು<br>5. ಕಡ್ಲೆಕಾಳು<br>6. ಗೋಧಿ | 7. ಹುರಳಿ<br>8. ಆಲಸಂಧಿ<br>9. ಮಡಕಿ | 1. ಜೋಳ<br>2. ಗೋವಿನ ಜೋಳ<br>3. ಗೋದಿ | 4. ತೊಗರಿಕಾಳು<br>5. ಹೆಸರಕಾಳ<br>6. ಕಡ್ಲೆಕಾಳು |
| | | 10. ಶೇಂಗಾಕಾಯಿ<br>11. ಕುಸುಬಿ<br>12. ಸೂರ್ಯಕಾಂತಿ ಬೀಜ | 13. ಹತ್ತಿ<br>14. ಅರಳೆ<br>15. ಒಣಮೆಣಸಿನಕಾಯಿ<br>16. ಹವೀಜ | | 7. ಹುರಳಿ<br>8. ಆಲಸಂದಿ<br>9. ಮಡಕಿ<br>13. ಹತ್ತಿ<br>14. ಅರಳೆ<br>15. ಒಣಮೆಣಸಿನಕಾಯಿ | 10. ಶೇಂಗಾಕಾಯಿ<br>11. ಕುಸುಬಿ<br>12. ಸೂರ್ಯಕಾಂತಿಬೀಜ<br>16. ಹವೀಜ |

| ಕ್ರಮ ಸಂಖ್ಯೆ | ಸಮಿತಿಯ ಹೆಸರು | ಪ್ರಮುಖವಾಗಿ ಆಮದಾಗುವ ಮತ್ತು ರಫ್ತು ಆಗುವ ಹುಟ್ಟುವಳಿಗಳು: ಆಮದು | | | ರಫ್ತು | |
|---|---|---|---|---|---|---|
| 15. | ಹಿರೇಕೆರೂರು | 1. ಹತ್ತಿ | 4. ರಾಗಿ | 7. ಒಣಮೆಣಸಿನಕಾಯಿ | 1. ಹತ್ತಿ | 4. ರಾಗಿ |
| | | 2. ಭತ್ತ | 5. ಜೋಳ | | 2. ಭತ್ತ | 5. ಜೋಳ |
| | | 3. ಅಕ್ಕಿ | 6. ಬೆಲ್ಲ | | 3. ಅಕ್ಕಿ | 6. ಬೆಲ್ಲ |
| | | | | | | 7. ಒಣಮೆಣಸಿನಕಾಯಿ |
| 16. | ಹುಬ್ಬಳ್ಳಿ | 1. ಹತ್ತಿ | 4. ಉಳ್ಳಾಗಡ್ಡಿ | 7. ಅಕ್ಕಿ | 1. ಹತ್ತಿ | 4. ಉಳ್ಳಾಗಡ್ಡೆ |
| | | 2. ಶೇಂಗಾಕಾಯಿ | 5. ಆಲೂಗಡ್ಡೆ | 8. ಗೋದಿ | 2. ಶೇಂಗಾಕಾಯಿ | 5. ಆಲೂಗಡ್ಡೆ |
| | | 3. ಒಣಮೆಣಸಿನಕಾಯಿ | 6. ಜೋಳ | 9. ಬೇಳೆಕಾಳು | 3. ಒಣಮೆಣಸಿನಕಾಯಿ | 6. ಜೋಳ |
| | | | | | 7. ಅಕ್ಕಿ | |
| | | | | | 8. ಗೋಧಿ | |
| | | | | | 9. ಬೇಳೆಕಾಳು | |

ಆಧಾರ: ಕೃಷಿ ಮಾರಾಟ ಇಲಾಖೆ.

**ವರ್ಗೀಕರಣ:** ಕೃಷಿ ಉತ್ಪನ್ನಗಳ ವರ್ಗೀಕರಣ ಸೌಲಭ್ಯವು ಧಾರವಾಡ, ಹುಬ್ಬಳ್ಳಿ, ಗದಗ, ರಾಣೆಬೆನ್ನೂರು, ಲಕ್ಷ್ಮೇಶ್ವರ, ಕುಂದಗೋಳ, ಹಾವೇರಿ, ನರಗುಂದ, ಅಣ್ಣಿಗೇರಿ ಮತ್ತು ಬ್ಯಾಡಗಿ ಮಾರುಕಟ್ಟೆಗಳಲ್ಲಿ ಲಭ್ಯವಿವೆ. ವರ್ಗೀಕರಣಕ್ಕೆ ಒಳಪಡುವ ವಸ್ತುಗಳು ಶೇಂಗಾಕಾಯಿ, ಹತ್ತಿ, ಒಣಮೆಣಸಿನಕಾಯಿ.

**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಹುಬ್ಬಳ್ಳಿ**

ರಾಜ್ಯದ ಪ್ರಮುಖ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಬೆಂಗಳೂರಿನ ನಂತರ ಹುಬ್ಬಳ್ಳಿಯು ಎರಡನೆಯ ದೊಡ್ಡ ಮಾರುಕಟ್ಟೆಯಾಗಿದೆ. ಆದಾಯದ ಮಾನದಿಂದಲೂ ಇದು ಒಂದನೇಯ ದರ್ಜೆಯ ಮಾರುಕಟ್ಟೆ. ಮುಂಬಯಿ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಅಧಿನಿಯಮ 1939 ರ ಅನ್ವಯ, 1943 ರಲ್ಲಿ ಈ ಮಾರುಕಟ್ಟೆಯನ್ನು ರಚಿಸಲಾಯಿತು. ಪ್ರಾರಂಭದಲ್ಲಿ ಕೇವಲ ಹತ್ತಿಯನ್ನು ನಿಯಂತ್ರಣಕ್ಕೆ ಒಳಪಡಿಸಲಾಗಿತ್ತು. 1942 ರಲ್ಲಿ ಶೇಂಗಾ, ಕುಸುಬೆ, ಎಳ್ಳುಗಳನ್ನು ನಿಯಂತ್ರಣಕ್ಕೆ ಒಳಪಡಿಸಲಾಯಿತು. 1951-52 ರಲ್ಲಿ ಮಾರುಕಟ್ಟೆ ಸಮಿತಿಯ ಆದಾಯ ಮತ್ತು ವೆಚ್ಚಗಳು ಅನುಕ್ರಮವಾಗಿ ರೂ. 47,584 ಮತ್ತು ರೂ.44,986 ಆಗಿತ್ತು. ಮಾರುಕಟ್ಟೆಯಲ್ಲಿ 399 ಖರೀದಿದಾರರು, 73 ಕಮಿಶನ್ ಏಜಂಟರು, 111 ತೂಕ ಮಾಡುವವರು, 88 ಹಮಾಲರು ಕಾರ್ಯ ನಿರ್ವಹಿಸುತ್ತಿದ್ದರು. ಮಾರುಕಟ್ಟೆಯ ವಾರ್ಷಿಕ ವಹಿವಾಟು ರೂ. 166 ಲಕ್ಷ ಆಗಿತ್ತು. ರಾಜ್ಯ ಪುನರ್‌ಘಟನೆಯ ನಂತರ 1968 ರಿಂದ ಕರ್ನಾಟಕ ವ್ಯವಸಾಯೋತ್ಪನ್ನ ಮಾರಾಟ (ನಿಯಂತ್ರಣ) ಶಾಸನ 1966 ರ ಅನ್ವಯ ಇದು ಕಾರ್ಯ ನಿರ್ವಹಿಸುತ್ತಿರುವುದು. ಜೂನ್ 1992 ರಿಂದ ಸರ್ಕಾರದಿಂದ ನಾಮಕರಣಗೊಂಡ ಸಮಿತಿಯು ಆಡಳಿತ ನಿರ್ವಹಿಸುತ್ತಿರುವುದು. ಪ್ರಾರಂಭದಲ್ಲಿ ಮಾರುಕಟ್ಟೆಯ ಕಾರ್ಯವ್ಯಾಪ್ತಿಯು ಹುಬ್ಬಳ್ಳಿ, ಕಲಘಟಗಿ, ಶಿಗ್ಗಾಂವಿ ತಾಲೂಕುಗಳು ಮತ್ತು ಸವಣೂರು ತಾಲೂಕಿನ 14 ಹಳ್ಳಿಗಳನ್ನು ಒಳಗೊಂಡಿತ್ತು. 1943 ರಲ್ಲಿ ಪ್ರಾರಂಭಗೊಂಡ ಶಿಗ್ಗಾಂವಿ ಕಲಘಟಗಿ ಮತ್ತು ಯಲವಿಗಿ ಉಪಮಾರುಕಟ್ಟೆಗಳು ಹುಬ್ಬಳ್ಳಿಯ ಮಾರುಕಟ್ಟೆಯ ಅಧೀನದಲ್ಲಿ ಕೆಲಸ ಮಾಡುತ್ತಿದ್ದವು. ನಂತರ ಅವುಗಳು 1992 ರಲ್ಲಿ ಪ್ರತ್ಯೇಕ ಮಾರುಕಟ್ಟೆಗಳಾದವು. 1953-54 ರಲ್ಲಿ ಸೇರಿಸಲ್ಪಟ್ಟ ಕುಂದಗೋಳ ತಾಲೂಕಿನ ಹಳ್ಳಿಗಳು 1961 ರಲ್ಲಿ ಕುಂದಗೋಳ ಮಾರುಕಟ್ಟೆಗೆ ಸೇರಿಸಲ್ಪಟ್ಟವು. ಸದ್ಯದಲ್ಲಿ ಇದರ ಕಾರ್ಯವ್ಯಾಪ್ತಿಯು ಕೇವಲ ಹುಬ್ಬಳ್ಳಿ ನಗರವನ್ನು ಒಳಗೊಂಡಂತೆ ತಾಲೂಕಿಗೆ ಸೀಮಿತವಾಗಿರುವುದು. ಈ ಮಾರುಕಟ್ಟೆಯಲ್ಲಿ ಒಟ್ಟು 52 ವಿವಿಧ ಒಕ್ಕಲುತನದ ಹುಟ್ಟುವಳಿಗಳು ನಿಯಂತ್ರಣಕ್ಕೆ ಒಳಪಟ್ಟಿದ್ದು ಅವುಗಳಲ್ಲಿ ಹತ್ತಿ, ಅರಳೆ, ಮೆಣಸಿನಕಾಯಿ, ಶೇಂಗಾ, ಆಹಾರಧಾನ್ಯ, ಅಕ್ಕಡಿಕಾಳು, ಬೆಲ್ಲ, ಉಳ್ಳಾಗಡ್ಡಿ ಮತ್ತು ಆಲೂಗಡ್ಡೆ ಪ್ರಮುಖವಾಗಿವೆ. ಒಂದು ಅಂದಾಜಿನಂತೆ ಪ್ರತೀವರ್ಷ ಹತ್ತಿಯ ಸುಗ್ಗಿಯಲ್ಲಿ ಮಾರಾಟಕ್ಕೆ ಬರುವ ಹತ್ತಿಯ ಪರಿಮಾಣ ಸುಮಾರು ಎರಡು ಲಕ್ಷ ಅಂಡಿಗೆಗಳು. ಆ ಪೈಕಿ ಡಿ.ಸಿ.ಎಚ್. ಹತ್ತಿಯ ಪ್ರಮಾಣ ಸುಮಾರು ಒಂದು ಲಕ್ಷ ಅಂಡಿಗೆಗಳಾದರೆ ಇನ್ನುಳಿದದ್ದು ಜಯಧರಹತ್ತಿ. 1954 ರಲ್ಲಿ ದ್ವಿದಳಧಾನ್ಯ, ರಾಗಿ, ಉಳ್ಳಾಗಡ್ಡಿ (ಈರುಳ್ಳಿ) ಮತ್ತು ಆಲೂಗಡ್ಡೆಗಳನ್ನು 1961 ರಿಂದ ಒಣಮೆಣಸಿನಕಾಯಿಯನ್ನು, 1982 ರಿಂದ ಬೆಲ್ಲವನ್ನು, 1988 ರಿಂದ ಹಣ್ಣು ಮತ್ತು ತರಕಾರಿಗಳನ್ನು ನಿಯಂತ್ರಣಕ್ಕೆ ಒಳಪಡಿಸಲಾಯಿತು. ಪ್ರಮುಖ ನಿಯಂತ್ರಿತ ಹುಟ್ಟುವಳಿಗಳಾದ ಹತ್ತಿ, ಅರಳೆ, ಶೇಂಗಾ, ಒಣಮೆಣಸಿನಕಾಯಿ ಮುಂತಾದವುಗಳನ್ನು (1962-63 ರಿಂದ) ಟೆಂಡರ್ ಮೂಲಕ ಮಾರಾಟ ಮಾಡಿದರೆ, ಉಳ್ಳಾಗಡ್ಡಿ, ಆಲೂಗಡ್ಡೆ, ವಿಳ್ಯದೆಲೆಗಳನ್ನು ಬಹಿರಂಗ ಹರಾಜು ಪದ್ಧತಿಯಿಂದ, ಜಾನುವಾರುಗಳನ್ನು ಪರಸ್ಪರ ಒಪ್ಪಂದದ ಮೂಲಕ ಮಾರಾಟ ಮಾಡಲಾಗುವುದು. ಪ್ರಮುಖ ಮಾರಾಟ ವಸ್ತುಗಳಾದ ಹತ್ತಿ, ಶೇಂಗಾ ಇವುಗಳನ್ನು ವ್ಯಾವಹಾರಿಕ ಪದ್ಧತಿಯಿಂದ ವರ್ಗೀಕರಿಸಲಾಗುವುದು. ಮಾರುಕಟ್ಟೆಯು ರೈತರಿಗೆ ಉಚಿತ ವರ್ಗೀಕರಣ, ರಿಯಾಯತಿ ದರದಲ್ಲಿ ಸಾಗಾಣಿಕೆ ಸೌಲಭ್ಯ, ಅಗ್ನಿಶಾಮಕ ವ್ಯವಸ್ಥೆ, ಪೇಟೆ ಸಮಾಚಾರ ಪ್ರಚಾರ, ರೈತರಿಗೆ ವಸತಿ ಸೌಲಭ್ಯ ಮುಂತಾದ ಅನುಕೂಲಗಳನ್ನು ಒದಗಿಸುತ್ತಿದೆ. ರೈತರ ಮಾರಾಟ ವೆಚ್ಚವನ್ನು ತಗ್ಗಿಸಲು 1967 ರಿಂದ 1987 ರ ವರೆಗೆ ಉಚಿತ ತೂಕದ ವ್ಯವಸ್ಥೆಯನ್ನು ಒದಗಿಸಲಾಗಿತ್ತು.

ಇತ್ತೀಚಿನವರೆಗೆ ಹೊಸ ಕಾಟನ್ ಮಾರ್ಕೆಟ್ ಪ್ರದೇಶದಲ್ಲಿ ಸುಮಾರು 56 ಎಕರೆ ಕ್ಷೇತ್ರವನ್ನು ಒಳಗೊಂಡಿದ್ದ ಮಾರುಕಟ್ಟೆ ಪ್ರಾಂಗಣವು ಬೆಳೆಯುತ್ತಿರುವ ಮಾರುಕಟ್ಟೆಯ ವ್ಯವಹಾರ ದೃಷ್ಟಿಯಿಂದ ಬಹಳ ಚಿಕ್ಕದಾಗಿದ್ದರಿಂದ ಇದೇ ವರ್ಷ 1994 (ಅಕ್ಟೋಬರ್ 10 ರಂದು) ಮಾರುಕಟ್ಟೆಯ ಚಟುವಟಿಕೆಗಳನ್ನು ಹುಬ್ಬಳ್ಳಿ-ಧಾರವಾಡ ನಡುವಿನ ಅಮರಗೋಳ ಹತ್ತಿರ ಹೊಸದಾಗಿ ನಿರ್ಮಾಣವಾಗಿರುವ ಸುಸಜ್ಜಿತ ಪ್ರಾಂಗಣಕ್ಕೆ ವರ್ಗಾಯಿಸಲಾಗಿದೆ. ಹೊಸ ಪ್ರಾಂಗಣವು ಸುಮಾರು 435 ಎಕರೆ ವಿಸ್ತೀರ್ಣ ಪ್ರದೇಶವನ್ನು ಆವರಿಸಿದ್ದು ಏಷ್ಯದಲ್ಲಿಯೇ ಅತೀದೊಡ್ಡ ಮಾರುಕಟ್ಟೆ ಪ್ರಾಂಗಣ ಎಂದು ಹೇಳಲಾಗುವುದು. 1978 ರಲ್ಲಿ ಈ ಉದ್ದೇಶಕ್ಕಾಗಿ ಜಮೀನು

ಖರೀದಿಸಿ, 1984 ರಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಿ, 1986 ರಲ್ಲಿ ಮೊದಲನೇ ಹಂತದ ಅಭಿವೃದ್ಧಿ ಕಾರ್ಯಗಳನ್ನು 118 ಎಕರೆ ಪ್ರದೇಶದಲ್ಲೂ ಪೂರೈಸಲಾಯಿತು. ಆಮರಗೋಳದ ಹೊಸ ಮಾರುಕಟ್ಟೆಯ ಪ್ರಾಂಗಣದ ಅಭಿವೃದ್ಧಿಗೆ ಇದುವರೆಗೆ (1993) ಜಮೀನು ಖರೀದಿಗೆ ರೂ. 144.39 ಲಕ್ಷ ಅಲ್ಲದೆ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಒಟ್ಟು ರೂ. 492.28 ಲಕ್ಷ ವೆಚ್ಚವಾಗಿರುವುದಾಗಿ ತಿಳಿದುಬರುವುದು. ಈ ಎಲ್ಲಾ ವೆಚ್ಚವನ್ನು ಭರಿಸಲು ಮಾರುಕಟ್ಟೆ ಸಮಿತಿಯ ಹಲವಾರು ಪ್ರಮುಖ ಮಾರುಕಟ್ಟೆ ಸಮಿತಿಗಳಿಂದ ರೂ.250 ಲಕ್ಷ, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯಿಂದ (ನಬಾರ್ಡ ಯೋಜನೆ) ರೂ.190 ಲಕ್ಷ, ಸಾಲವನ್ನು ಪಡೆದು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಇತ್ತೀಚೆಗೆ ಸ್ಥಳೀಯ ವರ್ತಕರು ತಮ್ಮ ವಹಿವಾಟನ್ನು ಹೊಸ ಮಾರುಕಟ್ಟೆಯ ಪ್ರಾಂಗಣಕ್ಕೆ ವರ್ಗಾಯಿಸಿರುವುದರಿಂದ ಇನ್ನೂ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಪೂರೈಸಬೇಕಾಗಿದೆ. ಮೊದಲ ಹಂತದಲ್ಲಿ ಹತ್ತಿ ಮತ್ತು ಇತರ ಕೃಷಿ ಉತ್ಪನ್ನ ಮಾರಾಟ ಮಾಡುವ ವ್ಯಾಪಾರಿಗಳಿಗಾಗಿ ಸುಮಾರು 180 ದಾಸ್ತಾನು ಮಳಿಗೆ ನಿರ್ಮಿಸಲಾಗಿದೆ. ಮಾಲಿಕತ್ವದ ಆಧಾರದ ಮೇಲೆ ವ್ಯಾಪಾರಸ್ಥರಿಗೆ ಉಗ್ರಾಣ ಮತ್ತು ನಿವೇಶನಗಳನ್ನು ನೀಡಲಾಗಿದೆ. ಇತ್ತೀಚಿನ ಐದು ವರ್ಷಗಳಲ್ಲಿ ಮಾರುಕಟ್ಟೆಗೆ ಆವಕ ಆದ ನಿಯಂತ್ರಿತ ಹುಟ್ಟುವಳಿಗಳ ಒಟ್ಟು ಪರಿಮಾಣ ಮತ್ತು ಮೌಲ್ಯ ಈ ಮುಂದಿನಂತೆ ಇರುವುದು: ಮೌಲ್ಯವನ್ನು ಆವರಣದಲ್ಲಿ ಕೋಟಿ ರೂ.ಗಳಲ್ಲಿ ಸೂಚಿಸಲಾಗಿದೆ. 1988-89 ಆವಕ ಲಕ್ಷ ಕ್ವಿಂಟಾಲುಗಳಲ್ಲಿ 18.49 (65.21): 1989-90 - 18.65 (56.89): 1990-91 - 18.53 (75.68): 1991-92 - 16.86 (73.10): ಮತ್ತು 1992-93 - 19.40 (82.84).

ಇತ್ತೀಚಿನ ನಾಲ್ಕು ವರ್ಷಗಳಲ್ಲಿ ಸಮಿತಿಯ ಆದಾಯ ವೆಚ್ಚಗಳು ಲಕ್ಷ ರೂ.ಗಳಲ್ಲಿ ಈ ಮುಂದಿನಂತೆ ಇರುವವು. ಆವರಣದಲ್ಲಿಯ ಸಂಖ್ಯೆಗಳು ವೆಚ್ಚವನ್ನು ಸೂಚಿಸುತ್ತಿವೆ. 1988-89 - 79.02 (53.25); 1989-90 - 72.68 (47.53); 1990-91 - 101.70 (60.64); ಮತ್ತು 1991-92 - 92.08 (52.81). ಮಾರುಕಟ್ಟೆ ಪ್ರಾಂಗಣದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಮುಖ ಪೇಟೆ ಕಾರ್ಯಕರ್ತರ ವಿವರ 1992-93 ಮತ್ತು 1989-90 ರಲ್ಲಿ ಈ ಮುಂದಿನಂತೆ ಇರುವುದು: ಆವರಣದಲ್ಲಿನ ಸಂಖ್ಯೆಗಳು 1989-90 ಮಾಹಿತಿಯನ್ನು ಸೂಚಿಸುತ್ತವೆ. ಕಮಿಶನ್ ಏಜೆಂಟರು 292 (253); ಸಗಟು ಖರೀದಿಗಾರರು 527 (548), ಚಿಲ್ಲರೆ ಖರೀದಿದಾರರು 501 (1301); ಹಾಗೂ ಇತರರು 1020 (930).

### ಕೃಷಿ ಮಾರಾಟ ತರಬೇತಿ ಮಹಾವಿದ್ಯಾಲಯ

ಕೃಷಿ ಉತ್ಪನ್ನಗಳ ಮಾರಾಟ ಚಟುವಟಿಕೆಗಳಲ್ಲಿ ನಿರತರಾದ ಮಾರುಕಟ್ಟೆ ಸಮಿತಿಗಳು, ಮಾರಾಟ ಮಂಡಳಗಳು, ಇಲಾಖೆಯ ಸಿಬ್ಬಂದಿ ವರ್ಗ, ರೈತರು ಮತ್ತು ಸಂಬಂಧಪಟ್ಟಂತ ಇತರರಿಗೆ ಯಶಸ್ವಿಯಾಗಿ ಕಾರ್ಯ ನಿರ್ವಹಿಸಲು ನೆರವಾಗುವ ಉದ್ದೇಶದಿಂದ ಮತ್ತು ಕೃಷಿ ಉತ್ಪನ್ನಗಳ ಮಾರಾಟಕ್ಕೆ ಸಂಬಂಧಪಟ್ಟಂತೆ ವಿವಿಧ ವಿಷಯಗಳನ್ನು ಕುರಿತು ರೈತರಿಗೆ, ಮಾರುಕಟ್ಟೆಯ ಸಮಿತಿಯ ಸದಸ್ಯರಿಗೆ, ಮಂಡಳ ಪಂಚಾಯತಿಯ ಸದಸ್ಯರಿಗೆ, ಲಾಭದಾಯಕ ಮಾರಾಟದ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡುವುದು ಈ ವಿದ್ಯಾಸಂಸ್ಥೆಯ ಮುಖ್ಯ ಉದ್ದೇಶ. ರಾಷ್ಟ್ರದಲ್ಲಿಯೇ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಸಂಬಂಧಿಸಿದಂತೆ ತರಬೇತಿ ನೀಡುವ ಪ್ರಥಮ ಕೇಂದ್ರ ಇದಾಗಿದೆ.

ಪ್ರಾರಂಭದಲ್ಲಿ (1964 ರಲ್ಲಿ) ಕರ್ನಾಟಕ ಕ್ರಮಪಡಿಸಿದ (ರೆಗ್ಯುಲೇಟೆಡ್) ಪೇಟೆಗಳ ಸಲಹಾ ಸಮಿತಿಯಿಂದ ಹುಬ್ಬಳ್ಳಿಯಿಂದ ಪ್ರಾರಂಭವಾದ ಈ ಸಂಸ್ಥೆಯು 1978 ರಲ್ಲಿ ರಾಜ್ಯಮಟ್ಟದ 'ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ' ಬೆಂಗಳೂರು ಸಂಸ್ಥೆಯಲ್ಲಿ ವಿಲೀನಗೊಂಡು ಅದರ ಅಂಗ ಸಂಸ್ಥೆಯಾಗಿ ಶಿಕ್ಷಣ ತರಬೇತಿ ಸಂಸ್ಥೆಯಂತೆ ಕಾರ್ಯ ನಿರ್ವಹಿಸುತ್ತಿದೆ. ಈ ಕೇಂದ್ರದಿಂದ ಮಾರುಕಟ್ಟೆಯ ಸಮಿತಿಯ ಸಿಬ್ಬಂದಿಯವರಿಗೆ 1972 ರಿಂದ ವಿವಿಧ ಉತ್ಪನ್ನಗಳ ವರ್ಗೀಕರಣ ತರಬೇತಿ, 1982 ರಿಂದ ರೈತರಿಗೆ ಕೃಷಿ ಉತ್ಪನ್ನಗಳನ್ನು ಲಾಭದಾಯಕವಾಗಿ ಮಾರಾಟ ಮಾಡುವ ತರಬೇತಿ, ರೈತರ ತರಬೇತಿ, ವಿವಿಧ ಬಾನುಲಿ ಪಾಠಗಳ ಯೋಜನೆ (1982)(ದೇಶದಲ್ಲಿಯೇ ಇದು ಮೊದಲನೆಯ ಯೋಜನೆ ಎಂದು ಹೇಳಲಾಗುವುದು), ಅಂಚೆ ತೆರಪಿನ ಶಿಕ್ಷಣ ಯೋಜನೆ, ರೈತರಿಗೆ ಅಧ್ಯಯನ ಪ್ರವಾಸ ಯೋಜನೆ ಮುಂತಾದ ಹಲವಾರು ರೈತರ ಉಪಯೋಗಿ ಕಾರ್ಯಕ್ರಮಗಳನ್ನು ಈ ಸಂಸ್ಥೆಯಿಂದ ಹಮ್ಮಿಕೊಳ್ಳಲಾಗಿದೆ.

1990-1992 ರ ಅವಧಿಯಲ್ಲಿ, ತರಬೇತಿ ಕೇಂದ್ರದ ವತಿಯಿಂದ 65 ಜನರಿಗೆ ವರ್ಗೀಕರಣ ತರಬೇತಿ, 1,254 ರೈತರಿಗೆ ತರಬೇತಿ 14,830 ರೈತರಿಗೆ ಬಾನುಲಿ ಪಾಠಗಳ ಯೋಜನೆ ತರಬೇತಿ, 837 ಜನರಿಗೆ ಕೃಷಿ ಪಾಠಶಾಲೆಗಳಲ್ಲಿ ರೈತರ ತರಬೇತಿ,

ಮುಂತಾದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪೂರೈಸಲಾಯಿತು. ಪ್ರಾಚಾರ್ಯರನ್ನು ಒಳಗೊಂಡಂತೆ ವಿದ್ಯಾಸಂಸ್ಥೆಯು 12 ಜನರ ಸಿಬ್ಬಂದಿಯನ್ನು ಹೊಂದಿರುವದು. ಮಹಾವಿದ್ಯಾಲಯವು, ಉತ್ತಮ ಗ್ರಂಥಾಲಯ, ಪ್ರಯೋಗ ಶಾಲೆ, ಅತಿಥಿಗೃಹ ಮುಂತಾದ ಸೌಲಭ್ಯಗಳನ್ನು ಹೊಂದಿರುವುದು. ವಿದ್ಯಾಲಯವು ಹಲವಾರು ಕೃಷಿ ಮಾರಾಟ ಉಪಯೋಗಿ ಪ್ರಕಟಣೆಗಳನ್ನು ಹೊರತಂದಿದೆ.

**ಸಂತೆಗಳು**

ಬಹು ಹಿಂದಿನಿಂದ ಇಂದಿನವರೆಗೂ ನಡೆದುಕೊಂಡು ಬಂದಿರುವ ವಾರದ ಸಂತೆಯ (ಬಜಾರ್) ವ್ಯವಸ್ಥೆ ಒಂದು ಪ್ರಮುಖ ವಾಣಿಜ್ಯ ಚಟುವಟಿಕೆಯಾಗಿದೆ. ಪ್ರಾಚೀನ ಮತ್ತು ಮಧ್ಯಕಾಲದಲ್ಲಿ ಸಂತೆಯು ಒಂದು ಪ್ರಮುಖ ವ್ಯಾಪಾರದ ವೇದಿಕೆಯಾಗಿತ್ತು. ಸಾಮಾಜಿಕ ಆರ್ಥಿಕ ಪ್ರಗತಿಯ ಮುನ್ನಡೆಗೆ ಪ್ರಮುಖ ಪಾತ್ರವಹಿಸುತ್ತಿತ್ತು. ಹಳ್ಳಿಬೆಳೆದಾಗ ಅಲ್ಲಿನ ವ್ಯಾಪಾರೀ ಅವಶ್ಯಕತೆ ಗಮನಿಸಿ ಸರಕಾರ ಸಂತೆ ಆರಂಭಿಸಿ ಅದರ ಉಸ್ತುರಿಗೆ ಪಟ್ಟಣಶೆಟ್ಟಿಯನ್ನು ನೇಮಿಸಿತ್ತು. ಆಗ ಊರು ಪಟ್ಟಣವಾದಂತೆ ಸಂತೆಯನ್ನು ಊರ ಗೌಡ, ಮಹಾಪ್ರಭು, ವರ್ತಕರು ಮೊದಲಾದವರು ಸೇರಿ ನಡೆಸುತ್ತಿದ್ದರು. ಸಂತೆಯನ್ನು ಕುರಿತಂತೆ ಅದರ ವಿವರ, ವರ್ತಕರಿಗೆ ನೀಡಿದ್ದ ಸೌಲಭ್ಯ ಸಂತೆಯ ವ್ಯವಸ್ಥೆ ಮುಂತಾದವುಗಳನ್ನು ಕುರಿತಂತೆ ಅನೇಕ ಶಾಸನಗಳಲ್ಲಿ ಪ್ರಸ್ತಾಪಿಸಲಾಗಿದೆ. 1075 ರ ಸೂಡಿಯ ಶಾಸನವು ಸಂತೆಯ ದಿನವನ್ನು ರವಿವಾರ ಎಂದು ಸೂಚಿಸುವನು (ಈಗ ದಿನ ಬದಲಾಗಿದೆ). ಸಾಮಾನ್ಯ ಸಂತೆಗಳಲ್ಲದೇ ವಿಶೇಷವಾದ ಧರ್ಮ ಸಂತೆಗಳು ನಡೆಯುತ್ತಿದ್ದವು. ಕೆಲವು ಸಂತೆಗಳಲ್ಲಿ ಸರಕುಗಳ ಮೇಲೆ ಸಂತೆ ಸುಂಕ, ಮಾರಾಟ ತೆರಿಗೆ, ವಿಧಿಸುತ್ತಿರಲಿಲ್ಲ, ಸಂತೆಯ ಸಮಯದಲ್ಲಿ ಪ್ರತೀಯೊಬ್ಬ ವರ್ತಕರಿಂದ ಹಣ ಅಥವಾ ವಸ್ತುಗಳನ್ನು ಸಂಗ್ರಹಿಸುತ್ತಿದ್ದರು. ಇದನ್ನು 'ಪಸಿಗೆ' ಎಂದು ಕರೆಯುತ್ತಿದ್ದರು. ಸದರಿ ವಸ್ತುಗಳನ್ನು, ಹಣವನ್ನು ವಿದ್ಯಾರ್ಥಿಗಳ ಭೋಜನಕ್ಕಾಗಿ ಮಠಮಾನ್ಯಗಳಿಗೆ ನೀಡಲಾಗುತ್ತಿತ್ತು. ಇತ್ತೀಚಿನವರೆಗೂ ಈ ಸಂಪ್ರದಾಯ ಈ ಜಿಲ್ಲೆಯಲ್ಲಿ ರೂಢಿಯಲ್ಲಿ ಇತ್ತು. ಆದರೆ ಸಾಮಾನ್ಯವಾಗಿ ಸಂತೆಗಳಲ್ಲಿ ತಲೆಹೇರು, ಬಂಡಿಹೇರಿಗೆ ಪ್ರತ್ಯೇಕ ಸುಂಕ ಆಕರಿಸುತ್ತಿದ್ದರು. ಇದನ್ನು ಸಂತೆಯ ಸುಂಕ, ಸಂತೆಯ ಆಯ, ಸಂತೆಯ ಆದಾಯ ಎಂದು ಕರೆಯುತ್ತಿದ್ದರು. ಪೇಶ್ವೆಯವರ ಕಾಲದಲ್ಲಿ ಸ್ಥಳೀಯವಾಗಿ ಸಂತೆ ನಡೆಸಲು ವರ್ತಕರಿಗೆ ಬಹಳ ಪ್ರೋತ್ಸಾಹ ನೀಡಲಾಯಿತು. ಸಾಮಾನ್ಯವಾಗಿ ಸ್ಥಳೀಯ ಗ್ರಾಮ ದೇವತೆಯ ಅಥವಾ ಇತರ ಪ್ರಮುಖ ದೇವರ ವಾರದ ದಿವಸ ಸ್ಥಳೀಯ ಸಂತೆಯನ್ನು ನಡೆಸುವುದು ವಾಡಿಕೆಯಾಗಿತ್ತು. ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶಗಳಲ್ಲಿ ಸ್ಥಳೀಯ ಸಂತೆಗಳು ಸ್ಥಳೀಯ ಸರಕು ಅಥವಾ ಉತ್ಪನ್ನಗಳಿಗೆ ಪ್ರಾಥಮಿಕ ಮಾರುಕಟ್ಟೆಯ ಅವಶ್ಯಕತೆಯನ್ನು ಪೂರೈಸುತ್ತವೆ. ಸಂತೆಗಳಲ್ಲಿ ಹೆಚ್ಚಿನ ಸಂಖ್ಯೆಯ ಬೆಳೆಗಾರರು ಮತ್ತು ಉತ್ಪಾದಕರು ಸಣ್ಣ ಪ್ರಮಾಣದ ಚಿಲ್ಲರೇ ವರ್ತಕರು ತಮ್ಮ ಸರಕುಗಳನ್ನು ಮಾರಾಟಕ್ಕೆ ಇಡುವರು. ಸಂತೆಗಳು ದೊಡ್ಡ ದೊಡ್ಡ ವರ್ತಕರು ಹಾಗೂ ಅವರ ಏಜಂಟರು ತಮಗೆ ಬೇಕಾದ ವಸ್ತುಗಳನ್ನು, ವಿಶೇಷವಾಗಿ ಆಹಾರಧಾನ್ಯಗಳನ್ನು ಸಂಗ್ರಹಿಸಲು ಬಹು ಸಹಕಾರಿಯಾಗಿವೆ. ವಾರದ ಸಂತೆಗಳಲ್ಲಿ ಚಿಕ್ಕಪುಟ್ಟ ಸಂಚಾರಿ ವ್ಯಾಪಾರಿಗಳು (ಹೊತ್ತು ಮಾರುವವರು), ರಸ್ತೆ ಬದಿಯ ಅಂಗಡಿಯವರು, ಗುಜರಿ ವ್ಯಾಪಾರದವರು, ಅಗ್ಗದ ಬೆಲೆಯ ಸರಕು ಮಾರುವವರು, ಬಡ ಮಧ್ಯಮ ವರ್ಗದ ಜನರಿಗೆ ಬೇಕಾಗುವ ದಿನನಿತ್ಯದ ಸರಕುಗಳನ್ನು ಮಾರಾಟಕ್ಕೆ ಇಡುವರು. ಸಂತೆಯಲ್ಲಿ ಅಲ್ಲದೇ ಜಿಲ್ಲೆಯಲ್ಲಿ ನಡೆಯುವ ಹಲವು ಪ್ರಮುಖ ಜಾತ್ರೆಗಳಲ್ಲಿ ಉತ್ತಮ ವ್ಯಾಪಾರ ನಡೆಯುವುದು. ಈ ಜಾತ್ರೆಗಳಲ್ಲಿ ಕೇವಲ ವಿಶೇಷವಾಗಿ ವಸ್ತುಗಳ ವ್ಯಾಪಾರ ನಡೆಯುವುದು. ಜಾತ್ರೆಯಲ್ಲಿ ಮಾರಾಟವಾಗುವ ಪ್ರಮುಖ ವಸ್ತುಗಳೆಂದರೆ ಸಿದ್ಧಪಡಿಸಿದ ಉಡುಪುಗಳು, ತಾಮ್ರ, ಹಿತ್ತಾಳೆ, ಸ್ಟೀಲ್, ಅಲ್ಯುಮಿನಿಯಂ ಪಾತ್ರೆಗಳು, ರೈತರ ವ್ಯವಸಾಯ ಉಪಯೋಗಿ ವಸ್ತುಗಳು, ಗೃಹ ಉಪಯೋಗಿ ವಸ್ತುಗಳು, ಸ್ತ್ರೀಯರ ಅಲಂಕಾರ ವಸ್ತುಗಳು, ಆಟಿಕೆ ವಸ್ತುಗಳು, ಪೂಜಾ ಸಾಮಗ್ರಿಗಳು, ಮುಂತಾದವುಗಳು. ಮರದ ಸುಂದರ ಕೆತ್ತನೆಯ ಬಾಗಿಲು ಚೌಕಟ್ಟುಗಳ ವ್ಯಾಪಾರ ಯಮನೂರ ಜಾತ್ರೆಯಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆಯುವುದು. ಇತ್ತೀಚೆಗೆ ಸಂತೆಗಳನ್ನು ಸ್ಥಳೀಯ ಸಂಸ್ಥೆಗಳು ಏರ್ಪಡಿಸುವವು. ಸಂತೆಯಿಂದ ಆದಾಯವು ಬರುವುದು. ಈ ಜಿಲ್ಲೆಯ ಮೈದಾನ ಪ್ರದೇಶದ ಭಾಗಗಳಲ್ಲಿ ಬಹು ದೊಡ್ಡ ಸಂತೆಗಳು ನಡೆಯುವವು. ಹಿಂದಿನ ಜಿಲ್ಲಾ ಗ್ಯಾಸೆಟಿಯರ್ ಸೂಚಿಸುವಂತೆ 1950-51 ರಲ್ಲಿ ಜಿಲ್ಲೆಯಾದ್ಯಂತ ಸುಮಾರು 129 ಸ್ಥಳಗಳಲ್ಲಿ ಸಂತೆಗಳು ನಡೆಯುತ್ತಿದ್ದವು. ಬಹುಪಾಲು ಸಂತೆಗಳಿಗೆ ಸೇರುವ ಜನಸಂಖ್ಯೆ ಒಂದು ಸಾವಿರಕ್ಕಿಂತ ಕಡಿಮೆ ಇರುತ್ತಿತ್ತು. ಈ ಮೇಲಿನ 129 ಸಂತೆಗಳಲ್ಲಿ ಸುಮಾರು 29 ಸ್ಥಳಗಳಲ್ಲಿ ಪ್ರಮುಖ ಸಂತೆಗಳು ನಡೆಯುತ್ತಿದ್ದವು. ಸಂತೆಯು ಸಾಮಾನ್ಯವಾಗಿ ಪಟ್ಟಣದ ಮಧ್ಯದಲ್ಲಿ (ಸಂತೆಕಟ್ಟೆ) ಮುಂಜಾನೆ 8 ರಿಂದ ಸಂಜೆ 5 ರವರೆಗೆ ನಡೆಯುತ್ತಿದ್ದವು ಎಂದು ತಿಳಿದುಬರುವುದು. ಇತ್ತೀಚೆಗೆ ಸಂತೆಗೆ ಪ್ರತ್ಯೇಕವಾದ ಜಾಗಗಳನ್ನು ಸ್ಥಳೀಯ ಸಂಸ್ಥೆಯವರು ಒದಗಿಸಿರುವರು. ಜಿಲ್ಲಾ ಕೃಷಿ ಮಾರುಕಟ್ಟೆ ಇಲಾಖೆಯವರು ವರದಿ ಮಾಡುವಂತೆ ಜಿಲ್ಲೆಯ ಇಂದಿನ ಸಂತೆಗಳ ವಿವರ ಈ ರೀತಿ ಇರುವುದು.

**ಕೋಷ್ಟಕ 6.20: ಧಾರವಾಡ ಜಿಲ್ಲೆಯಲ್ಲಿ ತಾಲೂಕುವಾರು ಸಂತೆ ನಡೆಯುವ ಸ್ಥಳಗಳು ಹಾಗೂ ಸಂತೆ ನಡೆಯುವ ದಿವಸ, ಸಂತೆಯಲ್ಲಿ ಮುಖ್ಯವಾಗಿ ವ್ಯವಹಾರ ಆಗುವ ಹುಟ್ಟುವಳಿಗಳು**

| ಆ. ಸಂ. ಮಾರುಕಟ್ಟೆ ಸಮಿತಿಯ ಮತ್ತು ತಾಲೂಕಿನ ಹೆಸರು: | ಸಂತೆ ನಡೆಯುವ ಸ್ಥಳ (ಊರುಗಳು) | ಸಂತೆ ನಡೆಯುವ ವಾರದ ದಿನ | ಸಂತೆಯಲ್ಲಿ ವ್ಯವಹಾರ, (ವ್ಯಾಪಾರವಾಗುವ ಪ್ರಮುಖ ಹುಟ್ಟುವಳಿಗಳು) |
|---|---|---|---|
| 1. ಧಾರವಾಡ | 1. ಧಾರವಾಡ | ಮಂಗಳ | ಅವಶ್ಯಕ ಆಹಾರ ಪದಾರ್ಥಗಳ ಹುಟ್ಟುವಳಿಗಳು |
| | 2. ಅಳ್ನಾವರ | ಮಂಗಳ | —"— |
| | 3. ಅಮ್ಮಿನಭಾವಿ | ಶುಕ್ರ | —"— |
| | 4. ಉಪ್ಪಿನಬೆಟಗೇರಿ | ಶನಿ | —"— |
| | 5. ಗದಗ | ಗುರು | —"— |
| | 6. ಹೆಬ್ಬಳ್ಳಿ | ಬುಧ | —"— |
| | 7. ತಡಕೋಡ | ರವಿ | —"— |
| | 8. ಮುಗದ | ಗುರು | —"— |
| | 9. ಮೊರಬ | ಬುಧ | —"— |
| | 10. ಲೋಕೂರು | ಶುಕ್ರ | —"— |
| 2. ಹಾನಗಲ್ | 1 ಹಾನಗಲ್ | ಶುಕ್ರ | —"— |
| | 2. ಅಕ್ಕಿ ಆಲೂರು | ಮಂಗಳ | —"— |
| | 3. ತಿಳವಳ್ಳಿ | ಗುರು | —"— |
| | 4. ಚಿಕ್ಕಾಂಶಿಹೊಸೂರು | ಸೋಮ | —"— |
| | 5. ಬೆಳಗಾಲ ಪೇಟೆ | ಸೋಮ | —"— |
| | 6. ಆಡೂರು | ಶನಿ | —"— |
| | 7. ಬಮ್ಮನಹಳ್ಳಿ | ಶನಿ | —"— |
| | 8. ಕೂಸನೂರು | ರವಿ | ----''---- |
| 3. ಹಾವೇರಿ | 1. ಹಾವೇರಿ | ಗುರು | ಆಹಾರ ಧಾನ್ಯಗಳು, ಕಾಯಿ ಪಲ್ಲೆ, ಕಿರಾಣಿ ಪದಾರ್ಥಗಳು |
| | 2. ಬೆಳವಗಿ | ಬುಧ | ----- — "— |
| | 3. ಗುತ್ತಲ | ಸೋಮ | —"— |
| | 4. ಕರ್ಜಗಿ | ಮಂಗಳ | —"— |
| | 5. ದೇವಗಿರಿ | ಸೋಮ | —"— |
| | 6. ಹಾವನೂರ | ಶುಕ್ರ | —"— |
| | 7. ದೇವಿಹೊಸೂರು | ರವಿ | —"— |
| | 8. ಹೊಸರಿತ್ತಿ | ಶನಿ | ಒಣಮೆಣಸಿನಕಾಯಿ ಹಾಗೂ ಮೇಲಿನವು |
| | 9. ನೆಗಳೂರು | ರವಿ | —"— |
| | 10. ಸಂಗೂರು | ಸೋಮ | —"— |
| | 11. ಆಗಡಿ | ಬುಧ | —"— |
| | 12 ಕಬ್ಬೂರು | ಶುಕ್ರ | —"— |
| 4. ಸವಣೂರು | 1. ಸವಣೂರು | ಶುಕ್ರ | ಆಹಾರ ಧಾನ್ಯಗಳು ಹಾಗೂ ಕಾಯಿ ಪಲ್ಲೆ ಮುಂತಾದವುಗಳು |

| ಅ ಸಂ. ಮಾರುಕಟ್ಟೆ ಸಮಿತಿಯ ಹೆಸರು:ತಾಲೂಕಿನ | ಸಂತೆ ನಡೆಯುವ ಸ್ಥಳ (ಊರುಗಳು) | ಸಂತೆ ನಡೆಯುವ ವಾರದ ದಿನ | ಸಂತೆಯಲ್ಲಿ ವ್ಯವಹಾರ, (ವ್ಯಾಪಾರವಾಗುವ ಪ್ರಮುಖ ಹುಟ್ಟುವಳಿಗಳು) |
|---|---|---|---|
| | 2. ಕಾರಡಗಿ | ಸೋಮ | ——"—— |
| | 3. ಹತ್ತಿಮತ್ತೂರು | ಬುಧ | ——"—— |
| | 4. ಕಡಕೋಳ | ಸೋಮ | ——"—— |
| 5. ಬ್ಯಾಡಗಿ | 1. ಬ್ಯಾಡಗಿ | ಶನಿ | ಜೋಳ, ಅಕ್ಕಿ, ರಾಗಿ, ಕಾಯಿಪಲ್ಲೆ ಕಿರುಕುಳ ವ್ಯಾಪಾರ |
| | 2. ಚಿಕ್ಕಬಾಸೂರ | ಶನಿ | ಜೋಳ, ಅಕ್ಕಿ, ಬೆಲ್ಲ, ಕಾಯಿಪಲ್ಲೆ ಹಾಗೂ ಮೇಲಿನ ವಸ್ತುಗಳು |
| | 3. ಮೋಟೆಬೆನ್ನೂರು | ಸೋಮ | ರಾಗಿ, ಮೇಲೆ ಹೇಳಿದ ವಸ್ತುಗಳು |
| 6. ರಾಣೆಬೆನ್ನೂರು | 1. ರಾಣೆಬೆನ್ನೂರು | ರವಿ | ಬೆಲ್ಲ, ಅಕ್ಕಿ, ಕಾಯಿಪಲ್ಲೆ, ಉಳ್ಳಾಗಡ್ಡಿ, ಬೆಳ್ಳುಳ್ಳಿ ಆಹಾರ ಧಾನ್ಯಗಳು |
| | 2. ತುಮ್ಮಿನಕಟ್ಟೆ | ಬುಧ | ಆಹಾರ ಧಾನ್ಯಗಳು, ಟೊಮ್ಯಾಟೋ, ಬದನೆಕಾಯಿ ಇತರ ಕಾಯಿಪಲ್ಲೆ |
| | 3. ಮೆಡ್ಲೇರಿ | ಸೋಮ | ——"—— |
| | 4. ಹೊನ್ನತ್ತಿ | ಮಂಗಳ | ——"—— |
| | 5. ಹಲಗೇರಿ | ಗುರು | ಬೆಳ್ಳುಳ್ಳಿ, ಉಳ್ಳಾಗಡ್ಡಿ, ಹಸಿಮೆಣಸಿನಕಾಯಿ ಇತರ ಕಾಯಿಪಲ್ಲೆ |
| 7. ಲಕ್ಷ್ಮೇಶ್ವರ ಶಿರಹಟ್ಟಿ ತಾಲೂಕ | 1. ಲಕ್ಷ್ಮೇಶ್ವರ | ಶುಕ್ರ | ಹತ್ತಿ, ಶೇಂಗಾ, ಜೋಳ, ಒಣಮೆಣಸಿನಕಾಯಿ |
| | 2. ಶಿರಹಟ್ಟಿ | ರವಿ | ——"—— |
| | 3. ಬೆಳ್ಳಟ್ಟಿ | ಸೋಮ | ——"—— |
| | 4. ಶಿಗ್ಲಿ | ಶನಿ | ——"—— |
| 8. ಕುಂದಗೋಳ | 1. ಕುಂದಗೋಳ | ಸೋಮ | ಜೋಳ, ಅಕ್ಕಿ, ಒಣಮೆಣಸಿನಕಾಯಿ |
| | 2. ಗುಡಗೇರಿ | ಗುರು | ——"—— |
| | 3. ಸಂಶಿ | ಶನಿ | ——"—— |
| 9. ಅಣ್ಣಿಗೇರಿ ನವಲಗುಂದ ತಾಲೂಕ | 1. ಅಣ್ಣಿಗೇರಿ | ಶುಕ್ರ | ಕಾಯಿಪಲ್ಲೆ ಮತ್ತು ಉಳ್ಳಾಗಡ್ಡಿ, ಚಿಲ್ಲರೆ ವ್ಯಾಪಾರ |
| | 2. ನವಲಗುಂದ | ಮಂಗಳ | ——"—— |
| 10. ಗದಗ (ಮು.ಮಾ.ಕ) | 1. ಗದಗ | ಶನಿ | ಹುರಳಿ, ಕಾಯಿಪಲ್ಲೆ, ಹತ್ತಿ, ಉಳ್ಳಾಗಡ್ಡಿ, ಶೇಂಗಾ ಜೋಳ, ಗೋಧಿ, ಕಡಲೆ, ಹೆಸರು, ತೊಗರಿ, ಮಡಕಿ |
| | 2. ಸೊರಟೂರು | ಸೋಮ | ——"—— |
| | 3. ಹೊಂಬಳ | ಶುಕ್ರ | ——"—— |
| | 4. ಬಳಗಾನೂರು | ಗುರು | ——"—— |
| | 5. ಲಕ್ಕುಂಡಿ | ಮಂಗಳ | ——"—— |
| | 6. ಕೋಟುಮಚಗಿ | ರವಿ | ——"—— |
| | 7. ಕುರ್ತಕೋಟಿ | ಗುರು | ——"—— |
| | 8. ಮುಳಗುಂದ | ಬುಧ | ——"—— |
| 11. ಮುಂಡರಗಿ | 1. ಮುಂಡರಗಿ | ಸೋಮ | ಜೋಳ |

| ಅ ಸಂ. ಮಾರುಕಟ್ಟೆ ಸಮಿತಿಯ ಹೆಸರು:ತಾಲೂಕಿನ | ಸಂತೆ ನಡೆಯುವ ಸ್ಥಳ (ಊರುಗಳು) | ಸಂತೆ ನಡೆಯುವ ವಾರದ ದಿನ | ಸಂತೆಯಲ್ಲಿ ವ್ಯವಹಾರ, (ವ್ಯಾಪಾರವಾಗುವ ಪ್ರಮುಖ ಹುಟ್ಟುವಳಿಗಳು) |
|---|---|---|---|
| | 2. ಡಂಬಳ | ಗುರು | " |
| | 3. ಬಾಗೇವಾಡಿ | ಬುಧ | ಜೋಳ, ಸೂರ್ಯಕಾಂತಿ ಬೀಜ |
| | 4. ಕಲಗೇರಿ | ಶುಕ್ರ | ಜೋಳ ಮತ್ತು ಕಾಯಿಪಲ್ಲೆ |
| | 5. ಹಮ್ಮಿಗಿ | ಗುರು | —"— |
| | 6. ಡೋಣಿ | ರವಿ | —"— |
| | 7. ಹಿರೇವಡ್ಡಟ್ಟಿ | ಮಂಗಳ | —"— |
| | 8. ಪೇಟಾಆಲೂರು | ಮಂಗಳ | —"— |
| 12. ಹೊಳೆಆಲೂರು ರೋಣ ತಾ. | 1. ಹೊಳೆಆಲೂರು | ಶುಕ್ರ | ಶೇಂಗಾಕಾಯಿ, ಹೆಸರು, ಜೋಳ, ಕಡ್ಲೆ, ಗೋಧಿ, ಉಳ್ಳಾಗಡ್ಡಿ, ಹಸಿಮೆಣಸಿನಕಾಯಿ |
| | 2. ರೋಣ | ಗುರು | —"— |
| | 3. ನರೇಗಲ್ | ಸೋಮ | —"— |
| | 4. ಗಜೇಂದ್ರಗಡ | ಮಂಗಳ | —"— |
| | 5. ಅಬ್ಬಿಗೇರಿ | ಸೋಮ | —ಆಹಾರ ಧಾನ್ಯಗಳು ಮತ್ತು ಕಾಯಿಪಲ್ಲೆ |
| | 6. ಮುಶಿಗೇರಿ | ರವಿ | —"— |
| | 7. ನಿಡುಗುಂದಿ | ಬುಧ | —"— |
| | 8. ಮಲ್ಲಾಪೂರ | ಬುಧ | —"— |
| | 9. ಬೆಳವಣಕಿ | ಗುರು | —"— |
| | 10. ಸೂಡಿ | ಶುಕ್ರ | —"— |
| | 11. ಜಕ್ಕಲಿ | ಬುಧ | —"— |
| 13. ನರಗುಂದ | 1. ನರಗುಂದ | ಬುಧ | ತರಕಾರಿಗಳ ಚಿಲ್ಲರೆ ವ್ಯಾಪಾರ |
| | 2. ಚಿಕ್ಕನರಗುಂದ | ಸೋಮ | —"— |
| | 3. ಕೊಣ್ಣೂರು | ಗುರು | —"— |
| | 4. ಹವಲಿ | ಸೋಮ | —"— |
| | 5. ಶಿರೋಳ | ರವಿ | —"— |
| 14. ಹಿರೇಕೆರೂರು | ೧. ಹಿರೇಕೆರೂರು | ಸೋಮ | ಅಕ್ಕಿ, ಜೋಳ, ಭತ್ತ, ಹತ್ತಿ, ರಾಗಿ, ಬೆಲ್ಲ |
| | 2. ಮಾಸೂರು | ರವಿ | ———ಕುರಿ, ಆಡು |
| | 3. ರಟ್ಟೀಹಳ್ಳಿ | ಶುಕ್ರ | ——ಅಕ್ಕಿ, ಜೋಳ, ಹತ್ತಿ |
| | 4. ಹಂಸಬಾವಿ | ಶುಕ್ರ | ———-"ಜಾನುವಾರು |
| | 5. ಚಿಕ್ಕೆರೂರು | ಬುಧ | ಅಕ್ಕಿ, ಜೋಳ, ಭತ್ತ, ರಾಗಿ, ಬೆಲ್ಲ, ಹತ್ತಿ, ಕುರಿ, ಆಡು |
| 15. ಶಿಗ್ಗಾಂವಿ | 1. ಶಿಗ್ಗಾಂವ | ಬುಧ | ಭತ್ತ, ಅಕ್ಕಿ, ಜೋಳ, ಕಾಳುಕಡ್ಡಿ |
| | 2. ಬಂಕಾಪುರ | ಮಂಗಳ | —"— |
| | 3. ಹುಲಗೂರು | ರವಿ | —"— |
| | 4. ದುಂಡಸಿ | ಗುರು | —"— |

| ಅ ಸಂ. ಮಾರುಕಟ್ಟೆ ಸಮಿತಿಯ ಹೆಸರು:ತಾಲೂಕಿನ | ಸಂತೆ ನಡೆಯುವ ಸ್ಥಳ (ಊರುಗಳು) | ಸಂತೆ ನಡೆಯುವ ವಾರದ ದಿನ | ಸಂತೆಯಲ್ಲಿ ವ್ಯವಹಾರ, (ವ್ಯಾಪಾರವಾಗುವ ಪ್ರಮುಖ ಹುಟ್ಟುವಳಿಗಳು) |
|---|---|---|---|
| | 5. ತಡಸ | ಸೋಮ | —"— |
| | 6. ಬೆಂಡಿಗೇರಿ | ಶನಿ | —"— |
| | 7. ಕುನ್ನೂರು | ಶುಕ್ರ | —"— |
| 16. ಕಲಘಟಗಿ | 1. ಕಲಘಟಗಿ | ಮಂಗಳ | —"— |
| | 2. ಬಮ್ಮಿಗಟ್ಟಿ | ಬುಧ | —"— |
| | 3. ಮಿಶ್ರಿಕೋಟಿ | ಶುಕ್ರ | —"— |
| | 4. ದುಮ್ಮವಾಡ | ರವಿ | —"— |
| 17. ಹುಬ್ಬಳ್ಳಿ | 1. ಹುಬ್ಬಳ್ಳಿ | ಶನಿ | ಆಹಾರ ಧಾನ್ಯಗಳು, ಹತ್ತಿ, ಶೇಂಗಾ, ಕಾಯಿಪಲ್ಲೆ |
| | 2. ಉಣಕಲ್ | ಶನಿ | ಆಹಾರ ಧಾನ್ಯಗಳು, ಕಾಯಿಪಲ್ಲೆ ಮುಂತಾದವು |
| | 3. ಅರಳೀಕಟ್ಟಿ | ಮಂಗಳ | —"— |
| | 4. ವ[illegible]ಸೂರು | ಗುರು | —"— |
| | 5. ಕಿ[illegible]ಳವಾಡ | ಶನಿ | —"— |
| | 6. ಬ್ಯಾಹಟ್ಟಿ | ಶನಿ | —"— |

**ಜಾನುವಾರ ಸಂತೆಗಳು :** ವ್ಯವಸಾಯ ಪ್ರಧಾನವಾದ ಈ ಜಿಲ್ಲೆಯಲ್ಲಿ ಕೃಷಿ ಉತ್ಪನ್ನ ವಸ್ತುಗಳ ಮಾರಾಟದಷ್ಟೇ ಜಾನುವಾರು (ದನಗಳ ಸಂತೆ) ಸಂತೆ ಪ್ರಮುಖವಾದುದು. ಸಾಮಾನ್ಯವಾಗಿ ಸ್ಥಳೀಯ ಸಂತೆಯ ದಿವಸ ಅಥವಾ ಅದರ ಮುಂದಿನ ದಿವಸ ಒಂದೆರಡು ದಿನದ ಮಟ್ಟಿಗೆ ಜಾನುವಾರುಗಳ ಸಂತೆ ನಡೆಯುವುದು. ಒಂದೊಂದು ಸಂತೆ ಒಂದೊಂದು ಬಗೆಯ ಜಾನುವಾರುಗಳಿಗೆ ಪ್ರಮುಖ ಸಂತೆಯಾಗಿರುವುದು. ಈ ಸಂತೆಗಳಲ್ಲಿ ನಡೆಯುವ ದನಗಳ ಮಾರಾಟವನ್ನು ಸಂಬಂಧಪಟ್ಟ ನಿಯಂತ್ರಿತ ಮಾರುಕಟ್ಟೆ ವ್ಯವಸ್ಥೆ ಮಾಡುವುದು. ಅಲ್ಲದೇ ಪ್ರತೀ ಒಂದು ಜಾನುವಾರಿಗೆ ರೂ.ಐದರಂತೆ ಮಾರುಕಟ್ಟೆ ಶುಲ್ಕ ವಿಧಿಸಲಾಗುವುದು. ವಾರದ ದನಗಳ ಸಂತೆಯಲ್ಲದೇ ಪ್ರಮುಖ ದೇವರ ಜಾತ್ರೆಯ ಸಮಯದಲ್ಲಿ ಮತ್ತು ವಿಶೇಷ ಸಂದರ್ಭಗಳಾದ ಬಸವ ಜಯಂತಿ, ಮಕರ ಸಂಕ್ರಾಂತಿ, ದಸರಾ ಮುಂತಾದ ಸಂದರ್ಭಗಳಲ್ಲಿ ಸುಮಾರು 15 ರಿಂದ 30 ದಿವಸಗಳವರೆಗೆ ದನಗಳ ಮಾರಾಟ ಮತ್ತು ಪ್ರದರ್ಶನ ನಡೆಯುವುದು. ಉತ್ತಮ ರಾಸುಗಳಿಗೆ ಬಹುಮಾನ ನೀಡಲಾಗುವುದು. ಈ ಜಾತ್ರೆಗಳಲ್ಲಿ ವ್ಯವಸಾಯ ಕುರಿತಂತೆ ವಸ್ತು ಪ್ರದರ್ಶನ ಪ್ರಾತ್ಯಕ್ಷಿಕೆಗಳನ್ನು ಸಹ ನಡೆಸಲಾಗುವುದು. ಈ ದನಗಳ ಜಾತ್ರೆಗಳನ್ನು ಸುಗ್ಗಿಯ ನಂತರ ಮಳೆಗಾಲದ ಪ್ರಾರಂಭದ ಮೊದಲು ಏರ್ಪಡಿಸಲಾಗುವುದು. ಯಮನೂರಿನ ಜಾತ್ರೆ (ಉರುಸು), ದೇವರಗುಡ್ಡದ ಜಾತ್ರೆ, ಹಾವೇರಿಯ ಹುಕ್ಕೇರಿ ಮಠದ ಜಾತ್ರೆ, ಗದಗಿನ ತೋಂಟದಾರ್ಯಮಠದ ಜಾತ್ರೆ, ದನಗಳ ಮಾರಾಟದ ಬಹು ಪ್ರಸಿದ್ಧ ಜಾತ್ರೆಗಳು ಎಂದು ಹೇಳಬಹುದು. ದವನದ ಹುಣ್ಣಿಮೆ (ಚೈತ್ರ) ಒಂದುವಾರ ನಡೆಯುವ ಗದುಗಿನ ಜಾತ್ರೆಯಲ್ಲಿ ರಾಯಚೂರು, ಬಳ್ಳಾರಿ, ಬಿಜಾಪುರ, ಬೆಳಗಾವಿ ಜಿಲ್ಲೆಯ ಮಿತ್ರತಳಿಯ ದನಗಳ ಪ್ರದರ್ಶನ, ಮಾರಾಟ ನಡೆಯುವುದು. ಇದನ್ನು ಮಠದ ಜಾತ್ರೆ ಸಮಿತಿ, ನಿಯಂತ್ರಿತ ಮಾರುಕಟ್ಟೆ ಸಮಿತಿ, ವಿಮೆ ಕಂಪನಿಗಳು ಸಂಯುಕ್ತವಾಗಿ ನಡೆಸುವುವು. ಭಾರತ ಹುಣ್ಣಿಮೆಯಲ್ಲಿ (ಮಾಘ) ನಡೆಯುವ ಡಂಬಳದ ಜಾತ್ರೆಯಲ್ಲಿ ದನಗಳ ಮಾರಾಟ, ಪ್ರದರ್ಶನ ನಡೆಯುವುದು. ಈ ಜಾತ್ರೆಯಲ್ಲಿ ವಿವಿಧ ಕಾಯಕಗಳ ಸ್ಪರ್ಧೆ ಸಹ ನಡೆಯುವುದು - ಅಂದರೆ ಒಡ್ಡು ಹಾಕುವುದು, ಕಂಬಳಿ ನೇಯುವುದು, ಬುಟ್ಟಿ ಹೆಣೆಯುವುದು, ಮುಂತಾದವುಗಳು. ಪ್ರಗತಿಪರ ರೈತರಿಗೆ ಸನ್ಮಾನ ಮಾಡಲಾಗುವುದು.

ಧಾರವಾಡ ಜಿಲ್ಲೆಯಲ್ಲಿ ದನದ ಮಾರುಕಟ್ಟೆಗಳು ಇರುವ ಊರುಗಳು : ಧಾರವಾಡ, ಅಳ್ನಾವರ, ಹಾವೇರಿ ಸವಣೂರು (ಕುರಿ, ಆಡು ಮಾತ್ರ), ರಾಣೆಬೆನ್ನೂರು, ಅಕ್ಕಿ ಆಲೂರು, ಲಕ್ಷ್ಮೇಶ್ವರ, ಗದಗ, ಮುಂಡರಗಿ, ಹೊಳೆ ಆಲೂರು, ನರೇಗಲ್, ಗಜೇಂದ್ರಗಡ, ರೋಣ, ನರಗುಂದ, ನವಲಗುಂದ, ಹಂಸಭಾವಿ, ಮಾಸೂರು, ಶಿಗ್ಗಾಂವಿ, ಹುಲಗೂರು, ಕುನ್ನೂರು, ಕಲಘಟಗಿ ಮತ್ತು ಹುಬ್ಬಳ್ಳಿ.

**ವರ್ತಕರ ಸಂಘಗಳು**

ವ್ಯಾಪಾರ ವಾಣಿಜ್ಯ ಮತ್ತು ದೊಡ್ಡ ಪ್ರಮಾಣದಲ್ಲಿ ವೃತ್ತಿಪರರಿಂದ ಕೂಡಿದ ಈ ಜಿಲ್ಲೆಯಲ್ಲಿ ಬಹು ಹಿಂದಿನಿಂದಲೂ ವ್ಯಾಪಾರಿ ಸಂಘಟನೆಗಳು ಪ್ರಭಾವಶಾಲಿಯಾಗಿ ನಡೆದುಕೊಂಡು ಬರುತ್ತಿವೆ. ಜಿಲ್ಲೆಯ ಆರ್ಥಿಕ, ಶೈಕ್ಷಣಿಕ ಅಭಿವೃದ್ಧಿಗೆ ಸಹಾಯಕವಾಗುವಂತೆ ಹಲವಾರು ವಿಷಯಗಳಲ್ಲಿ ಸಾರ್ವಜನಿಕ ಅಭಿಪ್ರಾಯ ರೂಪಿಸುವಲ್ಲಿ, ಸರ್ಕಾರದ ಗಮನ ಸೆಳೆಯುವಲ್ಲಿ ಈ ಜಿಲ್ಲೆಯ ವರ್ತಕರ ಸಂಘಟನೆಗಳು ಸಕ್ರಿಯವಾಗಿ ಭಾಗವಹಿಸುತ್ತವೆ. ಹಿಂದೆ ಕರ್ನಾಟಕ ಏಕೀಕರಣ ಚಳುವಳಿಯಲ್ಲಿಯೂ ಈ ಸಂಘಟನೆಗಳು ಸಕ್ರಿಯವಾಗಿ ಭಾಗವಹಿಸಿದ್ದವು. ಸ್ವಪ್ರೇರಣೆಯಿಂದ ಸ್ಥಾಪನೆಗೊಂಡಿರುವ ಈ ವಾಣಿಜ್ಯ ಸಂಘಟನೆಗಳು ಸದಸ್ಯರ ಸಾಮೂಹಿಕ ಹಿತಾಸಕ್ತಿಯನ್ನು ಕಾಪಾಡುವುದರ ಜೊತೆಗೆ ಆಯಾ ವೃತ್ತಿ, ಉದ್ಯಮಗಳ ಮುನ್ನಡೆಗೆ ಸೂಕ್ತ ಮಾರ್ಗದರ್ಶನ ನೀಡುವಲ್ಲಿಯೂ ಸಹಕಾರಿಯಾಗಿವೆ. ಸದಸ್ಯರಿಗೆ ಅವರ ವ್ಯಾಪಾರಕ್ಕೆ ಸಂಬಂಧ ಪಟ್ಟಂತೆ ಮಾರಾಟ ತೆರಿಗೆ, ಆಕ್ಟ್ರಾಯ್ ಸುಂಕ, ಪ್ರವೇಶ ತೆರಿಗೆ, ಕಾನೂನಿನ ಸಾಧಕ ಬಾಧಕಗಳು, ವ್ಯಾಪಾರಿಗಳಲ್ಲಿ ಉಂಟಾಗಬಹುದಾದ ಭಿನ್ನಾಭಿಪ್ರಾಯಗಳ ನಿವಾರಣೆ, ಪರಸ್ಪರರಲ್ಲಿ ವ್ಯಾಪಾರದ ಬಗ್ಗೆ ಸಂಬಂಧಪಟ್ಟ ಮಾಹಿತಿಯನ್ನು ಹಂಚಿಕೊಳ್ಳುವುದು, ಮಾರ್ಗದರ್ಶನ ಇವೇ ಮುಂತಾದ ಸೇವೆಗಳನ್ನು ಸದಸ್ಯರಿಗೆ ಒದಗಿಸುತ್ತವೆ. ವೃತ್ತಿ ನಿರತರ ಸಂಘಗಳಲ್ಲಿ ಕೆಲವು ನೋಂದಾಯಿಸಲ್ಪಟ್ಟಿದ್ದರೆ ಬಹುಸಂಖ್ಯೆಯ ಸಂಘಗಳು ನೋಂದಾಯಿಸದೇ ಕಾರ್ಯನಿರ್ವಹಿಸುತ್ತಿವೆ. ಇತ್ತೀಚಿನ ದಶಕಗಳಲ್ಲಿ ಈ ಸಂಘಟನೆಗಳ ಸಂಖ್ಯೆ ಹೆಚ್ಚಾಗಿದ್ದು ವೈವಿಧ್ಯತೆಯಿಂದ ಕೂಡಿವೆ. ಇವು ಜಿಲ್ಲೆಯಾದ್ಯಂತ ವ್ಯಾಪಿಸಿದ್ದು, ಬಹುಪಾಲು ಸಂಘಟನೆಗಳು ಪ್ರಮುಖ ವಾಣಿಜ್ಯ ಕೇಂದ್ರಗಳಾದ ಹುಬ್ಬಳ್ಳಿ, ಧಾರವಾಡ, ಗದಗ, ರಾಣೆಬೆನ್ನೂರು, ಹಾವೇರಿ, ನರಗುಂದ, ಹೊಳೆ ಆಲೂರು, ಬ್ಯಾಡಗಿ ಮುಂತಾದ ನಗರ ಪ್ರದೇಶಗಳಲ್ಲಿ ಕಂಡುಬರುವವು. ಪ್ರಮುಖ ಸಂಘಟನೆಗಳಾದ ಹತ್ತಿ ವರ್ತಕರ ಸಂಘ, ಜವಳಿ ವರ್ತಕರ ಸಂಘ, ಕಿರಾಣಿ ವರ್ತಕರ ಸಂಘ, ಸರಾಫರ ಸಂಘ, ಇವು ಆರ್ಥಿಕವಾಗಿ ಬಲವಾಗಿದ್ದು ಸಾಕಷ್ಟು ಆಸ್ತಿ ಪಾಸ್ತಿಗಳನ್ನು ಹೊಂದಿರುವವು. ಜಿಲ್ಲೆಯ ಬಹುಪಾಲು ನೋಂದಾಯಿತ ವ್ಯಾಪಾರಿ ಸಂಘಟನೆಗಳು ಹುಬ್ಬಳ್ಳಿಯಲ್ಲಿರುವ ಮಾತೃ ಸಂಸ್ಥೆಯಂತೆ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ವಾಣಿಜ್ಯೋದಮ ಸಂಘದ ಸಹ ಸದಸ್ಯತ್ವವನ್ನು ಹೊಂದಿರುವವು; ಮತ್ತು ಅದರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿವೆ. 1955ರ ಜಿಲ್ಲಾ ಗ್ಯಾಸೆಟಿಯರ್ ವರದಿ ಮಾಡುವಂತೆ ಜಿಲ್ಲೆಯ ಹಲವು ಪ್ರಮುಖ ಹಳೆಯ ವ್ಯಾಪಾರಿ ಸಂಘಗಳ ಪಟ್ಟಿಯು ಈ ಕೆಳಗಿನಂತೆ ಇರುವುದು.

**ಹುಬ್ಬಳ್ಳಿ** : ಕರ್ನಾಟಕ ವಾಣಿಜ್ಯೋದಮ ಸಂಘ, ಹತ್ತಿ ಖರೀದಿದಾರರ ಸಂಘ, ಯಂತ್ರೋಪಕರಣ ವರ್ತಕರ ಸಂಘ, ಸರಾಫರಸಂಘ, ಹೊಟೆಲ್ ಮಾಲಿಕರ ಸಂಘ, ಹಾಗೂ ಕಿರಾಣಿ ವರ್ತಕರ ಸಂಘ.

**ಧಾರವಾಡ** : ದಲಾಲರ ಸಂಘ ಹಾಗೂ ಹೋಟೆಲ್ ಮಾಲಿಕರ ಸಂಘ.

**ಗದಗ** : ಕರ್ನಾಟಕ ಎಣ್ಣೆ ಗಿರಣಿಗಳ ಸಂಘ, ಗದಗ ಧಾನ್ಯ ಮತ್ತು ಎಣ್ಣೆ ಕಾಳುಗಳ ಮಾರಾಟಗಾರರ ಸಂಘ, ಹತ್ತಿ ವ್ಯಾಪಾರಸ್ಥರ ಸಂಘ; ಇವೇ ಅಲ್ಲದೇ ವರ್ತಕರ ಸಂಘ, ರಾಣೆಬೆನ್ನೂರು; ವ್ಯಾಪಾರಿ ಸಂಘ ನರಗುಂದ; ವರ್ತಕರ ಸಂಘ ಹೊಳೆ ಆಲೂರು; ವರ್ತಕರ ಸಂಘ, ಹಾವೇರಿ; ಏಲಕ್ಕಿ ವ್ಯಾಪಾರಸ್ಥರ ಸಂಘ; ಬ್ಯಾಡಗಿ; ವ್ಯವಸಾಯ ಉತ್ಪನ್ನ ಮತ್ತು ಮೆಣಸಿನಕಾಯಿ ವ್ಯಾಪಾರಸ್ಥರ ಸಂಘ, ಇತ್ಯಾದಿ.

1993-94ರಲ್ಲಿ ಇದ್ದಂತೆ ಜಿಲ್ಲೆಯ ಪ್ರಮುಖ ವ್ಯಾಪಾರೊದ್ಯಮಗಳ ಸಂಘಟನೆಗಳ. ಪಟ್ಟಿಯು ಈ ಕೆಳಗಿನಂತೆ ಇರುವುದು.

**ಹುಬ್ಬಳ್ಳಿ** : ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಜವಳಿ(ವ) ಅರಿವೆ ವರ್ತಕರ ಸಂಘ, ದಿ. ಕರ್ನಾಟಕ ಪೆಟ್ರೋಲಿಯಮ್ ಡೀಲರ್ಸ್ ಅಸೋಸಿಯೇಶನ್, ನ್ಯಾಯಬೆಲೆ ಅಂಗಡಿ ಮಾಲೀಕರ ಮತ್ತು ಸಕ್ಕರೆ ವಿತರಕರ ಸಂಘ, ಆಹಾರ ಧಾನ್ಯ ಮತ್ತು ಬೇಳೆಕಾಳುಗಳ ಸಗಟು ಮಾರಾಟಗಾರರ ಸಂಘ, ಅವಲಕ್ಕಿ ತಯಾರಕರ ಸಂಘ, ಹಿರೇಪೇಟೆ ವರ್ತಕರ ಸಂಘ, ಬ್ರೆಡ್ ಮತ್ತು ಬಿಸ್ಕಟ್ ತಯಾರಕರ ಸಂಘ, ಬಾಗವಾನ ದಲಾಲರ ಸಂಘ, ಹೋಟೆಲ್ ಮಾಲಿಕರ ಸಂಘ, ಮುಂತಾದವು.

**ಗದಗ** : ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಸಕ್ಕರೆ ವರ್ತಕರ ಸಂಘ, ಸಂಯುಕ್ತ ವರ್ತಕರ ಸಂಘ, ವ್ಯಾಪಾರಸ್ಥರ ಸಂಘ, ಮುದ್ರಣ ಮಾಲಿಕರ ಸಂಘ, ಜವಳಿ ಉತ್ಪಾದಕರ ಸಂಘ, ಸರಾಫರ ಸಂಘ, ಲಾರಿ ಮಾಲಿಕರ ಸಂಘ, ಸಿದ್ಧ ಉಡುಪು ಮಾರಾಟಗಾರರ ಸಂಘ, ಹೋಟೆಲ್ ಮಾಲೀಕರ ಸಂಘ, ಲೇಖನ ಸಾಮಗ್ರಿ ಮಾರಾಟಗಾರರ ಸಂಘ, ಸಗಟು ಕಿರಾಣಿ ವರ್ತಕರ

ಸಂಘ, ಸಿನೇಮಾ ಮಾಲಿಕರ ಸಂಘ, ಆಹಾರಧಾನ್ಯಗಳ ಸಗಟು ಮಾರಾಟಗಾರರ ಸಂಘ, ಬಟ್ಟೆ ವ್ಯಾಪಾರಿಗಳ ಸಂಘ, ಎಣ್ಣೆ ಗಿರಣಿ ಮಾಲಿಕರ ಸಂಘ, ಭಾಗವಾನ ವ್ಯಾಪಾರಿಗಳ ಸಂಘ, ಜಲಾವ ಕಟ್ಟಿಗೆ ವ್ಯಾಪಾರಿಗಳ ಸಂಘ, ಕಾಯಿಪಲ್ಲೆ ವರ್ತಕರ ಸಂಘ, ಮುಂತಾದವು.

**ರಾಣೆಬೆನ್ನೂರು :** ವರ್ತಕರ ಸಂಘ, ದಲಾಲರ ಸಂಘ, ಅರಳೆ ವ್ಯಾಪಾರಿಗಳ ಸಂಘ, ಜವಳಿ ವರ್ತಕರ ಸಂಘ, ನಗರ ಕೈಗಾಡಿ ಚಿಮಣಿ ಎಣ್ಣೆ ವರ್ತಕರ ಸಂಘ, ಮುಂತಾದವು.

**ಹಾನಗಲ್ :** ರೈಸ್ ಮಿಲ್ ಮಾಲೀಕರ ಸಂಘ, ವಣಿಕರ ಸಂಘ ಮುಂತಾದವು.

**ಮುಂಡರಗಿ :** ಮುಂಡರಗಿ ತಾಲೂಕಾ ವ್ಯಾಪಾರಸ್ಥರ ಸಂಘ.

**ಗಜೇಂದ್ರಗಡ :** ದಲಾಲರ ಸಂಘ, ಜವಳಿ ವರ್ತಕರ ಸಂಘ, ಮುಂತಾದವು.

**ಬ್ಯಾಡಗಿ :** ವ್ಯಾಪಾರಿಗಳ ಸಂಘ, ಕಿರಾಣಿ ವರ್ತಕರ ಸಂಘ, ಮುಂತಾದವು.

**ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿ ಹುಬ್ಬಳ್ಳಿ**

ಸ್ವಾತಂತ್ರ್ಯ ಪೂರ್ವದ ಹಲವಾರು ದಶಕಗಳ ಮೊದಲೇ ಬೊಂಬಾಯಿ ಕರ್ನಾಟಕದ ಈ ಭಾಗದಲ್ಲಿ ವ್ಯಾಪಾರ ಮತ್ತು ವಾಣಿಜ್ಯದಾರರನ್ನು ಸಂಘಟಿಸುವ ಉದ್ದೇಶದಿಂದ ಪ್ರಪ್ರಥಮವಾಗಿ ಬಾಗಿಲುಕೋಟೆಯಲ್ಲಿ 1928ರಲ್ಲಿ ಈ ಸಂಸ್ಥೆಯನ್ನು ಪ್ರಾರಂಭಿಸ ಲಾಯಿತು. ಈ ಸಂಸ್ಥೆಯ ಮೂಲಸ್ಥಾಪಕರು ಮುರಿಗೆಯ್ಯ ಜಂಗಿನ ಎನ್ನುವ ವರ್ತಕರು. ಮಹಾರಾಷ್ಟ್ರದ ಅಭಿವೃದ್ಧಿಗೆ ಸಹಾಯಕ ವಾಗುವಂತೆ ಅಂದು ರಚಿಸಲಾದ ಮಹಾರಾಷ್ಟ್ರ ಚೇಂಬರ್ ಆಫ್ ಕಾಮರ್ಸ್ ಇದರಿಂದ ಪ್ರಭಾವಿತರಾಗಿ ಈ ಸಂಸ್ಥೆಯನ್ನು ಹುಟ್ಟು ಹಾಕಲಾಯಿತು ಎಂದು ತಿಳಿದು ಬರುವುದು. ಕೆಲವು ವರ್ಷಗಳ ನಂತರ 1938ರಲ್ಲಿ ಈ ಸಂಸ್ಥೆಯನ್ನು ಗದಗಿಗೆ ಸ್ಥಳಾಂತರಿಸಲಾಯಿತು. ಪ್ರಾರಂಭದಲ್ಲಿಯೇ ಈ ಸಂಸ್ಥೆಯ ಕಾರ್ಯವ್ಯಾಪ್ತಿಯು ಮುಂಬಯಿ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲದೇ ಹಳೇ ಮೈಸೂರು, ಕೊಡಗು ಮತ್ತು ಹೈದರಾಬಾದ, ಮದ್ರಾಸ ಪ್ರಾಂತ್ಯಗಳ ಕನ್ನಡದ ಪ್ರದೇಶಗಳಿಗೂ ವ್ಯಾಪಿಸಿತ್ತು ಎಂದು ತಿಳಿದುಬರುವುದು. ವಾಣಿಜ್ಯ ಮಂಡಳಿಯ ನಿಬಂಧನೆಗಳು 1935ರಲ್ಲಿ ರಚನೆಗೊಂಡ ನಂತರ 1938ರಲ್ಲಿ ಆಗಿನ ಮುಂಬಯಿ ಸರ್ಕಾರ ಮಂಡಳಿಗೆ ಮಾನ್ಯತೆ ನೀಡಿ ವಿವಿಧ ಶಾಸನ ಬದ್ಧ ಸಂಸ್ಥೆಗಳಿಗೆ ಮಂಡಳಿಯ ಪ್ರತಿನಿಧಿತ್ವ ದೊರೆಯುವಂತೆ ಅನುವು ಮಾಡಿತು. ಉತ್ತರ ಕರ್ನಾಟಕದ ಪ್ರಮುಖ ವಾಣಿಜ್ಯ ಕೇಂದ್ರವಾದ ಹುಬ್ಬಳ್ಳಿಗೆ ಮಂಡಳಿಯ ಆಡಳಿತ ಕಛೇರಿಯನ್ನು 1946ರಲ್ಲಿ ವರ್ಗಾಯಿಸಲಾಯಿತು. 1949ರಲ್ಲಿ ಭಾರತ ಸರ್ಕಾರವು ಈ ಸಂಸ್ಥೆಗೆ ಮಾನ್ಯತೆಯನ್ನು ನೀಡಿತು. 1956ರ ಭಾರತೀಯ ಕಂಪೆನಿಯ ಕಾನೂನಿನ ಪ್ರಕಾರ ಮಂಡಳಿಯು ನೊಂದಾಯಿತ ಸಂಸ್ಥೆಯಾಗಿದ್ದು, ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಮಹಾಮಂಡಳಿ, ದೆಹಲಿ ಮತ್ತು ಅಖಿಲ ಭಾರತ ಉತ್ಪಾದಕರ ಸಂಘ ಮುಂಬಯಿ, ಈ ಸಂಸ್ಥೆಯೊಂದಿಗೆ ಸಂಯೋಜಿತವಾಗಿದೆ. ಇಂದು ಇಡೀ ಕರ್ನಾಟಕ ರಾಜ್ಯ ಈ ಮಂಡಳಿಯ ಕಾರ್ಯ ಕ್ಷೇತ್ರಕ್ಕೆ ಒಳಪಟ್ಟಿದೆ. ಕರ್ನಾಟಕ ಏಕೀಕರಣ ಆಂದೋಲನದಲ್ಲಿ ಈ ವ್ಯಾಪಾರಿ ನಿಗಮವು ವಹಿಸಿದ ಪಾತ್ರ ಮಹತ್ವಪೂರ್ಣವಾಗಿತ್ತು. ಹಿಂದಿನ ಮುಂಬಯಿ ರಾಜ್ಯಕ್ಕೆ ಸೇರಿದ ಉತ್ತರ ಕರ್ನಾಟಕದ ಈ ಕನ್ನಡ ಪ್ರದೇಶಕ್ಕೆ ಪ್ರತ್ಯೇಕವಾದ ವಿಶ್ವವಿದ್ಯಾಲಯ, ಕೃಷಿ, ಇಂಜಿನಿಯರಿಂಗ್, ಮತ್ತು ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸುವ ಮೂಲಕ ಉಚ್ಚ ಶಿಕ್ಷಣದ ಅನುಕೂಲತೆಗಳು ಈ ಭಾಗದಲ್ಲಿ ಲಭ್ಯವಾಗುವಂತೆ ಸರ್ಕಾರವನ್ನು ಒತ್ತಾಯಿಸುವಲ್ಲಿ ಈ ಸಂಸ್ಥೆ ಕ್ರಿಯಾಶೀಲ ಪಾತ್ರವನ್ನು ವಹಿಸಿತ್ತು. ಇದರಂತೆ ಈ ಭಾಗದಲ್ಲಿ ಶರಾವತಿಯ (ಜೋಗ) ವಿದ್ಯುತ್ತಿನ ಸಮರ್ಪಕ ಬಳಕೆ, ರೈಲು ನಿಲ್ದಾಣಗಳ ಸುಧಾರಣೆ, ಹೊಸ ಅಂಚೆ ಕಛೇರಿಗಳ ಸ್ಥಾಪನೆ ಮುಂತಾದ ಸಾರ್ವಜನಿಕ ಆಸಕ್ತಿಯ ವಿಷಯದಲ್ಲಿ ಜನಾಭಿಪ್ರಾಯ ರೂಢಿಸಿತು. ಹುಬ್ಬಳ್ಳಿಯಲ್ಲಿ (ಈ ಭಾಗದ ಪ್ರಥಮ) ಜಗದ್ಗುರು ಗಂಗಾಧರ ವಾಣಿಜ್ಯ ಮಹಾವಿದ್ಯಾಲಯವನ್ನು ಪ್ರಾರಂಭಿಸಲು ಈ ಮಂಡಳಿಯು ರೂ.1.20 ಲಕ್ಷದ ಹಣದ ಸಹಾಯವನ್ನು ಒದಗಿಸಿತು. ಇತ್ತೀಚಿನ ವರ್ಷಗಳಲ್ಲಿ, ಹೊಸ ಪೇಟೆಗೆ ಉಕ್ಕಿನ ಕಾರ್ಖಾನೆ, ಹುಬ್ಬಳ್ಳಿ - ಕಾರವಾರ ರೈಲು ಮಾರ್ಗ, ಹುಬ್ಬಳ್ಳಿಗೆ ದೇಶದ ಇತರೆಡೆಯಿಂದ ವಿಮಾನಯಾನ ಸಂಪರ್ಕ, ಹುಬ್ಬಳ್ಳಿ, ಧಾರವಾಡಗಳಲ್ಲಿ ವಿದ್ಯುನ್ಮಾನ ನಗರ ಮತ್ತು ಟೆಕ್ನಾಲಜಿ ಪಾರ್ಕ್ ಸ್ಥಾಪನೆ, ರಾಜ್ಯ ಶ್ರೇಷ್ಠ ನ್ಯಾಯಲಯದ ಪೀಠ ಸ್ಥಾಪನೆ, ಮುಂತಾದ ಹಲವಾರು ಸಾರ್ವಜನಿಕ ಬೇಡಿಕೆಗಳನ್ನು ಪೂರೈಸಲು ಪ್ರಾರಂಭದಿಂದಲೂ ವಣಿಕ ಮಂಡಳಿಯು ಸರ್ಕಾರಗಳ ಮೇಲೆ ಒತ್ತಾಯ ತರುತ್ತಿದೆ. ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುತ್ತಿದೆ.

ಕೈಗಾರಿಕೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದ ಅನೇಕ ಸಮ್ಮೇಳನ, ವಿಚಾರ ಗೋಷ್ಠಿಗಳನ್ನು ಏರ್ಪಡಿಸುವುದರ ಜೊತೆಗೆ ಉತ್ತರ ಕರ್ನಾಟಕದ ಭಾಗಗಳಲ್ಲಿ ಕೈಗಾರಿಕಾ ಮತ್ತು ಆರ್ಥಿಕ ಸಂಪನ್ಮೂಲಗಳ ಸಮೀಕ್ಷೆಯನ್ನು ಈ ಸಂಸ್ಥೆಯಿಂದ ಕೈಗೊಳ್ಳಲಾಯಿತು. ಹುಬ್ಬಳ್ಳಿ ರೈಲ್ವೆ ಕಾರ್ಯಗಾರದ ವಿಸ್ತರಣೆ ಯೋಜನೆ, ಕೈಗಾರಿಕಾ ವಸಾಹತು ಸ್ಥಾಪನೆ ಮತ್ತು ವಿಸ್ತರಣೆ, ವಿಮಾನ ನಿಲ್ದಾಣ ಸ್ಥಾಪನೆ ಮುಂತಾದ ವಿಷಯಗಳಲ್ಲಿ ಮಂಡಳಿಯು ಮಹತ್ವದ ಪಾತ್ರ ವಹಿಸಿತ್ತು. ಮಂಡಳಿಯ ಸದಸ್ಯತ್ವದಲ್ಲಿ ಸಾರ್ವಜನಿಕ ಕಂಪೆನಿಗಳು, ಬ್ಯಾಂಕುಗಳು ಮತ್ತು ಇತರೇ ವ್ಯಾಪಾರಿ ಸಂಸ್ಥೆಗಳು ಸೇರಿವೆ. ಪ್ರಾರಂಭದಲ್ಲಿ ಕೇವಲ 50 ಸದಸ್ಯರನ್ನು ಒಳಗೊಂಡ ಸಂಸ್ಥೆ ಇಂದು 1,850 ಸದಸ್ಯರನ್ನು ಹೊಂದಿರುವುದು. ಸಂಸ್ಥೆಯ ಆದಾಯ 1989-90ರಲ್ಲಿ ರೂ.6.38 ಲಕ್ಷ ಇದ್ದರೆ 91-92 ರಲ್ಲಿ ಆದಾಯ ರೂ. 8.90 ಲಕ್ಷ ಎಂದು ವರದಿಯಾಗಿದೆ. ಮಂಡಳಿಯು 'ಕರ್ನಾಟಕ ವಾಣಿಜ್ಯ' ಎಂಬ ಮಾಸ ಪತ್ರಿಕೆಯನ್ನು ಪ್ರಕಟಿಸುತ್ತಿದೆ. 1979ರಲ್ಲಿ ಮಂಡಳಿಯ ಸುವರ್ಣಮಹೋತ್ಸವ, 1991ರಲ್ಲಿ ವಜ್ರಮಹೋತ್ಸವ ಆಚರಿಸಲಾಯಿತು.

### ಹುಬ್ಬಳ್ಳಿ ಷೇರು ವಿನಿಮಯ ಕೇಂದ್ರ

ಇತ್ತೀಚಿನ ದಶಕದಲ್ಲಿ (1980-1990) ಈ ಭಾಗದಲ್ಲಿ ಮಧ್ಯಮವರ್ಗದ ಜನ ಸಾಮಾನ್ಯರಲ್ಲಿ, ಸರ್ಕಾರಿ, ಬ್ಯಾಂಕು ಮತ್ತು ಸಂಘಟಿತ ವಲಯದ ಉದ್ಯಮಗಳ ನೌಕರರಲ್ಲಿ, ಸ್ವಂತ ವೃತ್ತಿಪರರಲ್ಲಿ, ವರ್ತಕರಲ್ಲಿ ಸಾರ್ವಜನಿಕ ಕಂಪನಿಗಳ ಷೇರು ಮತ್ತು ಸಾಲಪತ್ರ (ಡಿಬೆಂಚರ್)ಗಳಲ್ಲಿ ಹಣ ತೊಡಗಿಸುವ ಪ್ರವೃತ್ತಿಯು ಗಮನಾರ್ಹವಾಗಿ ಬೆಳೆಯುತ್ತಿದೆ. ಇತ್ತೀಚಿನ ಅಂದಾಜಿನಂತೆ ಷೇರುಗಳ ಪ್ರಾಥಮಿಕ ಮಾರುಕಟ್ಟೆಯು ವ್ಯಾಪಕವಾಗಿ ಬೆಳೆಯುತ್ತಿರುವುದು. ಶೀಘ್ರಗತಿಯಿಂದ ಬೆಳೆಯುತ್ತಿರುವ ಕಂಪನಿ ಉದ್ಯಮವು ಈ ರೀತಿ ಹಣದ ವಿನಿಯೋಗಕ್ಕೆ ಸಹಾಯಕವಾಗಿದೆ. ಒಂದು ಅಂದಾಜಿನಂತೆ ಹುಬ್ಬಳ್ಳಿ ಧಾರಾವಾಡ ನಗರಗಳಲ್ಲಿ ಸೇರಿ ಸುಮಾರು 75,000 ದಿಂದ ಒಂದು ಲಕ್ಷ ಜನರು ಷೇರು ಮತ್ತು ಸ್ಟಾಕ್ ವ್ಯವಹಾರಗಳಲ್ಲಿ ಹಣ ತೊಡಗಿಸಲು ಆಸಕ್ತರಿರುವರು ಎಂದು ವರದಿಯಾಗಿದೆ. ಸುತ್ತಮುತ್ತಲಿನ ಜಿಲ್ಲಾ ಕೇಂದ್ರಗಳು, ಕೈಗಾರಿಕಾ ನಗರಗಳ ಆಸಕ್ತರನ್ನು ಸೇರಿಸಿದರೆ ಇದು ಇನ್ನೂ ದೊಡ್ಡ ಸಂಖ್ಯೆಯಾಗಬಹುದು. ಈ ಮೇಲಿನ ಸಂಗತಿಗಳನ್ನು ಗಮನಿಸಿ ಷೇರುಗಳಲ್ಲಿ ಹಣ ತೊಡಗಿಸುವವರಿಗೆ ಪ್ರೋತ್ಸಾಹಿಸಲು ಹುಬ್ಬಳ್ಳಿಯಲ್ಲಿ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿಯವರು 'ಹುಬ್ಬಳ್ಳಿ ಧಾರವಾಡ ಸ್ಟಾಕ್ ಟ್ರೇಡಿಂಗ್' ಎಂಬ ಸಂಸ್ಥೆಯನ್ನು ಮಂಡಳಿಯ ಆವರಣದಲ್ಲಿ ತಮ್ಮ ಸಂಸ್ಥೆಯ ವತಿಯಿಂದ ಪ್ರವರ್ತಿಸಿರುವರು. ಸದರಿ ಸಂಸ್ಥೆಯು ಮುಂದೆ ಉತ್ತರ ಕರ್ನಾಟಕದ ಈ ಭಾಗದ ಸುಸಜ್ಜಿತ ಷೇರು ವಿನಿಮಯ ಕೇಂದ್ರವಾಗಬಹುದಾದ ಸಾಧ್ಯತೆಯಿಂದ, ಅಕ್ಟೋಬರ್ 1992ರಿಂದ ಕೇಂದ್ರವು ಕಾರ್ಯನಿರ್ವಹಿಸುತ್ತಿರುವುದು. ಸದ್ಯದಲ್ಲಿ ಸಂಸ್ಥೆಯು ಕೇವಲ ವಾರಕ್ಕೆ ಎರಡು ದಿವಸ (ಗುರುವಾರ, ಸೋಮವಾರ) ಕಾರ್ಯನಿರ್ವಹಿಸುವುದು. ಸದಸ್ಯರ ಸಂಖ್ಯೆ 192 ಇದ್ದು ವ್ಯವಹಾರದ ದೈನಿಕ ಅಂದಾಜು ರೂ. ನಾಲ್ಕು ಲಕ್ಷ.

**ಚೇಂಬರ್ ಆಫ್ ಕಾಮರ್ಸ್, ಗದಗ :** ಜಿಲ್ಲೆಯ ಎರಡನೆಯ ಪ್ರಮುಖ ವಾಣಿಜ್ಯ ಕೇಂದ್ರವಾದ ಗದಗಿನಲ್ಲಿ ಸ್ಥಾಪಿತವಾಗಿರುವ ಈ ಸಂಸ್ಥೆಯ ಕಾರ್ಯವ್ಯಾಪ್ತಿಯು ಜಿಲ್ಲೆಯ ಗದಗ, ಮುಂಡರಗಿ, ಶಿರಹಟ್ಟಿ, ರೋಣ, ಸವಣೂರು, ಶಿಗ್ಗಾಂವಿ, ನವಲಗುಂದ ತಾಲೂಕುಗಳಲ್ಲದೇ ರಾಯಚೂರು ಜಿಲ್ಲೆಯ ಯಲಬುರ್ಗಿ, ಕುಷ್ಟಗಿ, ಕೊಪ್ಪಳ ಮತ್ತು ಬಿಜಾಪುರ ಜಿಲ್ಲೆಯ ಬಾದಾಮಿ ತಾಲೂಕುಗಳನ್ನು ಸಹ ಒಳಗೊಂಡಿರುವುದು. ಈ ಸಂಸ್ಥೆಯನ್ನು 1975ರಲ್ಲಿ ನೊಂದಾಯಿಸಲಾಯಿತು. ಈ ಸಂಸ್ಥೆಯ ಹತ್ತು ಹಲವಾರು ಉದ್ದೇಶಗಳಲ್ಲಿ, ವಿಶೇಷವಾಗಿ ಗದಗ ಭಾಗದ ವಾಣಿಜ್ಯೋದ್ಯಮಗಳ ಹಿತದೃಷ್ಟಿಯಿಂದ ವಾಣಿಜ್ಯೋದ್ಯಮಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಗಮನಿಸಿ ಸದಸ್ಯರ ಹಿತವನ್ನು ಕಾಪಾಡುವುದು. ಸದಸ್ಯರಿಗೆ ವೃತ್ತಿಗನುಸಾರವಾಗಿ ತಿಳುವಳಿಕೆ ನೀಡುವುದು; ವಾಣಿಜ್ಯ ಸಂಸ್ಥೆಗಳಲ್ಲಿ ಯುವಕರಿಗೆ ಉದ್ಯೋಗಾವಕಾಶ ದೊರೆಯುವಂತೆ ಸಹಾಯ ಮಾಡುವುದು; ತರಬೇತಿ ನೀಡಿ ಅವರ ದಕ್ಷತೆಯನ್ನು ಹೆಚ್ಚಿಸುವುದು ಇವೇ ಮುಂತಾದವುಗಳು ಪ್ರಮುಖವಾದವುಗಳು. ಸಂಸ್ಥೆಯ ಸದಸ್ಯತ್ವವು ನಾಲ್ಕು ಬಗೆಯದಾಗಿರುವುದು. ಈ ಸಂಸ್ಥೆಯು ಹುಬ್ಬಳ್ಳಿ, ಬೆಂಗಳೂರು ಮತ್ತು ದೆಹಲಿಯ ವಾಣಿಜ್ಯೋದ್ಯಮ ಮಹಾಮಂಡಳಗಳೊಂದಿಗೆ ಸಂಯೋಗ ಹೊಂದಿರುವದು. ತನ್ನ ಸದಸ್ಯರಿಗೆ ಅನುಕೂಲವಾಗಲೆಂದು ಸಂಸ್ಥೆಯು ವರಮಾನ ತೆರಿಗೆ, ವಾಣಿಜ್ಯ ತೆರಿಗೆ, ತೂಕ ಮತ್ತು ಅಳತೆ ಮುಂತಾದ ವಿಷಯಗಳ ಬಗ್ಗೆ ಸಲಹೆಗಾರರನ್ನು, ಪರಿಣಿತರನ್ನು ಕರೆಯಿಸಿ ಮಾಹಿತಿ ಒದಗಿಸುವುದು. ಹೊಸದಾಗಿ ವ್ಯವಹಾರ ಪ್ರಾರಂಭಿಸುವ ವರ್ತಕರಿಗೆ ಅವಶ್ಯ ಇರುವ ಮಾಹಿತಿ ಒದಗಿಸುವುದಲ್ಲದೇ ಅವರಿಗೆ ಲೈಸೆನ್ಸ್ ಪಡೆಯಲು ಮತ್ತು ನವೀಕರಿಸಲು ಸಂಸ್ಥೆಯ ವತಿಯಿಂದ ಸಹಾಯ ಮಾಡಲಾಗುವುದು. ಪ್ರಾರಂಭದಿಂದಲೂ ಸಂಸ್ಥೆಯು ಸಾರ್ವಜನಿಕ ಹಿತಾಸಕ್ತಿಗೆ ಮತ್ತು

ನಗರಾಭಿವೃದ್ಧಿಗೆ ಸಂಬಂಧಪಟ್ಟಂತ ವಿಷಯಗಳ ಬಗ್ಗೆ ಸಾರ್ವಜನಿಕರ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಗಮನ ಸೆಳೆದು ಕಾಲಕಾಲಕ್ಕೆ ಸೂಕ್ತ ರೀತಿಯಲ್ಲಿ ಸ್ಪಂದಿಸುತ್ತಾ ಬಂದಿರುವುದು. ಸಂಸ್ಥೆಯ ವತಿಯಿಂದ 'ಗದಗ ಚೇಂಬರ್ ನ್ಯೂಜ್' ಎಂಬ ಮಾಸ ಪತ್ರಿಕೆಯನ್ನು ಪ್ರಕಟಿಸಲಾಗುತ್ತಿದೆ.

ಗದಗ - ಬೆಟಗೇರಿ ಅವಳಿ ನಗರಗಳಲ್ಲಿ ಕ್ರೀಡಾ ಚಟುವಟಿಕೆಗಳನ್ನು ಉತ್ತೇಜಿಸಲು ಪೂರಕವಾಗುವಂತೆ ಸ್ಟೇಡಿಯಂ ನಿರ್ಮಾಣಕ್ಕೆ ಸಿಂಹಪಾಲು ಹಣವನ್ನು ಈ ಸಂಸ್ಥೆಯು ವರ್ತಕರ ಸಮುದಾಯದಿಂದ ಕೂಡಿಸಿಕೊಟ್ಟಿದೆ. ಈ ಸಂಸ್ಥೆಯ ವತಿಯಿಂದ ಗದಗ ತಾಲೂಕಿನ ಕಪ್ಪತ ಗುಡ್ಡದಲ್ಲಿ ಬಂಗಾರದ ಅದಿರು ತೆಗೆಯುವ ಕಾರ್ಯ, ಕಪ್ಪತ ಗುಡ್ಡದಲ್ಲಿ ಗಾಳಿಶಕ್ತಿ ಕೇಂದ್ರದ ಸ್ಥಾಪನೆ, ತುಂಗಭದ್ರಾ ಯೋಜನೆಯಿಂದ ಗದಗ ನಗರಕ್ಕೆ ನೀರು ಪೂರೈಕೆ, ಗದಗ ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಪ್ರವಾಸೋದ್ಯಮ ಕೇಂದ್ರಗಳಾಗಿ ಅಭಿವೃದ್ಧಿಪಡಿಸುವುದು, ಮುಂತಾದ ಹತ್ತು ಹಲವಾರು ಸಾರ್ವಜನಿಕ ಹಿತಾಸಕ್ತಿಯ ಯೋಜನೆಗಳು ಈ ಭಾಗದಲ್ಲಿ ಸ್ಥಾಪಿತವಾಗುವಂತೆ ಸರ್ಕಾರದ ಮೇಲೆ ಒತ್ತಡ ಮತ್ತು ಪ್ರಭಾವ ಬೀರುವಲ್ಲಿ ಸದರಿ ಸಂಸ್ಥೆಯು ಪ್ರಮುಖ ಪಾತ್ರವ ವಹಿಸಿದೆ. ಇದೂ ಅಲ್ಲದೇ ಬಹಳ ದಿನಗಳಿಂದ ಬೇಡಿಕೆಯಲ್ಲಿರುವ ಗದಗ ಪ್ರತ್ಯೇಕ ಜಿಲ್ಲಾ ಕೇಂದ್ರವಾಗಲು ಅವಶ್ಯ ಇರುವ ಎಲ್ಲ ಪೂರಕ ಮಾಹಿತಿಯನ್ನು ಸಂಗ್ರಹಿಸಿ ಇದುವರೆಗಿನ (ಮೂರು) ಜಿಲ್ಲಾ ಪುನರ್ ರಚನಾ ಆಯೋಗಗಳಿಗೆ ಸಮರ್ಪಕವಾಗಿ ಒದಗಿಸುವಲ್ಲಿ, ಈ ಸಂಸ್ಥೆಯು ಮಹತ್ವಪೂರ್ಣ ಪಾತ್ರ ವಹಿಸಿದೆ. 1994ರಲ್ಲಿ ಸಂಸ್ಥೆಯ ಸದಸ್ಯರ ಸಂಖ್ಯೆ 625 ಇದ್ದು ಅವರಲ್ಲಿ 212 ಜನರು ಆಜೀವ ಸದಸ್ಯರು. 1993-94ರಲ್ಲಿ ಸಂಸ್ಥೆಯ ಆದಾಯ ರೂ. 3.41 ಲಕ್ಷ ಇದ್ದರೆ ಅದರ ಹಿಂದಿನ ಎರಡು ವರ್ಷಗಳಲ್ಲಿ ಅನುಕ್ರಮವಾಗಿ ರೂ. 3.74 ಲಕ್ಷ ಮತ್ತು ರೂ. 2.38 ಲಕ್ಷ ಎಂದು ವರದಿಯಾಗಿದೆ. (ಸಂಬಂಧಪಟ್ಟ ವರ್ಷಗಳ ವೆಚ್ಚ ಆದಾಯದಷ್ಟೇ ಇರುವದು.)

**ಜವಳಿ ಮತ್ತು ಅರಿವೆ ವರ್ತಕರ ಸಂಘ, ಹುಬ್ಬಳ್ಳಿ :** ಹುಬ್ಬಳ್ಳಿಯು ಹತ್ತಿಯ ವ್ಯಾಪಾರಕ್ಕೆ ಪ್ರಸಿದ್ಧವಾಗಿರುವಂತೆ ವಿವಿಧ ಬಗೆಯ ಜವಳಿ ಮತ್ತು ಅರಿವೆ ವ್ಯಾಪಾರಕ್ಕೂ ಮೊದಲಿನಿಂದಲೂ ಪ್ರಸಿದ್ಧವಾಗಿರುವುದು. ಈ ವ್ಯಾಪಾರ ವೃತ್ತಿಯಲ್ಲಿ ನಿರತರಾದವರ ಹಿತಾಸಕ್ತಿಗಳನ್ನು ರಕ್ಷಿಸಲು ಈ ಸಂಸ್ಥೆಯನ್ನು ಹುಟ್ಟು ಹಾಕಲಾಯಿತು. ಈ ಸಂಸ್ಥೆಯನ್ನು 1979 ರಲ್ಲಿ ಹುಬ್ಬಳ್ಳಿ ನಗರಕ್ಕೆ ಸೀಮಿತವಾಗಿರುವಂತೆ ನೋಂದಾಯಿಸಲಾಯಿತು. ಈ ಸಂಸ್ಥೆಯ ಮುಖ್ಯ ಉದ್ದೇಶ ಎಲ್ಲಾ ಬಗೆಯ ಜವಳಿ ಮತ್ತು ಅರಿವೆ ವರ್ತಕರನ್ನು ಏಜೆಂಟರನ್ನು ಒಂದು ವೇದಿಕೆಯಲ್ಲಿ ಒಟ್ಟುಗೂಡಿಸುವುದು ಮತ್ತು ಅವರ ಸಮಸ್ಯೆಗಳನ್ನು ವಿಶೇಷವಾಗಿ ಮಾರಾಟ ತೆರಿಗೆ, ಪ್ರವೇಶ ತೆರಿಗೆ, ತೂಕ ಅಳತೆ ಮುಂತಾದವುಗಳಿಗೆ ಸಂಬಂಧಪಟ್ಟಂತೆ ಸಮಸ್ಯೆಗಳ ಪರಿಹಾರ ಸೂಚಿಸುವುದು ಇವೆ ಮುಂತಾದವುಗಳು. ಹುಬ್ಬಳ್ಳಿಯ ಪ್ರಮುಖ ವಾಣಿಜ್ಯ ಮಂಡಳಿಯೊಂದಿಗೆ ಇದು ಸಂಯೋಜನೆ ಹೊಂದಿರುವುದು. ಸಂಸ್ಥೆಯು ತನ್ನದೇ ಆದ ರೂ. 3.39 ಲಕ್ಷ ಮೌಲ್ಯದ ಸ್ವಂತ ಕಟ್ಟಡವನ್ನು ಹೊಂದಿರುವುದು. 1992ರಲ್ಲಿ ಇದ್ದಂತೆ ಸಂಸ್ಥೆಯ ಆದಾಯ (ಸದಸ್ಯತ್ವದ ಶುಲ್ಕ, ಜಾಹಿರಾತು ಮತ್ತು ದೇಣಿಗೆಗಳ ರೂಪದಲ್ಲಿ) ಒಟ್ಟು ರೂ. 3.74 ಲಕ್ಷ ಎಂದು ತಿಳಿದುಬರುವುದು.

**ವ್ಯಾಪಾರಸ್ಥರ ಸಂಘ, ಹಾವೇರಿ :** ಸ್ವಾತಂತ್ರ್ಯ ಪೂರ್ವದಲ್ಲಿಯೇ 1944ರಲ್ಲಿ ಕಾರ್ಯಾರಂಭ ಮಾಡಿದ ಈ ಸಂಸ್ಥೆಯು 1974ರಲ್ಲಿ ಅಧಿಕೃತವಾಗಿ ನೋಂದಾಯಿಸಲ್ಪಟ್ಟಿತು. ಸಂಸ್ಥೆಯ ಕಾರ್ಯ ವ್ಯಾಪ್ತಿ ಸದ್ಯ ಕೇವಲ ಹಾವೇರಿ ತಾಲೂಕಿಗೆ ಸೀಮಿತವಾಗಿರುವುದು. ಸಂಸ್ಥೆಯ ಹಲವಾರು ಉದ್ದೇಶಗಳಲ್ಲಿ ಬಹು ಪ್ರಮುಖವಾದವುಗಳೆಂದರೆ, ಈ ಭಾಗದ ವಾಣಿಜ್ಯ ಉದ್ಯಮಿಗಳ, ವರ್ತಕರ ತೊಂದರೆಗಳನ್ನು ನಿವಾರಿಸುವುದು, ಕಾಲಕಾಲಕ್ಕೆ ಕಾಯಿದೆ ಕಾನೂನುಗಳ ಸಲಹೆ ಮತ್ತು ಮಾಹಿತಿ ಒದಗಿಸುವುದು, ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನ ಹಿತಸಾಧಿಸುವುದು ಇವೇ ಮುಂತಾದವುಗಳು. ಸಂಘದ ಸದಸ್ಯರಲ್ಲಿ ಬಹುಪಾಲು ಎಣ್ಣೆ ಮಿಲ್ಲುಗಳ ಮಾಲಿಕರು, ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಉದ್ಯಮಿಗಳು, ಕಿರಾಣಿ ವರ್ತಕರು, ದಲಾಲರು, ಖರೀದಿದಾರರು, ಅವಶ್ಯ ವಸ್ತುಗಳ ವ್ಯಾಪಾರಸ್ಥರು, ಔಷಧಿ, ವಿದ್ಯುತ್ ಉಪಕರಣಗಳು, ಜವಳಿ ಮತ್ತು ಹೋಟೆಲ್ ಉದ್ಯಮದವರು ಇರುವರು. ಈ ಸಂಸ್ಥೆಯು ರಾಜ್ಯದ, ರಾಷ್ಟ್ರದ ಪ್ರಮುಖ ವಾಣಿಜ್ಯ ಸಂಘಗಳೊಂದಿಗೆ ಸಂಯೋಜನೆ ಹೊಂದಿರುವುದು. ಸಂಸ್ಥೆಯ ವತಿಯಿಂದ ನಿಯಮಿತವಾಗಿ ಸಮಾಜ ಸೇವಾ ಕಾರ್ಯಕ್ರಮಗಳಾದ ಕುಟುಂಬ ಯೋಜನೆ ಮತ್ತು ಉಚಿತ ನೇತ್ರ ಚಿಕಿತ್ಸೆ ಮುಂತಾದವುಗಳಿಗೆ ಧನ ಸಹಾಯ ಮತ್ತು ಇತರ ಸಹಾಯವನ್ನು ಒದಗಿಸಲಾಗುವುದು.

**ತೂಕ ಮತ್ತು ಅಳತೆ ಮಾಪನಗಳು**

ಪ್ರಮಾಣಬದ್ಧ (ಸ್ಟಾಂಡರ್ಡ್) ತೂಕ ಮತ್ತು ಅಳತೆಗಳ ಸಾರ್ವತ್ರಿಕ ಉಪಯೋಗವು ಉತ್ತಮ ವಾಣಿಜ್ಯ ವ್ಯವಸ್ಥೆಯ ಒಂದು ಅವಿಭಾಜ್ಯ ಅಂಗವೆಂದು ಪರಿಗಣಿಸಲಾಗುವುದು. ಇತರೆಡೆಯಂತೆ ಈ ಜಿಲ್ಲೆಯಲ್ಲಿಯೂ ತೂಕ ಮತ್ತು ಅಳತೆಯಲ್ಲಿ ಬಹುವಿಧವಾದ ವ್ಯತ್ಯಾಸಗಳನ್ನು, ವೈವಿಧ್ಯಗಳನ್ನು ಕಾಣಬಹುದು. ಮುಂಬೈ ಕರ್ನಾಟಕದಲ್ಲಿ ಧಾರವಾಡ ಜಿಲ್ಲೆಯಲ್ಲಿ ಕಂಡು ಬರುವಷ್ಟು ವೈವಿಧ್ಯಗಳು ಬೇರೆ ಜಿಲ್ಲೆಗಳಲ್ಲಿ ಇರಲಿಲ್ಲ ಎಂದು ಹಳೆಯ ದಾಖಲೆಗಳು ಉಲ್ಲೇಖಿಸುತ್ತದೆ. "ಧಾರವಾಡ ಜಿಲ್ಲೆಯಲ್ಲಿ ಎಲ್ಲಾ ಕಡೆಯಲ್ಲಿ ತೂಕಮಾಪುಗಳ ಹೆಸರು ಒಂದೇ ಇದ್ದು, ಅವುಗಳ ಪರಿಮಾಣಗಳು ಬೇರೆ ಬೇರೆ ಇರುವುದರಿಂದ ಚಿಲ್ಲರೆ ಗಿರಾಕಿಗಳಿಗೆ ಮೋಸ ಮಾಡಲಿಕ್ಕೆ ಬಹಳ ಆಸ್ಪದವಾಗುತ್ತದೆ. ಒಟ್ಟಿಗೆ ತೂಕ ಮಾಪುಗಳ ಗೊಂದಲವು ಧಾರವಾಡ ಜಿಲ್ಲೆಯಲ್ಲಿ ಇದ್ದಷ್ಟು ಬೇರೆ ಎಲ್ಲಿಯೂ ಇಲ್ಲವೆಂದು ಹೇಳಬಹುದು." (1893ರ ಗ್ಯಾಸೆಟಿಯರ್).

ವಿವಿಧ ವಸ್ತುಗಳನ್ನು ತೂಗಲು, ಅಳೆಯಲು ಸ್ಥಳೀಯವಾಗಿ ರೂಢಿಯಲ್ಲಿದ್ದ ತೂಕ ಅಳತೆಗಳನ್ನು ಕುರಿತಂತೆ ಈ ವಿವರಣೆ ಕಂಡು ಬರುವುದು: ಬೆಳ್ಳಿ, ಬಂಗಾರ ಮುಂತಾದ ಬೆಲೆಯುಳ್ಳ ವಸ್ತುಗಳನ್ನು ತೂಗಲು ಉಪಯೋಗಿಸುತ್ತಿದ್ದ ಕೋಷ್ಟಕ ಈ ರೀತಿ ಇತ್ತು. 8 ಗುಂಜಿ = 1 ಮಾಸಿ, 12 ಮಾಸಿ = 1 ತೊಲಿ. ಈ ಪದ್ಧತಿಯು ಸಾಮಾನ್ಯವಾಗಿ ಧಾರವಾಡ ಸೇರಿದಂತೆ ಎಲ್ಲಾ ಕಡೆಯಲ್ಲಿ ರೂಢಿಯಲ್ಲಿ ಇತ್ತು. ಸರ್ಕಾರಿ ರೂಪಾಯಿಯು 180 ಗ್ರೇನಿನ ತೂಕ ಇರುತ್ತಿತ್ತು ಮತ್ತು ಅದನ್ನು 91 ಗುಂಜಿ ಎಂದು ಪರಿಗಣಿಸಲ್ಪಡುತ್ತಿತ್ತು.

ಅಂಗಡಿಗಳಲ್ಲಿ ಮಾರಾಟ ಮಾಡುವ ಸರಕನ್ನು ಸೇರಿನ ಮೂಲಮಾನದಲ್ಲಿ ತೂಕ ಮಾಡಲಾಗುತ್ತಿತ್ತು. ಸೇರಿನ ಪ್ರಮಾಣ ಎಲ್ಲಾ ಕಡೆಗೆ ಇಂಪೀರಿಯಲ್ ರೂ. 20 ತೂಕದ್ದಾಗಿರುತ್ತಿತ್ತು. (ಆದರೆ ನೆರೆಯ ಉತ್ತರ ಕನ್ನಡ ಜಿಲ್ಲೆಯಲ್ಲಿ 24 ರೂ. ತೂಕದ್ದಾಗಿತ್ತು). ವಾಡಿಕೆಯಂತೆ ಮುಂಬೈ ಕರ್ನಾಟಕದಲ್ಲಿ 12 ಸೇರಿಗೆ ಒಂದು ಧಡೆ, 4 ಧಡೆಗೆ ಒಂದು ಮಣ, 20 ಮಣಕ್ಕೆ ಒಂದು ಖಂಡುಗದಂತೆ ಕೋಷ್ಟಕ ರೂಢಿಯಲ್ಲಿ ಇದ್ದರೆ ಧಾರವಾಡ ಜಿಲ್ಲೆಯಲ್ಲಿ ಬೇರೆ ಬೇರೆ ಪದಾರ್ಥಗಳಿಗೆ ಧಡೆಯ ತೂಕ ಬೇರೆಬೇರೆಯಾಗಿತ್ತು. ಉದಾ: ತಾಮ್ರ ಪಿತ್ತಾಳೆಗಳ ವ್ಯಾಪಾರದ ಧಡೆ 14 ಸೇರು, ಕಬ್ಬಿಣ ಉಕ್ಕುಗಳ ಧಡೆ 12 ಸೇರು, ಅರಳೆ, ತಂಬಾಕು, ತುಪ್ಪಗಳ ಧಡೆ 13 ಸೇರು, ಬೆಲ್ಲ, ಸಕ್ಕರೆ ಮುಂತಾದ ಆಹಾರ ಪದಾರ್ಥಗಳ ಧಡೆ 12 1/2 ಸೇರು, ಹಿಂಡಿ, ಹತ್ತಿಕಾಳು, ಧಡೆ 10 ಸೇರು ಈ ರೀತಿ ಗೊಂದಲಮಯವಾಗಿತ್ತು. ಧಾನ್ಯಗಳನ್ನು ಅಳೆಯಲು ಬಳಸುವ ಮಾಪನವನ್ನು ಸಹ ಸೇರು ಎಂದು ಹೇಳುತ್ತಿದ್ದರು. ಕೃಷ್ಣೆಯ ದಕ್ಷಿಣ ಭಾಗದಲ್ಲಿ ಧಾರವಾಡ ಸೇರಿದಂತೆ 80 ರೂ. ತೂಕದ ನವಧಾನ್ಯಗಳನ್ನು ಭರ್ತಿ ಹಿಡಿಸುವ ಅಳತೆಯ ಮಾಪನಕ್ಕೆ ಸೇರು ಎನ್ನುತ್ತಿದ್ದರು. ಆದರೆ ಈ ಸೇರುಮಾಪನವು ನೀರಿನ ತೂಕದೊಂದಿಗೆ ಹೋಲಿಸಿದಾಗ 80 ರೂ. ಸೇರಿನ ತೂಕದ ಸೇರಿಗಿಂತ ನಾಲ್ಕು ರೂಪಾಯಿ ಕಡಿಮೆ ಇರುತ್ತಿತ್ತು. ಧಾರವಾಡ ಜಿಲ್ಲೆಯಲ್ಲಿ ಸೇರಿನ ತೂಕವು ತಾಲೂಕಿನಿಂದ ತಾಲೂಕಿಗೆ ಬೇರೆಯಾಗಿರುತ್ತಿತ್ತು. ಅತೀ ಕಡಿಮೆ ಎಂದರೆ ರೂ. 136 ರಿಂದ ಅತಿ ಹೆಚ್ಚೆಂದರೆ 160 ರವರೆಗೆ ಭಿನ್ನ ಭಿನ್ನ ಪರಿಮಾಣಗಳಿಂದ ಕೂಡಿತ್ತು. ಒಂದೇ ಪೇಟೆಯಲ್ಲಿ ಎರಡು ಬಗೆಯ ಸೇರುಗಳನ್ನು ಕಾಣುವುದು ಅಂದು ಅಪರೂಪವಾಗಿರಲಿಲ್ಲ. ಧಾನ್ಯಗಳನ್ನು ಅಳೆಯುವ ಕೋಷ್ಟಕ ಈ ರೀತಿ ಇತ್ತು. 4 ಸೇರಿಗೆ = ಒಂದು ಸೊಲಿಗೆ, ಪಾಯಲಿ ಅಥವಾ ಚಿಟ್ಟಿ, 16 ಸೊಲಿಗೆಗೆ ಒಂದು ಮಣ, ಅಂಡಿಗೆ ಅಥವಾ ಒಕ್ಕಳ, 20 ಮಣಕ್ಕೆ ಅಥವಾ ಹತ್ತು ಹೇರಿಗೆ ಒಂದು ಖಂಡುಗ. ಇದು ಮುಂಬೈ ಕರ್ನಾಟಕದಲ್ಲಿ ಸಾಮಾನ್ಯವಾಗಿ ರೂಢಿಯಲ್ಲಿ ಇದ್ದರೆ, ಧಾರವಾಡ ಜಿಲ್ಲೆಯಲ್ಲಿ 20 ಹೇರಿಗೆ ಒಂದು ಖಂಡಗ ಎನ್ನುತ್ತಿದ್ದರು. ಧಾರವಾಡ ಖಂಡುಗವು ಬೆಳಗಾವಿ ಖಂಡುಗದ ಸುಮಾರು ನಾಲ್ಕು ಪಟ್ಟು ಹೆಚ್ಚಾಗಿತ್ತು.

ಪೇಶ್ವೆ ಆಡಳಿತ ಕಾಲದಲ್ಲಿ 18 ನೇ ಶತಮಾನದಲ್ಲಿ ಅಳತೆಯ ಕೋಷ್ಟಕ ಈ ರೀತಿ ಇತ್ತು: ಒಂದು ಖಂಡಿ = 20 ಮಣ. ಒಂದು ಮಣ = 12 ಪಾಯಲಿ, ಒಂದು ಪಾಯಲಿ = 4 ಸೇರು, 1 ಸೇರು = 16 ಚಟಾಕು, 1 ಚಟಾಕು = 6 ಟಕಾ; ಅಕ್ಕಿ, ಗೋಧಿ, ಜೋಳ, ಬೇಳೆ, ಉಪ್ಪು, ಮುಂತಾದವುಗಳನ್ನು ಈ ಮೇಲಿನ ಅಳತೆಯ ಮಾಪುಗಳಿಂದ ಅಳೆಯಲಾಗುತ್ತಿತ್ತು.

**ತೂಕದ ಕೋಷ್ಟಕ ಈ ರೀತಿ ಇತ್ತು** : ಒಂದು ಖಂಡಿ = 20 ಮಣ, ಒಂದು ಮಣ = 40 ಸೇರು, 1 ಸೇರು = 72 ಟಕಾ. ತೂಕದಲ್ಲಿ ಪಕ್ಕಾ ಸೇರು ಮತ್ತು ಕಚ್ಚಾ ಸೇರು ಎಂದು ಎರಡು ಮಾಪನಗಳಿದ್ದವು. ಪಕ್ಕಾ ಸೇರಿನ ತೂಕ ಕಚ್ಚಾಸೇರಿನ ಮೂರುಪಟ್ಟು ಹೆಚ್ಚಾಗಿರುತ್ತಿತ್ತು. ಕಚ್ಚಾಸೇರು 24ಟಕಾಗೆ ಸಮಾನವಾಗಿತ್ತು. ತುಪ್ಪ, ಕೊಬ್ಬರಿ, ಅರಿಸಿನ, ಎಣ್ಣೆ, ಅಡಿಕೆ ಮುಂತಾದವುಗಳನ್ನು

ಈ ಮೇಲಿನ ಅಳತೆಗಳಿಂದ ತೂಗುತ್ತಿದ್ದರು. ಪೇಶ್ವೆಯವರ ಕಾಲದ ಕೆಲವು ವರದಿಯಲ್ಲಿ ಅಡೇಸೇರು (2 1/2 ಸೇರು) ಮತ್ತು ಅಟ್ಟೇಚಾಲೀಸ್ (48 ಸೇರು) ಎಂದು ಉಲ್ಲೇಖಿಸಲಾಗಿದೆ. ಅಡೇಸೇರು ಇದು ಅಳತೆಯ ಮಾನವಾಗಿತ್ತು. ಅಟ್ಟೇಚಾಲೀಸ್ (48 ಎಂದು ಅರ್ಥ) ಇದು ತೂಕದ ಮಾನವಾಗಿತ್ತು. ಬೆಳ್ಳುಳ್ಳಿ, ಈರುಳ್ಳಿ, ಅರಿಶಿನ, ಮೆಣಸು, ಹೊಗೆಸೊಪ್ಪು, ಚರ್ಮ ಮುಂತಾದವುಗಳನ್ನು ಅಟ್ಟೇಚಾಲೀಸ್ ಮಾಪನದಿಂದ ಅಳೆಯುತ್ತಿದ್ದರು.

ಹಾಲು, ಎಣ್ಣೆ ಮುಂತಾದ ದ್ರವ ಪದಾರ್ಥಗಳನ್ನು ಅಳೆಯಲು ಹಿತ್ತಾಳೆಯ ಪಾತ್ರೆ ಮತ್ತು 'ಮಗಿ'ಗಳನ್ನು ಉಪಯೋಗಿಸುತ್ತಿದ್ದರು. ಹಾಲನ್ನು ಅಳೆಯುವ ಸೇರು 80 ರೂ. ತೂಕದ್ದಾದರೆ, ಎಣ್ಣೆಯನ್ನು ಅಳೆಯುವ ಸೇರು 20 ರೂ. ತೂಕದ್ದಾಗಿರುತ್ತಿತ್ತು. ಒಂದು ಮಗಿ ಸುಮಾರು 5 ರಿಂದ 6 ಸೇರು ಎಣ್ಣೆಯನ್ನು ಅಳೆಯುತ್ತಿತ್ತು. ಒಂದು ಮಣ ಎಣ್ಣೆ 8 ಮಗಿಗಳಿಗೆ ಸಮಾನವಾಗಿರುತ್ತಿತ್ತು. ಜೇನುತುಪ್ಪ, ತುಪ್ಪ, ಕಾಂಕಬಿ ಇವುಗಳನ್ನು ತೂಗಿ ಕೊಡುತ್ತಿದ್ದರು.

ಭೂಮಿಯ ಅಳತೆ, ಭೂಮಾಪನದಲ್ಲಿಯೂ ಸ್ಥಳೀಯ ಸಂಪ್ರದಾಯದಂತೆ ಅನೇಕ ವೈವಿಧ್ಯಗಳು ಇದ್ದವು. ಪ್ರಾಚೀನ ಮತ್ತು ಮಧ್ಯಕಾಲೀನ ಶಾಸನಗಳಲ್ಲಿ ಭೂಮಾಪನಕ್ಕೆ ನಿವರ್ತನ, ಮತ್ತರ, ಖಂಡುಗ, ಕೂರಿಗೆ, ಇಂಬು, ಮುಂತಾದ ಪರ್ಯಾಯ ಪದಗಳನ್ನು ಬಳಸಿರುವುದನ್ನು ಕಾಣಬಹುದು. (ಈ ಬಗ್ಗೆ ಅಧ್ಯಾಯ 9 ನೋಡಿ).

ಧಾರವಾಡ ಬಳಿಯ ಅಮ್ಮಿನಭಾವಿಯ ಕಲ್ಮೇಶ್ವರ ಗುಡಿಯಲ್ಲಿ ಎರಡು ಕಟ್ಟೆಗೆ ಕಂಬಗಳ ಮಧ್ಯ ವಿಠ್ಠಲಪಂತಿಯ ಅಳತೆಗಳ ಪರಿಮಾಣಗಳನ್ನು ಬಾಲಭೋದೆ ಲಿಪಿಯಲ್ಲಿ ಬರೆದಿರುವರು ಎಂದು ಹಳೆಯ ಗ್ಯಾಸೆಟಿಯರ್‌ನಲ್ಲಿ ಉಲ್ಲೇಖಿಸಲಾಗಿದೆ. ಇದು ಮುಸಲ್ಮಾನರ ಕಾಲದ ಅಳತೆ. ಆದರೆ ಇಂದು ಅದರ ಯಾವ ಗುರುತೂ ದೊರೆಯುತ್ತಿಲ್ಲ. ವಿಠ್ಠಲಪಂತಿ ಮಾರು ಸುಮಾರು 32 ಎಕರೆ ಇರುತ್ತದೆ ಎಂದು ಹೇಳಲಾಗುವುದು. ವಿಜಯನಗರದ ಅರಸರ ಕಾಲದಲ್ಲಿ "ರಾಯರೇಖೆಯ ಮಾರು" ಬಳಕೆಯಲ್ಲಿ ಬಂದಿತು. ಅದು ಸುಮಾರು 16 ಎಕರೆಗೆ ಸಮನಾಗಿತ್ತು. ಪೇಶ್ವೆಯರ ಕಾಲದಲ್ಲಿ ಬಂಗಾಲದಲ್ಲಿ ಹೆಚ್ಚು ಪ್ರಚಾರದಲ್ಲಿದ್ದ 'ಭೀಘಾ' ಅಳತೆಯ ಮಾಪನ ರೂಢಿಯಲ್ಲಿ ಬಂದಿತು. ಅದರ ಪ್ರಕಾರ 4 ಚಚ್ಚೌಕು ಅಂಗಲಕ್ಕೆ (4" X 4") ಒಂದು ಮುಷ್ಟಿ, ಮೂರು ಮುಷ್ಟಿಗೆ ಒಂದು ಗೇಣು, ಎರಡು ಗೇಣಿಗೆ ಒಂದು ಮೊಳ, ಐದು ಮೊಳಕ್ಕೆ ಒಂದು ಕಾಠಿ, 20 ಕಾಠಿಗೆ ಒಂದು ಪಾಂಡು, 20 ಪಾಂಡಿಗೆ ಒಂದು ಭೀಘ, 120 ಭೀಘೆಗೆ ಒಂದು ಚಾಹೇರು, ಒಂದು ಭಿಘೆ ಎಂದರೆ ಸುಮಾರು 1 1/2 ಎಕರೆಯಿಂದ 1 3/4 ಎಕರೆ ಎಂದು ಹೇಳಲಾಗುವುದು.

1840ರಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿ ಪುನಃ ಮೋಜಣಿ ಆರಂಭವಾಗಿ ಆಣೆ, ಗುಂಟೆ, ಎಕರೆ, ಕೂರಿಗೆ ರೂಢಿಯಲ್ಲಿ ಬಂದವು. ಒಂದು ಎಕರೆ ಎಂದರೆ 40 ಗುಂಟೆಗಳು. ಸಾಮಾನ್ಯವಾಗಿ ರೈತರು ಒಂದು ಕೂರಿಗೆಯಿಂದ ಒಂದು ದಿನದಲ್ಲಿ ಬಿತ್ತುವಷ್ಟು ಭೂಮಿಯ ವಿಸ್ತೀರ್ಣವನ್ನು 'ಕೂರಿಗೆ' ಎನ್ನುವರು. ಅಳತೆ ಮಾನದಲ್ಲಿ ಹೇಳುವಾಗ ಬೆಳವಲ ಪ್ರದೇಶದಲ್ಲಿ ನಾಲ್ಕು ಎಕರೆಗೆ ಒಂದು ಕೂರಿಗೆ ಎನ್ನುವರು.

**ಉದ್ದದ ಅಳತೆ :** ರಸ್ತೆ ಅಥವಾ ಮಾರ್ಗದ ದೂರ, ಬಟ್ಟೆಯ ಉದ್ದ, ಮರಮಟ್ಟು (ನಾಟಾ) ಮುಂತಾದವುಗಳನ್ನು ಅಳೆಯಲು ಉದ್ದದ ಅಳತೆಯ ಕಾನೂನು 1889ರ ಅನ್ವಯ ಬ್ರಿಟಿಷ್ ವಿಧಾನಗಳನ್ನು ಬಳಸುವುದು ಜಾರಿಯಲ್ಲಿ ಬಂದಿತು. (ಇದಕ್ಕೂ ಪೂರ್ವದಲ್ಲಿ ಗಾವುದ, ಕೋಸ್, ಹರದಾರಿ ಮುಂತಾದ ಪ್ರಮಾಣಗಳಲ್ಲಿ ಸೂಚಿಸಲಾಗುತ್ತಿತ್ತು.) ಅದರ ಅನ್ವಯ ಇಂಚು, ಫೂಟು, ಯಾರ್ಡ್, ಫರ್ಲಾಂಗ, ಮೈಲು, ಹರದಾರಿ ಅಳತೆಗಳನ್ನು ಅನುಸರಿಸಲಾಯಿತು. ಸ್ಥಳೀಯವಾಗಿ ಸಣ್ಣ ವಸ್ತುಗಳ ಉದ್ದ ಅಳೆಯಲು ಚೋಟು, ಗೇಣು, ಮೊಳ, ಮಾರು, ಮುಂತಾದವುಗಳೂ ರೂಢಿಯಲ್ಲಿ ಇದ್ದವು. ಸಾಮಾನ್ಯವಾಗಿ ಮೊಳಕ್ಕೆ ಅರ್ಧಯಾರ್ಡ್ ಎಂದು, ಎರಡು ಯರ್ಡ್ ಉದ್ದವನ್ನು ಮಾರು ಎಂದು ಕರೆಯಲಾಗುತ್ತಿತ್ತು. ಒಂದು ಮೈಲು 8 ಫರ್ಲಾಂಗ್‌ಗಳಿಗೆ, ಒಂದು ಹರದಾರಿ ನಾಲ್ಕು ಮೈಲುಗಳಿಗೆ ಸಮನಾಗಿತ್ತು.

ರಾಜ್ಯ ಪುನರ್‌ಘಟನೆಗೆ ಪೂರ್ವದಲ್ಲಿ ಮುಂಬಯಿ ತೂಕ ಮತ್ತು ಅಳತೆ ಕಾನೂನು 1932ರ ಅನ್ವಯ ಅಳತೆ ಮತ್ತು ತೂಕದ ಇಲಾಖೆಯು ಕಾರ್ಯ ನಿರ್ವಹಿಸುತ್ತಿತ್ತು. ಈ ಇಲಾಖೆಯು ಕೈಗಾರಿಕಾ ಇಲಾಖೆಯ ಒಂದು ಭಾಗವಾಗಿತ್ತು. ಜಿಲ್ಲಾಮಟ್ಟದಲ್ಲಿ ಸಹಾಯಕ ನಿರ್ದೇಶಕರು, ಕೈಗಾರಿಕಾ ಇಲಾಖೆ ಅವರು ತೂಕ ಅಳತೆಗೆ ಸಂಬಂಧಪಟ್ಟಂತೆ ಎಲ್ಲಾ ವ್ಯವಹಾರಗಳನ್ನು ನಿರ್ವಹಿಸುತ್ತಿದ್ದರು.

**ಮೆಟ್ರಿಕ್ ಪದ್ಧತಿಯ ಆಚರಣೆ** : ಮೆಟ್ರಿಕ್ ಪದ್ಧತಿಯ ತೂಕ ಅಳತೆ ರೂಢಿಯಲ್ಲಿ ಬರುವ (1958) ಕೆಲವೇ ವರ್ಷಕ್ಕೆ ಮೊದಲು ಧಾರವಾಡ ಜಿಲ್ಲೆಯಲ್ಲಿ ಮಹತ್ವದ ವಾಣಿಜ್ಯ ಬೆಳೆಯಾದ ಹತ್ತಿಯನ್ನು 'ಅಂಡಿಗೆ' (ಡೊಕ್ರಾ), ನಾರಿನ ಚೀಲದಲ್ಲಿ (ಭಟಾರ) ತುಂಬಿ ತೂಗುತ್ತಿದ್ದರು. ಸಂಸ್ಕರಿಸಿದ (ಜಿನ್ ಮಾಡಿದ) ಅಂಡಿಗೆ 6 ಕ್ವಾರ್ಟರ ತೂಗುತ್ತಿದ್ದರೆ ಸಂಸ್ಕರಿಸದೇ ಇರುವುದು 12 ಕ್ವಾರ್ಟರ್ ತೂಗುತ್ತಿತ್ತು. ಆಹಾರ ವಸ್ತುಗಳು ಮತ್ತು ಇತರ ವಸ್ತುಗಳನ್ನು ಮುಂಬೈ ಮಣದ ಮೂಲಕ ತೂಗುತ್ತಿದ್ದರು. ಸಾಮಾನ್ಯವಾಗಿ ಒಂದು ಚೀಲ ಶೇಂಗಾಕಾಯಿ ಸಿಪ್ಪೆ ಸಹಿತ ಒಂದು ಮುಂಬೈ ಮಣ ತೂಗುತ್ತಿತ್ತು; ಒಂದು ಮೆಣಸಿನಕಾಯಿಯ ಅಂಡಿಗೆ ಎರಡು ಮುಂಬೈ ಮಣ ತೂಗುತ್ತಿತ್ತು. ಒಂದು ಮಣ 40 ಸೇರಿಗೆ ಸಮನಾಗಿತ್ತು, ಒಂದು ಸೇರು 80 ತೊಲೆಗೆ ಸಮನಾಗಿತ್ತು. ಐದು ಸೇರಿನ ಅಳತೆಯನ್ನು ಪಂಚೇರು (ವೀಸೆ) ಎಂದು ಹೇಳುತ್ತಿದ್ದರೆ, 2 1/2 ಸೇರಿನ ಅಳತೆಯನ್ನು 'ಧಡೆ' ಎಂದು ಹೇಳುತ್ತಿದ್ದರು. ಹತ್ತಿಯನ್ನು ಖಂಡಿಯ ಮೂಲಮಾನದಿಂದ ಅಳೆಯುತ್ತಿದ್ದರು. ಒಂದು ಖಂಡಿ 748 ಪೌಂಡು ತೂಕದ್ದಾಗಿರುತ್ತಿತ್ತು. ಸಣ್ಣ ಪುಟ್ಟ ವ್ಯವಹಾರಗಳಲ್ಲಿ ಆಹಾರ ಧಾನ್ಯಗಳನ್ನು ಚಟಾಕು, ಪಾವು, ಪಡಿ, ಚಿಟ್ಟಿ, ಸೊಲಿಗೆ, ಗಿದ್ನ ಮುಂತಾಗಿ ಅಳೆಯುತ್ತಿದ್ದರು. ಸೇರಿನ 1/8 ಭಾಗ ಚಟಾಕು, 1/4 ಭಾಗ ಪಾವು ಆಗಿದ್ದವು. 4 ಸೇರು = ಒಂದು ಪಡಿ, 8 ಸೇರು = ಒಂದು ಚಿಟ್ಟಿ, ಎರಡು ಚಿಟ್ಟಿ = ಒಂದು ಸೊಲಿಗೆ (16 ಸೇರು). ಸಾಮಾನ್ಯವಾಗಿ ಒಂದು ಚೀಲ ಧಾನ್ಯ ಅಂದರೆ 128 ಸೇರು ಅಥವಾ 16 ಚಿಟ್ಟಿ ಇರುತ್ತಿತ್ತು.

ಪ್ರಮಾಣಬದ್ಧ ತೂಕ ಮತ್ತು ಅಳತೆ ಅಧಿನಿಯಮ 1956ರ ಅನ್ವಯ ರಚಿಸಲಾದ ಕರ್ನಾಟಕ ತೂಕ ಮತ್ತು ಅಳತೆ (ನಿಬಂಧನೆ) ಅಧಿನಿಯಮ 1958ನ್ನು ಈ ಜಿಲ್ಲೆಯಲ್ಲಿ 1958ರಿಂದಲೇ ಜಾರಿಗೆ ತರಲಾಯಿತು. ಈ ಇಲಾಖೆಯು ವ್ಯಾಪಾರ ವಾಣಿಜ್ಯ ವ್ಯವಹಾರಗಳಲ್ಲಿ ಉಪಯೋಗಿಸುವ ತೂಕ ಮತ್ತು ಅಳತೆಯ ಉಪಕರಣಗಳನ್ನು ಪ್ರತೀವರ್ಷ ಪರೀಕ್ಷಿಸುವುದರ ಜೊತೆಗೆ ಸರ್ಕಾರದಿಂದ ಅಂಗೀಕೃತವಾದ ಮುದ್ರೆಯನ್ನು ಹಾಕುವುದು. ಈ ಇಲಾಖೆಯು ತೂಕ ಮತ್ತು ಅಳತೆ ಪ್ರಮಾಣಗಳ ಅಧಿನಿಯಮ (ಪ್ಯಾಕ್ ಮಾಡಿದ ವಸ್ತುಗಳು, 1977ನ್ನೂ ಸಹ ಜಾರಿಯಲ್ಲಿ ತರುತ್ತಿದೆ. ಅದಕ್ಕೆ ಅನುಗುಣವಾಗಿ ಪ್ರತಿ ಒಬ್ಬ ತಯಾರಕನು ಮತ್ತು ಪ್ಯಾಕ್ ಮಾಡುವವನು (ಪೊಟ್ಟಣ ಕಟ್ಟುವವನು) ಭಾಂಗಿ (ಪೊಟ್ಟಣ)ಯ ಮೇಲೆ ತಯಾರಕನ ಹೆಸರು, ಪ್ಯಾಕ್ ಮಾಡಿದವನ ಹೆಸರು, ದಿನಾಂಕ, ವಸ್ತುವಿನ ನಿವ್ವಳ ತೂಕ ಮತ್ತು ಮಾರಾಟ ಬೆಲೆ ಇವುಗಳನ್ನು ನಮೂದಿಸುವುದು ಶಾಸನದ ಅನ್ವಯ ಕಡ್ಡಾಯ ಮಾಡಲಾಗಿದೆ. ಜಿಲ್ಲೆಯಲ್ಲಿ ಇಲಾಖೆಯ ಆಡಳಿತ ನೋಡಿಕೊಳ್ಳಲು ಸಹಾಯಕ ನಿಯಂತ್ರಣಾದಿಕಾರಿ, ತೂಕ ಮತ್ತು ಅಳತೆ ಇವರ ಕಛೇರಿಯನ್ನು ಪ್ರಾರಂಭಿಸಲಾಯಿತು. 1990ರಿಂದ ಕಛೇರಿಯ ಹೆಸರನ್ನು ಸಹಾಯಕ ನಿಯಂತ್ರಕರು ಕಾನೂನು ಮಾಪನ ಶಾಸ್ತ್ರ ಎಂದು ಬದಲಾಯಿಸಲಾಗಿದೆ. ಆಡಳಿತ ದಕ್ಷತೆಯ ದೃಷ್ಟಿಯಿಂದ ಈ ಜಿಲ್ಲೆಯನ್ನು ಹುಬ್ಬಳ್ಳಿ ಮತ್ತು ಗದಗ ಎಂಬ ಎರಡು ವೃತ್ತಗಳಾಗಿ ವಿಂಗಡಿಸಿದ್ದು ಗದಗ ವಲಯದಲ್ಲಿ 12 ತಾಲೂಕುಗಳು, ಹುಬ್ಬಳ್ಳಿ ವಲಯದಲ್ಲಿ 5 ತಾಲೂಕುಗಳು (ಹುಬ್ಬಳ್ಳಿ, ಧಾರವಾಡ, ಕಲಘಟಗಿ, ಕುಂದಗೋಳ, ನವಲಗುಂದ) ಸೇರುತ್ತವೆ. ಗದಗ ವಲಯವನ್ನು 1975ರಲ್ಲಿ ಸ್ಥಾಪಿಸಲಾಯಿತು. ಹುಬ್ಬಳ್ಳಿ ವಲಯವನ್ನು 1956ರಲ್ಲಿಯೇ ಪ್ರಾರಂಭಿಸಲಾಗಿತ್ತು. ಎರಡೂ ವಲಯದಲ್ಲಿ ಸಹಾಯಕ ನಿಯಂತ್ರಕರು ಕಾರ್ಯ ನಿರ್ವಹಿಸುತ್ತಿರುವರು. 1984ರಲ್ಲಿ ಧಾರವಾಡ ಸೇರಿದಂತೆ ಉತ್ತರ ಭಾಗದ ಎಂಟು ಜಿಲ್ಲೆಗಳನ್ನು ಒಳಗೊಂಡಂತೆ ತೀವ್ರ ಕಾರ್ಯಾಚರಣೆ ನಡೆಸಲು ಸಹಾಯಕವಾಗುವಂತೆ ಸುಸಜ್ಜಿತ ಸಂಚಾರಿದಳ (ಫ್ಲಾಯಿಂಗ ಸ್ಕ್ವಾಡ್) ವಿಭಾಗ ಇರುವುದು. ಅದರ ಕೇಂದ್ರ ಕಛೇರಿಯೂ ಹುಬ್ಬಳ್ಳಿಯಲ್ಲಿ ಇರುವುದು. ಈ ದಳವು ನೇರವಾಗಿ ಇಲಾಖೆಯ ಮುಖ್ಯಸ್ಥರ ನಿಯಂತ್ರಣಕ್ಕೆ ಒಳಪಟ್ಟಿರುವುದು.

ಇತ್ತೀಚೆಗೆ ಹುಬ್ಬಳ್ಳಿ, ಧಾರವಾಡಗಳಲ್ಲಿ ಹೆಚ್ಚುತ್ತಿರುವ ಆಟೋ ಮತ್ತು ಟ್ಯಾಕ್ಸಿ ಮೀಟರ್‌ಗಳನ್ನು ನಿಯಂತ್ರಿಸಲು 1992ರಲ್ಲಿ ನಿರೀಕ್ಷಕರ (ಇನ್ಸ್‌ಪೆಕ್ಟರ್) ಹುದ್ದೆಯನ್ನು ಮಂಜೂರು ಮಾಡಲಾಗಿದೆ. ಇಲಾಖೆಯ ಮಾಹಿತಿಯಂತೆ ಹುಬ್ಬಳ್ಳಿಯಲ್ಲಿ 3,784 (1993) ಆಟೋಗಳು ಇರುವವು. ಇಲಾಖೆಯ ವರದಿಯು ತಿಳಿಸುವಂತೆ 1993-94ರಲ್ಲಿ ಜಿಲ್ಲೆಯಾದ್ಯಂತ 977 ಕೈಗಾರಿಕಾ ಸಂಸ್ಥೆಗಳು, 185 ಪೆಟ್ರೋಲ ಪಂಪುಗಳ, 25,965 ವರ್ತಕರು, 26 ಸರ್ಕಾರಿ ಸಂಸ್ಥೆಗಳು (ಹುಬ್ಬಳ್ಳಿ ವಲಯ) ಇಲಾಖೆಯ ಪರಿವ್ಯಾಪ್ತಿಯಲ್ಲಿ ಬರುವವು. ಎರಡೂ ವಲಯ ಸೇರಿದಂತೆ ಜಿಲ್ಲೆಯಲ್ಲಿ 2,14,191 ತೂಕಗಳು (ತೂಕದ ಕಲ್ಲುಗಳು), 76,218 ವಿವಿಧ ಅಳತೆ ಮಾಪನಗಳು, 55,493 ತೂಕದ ಸಾಧನಗಳನ್ನು (ತಕ್ಕಡಿ) ಇಲಾಖೆಯ ವಾರ್ಷಿಕ ತಪಾಸಣೆಗೆ ಒಳಪಡಿಸಲಾಗಿತ್ತು. ವರದಿಯ ವರ್ಷದಲ್ಲಿ ಜಿಲ್ಲೆಯಲ್ಲಿ ಸಂದಾಯವಾದ ಒಟ್ಟು ಸತ್ಯಾಪನೆ ಶುಲ್ಕ (ಮುದ್ರೆ ಶುಲ್ಕ) ರೂ. 16.82 ಲಕ್ಷ ಆಗಿದ್ದರೆ ಇಲಾಖೆಯ ನಿಯಮಗಳನ್ನು ಉಲ್ಲಂಘನೆ ಮಾಡಿದ ಬಗ್ಗೆ ಹಾಕಲಾದ ಮೊಕದ್ದಮೆಗಳ ಸಂಖ್ಯೆ 2,421 (ಗದಗ ವಿಭಾಗ 1,428, ಹುಬ್ಬಳ್ಳಿ ವಿಭಾಗ 993). ಇಲಾಖಾ ಮಟ್ಟದಲ್ಲಿ

ಇಲಾಖಾ ಮಟ್ಟದಲ್ಲಿ ಅಭಿಸಂಧಾನ ನಡೆದು ವಸೂಲಾದ ದಂಡದ ಹಣ ರೂ. 4.76 ಲಕ್ಷ, ಆ ಪೈಕಿ ಗದಗ ವಲಯದಿಂದ ಸಂದಾಯವಾದ ಹಣ ರೂ. 2.26 ಲಕ್ಷ. ಹುಬ್ಬಳ್ಳಿ ವಲಯದಿಂದ ನ್ಯಾಯಾಲಯದಲ್ಲಿ ತೀರ್ಮಾನಗೊಂಡ ಮೊಕದ್ದಮೆಗಳ ಸಂಖ್ಯೆ 63 ಮತ್ತು ನ್ಯಾಯಾಲಯ ವಿಧಿಸಿದ ಜುಲ್ಮಾನೆ ರೂ. 26,675 ಎಂದು ವರದಿಯಾಗಿದೆ.

**ಆಹಾರ ಮತ್ತು ನಾಗರಿಕಾವಶ್ಯಕ ವಸ್ತುಗಳ ಸರಬರಾಜು**

ಜೀವನಾವಶ್ಯಕ ವಸ್ತುಗಳ ಬೇಡಿಕೆ ಮತ್ತು ಪೂರೈಕೆಗಳನ್ನು ಗಮನಿಸಿ ಸರ್ಕಾರವು ಕಾಲಕಾಲಕ್ಕೆ ಜೀವನಾವಶ್ಯಕ ವಸ್ತುಗಳ ಹಂಚಿಕೆಯನ್ನು ನಿಯಂತ್ರಿಸುತ್ತ ಬಂದಿರುವುದು. ವಿಶೇಷವಾಗಿ ಆಹಾರ ಧಾನ್ಯಗಳ ಮೇಲಿನ ನಿಯಂತ್ರಣವನ್ನು ಎರಡನೆಯ ಮಹಾಯುದ್ಧದ ಅವಧಿಯಲ್ಲಿ ಮತ್ತು ನಂತರದ ಹಲವಾರು ವರ್ಷಗಳ ಕಾಲ ಮುಂದುವರಿಸಲಾಯಿತು. ಧಾರವಾಡ ಜಿಲ್ಲೆಯಲ್ಲಿ ಎರಡನೇಯ ಮಹಾಯುದ್ಧದ ಕಾಲದಲ್ಲಿ (1939-45) ಅವಶ್ಯಕ ವಸ್ತುಗಳಾದ ಆಹಾರ ಧಾನ್ಯಗಳು, ಬಟ್ಟೆ, ಸಕ್ಕರೆ ಮತ್ತು ಚಿಮಣಿ ಎಣ್ಣೆ ಮುಂತಾದವುಗಳು ಅಭಾವ ಉಂಟಾಗಿ ಸರ್ಕಾರವು ಇವುಗಳ ಬೆಲೆಹತೋಟಿ, ವಿತರಣೆ, ಮುಂತಾದ ವಿಷಯಗಳಲ್ಲಿ ನಿಯಂತ್ರಣವನ್ನು ಜಾರಿಗೊಳಿಸಿತು. ಯುದ್ಧದ ನಂತರವೂ ಕೆಲವೊಂದು ಅವಶ್ಯ ವಸ್ತುಗಳ ಮೇಲಿನ ನಿಯಂತ್ರಣ ಮುಂದುವರೆಯಿತು. ಆದರೆ 1954ರ ನಂತರ ಆಹಾರ ವಸ್ತುಗಳ ಮೇಲಿನ ನಿಯಂತ್ರಣವನ್ನು ಸಂಪೂರ್ಣವಾಗಿ ತೆಗೆದು ಹಾಕಲಾಯಿತು. ಜೀವನಾವಶ್ಯಕ ವಸ್ತುಗಳ ಮೇಲಿನ ನಿಯಂತ್ರಣ, ಸರಬರಾಜು ಮತ್ತು ಅವುಗಳ ವಿತರಣಾ ವ್ಯವಸ್ಥೆ ಈ ಎಲ್ಲಾ ವ್ಯವಹಾರಗಳು ಜಿಲ್ಲಾಧಿಕಾರಿ ಮತ್ತು ಮಾಮಲೆದಾರರ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿದ್ದವು.

ಸ್ವಾತಂತ್ರ್ಯಾನಂತರದ ದಶಕಗಳಲ್ಲಿ ಜೀವನಾವಶ್ಯಕ ವಸ್ತುಗಳ ಸರಬರಾಜು, ಸಾಗಾಣಿಕೆ, ಬೆಲೆ ನಿಯಂತ್ರಣ ಮುಂತಾದ ಹಲವಾರು ವಿಷಯಗಳನ್ನು ಒಳಗೊಂಡಂತೆ ಕೇಂದ್ರ ಮತ್ತು ರಾಜ್ಯಸರ್ಕಾರ ಹಲವಾರು ಕಾನೂನುಗಳನ್ನು ರಚಿಸಿವೆ. ಸದ್ಯದ ಆಡಳಿತ ವ್ಯವಸ್ಥೆಯಲ್ಲಿ, ಜಿಲ್ಲಾಮಟ್ಟದಲ್ಲಿ, ಜೀವನಾವಶ್ಯಕ ವಸ್ತುಗಳ ಕಾಯಿದೆ 1965ರ ಅನ್ವಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ರೂಪಿಸಲ್ಪಟ್ಟ 28 ವಿವಿಧ ಆಜ್ಞೆಗಳು ಜಾರಿಯಲ್ಲಿ ಇರುವವು. ಇತ್ತೀಚಿನ ದಿನಗಳಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಕಾರ್ಯ ವ್ಯಾಪ್ತಿಯು ಹೆಚ್ಚುತ್ತಿದ್ದು ಜೀವನಾವಶ್ಯಕ ವಸ್ತುಗಳ ಸಮರ್ಪಕ ಹಂಚಿಕೆ ಮತ್ತು ಬೆಲೆಗಳ ಸ್ಥಿರತೆಯನ್ನು ಕಾಯ್ದುಕೊಳ್ಳುವ ಬಗ್ಗೆ ರಚಿಸಲಾದ ವಿವಿಧ ನಿಯಂತ್ರಣ ಕಾಯಿದೆಗಳ ಅನುಷ್ಠಾನ ಮತ್ತು ಅನೌಪಚಾರಿಕ ಪಡಿತರ ಪದ್ಧತಿಯ ಕಾರ್ಯಾಚರಣೆ ಇವೇ ಮುಂತಾದವುಗಳು ಇಲಾಖೆಯ ಪ್ರಮುಖ ಕಾರ್ಯಗಳು.

**ಸಾರ್ವಜನಿಕ ವಿತರಣಾ ವ್ಯವಸ್ಥೆ :** ಧಾರವಾಡ ಜಿಲ್ಲೆಯಲ್ಲಿ ಎರಡನೆಯ ಮಹಾಯುದ್ಧದ ಕಾಲದಲ್ಲಿ (1939-1945) ತಲೆದೋರಿದ ಅವಶ್ಯಕ ವಸ್ತುಗಳ ಅಭಾವ ಪರಿಸ್ಥಿತಿಯನ್ನು ನಿಯಂತ್ರಿಸಲು ಮತ್ತು ವಿತರಣಾ ವ್ಯವಸ್ಥೆಯನ್ನು ಸುಧಾರಿಸಲು ಆಹಾರ ವಸ್ತುಗಳು, ಬಟ್ಟೆ, ಚಿಮಣಿಎಣ್ಣೆ, ಸಕ್ಕರೆ, ಮುಂತಾದ ವಸ್ತುಗಳನ್ನು ಪಡಿತರ ವ್ಯವಸ್ಥೆಯ ಮೂಲಕ ವಿತರಣೆ ಮಾಡಲಾಗುತ್ತಿತ್ತು. ಕೆಲವೊಂದು ಸಹಕಾರಿ ಸಂಸ್ಥೆಗಳು ಬ್ಯಾಂಕೇತರ ಚಟುವಟಿಕೆಗಳಾಗಿ ಅವಶ್ಯಕ ವಸ್ತುಗಳನ್ನು ವಿತರಿಸಿದವು. ಕೆಲವೊಂದು ವಸ್ತುಗಳ ನಿಯಂತ್ರಣ ಯುದ್ಧದ ನಂತರವೂ ಮುಂದುವರಿಯಿತು. ಆದರೆ ಆಹಾರ ವಸ್ತುಗಳ ವಿಷಯದಲ್ಲಿ ಪಡಿತರ ವ್ಯವಸ್ಥೆ 1954ರ ನಂತರ ಮುಂದುವರಿಯಲಿಲ್ಲ. ಪ್ರಾರಂಭದಲ್ಲಿ ಭೂಕಂದಾಯ ಇಲಾಖೆಯು ಈ ಕಾರ್ಯವನ್ನು ನಿರ್ವಹಿಸುತ್ತಿತ್ತು. ನಂತರ ಪ್ರತ್ಯೇಕವಾದ ಸಿಬ್ಬಂದಿಯನ್ನು ನಿಯಮಿಸಲಾಯಿತು. ಪಡಿತರ ವ್ಯವಸ್ಥೆಯನ್ನು ಜಿಲ್ಲಾಧಿಕಾರಿಗಳು ನಿರ್ವಹಿಸುತ್ತಿದ್ದರು.

ರಾಜ್ಯ ಪುನರ್ರಚನೆಯ ನಂತರ 1965ರಲ್ಲಿ ಅನೌಪಚಾರಿಕ ಪಡಿತರ ವ್ಯವಸ್ಥೆಯನ್ನು ಕೆಲವು ನಗರಗಳಲ್ಲಿ (ಬೆಂಗಳೂರು, ಕೆ.ಜಿ.ಎಫ್) ಜಾರಿಗೆ ತಂದು, ಮುಂದೆ 1968ರಲ್ಲಿ ಹುಬ್ಬಳ್ಳಿ-ಧಾರವಾಡಕ್ಕೆ ವಿಸ್ತರಿಸಲಾಯಿತು. ಮುಂದಿನ ವರ್ಷಗಳಲ್ಲಿ ಜಿಲ್ಲೆಯ ಇತರ ದೊಡ್ಡ ನಗರಗಳಿಗೆ ವಿಸ್ತರಿಸಲಾಯಿತು. 1978ರಲ್ಲಿ ಅನೌಪಚಾರಿಕ ಪಡಿತರ ವ್ಯವಸ್ಥೆಯನ್ನು ರಾಜ್ಯಾದಂತ 40 ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಎಲ್ಲಾ ನಗರ ಪ್ರದೇಶಗಳಿಗೆ ವಿಸ್ತರಿಸಲಾಯಿತು. ಸದ್ಯ ಧಾರವಾಡ ಜಿಲ್ಲೆಯಲ್ಲಿ ಹುಬ್ಬಳ್ಳಿ - ಧಾರವಾಡ (1968), ಗದಗ-ಬೆಟಗೇರಿ (174), ರಾಣೆಬೆನ್ನೂರು (1977) ಮತ್ತು ಹಾವೇರಿ (1992) ಗಳಲ್ಲಿ ಅನೌಪಚಾರಿಕ ಪಡಿತರ ವ್ಯವಸ್ಥೆ ಜಾರಿಯಲ್ಲಿ ಇರುವುದು.

ಧಾರವಾಡ ಜಿಲ್ಲೆಯಲ್ಲಿ 1992ರ ಕೊನೆಯಲ್ಲಿ ಇದ್ದಂತೆ ಒಟ್ಟು ನ್ಯಾಯ ಬೆಲೆಯ ಅಂಗಡಿಗಳ ಸಂಖ್ಯೆ 1,235 ಆಗಿತ್ತು. ಅವುಗಳಲ್ಲಿ 337 ಅಂಗಡಿಗಳು ಅನೌಪಚಾರಿಕ ಪಡಿತರ ವ್ಯವಸ್ಥೆಯ ಪ್ರದೇಶಗಳಲ್ಲಿ (ಹುಬ್ಬಳ್ಳಿ - ಧಾರಾವಾಡ, ಗದಗ, ರಾಣೆಬೆನ್ನೂರು), 96 ಅಂಗಡಿಗಳು ಜಿಲ್ಲೆಯ ಇತರ ನಗರ ಪ್ರದೇಶಗಳಲ್ಲಿ, ಉಳಿದಂತೆ 802 ಗ್ರಾಮೀಣ ಪ್ರದೇಶಗಳಲ್ಲಿ ಇದ್ದುದಾಗಿ ತಿಳಿದು ಬರುವುದು. 1990ರಲ್ಲಿ ಇದ್ದ ನ್ಯಾಯ ಬೆಲೆ ಅಂಗಡಿಗಳ ಸಂಖ್ಯೆ 1,323 ಆಗಿತ್ತು. ಆ ಪೈಕಿ 341 ಪಡಿತರ ಕ್ಷೇತ್ರದಲ್ಲಿ 99 ನಗರ ಪ್ರದೇಶಗಳಲ್ಲಿ ಉಳಿದಂತೆ 883 ಗ್ರಾಮೀಣ ಪ್ರದೇಶಗಳಲ್ಲಿ ಇದ್ದುದಾಗಿ ತಿಳಿದು ಬರುವುದು. ಪಡಿತರ ವ್ಯವಸ್ಥೆಯ ಮೂಲಕ ಸಾರ್ವಜನಿಕರಿಗೆ ಆಹಾರಧಾನ್ಯ, ಸಕ್ಕರೆ, ಚಿಮಣಿ ಎಣ್ಣೆ, ತಾಳೀ ಎಣ್ಣೆ (ಪಾಮೋಲಿನ್) ಮುಂತಾದವುಗಳನ್ನು ವಿತರಿಸಲಾಗುವುದು.

**ಹಸಿರು ಕಾರ್ಡು ಯೋಜನೆ :** ಹಸಿರು ಪಡಿತರ ಕಾರ್ಡ್ ಯೋಜನೆಯು 20 ಸಾವಿರ ಜನಸಂಖ್ಯೆ ಮೀರದ ಪಟ್ಟಣ ಪ್ರದೇಶಗಳಿಗೆ ಮತ್ತು ಗ್ರಾಮೀಣ ಪ್ರದೇಶಗಳಿಗೆ ಸೀಮಿತವಾಗಿದ್ದು ಫಲಾನುಭವಿ ಕುಟುಂಬದ ಆದಾಯ ವಾರ್ಷಿಕ ರೂ. 3,500 ಮೀರಕೂಡದು. ಅಂತಹ ಕುಟುಂಬಗಳಿಗೆ ಜೋಳ, ಗೋಧಿ, ಅಕ್ಕಿ ಮುಂತಾದವುಗಳನ್ನು ಕೆಲವೊಂದು ಪರಿಮಾಣದವರೆಗೆ ರಿಯಾಯತಿ ದರದಲ್ಲಿ ಒದಗಿಸಲಾಗುವುದು. ಜಿಲ್ಲೆಯಾದ್ಯಂತ 1992 ಮಾರ್ಚ್‌ವರೆಗೆ ವಿತರಿಸಿದ ಹಸಿರುಕಾರ್ಡುಗಳ ಸಂಖ್ಯೆ 2,56,648.

**ಲೆವಿ ಎತ್ತುವಳಿ :** ರಾಜ್ಯಾದ್ಯಂತ ಕರ್ನಾಟಕ ಲೆವಿ ಆಜ್ಞೆ 1966 ಪ್ರಕಾರ ಪ್ರಮುಖ ಆಹಾರಧಾನ್ಯಗಳನ್ನು ಸರ್ಕಾರ ನಿಗದಿಪಡಿಸಿದ ದರಗಳಲ್ಲಿ ಲೆವಿ ಎತ್ತುವಳಿ ಮೂಲಕ ಸಂಗ್ರಹಿಸಲಾಗುವುದು. 1973ರವರೆಗೆ ಭಾರತೀಯ ಆಹಾರ ನಿಗಮವು ಈ ಕಾರ್ಯವನ್ನು ನಿರ್ವಹಿಸುತ್ತಿತ್ತು. ನಂತರ ಈ ಕಾರ್ಯವನ್ನು ಹೊಸದಾಗಿ ರಚನೆಗೊಂಡ ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ (1973) ಬೆಂಗಳೂರು, ಈ ಸಂಸ್ಥೆಗೆ ವಹಿಸಿ ಕೊಡಲಾಯಿತು. ತಾಲ್ಲೂಕು ಮಟ್ಟದಲ್ಲಿ ಸಹಕಾರಿ ಮಾರುಕಟ್ಟೆ ಸಮಿತಿಗಳು, ನಿಗಮದ ಪ್ರತಿನಿಧಿಗಳಂತೆ ಈ ಕೆಲಸ ನಿರ್ವಹಿಸುತ್ತಿದ್ದವು. 1981-82 ರಿಂದ ಲೇವಿ ಭತ್ತವನ್ನು ಶೇ. 50 ಪ್ರಮಾಣದಲ್ಲಿ ಅಕ್ಕಿ ಗಿರಣಿಗಳಿಂದ ಮತ್ತು ವ್ಯಾಪಾರಸ್ಥರಿಂದ ಸಂಗ್ರಹಿಸಲಾಗುತ್ತಿದೆ. ಈಗ ಭಾರತೀಯ ಆಹಾರ ನಿಗಮದಿಂದ ಮಾತ್ರ ಲೆವಿ ಧಾನ್ಯವನ್ನು ಸಂಗ್ರಹಿಸಲಾಗುವುದು. ಧಾರವಾಡ ಜಿಲ್ಲೆಯಲ್ಲಿ 1989-90 ರಿಂದ 1991-92 ರ ಮೂರು ವರ್ಷಗಳ ಅವಧಿಯಲ್ಲಿ ಲೆವಿ ಮೂಲಕ ಸಂಗ್ರಹಿಸಲು ಹಾಕಿ ಕೊಂಡಿದ್ದ ಗುರಿ ಮತ್ತು ಸಾಧನೆ ಮೆಟ್ರಿಕ್ ಟನ್‌ಗಳಲ್ಲಿ ಈ ಮುಂದಿನಂತೆ ಇರುವುದು. ಆವರಣದಲ್ಲಿನ ಸಂಖ್ಯೆಯು ಸಾಧನೆಯನ್ನು ಮೆ.ಟ.ಗಳ ಸೂಚಿಸುವುದು: 1989-90 - 3,000 (2,277); 1990-91 = 2,000 (2,340); ಹಾಗೂ 1991-92 = 2000 (2,427)

## ಉಗ್ರಾಣ ವ್ಯವಸ್ಥೆ

ಸ್ಥಳೀಯ ಪರಿಸರ ಮತ್ತು ಹವಾಮಾನಕ್ಕೆ ಅನುಗುಣವಾಗಿ ವಿವಿಧ ರೀತಿಯ ಆಹಾರ ಧಾನ್ಯಗಳನ್ನು ಮುಂದಿನ ಹಂಗಾಮಿನವರೆಗೆ ಕೆಡದಂತೆ ಸಂಗ್ರಹಿಸಿ ಇಡುವ ವೈಯಕ್ತಿಕ ಕ್ರಮಗಳು ಬಹು ಹಿಂದಿನಿಂದಲೂ ವಿಶೇಷವಾಗಿ ರೈತಾಪಿ ಕುಟುಂಬಗಳಲ್ಲಿ ಮತ್ತು ವರ್ತಕರಲ್ಲಿ ರೂಢಿಯಲ್ಲಿವೆ. ಪ್ರಾಚೀನ ಕಾಲದಲ್ಲಿ ವಸ್ತು ವಿನಿಮಯ ಪದ್ಧತಿಯ ರೂಢಿಯಲ್ಲಿ ಇದ್ದಾಗ ದೇವಾಲಯಗಳು, ಸಾರ್ವಜನಿಕ ಗೋದಾಮುಗಳಂತೆ ಕಾರ್ಯ ನಿರ್ವಹಿಸುತ್ತಿದ್ದವು. ಭೂಕಂದಾಯವನ್ನು ಬೆಳೆಗಳ ರೂಪದಲ್ಲಿ ಸರ್ಕಾರ ವಸೂಲು ಮಾಡುತ್ತಿದ್ದಾಗ ಮತ್ತು ಸೈನ್ಯದ ಅವಶ್ಯಕತೆಗಳನ್ನು ಪೂರೈಸಲು ಬೇರೆ ಬೇರೆ ಕೇಂದ್ರಗಳಲ್ಲೂ ಆಹಾರ ಧಾನ್ಯಗಳನ್ನು ಸಂಗ್ರಹಿಸಲು ಸರ್ಕಾರದವರು ಉಗ್ರಾಣವನ್ನು ಬಳಸುತ್ತಿದ್ದರು.

ಇಂದಿಗೂ ಧಾರವಾಡ ಜಿಲ್ಲೆಯಲ್ಲಿ ಬಯಲು ನಾಡು, ಬೆಳವಲದ ಪ್ರದೇಶಗಳಲ್ಲಿ ರೈತರು ಭೂಗತ ಹಗೇವುಗಳನ್ನು ಆಹಾರ ಧಾನ್ಯಗಳನ್ನು ಸಂಗ್ರಹಿಸಿಡಲು ಉಪಯೋಗಿಸುವರು. ಮಲೆನಾಡಿನಲ್ಲಿ ಭತ್ತ ಸಂಗ್ರಹಿಸಿಡಲು ಬಿದಿರಿನಿಂದ, ಮರದಿಂದ ಮಾಡಿದ ಕಣಜ, ಸಂದುಕಗಳನ್ನು ಉಪಯೋಗಿಸುವರು. ರಾಯಲ್ ಕಮೀಷನ್ (1928) ವರದಿಯಿಂದ ಪ್ರಾರಂಭಗೊಂಡು 1954ರವರೆಗಿನ ಅಖಿಲಭಾರತ ಗ್ರಾಮೀಣ ಸಾಲ ಸಮೀಕ್ಷಾ ವರದಿ ಮುಂತಾದವುಗಳು ಗ್ರಾಮೀಣ ಪ್ರದೇಶಗಳಲ್ಲಿ ಉಗ್ರಾಣ ವ್ಯವಸ್ಥೆಯ ಮಹತ್ವ, ಮಾರುಕಟ್ಟೆಯ ಸೌಲಭ್ಯ ಮತ್ತು ವೇರಹೌಸ ರಶೀದಿಗಳ ಆಧಾರದ ಮೇಲೆ ದೊರೆಯುವ ಸಾಲ, ಮುಂಗಡಗಳ ವ್ಯವಸ್ಥೆಯನ್ನು ಕುರಿತು ಒತ್ತಿ ಹೇಳಿದ್ದರೂ ಸಾರ್ವಜನಿಕ ಉಗ್ರಾಣ ವ್ಯವಸ್ಥೆ ಕಾರ್ಯರೂಪದಲ್ಲಿ ಬಂದದ್ದು 1950ರ ನಂತರದ ದಶಕಗಳಲ್ಲಿ ಮಾತ್ರ. 1956ರಲ್ಲಿ ವ್ಯವಸಾಯ ಉತ್ಪನ್ನ (ಅಭಿವೃದ್ಧಿ ಮತ್ತು ಉಗ್ರಾಣಗಳು) ಅಧಿನಿಯಮ, 1962ರ ನಂತರ ಉಗ್ರಾಣ ನಿಗಮದ

ಅಧಿನಿಯಮ, ಜಾರಿಗೆ ಬರುವಂತೆ ಮಾಡಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮದೇ ಆದ ಉಗ್ರಾಣ ನಿಗಮಗಳ ಸ್ಥಾಪನೆಗೆ ದಾರಿಮಾಡಿಕೊಟ್ಟವು. ಉತ್ಪಾದಕರು ಮತ್ತು ವ್ಯಾಪಾರಸ್ಥರು ಹಣದ ತೊಂದರೆಯಲ್ಲಿದ್ದಾಗ ನಷ್ಟಮಾಡಿಕೊಂಡು ಕೈಗೆ ಬಂದ ಬೆಲೆಗೆ ತಮ್ಮ ಫಸಲು ಸಂಗ್ರಹವನ್ನು ಮಾರುವ ಬದಲಿಗೆ ಕೆಲವು ಕಾಲ ಉಗ್ರಾಣಗಳಲ್ಲಿ ಇಟ್ಟು ಅದರ ಪಾವತಿಯಿಂದ (ವೇರಹೌಸ್ ರಸೀದಿ) ಬ್ಯಾಂಕ್‌ಗಳಿಂದ ಅಡಮಾನ ಸಾಲ ಪಡೆಯಬಹುದಾಗಿದೆ. ಇತ್ತೀಚೆಗೆ (1994ರಿಂದ) ಕರ್ನಾಟಕದಲ್ಲಿ ಕೆಲವು ಆಯ್ದ ನಿಯಂತ್ರಿತ ಮಾರುಕಟ್ಟೆಗಳಲ್ಲಿ ಈ ಸೌಲಭ್ಯವನ್ನು ರೂ. 10,000 ವರೆಗೆ ಹಾಗೂ ಮೂರು ತಿಂಗಳವರೆಗೆ ಬೆಳೆಗಾರರು ಪಡೆಯಬಹುದಾಗಿದೆ. ಈಗ ಉಗ್ರಾಣಗಳಲ್ಲಿ ಶೇಖರಿಸಲು ಸುಮಾರು 200 ವಿವಿಧ ಸರಕುಗಳನ್ನು ಅಂಗೀಕರಿಸಲಾಗುವು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಆಹಾರ ಧಾನ್ಯಗಳು, ದ್ವಿದಳಧಾನ್ಯಗಳು ಮತ್ತು ಖಾದ್ಯ ತೈಲ, ಎಣ್ಣೆಕಾಳು, ಗೊಬ್ಬರ ಮುಂತಾದವುಗಳು.

**ಕೇಂದ್ರೀಯ ಉಗ್ರಾಣ ನಿಗಮ** (ದೆಹಲಿ) ಗದಗ ನಗರದಲ್ಲಿ ಮಾತ್ರ 26,823 ಮೆ.ಟನ್ ಸಾಮರ್ಥ್ಯದ ಮಳಿಗೆಯನ್ನು ಹೊಂದಿರುವದು. 1993-94ರಲ್ಲಿ ಬಳಸಿಕೊಳ್ಳಲಾದ ಮಳಿಗೆಯ ಸಂಗ್ರಹಣಾ ಸಾಮರ್ಥ್ಯ 9,647 ಮೆ.ಟನ್ ಎಂದು ತಿಳಿದು ಬರುವುದು. ಸದರಿ ಉಗ್ರಾಣವನ್ನು 1957ರ ಕೊನೆಯಲ್ಲಿ ಪ್ರಾರಂಭಿಸಲಾಯಿತು. ಸದರಿ ಉಗ್ರಾಣದಲ್ಲಿ ಆಹಾರಧಾನ್ಯ ಮತ್ತು ರಸಗೊಬ್ಬರಗಳನ್ನು ಆಧುನಿಕ ವಿಧಾನದಿಂದ ಸಂರಕ್ಷಿತವಾಗಿ ಸಂರಕ್ಷಿಸುವ ಅನುಕೂಲತೆ ಇರುವುದು. ಧಾರವಾಡ ಜಿಲ್ಲೆಯಲ್ಲಿ ಕೇಂದ್ರ ಉಗ್ರಾಣ ನಿಗಮವು 8 ಸ್ಥಳಗಳಲ್ಲಿ ತಲಾ 30 ಮೆ.ಟ. ಸಾಮರ್ಥ್ಯದ ತೂಕದ ಸೇತುವೆ (ವೆ. ಬ್ರಿಡ್ಜ್)ಗಳನ್ನು ಸ್ಥಾಪಿಸಿರುವುದು. 1993-94ರಲ್ಲಿ ಕೇಂದ್ರೀಯ ಉಗ್ರಾಣ ನಿಗಮದ ಗದಗ ಶಾಖೆಯ ಆದಾಯ ಮತ್ತು ವೆಚ್ಚಗಳು ಅನುಕ್ರಮವಾಗಿ ಅಂದಾಜು ರೂ. 34.10 ಲಕ್ಷ ಮತ್ತು ರೂ. 24.57 ಲಕ್ಷ ಆಗಿದ್ದರೆ, 1991-92 ರಲ್ಲಿ ಆದಾಯ ವೆಚ್ಚಗಳು ಅನುಕ್ರಮವಾಗಿ ರೂ. 19.25 ಲಕ್ಷ ಮತ್ತು ರೂ. 15.83 ಲಕ್ಷ ಎಂದು ವರದಿಯಾಗಿದೆ.

**ಕರ್ನಾಟಕ ರಾಜ್ಯ ಉಗ್ರಾಣ ನಿಗಮ** (1957) ಧಾರವಾಡ ಜಿಲ್ಲೆಯಾದ್ಯಂತ ವಿವಿಧ ಸ್ಥಳಗಳಲ್ಲಿ 16 ವಿವಿಧ ಗಾತ್ರದ ದಾಸ್ತಾನು ಮಳಿಗೆಗಳನ್ನು ಹೊಂದಿರುವುದು. ಅವುಗಳು ಈ ಮುಂದಿನಂತೆ ಇರುವುದು. ಹುಬ್ಬಳ್ಳಿ (1958), ಹಾವೇರಿ (1961), ಲಕ್ಷ್ಮೇಶ್ವರ (1962), ರಾಣೆಬೆನ್ನೂರು (1968). ನರಗುಂದ (1978), ಧಾರವಾಡ ಮತ್ತು ಹಾನಗಲ್ (1979), ಅಣ್ಣಿಗೇರಿ ಮತ್ತು ಅಕ್ಕಿ ಆಲೂರು (1984), ನವಲಗುಂದ, ರೋಣ, ಹಿರೇಕೆರೂರು, ಬ್ಯಾಡಗಿ (ಎಲ್ಲವೂ 1985), ಹೊಳೆಆಲೂರು (1986), ಸವಣೂರು (1987) ಹಾಗೂ ಅಮರಗೋಳ (1989). ಈ ಮೇಲಿನ 16 ಗೋದಾಮುಗಳಲ್ಲಿ ಧಾರವಾಡ ಮತ್ತು ಹೊಳೆ ಆಲೂರಿನ ಉಗ್ರಾಣಗಳು ಬಾಡಿಗೆ ಗೋದಾಮುಗಳಾಗಿವೆ. ಸಂಗ್ರಹಣಾ ಸಾಮರ್ಥ್ಯದಿಂದ ಗೋದಾಮುಗಳಲ್ಲಿ ಹುಬ್ಬಳ್ಳಿ (8,698), ಅಮರಗೋಳ (8,670) ಹಾವೇರಿ (6,300), ನರಗುಂದ (4,367), ರಾಣೆಬೆನ್ನೂರು (3,000), ಲಕ್ಷ್ಮೇಶ್ವರ (3,000) ಪ್ರಮುಖವಾದವುಗಳು. ಆವರಣದಲ್ಲಿರುವ ಸಂಖ್ಯೆಯು ಸಂಗ್ರಹಣಾ ಸಾಮರ್ಥ್ಯವನ್ನು ಮೆ.ಟ.ಗಳಲ್ಲಿ ಸೂಚಿಸುವುದು.

**ಗ್ರಾಹಕರ ಕುಂದುಕೊರತೆಗಳ ಪರಿಹಾರ ವೇದಿಕೆ**

ಇಂದಿನ ಸಂಕೀರ್ಣಮಯ ವಾಣಿಜ್ಯ ವ್ಯವಸ್ಥೆಯಲ್ಲಿ ಗ್ರಾಹಕನನ್ನೇ 'ಅಗ್ರಮಾನ್ಯ' 'ಸರ್ವಸ್ವ' ಎಂದು ಹಾಡಿ ಹೊಗಳಿದರೂ ಗ್ರಾಹಕರು ಎಷ್ಟೇ ಜಾಗೃತರಾಗಿದ್ದರೂ, ಹಲವಾರು ವಿಧದಲ್ಲಿ ವರ್ತಕರಿಂದ, ವಿತರಕರಿಂದ, ಮಧ್ಯವರ್ತಿಗಳಿಂದ, ಉತ್ಪಾದಕರಿಂದ, ಸಾರ್ವಜನಿಕ ಉಪಯೋಗಿ ಸೇವಾಸಂಸ್ಥೆಗಳಿಂದ ಸರಕಾರಿ, ಅರೆಸರಕಾರಿ ಸಂಸ್ಥೆಗಳಿಂದ ಗ್ರಾಹಕರ ಶೋಷಣೆಯು ಅವ್ಯಾಹತವಾಗಿ ಮುಂದುವರೆಯುತ್ತಿರುವುದು.

ಈ ಮೇಲಿನ ಶೋಷಣೆಗಳಿಂದ ಎಲ್ಲಾ ವಿಧದ ಗ್ರಾಹಕರನ್ನು ದೂರ ಮಾಡಲು ಮತ್ತು ತೊಂದರೆಗಳನ್ನು ಅನುಭವಿಸಿ ನಷ್ಟಕ್ಕೆ ಒಳಗಾದವರಿಗೆ ಸೂಕ್ತ ಪರಿಹಾರ ದೊರಕಿಸಿ ಕೊಡುವಲ್ಲಿ ಸಹಾಯಕವಾಗುವಂತೆ ಕೇಂದ್ರ ಸರ್ಕಾರವು 1986ರಲ್ಲಿ ಗ್ರಾಹಕರ ಹಿತರಕ್ಷಣಾ ಕಾನೂನನ್ನು ರೂಪಿಸಿತು. ಅನಂತರ 1991ರಲ್ಲಿ ಜಿಲ್ಲೆಗೆ ಒಂದರಂತೆ ಗ್ರಾಹಕರ ಕುಂದುಕೊರತೆ ಪರಿಹಾರ ವೇದಿಕೆಗಳು ರಾಜ್ಯಾದ್ಯಂತ ರಚಿತವಾದವು. ಪ್ರಾರಂಭದಲ್ಲಿ (1989) ಕಂದಾಯ ವಿಭಾಗಕ್ಕೆ ಒಂದರಂತೆ ವೇದಿಕೆಗಳು ಕಾರ್ಯ ನಿರ್ವಹಿಸುತ್ತಿದ್ದವು.

ಸದರಿ ಕಾನೂನಿನ ಅನ್ವಯ ಧಾರವಾಡ ಜಿಲ್ಲೆಗೆ ಸೀಮಿತವಾದಂತೆ ಗ್ರಾಹಕರ ವೇದಿಕೆಯು 16.12.1991ರಲ್ಲಿ ಸ್ಥಾಪನೆಯಾಯಿತು. ವೇದಿಕೆಯು ರಚನೆಯಾದ ದಿನಾಂಕದಿಂದ 1993 ಜೂನ್ 30ರವರೆಗೆ ದಾಖಲಾದ ವಿವಿಧ ಬಗೆಯ ದೂರುಗಳ ಸಂಖ್ಯೆ 699 ಆಗಿದ್ದರೆ ಅವುಗಳಲ್ಲಿ ನಿರ್ಣಯಿಸಲ್ಪಟ್ಟ ದೂರುಗಳ ಸಂಖ್ಯೆ 537. ಆ ಪೈಕಿ 198 ದೂರುಗಳು ಗ್ರಾಹಕರ ಪರವಾಗಿ ನಿರ್ಣಯಿಸಲ್ಪಟ್ಟಿರೆ, 85 ವಿರೋಧವಾಗಿ ತೀರ್ಮಾನಗೊಂಡವು; ಸರ್ಕಾರ ಮತ್ತು ಇತರ ಸ್ಥಳೀಯ ಸಂಸ್ಥೆಗಳ ವಿರುದ್ಧವಾಗಿ ನಿರ್ಣಯಿಸಲ್ಪಟ್ಟ ದೂರುಗಳ ಸಂಖ್ಯೆ 29 ಎಂದು ವರದಿಯಾಗಿದೆ. ಗ್ರಾಹಕರ ವೇದಿಕೆಯನ್ನು ಅರಸಿಬಂದ ವಿವಿಧ ಬಗೆಯ 11 ಪ್ರಕಾರದ ದೂರುಗಳಲ್ಲಿ ಬಹುಪಾಲು ಸಾರ್ವಜನಿಕ ಸೇವಾ ಸಂಸ್ಥೆಗಳಾದ ಅಂಚೆ, ತಂತಿ, ಟೆಲಿಫೋನ್ ಇಲಾಖೆ, ರಾಜ್ಯ ವಿದ್ಯುತ್ ಮಂಡಳಿ, ಖಾಸಗಿ ಹಣಕಾಸು ಸಂಸ್ಥೆಗಳು ಮುಂತಾದವುಗಳ ಅಸಮರ್ಪಕ ಸೇವೆ, ಮಾರಾಟದ ನಂತರ ಅಸಮರ್ಪಕ ಸೇವೆಗಳು, ರೈಲ್ವೆ, ವಾಯುಯಾನ ಇಲಾಖೆ, ಅಡಿಗೆ ಅನಿಲ ಸರಬರಾಜು ಮಾಡುವ ಸಂಸ್ಥೆಗಳ ಸೇವಾ ನ್ಯೂನತೆ, ಮುದ್ರಿತ ದರಗಳಿಗಿಂತ ಹೆಚ್ಚು ಹಣ ವಸೂಲಿ ಮಾಡಿದ್ದು ಇವೇ ಮುಂತಾದ ಹತ್ತು ಹಲವಾರು ವಿಷಯಗಳನ್ನು ಒಳಗೊಂಡಿದ್ದವು. ಗ್ರಾಹಕರ ವೇದಿಕೆಯು ಏಪ್ರಿಲ್ 1992 ರಿಂದ ಜೂನ್ 1993ರ ಅವಧಿಯಲ್ಲಿ ಗ್ರಾಹಕರಿಗೆ ಒದಗಿಸಿಕೊಟ್ಟ ಪರಿಹಾರದ ಮೊತ್ತ ರೂ. 12.58 ಲಕ್ಷ ಎಂದು ವರದಿಯಾಗಿದೆ.

**ನಾಗರಿಕ ವೇದಿಕೆಗಳು**

ಜನಸಾಮಾನ್ಯರಲ್ಲಿ, ವಿಶೇಷವಾಗಿ ಗ್ರಾಹಕ ಸಮುದಾಯದಲ್ಲಿ ಜನ ಜಾಗೃತಿಯನ್ನು ಮೂಡಿಸುವಲ್ಲಿ ಮತ್ತು ವರ್ತಕ ಸಮುದಾಯದಲ್ಲಿ ಅವರ ಹೊಣೆಗಾರಿಕೆಯ ಅರಿವು ಮೂಡಿಸುವಲ್ಲಿ ನಾಗರಿಕ ವೇದಿಕೆಗಳು ಬಹು ಪ್ರಮುಖ ಪಾತ್ರ ವಹಿಸಬಲ್ಲವು. ಮೇಲೆ ವಿವರಿಸಿದ ಕಾನೂನುಬದ್ಧ ನ್ಯಾಯಲಯವಲ್ಲದೇ, ಗ್ರಾಹಕರಿಗೆ ಅವರ ಹಕ್ಕು ಕರ್ತವ್ಯಗಳ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಿ ಜಾಗೃತ ಗ್ರಾಹಕರ ಸಂಸ್ಕೃತಿಯನ್ನು ರೂಪಿಸಲು ಸಹಾಯಕವಾಗುವಂತೆ ಜಿಲ್ಲೆಯಾದ್ಯಂತ ಹಲವಾರು ಸ್ವಯಂಪ್ರೇರಿತ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿರುವವು. ಅವುಗಳೆಂದರೆ : ಸಿಟಿಜನ್ಸ್ ಫೋರಮ್ (ಹುಬ್ಬಳ್ಳಿ), ನಾಗರಿಕ ವೇದಿಕೆ (ಧಾರವಾಡ), ಸಿಟಿಜನ್ಸ್ ಫೋರಮ್ (ಹೊಸಯಲ್ಲಾಪುರ, ಧಾರವಾಡ), ನಾಗರಿಕ ಹಿತ ರಕ್ಷಣಾ ಸಂಘ (ಹಾವೇರಿ), ನಾಗರಿಕ ಹಿತ ರಕ್ಷಣಾ ಸಂಘ, ರಾಣಿಬೆನ್ನೂರು ಮತ್ತು ಕನ್‌ಸ್ಯುಮರ್ಸ್ ಫೋರಮ್ (ಗಜೇಂದ್ರಗಡ).

**ನಾಗರಿಕ ವೇದಿಕೆ ಹುಬ್ಬಳ್ಳಿ :** ಸಿಟಿಜನ್ಸ್ ಫೋರಮ್ (ನಾಗರಿಕ ವೇದಿಕೆ) ಎಂಬ ಹೆಸರಿನಿಂದ 1979ರಲ್ಲಿ ನೊಂದಾಯಿಸಲ್ಪಟ್ಟ ಈ ಸಂಸ್ಥೆಯು ಹುಬ್ಬಳ್ಳಿಯಿಂದ ಕಾರ್ಯನಿರ್ವಹಿಸುತ್ತಿರುವುದು. ದಿ. ಜಯಪ್ರಕಾಶ ನಾರಾಯಣ ಅವರ ವಿಚಾರಧಾರೆಯಿಂದ ಪ್ರೇರಿತವಾದ ಈ ಸಂಸ್ಥೆಯ ಮುಖ್ಯ ಉದ್ದೇಶ ಸಾಮಾಜಿಕ, ನೈತಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಮುಂತಾದ ಕ್ಷೇತ್ರಗಳಲ್ಲಿ ಜನರ ಕರ್ತವ್ಯ ಮತ್ತು ಹಕ್ಕುಗಳ ಬಗ್ಗೆ ಸಂಪೂರ್ಣ ಜಾಗೃತಿ ಉಂಟುಮಾಡುವುದು. ಈ ಭಾಗದಲ್ಲಿ ನಾಗರಿಕರ ಹಿತ ರಕ್ಷಣೆಯನ್ನು ಕಾಪಾಡುವಲ್ಲಿ, ಅದರ ಅಧಿಕಾರ ಕರ್ತವ್ಯ ಮತ್ತು ಹೊಣೆಗಾರಿಕೆಯ ಅರಿವು ಮೂಡಿಸುವಲ್ಲಿ ಈ ಸಂಸ್ಥೆಯು ಪರಿಣಾಮಕಾರಿಯಾದ ಸೇವೆಯನ್ನು ಸಲ್ಲಿಸುತ್ತಿದೆ. ಸಂಸ್ಥೆಯು ಗ್ರಾಹಕರ ಹಿತ ರಕ್ಷಣೆಯನ್ನು ಕಾಪಾಡುವಲ್ಲಿ ಇದುವರೆಗೆ ಮಾಡಿದ ವಿಧಾಯಕ ಕಾರ್ಯಕ್ರಮಗಳ ಅತ್ಯುತ್ತಮ ಸೇವೆಯನ್ನು ಮೆಚ್ಚಿ ಭಾರತ ಸರ್ಕಾರವು 1991ರಲ್ಲಿ ರಾಷ್ಟ್ರೀಯ ಪ್ರಶಸ್ತಿ ಮತ್ತು 1993ರಲ್ಲಿ ರೂ. 20,000 ಗಳ ನಗದು ಬಹುಮಾನವನ್ನು ಈ ಸಂಸ್ಥೆಗೆ ನೀಡಿದೆ ಎಂದು ತಿಳಿದುಬರುವುದು. 1993ರಲ್ಲಿ (ಏಪ್ರಿಲ್) ಈ ಸಂಸ್ಥೆಯ ವತಿಯಿಂದ ರಾಜ್ಯಮಟ್ಟದ ಗ್ರಾಹಕರ ಸಮ್ಮೇಳನ ನಡೆಸಲ್ಪಟ್ಟಿತು. ಸಂಸ್ಥೆಯ ಸದಸ್ಯರ ಸಂಖ್ಯೆ 300 ಇದ್ದು 'ಜಾಗೃತ ನಾಗರಿಕ' ಎಂಬ ಮಾಸಿಕವನ್ನು 1982ರಿಂದ ಪ್ರಕಟಿಸುತ್ತಿದೆ. ವೇದಿಕೆಯ ವತಿಯಿಂದ ಗ್ರಾಹಕರ ಪರವಾಗಿ ನಗರಸಭೆ, ಸರ್ಕಾರಿ ಕಛೇರಿ, ಕೆ.ಇ.ಬಿ., ರಸ್ತೆ ಸಾರಿಗೆ, ಮುಂತಾದ ಹತ್ತು ಹಲವಾರು ಸಂಸ್ಥೆಗಳಿಂದ ನ್ಯಾಯ ದೊರಕಿಸಿಕೊಡಲು ಸಾಧ್ಯವಾಗಿದೆ. ಇದೇ ಸಂಸ್ಥೆಯ ವತಿಯಿಂದ 'ಬಳಕೆದಾರರ ರಕ್ಷಣೆ ಮತ್ತು ಸಂಶೋಧನೆ' ಎಂಬ ಪ್ರತಿಷ್ಠಾನವನ್ನು 1986ರಲ್ಲಿ ಸ್ಥಾಪಿಸಲಾಗಿದೆ. ಪ್ರತಿಷ್ಠಾನವು 'ಗ್ರಾಹಕ ಗ್ರಂಥಾಲಯ' ಎಂಬ ವಿಶೇಷ ಗ್ರಂಥಾಲಯವನ್ನು ಹೊಂದಿರುವುದು ಈ ಬಗೆಯ ಗ್ರಂಥಾಲಯ ರಾಜ್ಯದಲ್ಲಿಯೇ ಮೊದಲನೆಯದು ಎಂದು ಹೇಳಲಾಗುವುದು. ಪ್ರತಿಷ್ಠಾನದ ವತಿಯಿಂದ ಗ್ರಾಹಕರ ಅನುಕೂಲಕ್ಕಾಗಿ ಅನೇಕ ಕಾರ್ಯಾಗಾರಗಳನ್ನು ನಡೆಸಲಾಗುತ್ತಿದೆ.